ಅಪರಂಜಿ

ಜನವರಿ 2007

ಅಪರಂಜಿ ವಿಶೇಷಾಂಕ



ಬಿಡಿ ಪ್ರತಿ: ರೂ. 20.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ.750/-

ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್

ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್



ಈ ಸಂಚಿಕೆಯಲ್ಲಿ .....

ಸಂಪುಟ 24 ಸಂಚಿಕೆ – 4

ಜನವರಿ – 2007

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



ಂ ಪ್ರಕಾಶ್

ನಾನು ಕತ್ತಿ ಹಿಡಿಯುತ್ತೇನೆ
- ಮಾನ್ಯ ಮಾಜಿ ಪ್ರಧಾನಿ

ಅವರಿಗೆ ಒಂದು ಗುರಾಣಿಯನ್ನು ಕೊಡುವುದು ಅಗತ್ಯ

★★★

18 ವರ್ಷಗಳ ನಂತರ ಸಿದ್ದು ತಪ್ಪಿತಸ್ಥ

ನ್ಯಾಯಾಲಯ ಲೇಟ್ ಕಟ್ ಮಾಡಿದಂತಿದೆ

★★★

ಶಾಂತವಾದ ಚಾಮುಂಡೇಶ್ವರಿ
- ಸುದ್ದಿ

ಶಾಂತಿ ಎಂಬ ಪದದ ಉಪಯೋಗಕ್ಕಾಗಿ
ಅಪರಂಜಿ ಪ್ರಜಾವಾಣಿಯನ್ನು ಅಭಿನಂದಿಸಿದಳು

★★★

ಕಬಡ್ಡಿ : ಪಾಕಿಸ್ಥಾನದ ವಿರುದ್ಧ ಭಾರತಕ್ಕೆ ಜಯ
- ದೋಹಾ ಸುದ್ದಿ

ತೀರ ಅವರನ್ನು ನಮ್ಮ L.O.C. ಒಳಕ್ಕೇ ಕರೆಯುವುದೇ

★★★

ಕಲಾಂ ಮರು ಆಯ್ಕೆಗೆ ಬೆಂಬಲ
- ಸುದ್ದಿ

ಅವರು ಟಿಪಲಾಂಟಿ ಅಂತ ನಕ್ಕರಂತೆ

★★★

ಡಿಸ್ಕವರಿ ಯಾನ ಮತ್ತೆ ಮುಂದಕ್ಕೆ
- ಅಮೆರಿಕಾ ಸುದ್ದಿ

ಅದನ್ನೇ ಡಿಸ್ಕ್ worry ಅನ್ನಬಹುದು

★★★

ಮೊದಲ ಮಾತು


ಶ್ರೀಮತಿ ಟಿ. ಸುನಂದಮ್ಮನವರ ನೆನಪಿಗೆ ಅಪರಂಜಿ ಬಳಗ ಸಲ್ಲಿಸುತ್ತಿರುವ ನಮ್ರ ಕಾಣಿಕೆ ಇಂದಿನ ಹಾಸ್ಯೋತ್ಸವ. ಈ ಸಂದರ್ಭದಲ್ಲಿ ನಾವು ಪ.ರಮಾನಂದರಾವ್ ಅವರ ನೆನಪಿನಲ್ಲಿ ಹಾಸ್ಯಲೇಖನ ಸ್ಪರ್ಧೆಯೊಂದನ್ನು ಸಹಾ ಏರ್ಪಡಿಸಿದ್ದೆವು. ಈ ಸ್ಪರ್ಧೆಯಲ್ಲಿ ವಿಜೇತರಾದ ಮೊದಲ ಮೂವರು ಬರಹಗಾರರ ಲೇಖನಗಳನ್ನು ಈ ವಿಶೇಷ ಸಂಚಿಕೆಯಲ್ಲಿ ಕಾಣಬಹುದು.

ಕಳೆದ ಹನ್ನೆರಡು ವರ್ಷಗಳಿಂದ ಸತತವಾಗಿ ನಡೆದು ಬಂದಿರುವ ನಮ್ಮ ಈ ಅಳಿಲು ಸೇವೆ, ನಾಡಿನಲ್ಲಿ ಒಂದು ಹೊಸ ಪರಂಪರೆಯನ್ನು ಹುಟ್ಟುಹಾಕುವ ಸೂಚನೆಗಳನ್ನು ತೋರುತ್ತಿರುವುದೇ ನಿಜಕ್ಕೂ ಸಂತಸದ ಸಂಗತಿ.

ಈ ಬಾರಿಯ ಹಾಸ್ಯೋತ್ಸವದಲ್ಲಿ ನಾಡಗೀತೆಯೊಂದನ್ನು ಎಲ್ಲರೂ ಒಟ್ಟಾಗಿ ಹಾಡುವ ಹೊಸ ಪರಿಪಾಠವೊಂದನ್ನು ಪ್ರಾರಂಭಿಸುತ್ತಿದ್ದೇವೆ. ಎಲ್ಲ ಕನ್ನಡಾಭಿಮಾನಿಗಳ ಸಹಕಾರ ಈ ಯತ್ನಕ್ಕೆ ದೊರಕುವುದೆಂಬ ವಿಶ್ವಾಸ ನಮಗಿದೆ.

ಈ ಸಂಚಿಕೆಯನ್ನು ಹೊರತರುವುದಕ್ಕೆ ಕಾರಣರಾದ ಎಲ್ಲ ಹಿತೈಷಿಗಳಿಗೂ ಅಪರಂಜಿಯ ತುಂಬು ಹೃದಯದ ನಮನ.

✧ ಶಿವಕುಮಾರ್



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ನಾನು ಐವತ್ತು ವರ್ಷಗಳ ಹಿಂದೆ ಓದಿ ಖುಷಿಪಟ್ಟಿದ್ದ ಟಿ. ಸುನಂದಮ್ಮನವರ ಒಂದು ಲೇಖನದ ವಸ್ತು ಇನ್ನೂ ಚೆನ್ನಾಗಿ ಜ್ಞಾಪಕದಲ್ಲಿದೆ. ಸಾತು ಪಾತು, ಒಂದರ ಪಡಿಯಚ್ಚು ಇನ್ನೊಂದಾಗಿದ್ದ, ಅಕ್ಕಪಕ್ಕದ ಮನೆಗಳಲ್ಲಿ ವಾಸಿಸುತ್ತಿದ್ದ ಗೃಹಿಣಿಯರು. ಅವರ ನಡುವಿನ ನೆರೆಹೊರಿಕೆಯ ಧರ್ಮ ಬಟ್ಟಲು ಸಕ್ಕರೆ-ಪಾವು ತೊಗರಿಬೇಳೆಗಳ ಸಾಮಾನ್ಯ ಕಡ ಕೊಡು-ಕೊಳ್ಳುವಿಕೆಯನ್ನು ಮೀರಿ ಸವುಟು-ಮಗುಚಿಕಾಯಿ, ಸ್ಕ್ರೂಡ್ರೈವರ್-ಸುತ್ತಿಗೆ, ಚಾಪೆ-ಜಮಖಾನ, ಕುರ್ಚಿ-ಈಸೀಚೇರ್‌ಗಳವರೆಗೂ ವಿಸ್ತರಿಸುತ್ತದೆ. ಒಂದು ದಿನ ಇಬ್ಬರ ಮನೆಯವರೂ ದಾಸ್ತಾನು ಝಡ್ತಿ ಮಾಡಿಕೊಂಡಾಗ ತಿಳಿಯುತ್ತದೆ - ಅವರ ಮನೆಯ ಸಮಸ್ತ ವಸ್ತುಗಳೂ ಇವರ ಮನೆಯಲ್ಲಿದೆ, ಇವರ ಮನೆಯ ಎಲ್ಲಾ ಅಲ್ಲಿ! ಆಗ ಅವರಲ್ಲೇ ಒಬ್ಬಳು ಜಾಣೆ ಇಲ್ಲಿರುವದನ್ನೆಲ್ಲಾ ಅಲ್ಲಿಗೆ ಅಲ್ಲಿಯದನ್ನೆಲ್ಲಾ ಇಲ್ಲಿಗೆ ಸಾಗಿಸುವ ರೇಜಿಗೆಯ ಬದಲು ಆ ಮನೆಯವರು ಈಮನೆಗೆ ಈ ಮನೆಯವರು ಆ ಮನೆಗೆ ಹೋಗಿ ಬರಬಹುದಲ್ಲ ಎಂದು ಸೂಚಿಸುತ್ತಾಳೆ. ಅದರಂತೆ, ಕೆಲವೇ ತಿಂಗಳಲ್ಲಿ ಹೇಗೂ ಇದ್ದ ಮನೆಗೇ ಬರುವ ಖಾತರಿಯಿಂದ, ಇಬ್ಬರೂ ಬಿಡಾರ ಬದಲಾಯಿಸುತ್ತಾರೆ.

ನಾನು ಬೆಂಗಳೂರು ಆಕಾಶವಾಣಿ ಸೇರಿದ ಮೇಲೆ ಸುನಂದಮ್ಮನವರ ಹೆಚ್ಚಿನ ಪರಿಚಯವಾಯಿತು. ಆಗ ಆಕಾಶವಾಣಿಗೆ ಸುನಂದಮ್ಮ, ಈ ಹಬ್ಬ ಈ ದಿನಾಚರಣೆ ಇತ್ಯಾದಿ ಸಂದರ್ಭಗಳಲ್ಲಿ ಆಕಾಶವಾಣಿಯ ವಿವಿಧ ವಿಭಾಗಗಳಿಗೆ ಬೇಕಾಗುತ್ತಿದ್ದ ಭಾಷಣ, ರೂಪಕ, ಶಬ್ದಚಿತ್ರ, ನಾಟಕ ಇತ್ಯಾದಿಗಳನ್ನು ರೇಡಿಯೋ ಅಗತ್ಯಗಳಿಗೆ ತಕ್ಕಂತೆ ಪೂರೈಸುತ್ತಿದ್ದ ಕಾಮಧೇನು ಅಥವಾ ಕಲ್ಪವೃಕ್ಷ.

ಸುನಂದಮ್ಮ ಬರವಣಿಗೆ ವಿಸ್ತಾರವಾದದ್ದು. ಅವರ 1200 ಪುಟಗಳ ಸಮಗ್ರ ಪ್ರಕಟವಾದಮೇಲೆ ಅವರು ಮತ್ತೆ 500-600 ಪುಟಗಳನ್ನಾದರೂ ಬರೆದಿರಬೇಕು. ಸರಳತೆ ಸುನಂದಮ್ಮನವರ ಲೇಖನಗಳ ಮುಖ್ಯ ಲಕ್ಷಣ. ಅವರು ಆರಿಸಿಕೊಳ್ಳುವ ವಿಷಯ ಸರಳ, ಅವರ ಶೈಲಿ ಭಾಷೆ ಎಲ್ಲಾ ಸರಳ. ಹೆಂಗಸರಿಗೆ ಶಿಕ್ಷಣ ಎಂದು ಸರ್ವರೂ ನಂಬಿದ್ದ ಕಾಲದಲ್ಲಿ ಹುಟ್ಟಿದ್ದ ಸುನಂದಮ್ಮ ಒಂದು ರೀತಿಯ ಅದೃಷ್ಟಶಾಲಿಗಳು. ಅವರ ಬರವಣಿಗೆಗೆ ಮನೆಯವರ ಪ್ರೋತ್ಸಾಹ, ರಾ.ಶಿ. ಅಂತಹ ಹಿರಿಯರ ಬೆಂಬಲ ಮಾರ್ಗದರ್ಶನ ಸಿಕ್ಕಿತು.

ಹಲವಾರು ಪ್ರಶಸ್ತಿ, ಬಹುಮಾನಗಳು ಸುನಂದಮ್ಮ ಅವರನ್ನು ಹುಡುಕಿಕೊಂಡು ಬಂದಿವೆ. ಅವರು ಕರ್ನಾಟಕದ ಒಂದು ಲಕ್ಷ ರೂಪಾಯಿ ಬಹುಮಾನ ಪಡೆದ ಏಕಮಾತ್ರ ಹಾಸ್ಯ ಸಾಹಿತಿ. ಅದೇ ರೀತಿ ಸುನಂದಮ್ಮನವರು ಸಮಗ್ರ ಬರಹಗಳು ಪ್ರಕಟವಾದ ಮೊದಲ ನಗೆ ಬರಹಗಾರ್ತಿ.

ಇಲ್ಲಿರುವುದು ಸುನಂದಮ್ಮನವರ ಒಂದು ಪ್ರಾತಿನಿಧಿಕ ಲೇಖನ.

ನನ್ನ ಅತ್ತೆಗಿರಿ!

✧ ಟಿ. ಸುನಂದಮ್ಮ

ನನ್ನ ಚಿಕ್ಕಂದಿನಲ್ಲಿ ನಮ್ಮ ಅಜ್ಜಿ - ರಾಜರಾಣಿಯರ ಕತೆ ಹೇಳುವಂತೆಯೇ 'ಅತ್ತೆ ದಬ್ಬಾಳಿಕೆ' ಬಗೆಗೂ ಸ್ವಾರಸ್ಯವಾದ ಕತೆಗಳನ್ನು ಹೇಳುತ್ತಿದ್ದರು. ಸೊಸೆಯರಿಗೆ ಪತಿರಾಯನೊಟ್ಟಿಗೆ ಮಾತನಾಡಲು 'ಪರ್ಮಿಷನ್' ಆಗಬೇಕಿತ್ತಂತೆ, ಹೊಸಿಲಾಚೆ ಹೆಜ್ಜೆ ಇರಿಸಬೇಕಾದರೂ ಅತ್ತೆಯ ಆಜ್ಞೆಗೆ ಕಾಯಬೇಕಿತ್ತಂತೆ. ಭಾವಮೈದುನರನ್ನು ತಲೆ ಎತ್ತಿ ಸಹ ನೋಡಬಾರದಂತೆ... ಹೀಗೆ!

ಅಜ್ಜಿ ಹೇಳಿದ ಹಲವು ರಸವತ್ತಾದ ಪ್ರಸಂಗಗಳು ಈಗಲೂ ನೆನಪಿದೆ. ಹಸಿ ಸೌದೆ, ಬೇಯದ ಬೇಳೆ ಕೊಟ್ಟು ಅಡಿಗೆ ಮಾಡೆಂದು ಆಗ್ರಹ ಮಾಡುತ್ತಿದ್ದ ಅತ್ತೆಯೊಬ್ಬಳಾದರೆ, ಹೆಸರುಬೇಳೆ ಉದ್ದಿನ ಬೇಳೆಗಳನ್ನು ಬೇಕೆಂದೇ ಬೆರೆಸಿ ಆರಿಸಲು ಸೊಸೆಯನ್ನು ಕೂರಿಸಿದವಳು ಇನ್ನೊಬ್ಬಳು; ಕೆಲಸವಿಲ್ಲದಾಗ ಕಂಬ ಸುತ್ತಿಸಿ ಕೆಮ್ಮಣ್ಣು ತೊಡೆಸಿದವಳು ಮತ್ತೊಬ್ಬಳು!

ಬಾಗಿಲಿಗೆ ಭಿಕ್ಷುಕ ಬಂದು ನಿಂತ. ಸೊಸೆ 'ಮುಂದಕ್ಕೆ ಹೋಗಿಬಾಪ್ಪ' ಮೆಲ್ಲನೆಂದಳು. ಒಳಗಿನಿಂದ ಘರ್ಜನೆ ಮೊಳಗಿತು - 'ನಿನಗ್ಯಾರೇ ಯಜಮಾನಿಕೆ ಕೊಟ್ಟೋರು?... ಇರಪ್ಪ ಬಂದೆ!' ಅಡಿಗೆಮನೆ ಅಂತಃಪುರದಿಂದ ನಿಧಾನವಾಗಿ ನಡೆದುಬಂದ ಅತ್ತೆ, ಆಸೆಗಣ್ಣಾಗಿ ಕಾದಿದ್ದ ಭಿಕ್ಷುಕನಿಗೆ ದರ್ಪದಿಂದ ಹೇಳಿದಳು - 'ಮುಂದಕ್ಕೆ ಹೋಗಿಬಿಟ್ಟು ಬಾ!'

ತಮಿಳುನಾಡಿನಲ್ಲಿದ್ದ ಹಳೆಯ ಸಂಪ್ರದಾಯ - ತೌರುಮನೆಯವರು ಹೆಣ್ಣಿನೊಂದಿಗೆ ಸಂಸಾರಕ್ಕೆ ಬೇಕಾಗುವ ಸಮಸ್ತ ವಸ್ತುಗಳನ್ನೂ ಕೊಟ್ಟು ಕಳಿಸಬೇಕು...! ಅಂದೇ ಅತ್ತೆ ಮನೇಗೆ ಬಂದ ಹೊಸ ಸೊಸೆಗೆ ನೇರ ಅಡಿಗೆ ಮನೆಗೇ ವರ್ಗವಾಗಿತ್ತು. ಅಡಿಗೆ ಆರಂಭಿಸಿದ ಹುಡುಗಿಗೆ ತೌರಿನವರು ಅನ್ನ ಬಸಿಯುವ ತಾಟೊಂದು ಕೊಟ್ಟಿಲ್ಲ ಎಂದರಿವಾದಾಗ ಹೆದರುತ್ತ 'ತಾಟೆಲ್ಲಿದೆ?' ಎಂದು ಕೇಳಿದಳು. ಅತ್ತೆ ಮಾತಾಡಲಿಲ್ಲ; ಸೀರೆ ಸೆರಗು ಹಿಡಿದು ಅದರಲ್ಲೇ ಬಸಿ ಎಂದು ಸನ್ನೆ ಮಾಡಿ ತೋರಿಸಿದಳು!

ಅಜ್ಜಿ ಹೇಳಿದ್ದ ಇಂಥ ಕತೆಗಳಿಂದ ಪ್ರಭಾವಿತಳಾದ ನನಗೆ ಅಂಥ ಅತ್ತೆಯರ ಬಗ್ಗೆ ಅಪಾರ ಮೆಚ್ಚುಗೆ, ನಾನೂ ಅತ್ತೆಯಾದಾಗ ಸರ್ವಾಧಿಕಾರಿಯಾಗಬೇಕೆನ್ನುವ ಕೆಟ್ಟ ಹಂಬಲ. ಅಜ್ಜಿ ಅವರ ಸೊಸೆಗೆ ಕೊಟ್ಟದ್ದು ಕಡಿಮೆ ಡಿಗ್ರಿ ಕಿರುಕುಳವಾದರೆ, ನಾನು

ಸೊಸೆಯಾಗಿ ಅನುಭವಿಸಿದ್ದು 'ಚಿನ್ನದ ಸೂಜಿಯಲ್ಲಿ ಕಣ್ಣು ಚುಚ್ಚಿದಂತೆ' - ಮಾತಿನಲ್ಲಿ ಮೃದು, ಕೃತಿಯಲ್ಲಿ ಕಠಿಣ... ಹೀಗಾಗಿ, ನನ್ನ ಅತ್ತೆಗಿರಿಯನ್ನು ಒಂದುಷ್ಟು ಆಸಕ್ತಿಯಿಂದಲೇ ಎದುರು ನೋಡುತ್ತಿದ್ದೆ.

ಮೊದಲು ಮನೆ ತುಂಬಿದವಳು ಮಲೆನಾಡಿನ ಕಾಫೀತೋಟದ ಒಡೆಯರೊಬ್ಬಳ ಕನ್ಯೆ. 'ಮೈಸೂರು, ಬೆಂಗಳೂರು ಕಾಲೇಜುಗಳಲ್ಲಿ ಓದಿದೋಳು. ಸಂಪ್ರದಾಯಸ್ಥ ಕುಟುಂಬದ ಹುಡುಗಿ, ನಿಮ್ಮ ಮನೇಗೆ ತಕ್ಕ ಸೊಸೆ. ನಡೆನುಡಿ ಆಚಾರ ವಿಚಾರಗಳಲ್ಲಿ ಯೋಚಿಸೋ ಹಾಗೇ ಇಲ್ಲ!' ಆಶ್ವಾಸನೆ ನೀಡಿದರು ಮಧ್ಯಸ್ಥಿಕೆ ಮಾಡಿದ ಮಹನೀಯರು.

ಒಳ್ಳೆಯ ಹುಡುಗಿಯೇ! 'ಅತ್ತೆ, ಅತ್ತೆ!' ಎನ್ನುತ್ತ ಬೆನ್ನ ಹಿಂದೆ ತಿರುಗಾಡಿದಳು, ಮನೆಯವರೊಂದಿಗೆ ಬೆರೆತು ನಗುತ್ತ ಮಾತನಾಡಿದಳು. ಒಂದೆರಡು ವಾರಗಳೊಳಗೇ - ಮಾವನವರಿಗೆ ಮಜ್ಜಿಗೆ ಪಳಿದ್ಯ ಇಷ್ಟ, ಮೈದುನ ಮೈದಾಹಲ್ವ ಪ್ರಿಯ, ಅತ್ತೆಗೆ ಅಡೆದೋಸೆ ಚಪಲ - ಎಂತೆಲ್ಲ ನಮ್ಮ ನಾಲಗೆಯ ಗುಟ್ಟನ್ನು ಅರಿತುಕೊಂಡಳು. ಕೆಲಸದವಳ ಕಷ್ಟಸುಖ ವಿಚಾರಿಸಿದಳು, ಹಾಲಿನವನ ಗೃಹಕೃತ್ಯದ ಪರಿಚಯ ಮಾಡಿಕೊಂಡಳು.

ತರಕಾರಿ ಹೆಚ್ಚಲು ಕೂತಾಗ ಹಿತವಾಗಿ ಹೇಳಿದಳು 'ಏಳಿ ಅತ್ತೆ, ಪಾಪ! ಕೆಳಗೆ ಕೂತ್ಕೊಂಡು ಕಾಲ್ಯಾಕೆ ನೋಯಿಸ್ಕೊಳ್ತೀರಿ...' ಅಂದಿನಿಂದ ಆ ಕೆಲಸ ಸೊಸೆಯದಾಯಿತು. ಮತ್ತೆರಡು ದಿನದ ನಂತರ ಅಂದಳು, 'ಇವತ್ತು ನಾನೇ ಅಡಿಗೆ ಮಾಡ್ತೀನಿ, ನೀವು ಸುಧಾರಿಸ್ಕೊಳ್ಳಿ.'

ನನ್ನ ಪಾಕಶಾಸ್ತ್ರದ ಪ್ರವೀಣತೆ ಬಗ್ಗೆ ನನಗೆಂದೂ ಹೆಮ್ಮೆ; ಯಜಮಾನರು, ಮಕ್ಕಳು ನನ್ನ ನಳಪಾಕಕ್ಕೆ ಆಶಿಸುವರೇನೋ ಎಂದು ಕಾದೆ. ನಮ್ಮವರೆಂದರು, ''ಹುಳಿ ಬಲು ಸೊಗಸಾಗಿ ಮಾಡಿದೀಯ ಕಣಮ್ಮ...!'' ಮಗನೆಂದ, ''ಅತ್ತಿಗೆ ನೀವು ಮಾಡಿರೋ ರಾಯತಾನ ನಾನೊಬ್ಬನೇ ತಿಂದು ಮುಗಿಸಿಬಿಡೋ ಹಾಗಿದೆ... ಅವತ್ತು ಅವಳು ತೆಗೆದುಕೊಂಡ ಅಡಿಗೆ ಛಾರ್ಜ್, ಹಿಂದಕ್ಕೆ ಬರಲೆ ಇಲ್ಲ. ನನ್ನ ಕೈನ ನುಚ್ಚಿನುಂಡೆ-ಗೊಜ್ಜವಲಕ್ಕಿ-ಒತ್ತುಶಾವಿಗೆ-ಹಾಲುಬಾಯಿ ಅಂದರೆ ನಾಲ್ಕು ಬಾಯಿ ಮಾಡಿಕೊಂಡು ತಿನ್ನುತ್ತಿದ್ದ ನಮ್ಮ ಮನೆಯವರು, ಸೊಸೆ ತನ್ನ Cookery-Bakery-Canning ಸರ್ಟಿಫಿಕೇಟುಗಳನ್ನು ತೋರಿಸಿದಾಗ, ಹೊಸ ನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಯ್ತು; ಅವಳು, ನನಗೆ ಹೆಸರು ಹೇಳಲೂ ಬಾರದ ಚಿತ್ರ ವಿಚಿತ್ರ ವೈವಿಧ್ಯ ತಿನಿಸಿನ ಸ್ಯಾಂಪಲ್ ತೋರಿಸಿದಾಗಲಂತೂ, ಸೋತರು - ಪೂರ್ಣ ಸೋತರು!

ಕಾಫೀ ತೋಟದ ಕುವರಿ - ಅವಳು ಕಾಫಿ ತಯಾರಿಸುವುದೇ ಒಂದು ವಿಶೇಷ ರೀತಿಯಂತೆ! ಕಾಫಿ ಫಿಲ್ಟರೂ ನನ್ನ ಕೈ ತಪ್ಪಿತು. ಅಂತೂ ಇಂತೂ ಆರು ತಿಂಗಳ ಅವಧಿಯಲ್ಲಿ ನನ್ನ ಪರಿಸ್ಥಿತಿ, ಒಂಟೆಗೆ ಡೇರೆಯೊಳಗೆ ಸ್ಥಳ ಕೊಟ್ಟ ಪ್ರಯಾಣಿಕನಂತಾಯ್ತು!

ಸಂಕ್ರಾಂತಿ ಬಂತು; ಹಳೇ ಪದ್ಧತಿಯಂತೆ ರಂಗೋಲೆ-ತೋರಣ-ಎಳ್ಳು ಬೆರಕೆಯ ಪ್ರಯತ್ನದಲ್ಲಿದ್ದೆ. ಸೊಸೆ ಅಂದಳು. 'ಸುಮ್ನಿರಿ ಅತ್ತೆ, ಕಷ್ಟಪಡಬೇಡಿ' - ಬಿಳೀ

ಪೇಯಿಂಟ್‌ನಲ್ಲಿ ಪರ್ಮನೆಂಟ್ ಹಸೆ ಬರೆದು ಹಸಿರು ಪ್ಲಾಸ್ಟಿಕ್ ತೋರಣ ಕಟ್ಟಿ ಪ್ಯಾಕೆಟ್ ಎಳ್ಳು ಕೊಂಡು ತಂದು ಬಗೆಹರಿಸಿದಳು. ನಾನು ನೆಲದ ಮೇಲೆ ಚಾಪೆ ಹಾಸಿ ಎಲೆ ಹಾಕಿದಾಗ, 'ಬಡಿಸುವ ಶ್ರಮ ಏಕೆ?' ಎನ್ನುತ್ತ, ಮೇಜಿನ ಮೇಲೆ ತಟ್ಟೆ ಇಟ್ಟು ಊಟ ಬಡಿಸಿದಳು...! ಆಗ ಅನ್ನಿಸಿತು; ಅತ್ತೆಗೊಂದು ಕಾಲ ಸೊಸೆಗೊಂದು ಕಾಲವಲ್ಲ, ಸೊಸೆಗೇ ಕಾಲ' ಅತ್ತೆ, ಮಾಜೀ ರಾಜರಂತೆ; 'ಹಿಸ್ ಹೈನೆಸ್'ಗಳು ಸಾದಾ 'ಮಿಸ್ಟರ್' ಆಗಿರುವಂತೆ ಇವರೂ ಅಧಿಕಾರರಹಿತ, ಪದವೀ ಮೈನಸ್ ಎಂದು.

ಅದೊಂದು ದಿನ ಸೊಸೆ ಇದ್ದಕ್ಕಿದ್ದಂತೆ ನನ್ನನ್ನೇ ನಾಲ್ಕು ನಿಮಿಷ ನಿಟ್ಟಿಸಿದಳು; 'ತ್ಸುತ್ಸುತ್ಸುತ್ಸು' ಎಂದು ಲೊಚಗುಟ್ಟಿದಳು, ''ಅತ್ತೆ, ನೀವು ಡಯಟ್ ಮಾಡ್ಬೇಕು, ಇಲ್ಲದಿದ್ರೆ ನಿಮ್ಮ ವಯಸ್ಸಿನಲ್ಲಿ Blood pressure ಏರೋದು ಸಹಜ; ಅದರಿಂದ Heart trouble ಆರಂಭ ಆದರೂ ಆದೀತೇ! ಈಗಲೇ ಮುನ್ನೆಚ್ಚರಿಕೆ ತೆಗೆದುಕೊಳ್ಳದಿದ್ದರೆ...'' ಮತ್ತೆ ಲೊಚಗುಟ್ಟಿದಳು...! ನಾನು ದಿನದಿನಕ್ಕೆ ಕುರ್ಚಿ ತುಂಬುತ್ತಿದ್ದುದೇನೋ ನಿಜ; ಒತ್ತಾಯದ ವಿಶ್ರಾಂತಿಯಿಂದ ಮತ್ತಿನ್ನೇನಾದೀತು? ಆದರೂ, ನನ್ನ ಭಾರವನ್ನು ನಾನು ಹೊರುವಾಗ ಇವಳೇಕೆ ನನ್ನ ಇಳಿವಯಸ್ಸಿನ ನೆನಪು ಮಾಡಿಕೊಡಬೇಕು?

"Eat to live or live to eat' (ಬದುಕುವುದಕ್ಕೆ ತಿನ್ನು, ಅಥವಾ ತಿನ್ನುವುದಕ್ಕೆ ಬದುಕು) ಎನ್ನುವುದೊಂದು ಹೇಳಿಕೆ, ನಾನು ಎರಡನೆಯ ಗುಂಪಿಗೆ ಸೇರಿದವಳು. ರುಚಿಕಟ್ಟಾದ ಅಡಿಗೆಯನ್ನು ವರಸೆ ವರಸೆಯಾಗಿ ಕಲೆಸುವ ಸುಖಜೀವಿ! ಅಂಥವಳನ್ನು ಸೊಸೆ ಮಹಾತಾಯಿ, ತಿಳಿಸಾರನ್ನ-ಸೊಪ್ಪಿನ ಪಲ್ಯ-ಒಣಪಲ್ಯದ ಪಥ್ಯವಿರಿಸಿಬಿಡುವುದೇ? ಅಷ್ಟೇ ಸಾಲದೆ, ನನ್ನನ್ನು ಅದಾವುದೋ ಯೋಗಶಾಲೆಗೆ ಬೇರೆ ಸೇರಿಸಿಬಿಟ್ಟಳು. ಅರೆಹೊಟ್ಟೆ ಉಂಡು ವಿಚಿತ್ರ ಉಡುಗೆ ತೊಟ್ಟು ಮೈ ಬಗ್ಗಿಸಿ ಕಾಲುತುದಿ ಮುಟ್ಟುವ ವೇಳೆ ಮೂರ್ಛೆ ಬರುವ ಸ್ಥಿತಿ. 'ನಾಲ್ಕು ದಿನ ಆದರೆ ಅದೇ ಸರಿಹೋಗುತ್ತೆ' ಎಂದುಬಿಟ್ಟಳು... ದೇವರ ದಯೆ! ಹದಿನೈದು ದಿನ ಕಳೆದಾಗ, ಮಗನಿಗೆ ದಿಲ್ಲಿಗೆ ವರ್ಗವಾಯ್ತು; ಗಂಡ ಹೆಂಡತಿ ಹಾರಿ ಹೋದರು. ಯೋಗಿಯಾಗಿದ್ದ ನಾನು, ಮತ್ತೆ ಭೋಗಿಯಾದೆ.

★★★

ನಂತರದ್ದು ಎರಡನೆಯವನ ಲಗ್ನ; 'ಎರಡು ಡಿಗ್ರಿ, ಮೂರು ಡಿಪ್ಲೋಮಾಧಾರಿ, ಅಡಿಗೆ ಕೆಲಸದ ಗಂಧವೇ ಇಲ್ಲ' ಅಂದಾಗ, ಈ ಸೊಸೆಯನ್ನು ಸಂತೋಷದಿಂದ ಸ್ವಾಗತಿಸಿದೆ. ತನ್ನ ಪಾಡಾಯ್ತು ತಾನಾಯ್ತು - ಹಾಕಿದ್ದು ತಿಂದುಕೊಂಡು ಗಂಡನೊಂದಿಗೆ ಪಾರ್ಕು-ಪಾರ್ಟಿ-ಪಿಕ್ಚರು ಎಂದು ತಿರುಗಾಡಿಕೊಂಡಿದ್ದಳು; ಮನೆಯಲ್ಲಿದ್ದಾಗ ಪುಸ್ತಕ-ಪೇಪರು-ಮ್ಯಾಗಜೀನು-ರೇಡಿಯೋ!

ಲಗ್ನವಾದ ವರ್ಷಕ್ಕೆ ಮೊಮ್ಮಗಳ ಆಗಮನವೂ ಆಯ್ತು; ಎರಡು ತಿಂಗಳ ಕೂಸನ್ನೆತ್ತಿಕೊಂಡು ನಮ್ಮ ಮನೆಗೆ ಅವಳು ತೌರಿನಿಂದ ಬಂದ ಮಾರನೆಯ ದಿನ

ಮಗನೆಂದ, 'ಅಮ್ಮ! ನಿನ್ನ ಸೊಸೆ ಮೊದಲನೇ ತಾರೀಖಿನಿಂದ ಕೆಲಸಕ್ಕೆ ಹೋಗ್ತಾಳೆ...!' 'ಕೆ...ಕೆಲ್ಸಕ್ಕೆ? ಎಳೆ ಕಂದಮ್ಮನ್ನ ಬಿಟ್ಟು...?' 'ಹೌದು ಅತ್ತೆ! ಇಷ್ಟೊಂದು ಓದಿ ಮನೇಲಿ ಕೂತಿರಲೇ? ನನಗೋಸ್ಕರ ಈ ಕೆಲ್ಸಾನ ಆರು ತಿಂಗಳಿಂದ ರಿಸರ್ವ್ ಮಾಡಿಟ್ಟಿದ್ದಾರೆ; ಇದೊಂದು ಅಧ್ಯಾಯ ಮುಗೀಲಿ ಅಂತ ಕಾದಿದ್ದೆ....' ಸೊಸೆ ದನಿಗೂಡಿಸಿದಳು.

"Baby-sitter' ಉದ್ಯೋಗ ನನ್ನದಾಯ್ತು; ಅಭ್ಯಾಸವಿಲ್ಲದ ಬ್ರಾಹ್ಮಣ ಅಗ್ನಿಹೋತ್ರ ಮಾಡಿ ಕೈಬಾಯಿ ಸುಟ್ಟುಕೊಂಡ ಹಾಗೆ; ಎಂದೋ ಮರೆತುಹೋಗಿದ್ದ ಶೀಸೆ-ರಬ್ಬರು-ಹಾಲಿನ ಪುಡಿ - ಹಣ್ಣಿನ ರಸಗಳ ಪ್ರಪಂಚಕ್ಕಿಳಿದು, ಶೀಸೆಗೆ ರಬ್ಬರ್ ಹಾಕಲು ಬಾರದೆ ಎಳೆದಾಡಿ ಎರಡು ರಬ್ಬರ್ ಹರಿದು ಮೂರು ಶೀಸೆ ಒಡೆದು ಕಡೆಗೆ ಕಲಿತದ್ದಾಯ್ತು. ಟೋಪಿ-ನ್ಯಾಪಿ-ಟಿಬ್ಬು-ಟಬ್ಬು-ರಾಂಪತ್ರು-ಜಂಪರ್ರುಗಳ ಪರಿಚಯ ವಾಗಿ ಪಳಗಿದ್ದೂ ಆಯ್ತು!

★★★

ಮದರಾಸಿನಲ್ಲಿರುವ ಮಗಳ ಮನೆಗೆ ನಾನು ಅಪರೂಪಕ್ಕೆ ಹೋದಾಗ, ಆದರದ ಸ್ವಾಗತ ಸಿಕ್ಕಿತು, ಸ್ಟೇಷನ್ನಿಗೆ ಅಳಿಯಂದಿರೇ ಕಾರು ತಂದು ಕರೆದುಕೊಂಡು ಹೋದರು. ತಾವೇ ನನ್ನ ಪೆಟ್ಟಿಗೆ ಹೊತ್ತು ತಂದರು, ಬುಟ್ಟಿ ಎತ್ತಿರಿಸಿದರು. ತಿಂಡಿ ತಿಂದು ಹೊಗಳಿದರು...! ಅಚ್ಚುಕಟ್ಟಾದ ಪುಟ್ಟ ಬಂಗಲೆ, ಅಡಿಗೆಯವ, ಸುಖಜೀವನ.

ಒಂದೆರಡು ದಿನ ಕಳೆದಾಗ ಅಕಸ್ಮಾತ್ ಅಡಿಗೆ ಮನೆಗೆ ಹೋದೆ, ಅಡಿಗೆಯಾತ ಒಂದು ಚೀಟಿ ಹಿಡಿದುಕೊಂಡು ಓದಿಕೊಳ್ಳುತ್ತಿದ್ದ. ನನ್ನನ್ನು ಕಂಡು, 'ಹೆಹೆಹೆ...' ಎಂದ. 'ಏನದು ನಾಗಪ್ಪ?' ಕೇಳಿದೆ. ಅತ್ತ ಇತ್ತ ನೋಡಿ ಮೆಲ್ಲನೆ ಹೇಳಿದ 'ಸಾಹೇಬ್ರು ಅಮ್ಮಾವರನ್ನ, ನಿಮಗೆ ಯಾವ್ಯಾವ ಅಡಿಗೆ, ತಿಂಡಿ, ಇಷ್ಟ ಅನ್ನೋದನ್ನ ಕೇಳ್ಕೊಂಡು ಪಟ್ಟಿ ಬರಕೊಟ್ಟಿದ್ದಾರೆ' ಆನಂದವಾಯ್ತು! ಎಷ್ಟು ಆಸಕ್ತಿ? ಎಂಥಾ ಒಳ್ಳೇ ಅಳಿಯ? ''ಹೌದೇ?'' ಹಿಗ್ಗಿದೆ. ''ಹೌದು, ನೀವಿರೋವರೆಗೆ ಈ ಪಟ್ಟೀಲಿರೋ ಯಾವುದಾದರೂ 'ಐಟಂ' ಮಾಡಿದರೆ ನಿನ್ನ ಕೆಲ್ಸ ಕಳಕೊಳ್ತೀಯಾ ಅಂತ ಹೇಳಿದಾರೆ!'' ಪಿಸುಗುಟ್ಟಿದ ಬುಸುನಾಗಪ್ಪ.

'ಭಾನುವಾರ ನಗರಪ್ರದಕ್ಷಿಣೆ ಮಾಡಿಸ್ತೇವೆ' ಎಂದಿದ್ದಳು ಮಗಳು. ಆ ದಿನ ಸಿದ್ಧಳಾಗಿ ಹೊರಗೆ ಬರುವ ವೇಳೆಗೆ ಅಳಿಯಂದಿರ ಕೊಠಡಿಯಿಂದ ಧ್ವನಿ ಕೇಳಿಸಿತು, 'ಮೊದಲೇ ಕಾರಿನ ಹಿಂದಿನ ಟೈರು ವೀಕು, ಬಸ್‌ನಲ್ಲೇ ಹೋಗೋಣವೇನೇ?'

'ಅಮ್ಮ! ಇವರು ನಿನ್ನ ಫೋಟೋ ತೆಗೀತಾರಂತೆ...' ಮಗಳೆಂದಾಗ ನಾಚಿದೆ; ಮನಸ್ಸಿನಲ್ಲಿ ಹಿರಿ ಆಸೆ ಇದ್ದರೂ, 'ನನಗ್ಯಾಕಮ್ಮ ಫೋಟೋ?' ಎಂದು ಬಿಂಕ ಮಾಡಿದೆ. ಒತ್ತಾಯಮಾಡಿ ಒಪ್ಪಿಸಿ ಎರಡು ಮೂರು ರೀತಿ ಕೂರಿಸಿ ನಿಲ್ಲಿಸಿ 'ಕ್ಲಿಕ್ಕಿ'ಸಿಯೇ ಬಿಟ್ಟರು...! ಮಾರನೇ ಬೆಳಿಗ್ಗೆ ಬಾಯಿಬಿಟ್ಟಿತು ಅರಗಿಣಿ - 'ಇವ್ರು ಫೋಟೋಗ್ರಫಿ ಸ್ಪರ್ಧೆಗೆ ಸೇರಿದ್ದಾರಮ್ಮ; ವಿಷಯ - 'ಪುರಾತನ ಮಾದರಿಗಳು...!!'

ಇದ್ದಕ್ಕಿದ್ದಂತೇ ಅಳಿಯಂದಿರು ಮಗಳೊಟ್ಟಿಗೆ 'ಟೂರ್' ಹೋಗಬೇಕಾಗಿ ಬಂದದ್ದರಿಂದ, ತಿಂಗಳ ವಾಸ್ತವ್ಯಕ್ಕೆ ಮದರಾಸಿಗೆ ಹೋಗಿದ್ದವಳು ಹದಿನೈದು ದಿನಕ್ಕೇ ಹಿಂದಿರುಗಬೇಕಾಯಿತು. ನಾನು ಕೂತಿದ್ದ ಕಂಪಾರ್ಟ್‌ಮೆಂಟ್‌ನಲ್ಲೇ ಪ್ರಯಾಣ ಮಾಡಿದ ಅವರ ಸಹೋದ್ಯೋಗಿ ಮಾತ್ರ 'ಅವರ ಕೆಲಸದಲ್ಲಿ ಟೂರೇ ಇಲ್ವಲ್ಲ?' ಎಂದು ಕಿಸಿಕಿಸಿ ನಕ್ಕ.

★★★

ದೂರದ ಕಲಕತ್ತೆಯಿಂದ ಇನ್ನೊಬ್ಬ ಮಗಳ ಕರೆ ಬಂದಾಗ ಹೋಗಬಾರದೆಂದೇ ಇದ್ದೆ; ಮೊದಲ ಮಗು ಹುಟ್ಟಿದಾಗಲೇ ತೌರಿಗೆ ಬಾರದೇ ಉಳಿದವಳಿಗೆ ಎರಡನೆಯ ಬಾರಿಗೆ ನನ್ನ ಸಹಾಯ ಬೇಕೆ...? ಆದರೆ, ತಾಯಿ ಕರುಳು ಕೇಳಬೇಕಲ್ಲ? ಮತ್ತೊಂದು ಬೇಡಿಕೆ ಬಂದಾಗ ಹೌರಾ ಎಕ್ಸ್‌ಪ್ರೆಸ್ ಹತ್ತಲೇಬೇಕಾಯ್ತು.

ಮಗುವಿಗೆ ಮೂರು ತಿಂಗಳು ತುಂಬಿದ ಮೇಲೆ ನನ್ನ ಮರುಪ್ರಯಾಣ; ವಾರದ ಮುಂಚೆ ಅಳಿಯಂದಿರು ಅದೇನೇನೋ ಫಾರಮ್‌ಗಳಿಗೆ ನನ್ನ ರುಜು ಹಾಕಿಸಿಕೊಂಡರು. ಅವರೆದುರು ಕೇಳಲು ಸಂಕೋಚಪಟ್ಟು, ನಂತರ ಮಗಳನ್ನು ಪ್ರಶ್ನಿಸಿದೆ - 'ಏನೇ ಅವು? ರೈಲ್ವೇ ಟಿಕೆಟ್‌ಗಾ?'

''ಟಿಕೆಟ್‌ಗಲ್ಲಮ್ಮ! ನಿನ್ನಳಿಯ ಈಗ ಸೇರಿರೋ ಹೊಸ ಕಂಪೆನೀಲಿ, ಮಗು ಹುಟ್ಟಿದರೆ ಅದರ Attendant (ಅಟೆಂಡೆಂಟ್)ಗೆ ತಿಂಗಳಿಗೆ ಐನೂರು ರೂಪಾಯಿ ಅಲೋಯೆನ್ಸ್ ಕೊಡ್ತಾರೆ, ಅದಕ್ಕೆ...!'' ಪುಣ್ಯಕಾರ್ಯ! ಅಳಿಯಂದಿರ Bank balance ಭರ್ತಿ ಮಾಡಿ ಬಂದೆ.

★★★

ನಮ್ಮ ಕಿರಿಮಗ ಅಪ್ಪಟ ಕನ್ನಡಮ್ಮನ ಕುವರ, ಕನ್ನಡದ ಮುನ್ನಡೆಗಾಗಿ ಕೈಕಟ್ಟಿ ಟೊಂಕಕಟ್ಟಿ ನಿಂತವ. 'ಕನ್ನಡ ಪುಸ್ತಕ ಕೊಂಡು ಓದಿ...' 'ಕನ್ನಡ ಚಿತ್ರಗಳನ್ನೇ ನೋಡಿ... 'ಕನ್ನಡ ಆಡಳಿತ ಭಾಷೆ ಆಗಲಿ...' ಎಲ್ಲ ಚಳವಳಿಗೂ ಮುಂದಾಳು. ರಾಜ್ಯೋತ್ಸವದಲ್ಲಂತೂ ಭಾಷಣಗಳನ್ನು ಬಿಗಿದು ಗಂಟಲು ಮುಚ್ಚಿ, ಬಿಸಿನೀರು ಉಪ್ಪುಶಾಖ ಮೆಣಸು ತುಪ್ಪದವರೆಗೆ ಮುಟ್ಟುತ್ತಿದ್ದ. ಓದಿನಲ್ಲೂ ಮುನ್ನಡೆದವನೇ! ಎಂ.ಎಸ್‌ಸಿ. ಮುಗಿಸಿ ಸ್ಕಾಲರ್‌ಷಿಪ್‌ನಲ್ಲಿ ಕೆನಡಾಕ್ಕೆ ಹೋಗಿ ಎರಡು ವರ್ಷವಾಯಿತು; ಹೋದ ಆರು ತಿಂಗಳಲ್ಲೇ ಗೃಹಸ್ಥನಾದ ಸುದ್ದಿಯನ್ನು Air-mail ಹೊತ್ತು ತಂದಿತು. ಈ ಕನ್ನಡಮ್ಮನ ಕೂಸು ಕೈ ಹಿಡಿದದ್ದು ಕನ್ನಡ ಕನ್ಯೆಯನ್ನಲ್ಲ - ಕೆನಡಾ ಕನ್ಯೆಯನ್ನು!

ನಿನ್ನೆ ದಂಪತಿಗಳು ನಮ್ಮೂರಿಗೆ ಬಂದರು. ನಮ್ಮವರು ''ಎಷ್ಟಾದರೂ ನಮ್ಮ ಸೊಸೆ ಅಲ್ವೇ?'' ಎನ್ನುತ್ತ ಜೋಡಿಹಾರ ಹಿಡಿದು ನನ್ನನ್ನ ಏರ್‌ಪೋರ್ಟಿಗೆ ಕರೆದುಕೊಂಡು ಹೋದರು. ಅವರೇನೋ ಸರಾಗವಾಗಿ ಮಗನ ಕೊರಳು ಮುಟ್ಟಿದರು; ನಾನು ಮಾತ್ರ ಆ

ಭವ್ಯದೇಹಿಗೆ ಮಾಲೆ ಹಾಕುವಲ್ಲಿ, ಮೆಟ್ಟಿಂಗಾಲಿರಿಸಿ ಬುಗುರಿಯಂತೆ ಒಂದು ಸುತ್ತು ತಿರುಗಿ ಸಮತೋಲ ಪಡೆಯಬೇಕಾಯ್ತು!


'ಹಲೊ! ನೀನೇ ಅಲ... ಅಥೇ?' - ಅಂದವಳು ನನ್ನ ಭುಜ ಬಳಸಿದಾಗ, ಮೂಳೆ 'ಟಕ್' ಎಂದು ಕೊರಗಿತು; ಮಗ ಹೆಮ್ಮೆಯಿಂದ ಹೇಳಿದ, 'ಇವಳಿಗೆ ಒಂದಿಷ್ಟು ಕನ್ನಡ ಕಲಿಸಿದೀನಮ್ಮ!'

''Yes ನೀನು... ನನ್‌ಗೆ... ಕಾನಥ ಆಥು'' - ಅಂದಳು ಸೊಸೆಮುದ್ದು.

ಈವರೆಗೆ, ಮತ್ತೇನಿಲ್ಲದಿದ್ದರೂ... ಬಹುವಚನ ಸಂಬೋಧನೆ ಉಳಿದಿತ್ತು; ಅದೂ ಏಕವಚನಕ್ಕೆ ಇಳಿದಾಗ, 'ನಾನು ಕಂಡ ಅತ್ತೆಗಿರಿ'ಯ ಕನಸೇನು, ಆಗಿರುವುದೇನು? ಎಂದು ಮನಸ್ಸಿನಲ್ಲೇ ಸಣ್ಣಗೆ... ಅತ್ತೆ!

✧✧✧

ನಾನು ಕಾದಿರುವೆ
ವಿರಹದಿ
ಬೆಂದು ಬೆಂಡಾಗಿರುವೆ
ನೀಳ ಜಡೆಯಲಿ
ನೇಣಗುಣಿಕೆಯ
ಬಿಗಿದುಕೊಳ್ಳುವ
ಮುನ್ನ
ಮುತ್ತನೊತ್ತಿ
ಬಿಗಿದು
ಬಾಚಿ
ತಬ್ಬಿಕೋ ನನ್ನ
ಇಲ್ಲ ಮರೆತುಬಿಡು
ಈ ಚಿನ್ನ



ಹಾಸ್ಯ ಲೇಖನ ಸ್ಪರ್ಧೆ ಫಲಿತಾಂಶ

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ - 2006 ರಲ್ಲಿ ಈ ಕೆಳಕಂಡ ಲೇಖನಗಳು ಬಹುಮಾನ ಗಳಿಸಿವೆ.

ಪ್ರಥಮ ಬಹುಮಾನ : ರೂ. 1000/- ಹಪ್ಪರಮೂಗಿನ ಚಪ್ಪರ ಬದನೆ
ಶ್ರೀಮತಿ ಉಮ ರಾಮಚಂದ್ರ, ಮೈಸೂರು

ದ್ವಿತೀಯ ಬಹುಮಾನ: ರೂ 750/- ವಿದ್ಯಾರ್ಥಿಗಳಿಗೆ ಮನೆ ಬಾಡಿಗೆಗೆ
ಶ್ರೀಮತಿ ಶೈಲಾ ಛಬ್ಬಿ, ಧಾರವಾಡ

ತೃತೀಯ ಬಹುಮಾನ: ರೂ 500/- ಹೈಟೆಕ್ ಮೊಮ್ಮಗ
ಶ್ರೀಮತಿ ಚಿತ್ರಾ ವಿ. ಪ್ರಭು, ಕುಂದಾಪುರ

ಇದಲ್ಲದೆ ಈ ಕೆಳಕಂಡ ಲೇಖನಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ.

1. ಸುಖಿ – ಸಿ.ಪಿ.ಶಾಸ್ತ್ರಿ - ಬೆಂಗಳೂರು
2. ತ್ಯಾಂಪಣ್ಣ ಪುರಾಣದಲ್ಲೊಂದು ಯಾತ್ರ ಪರ್ವ - ಪ್ರಭಾಕರ ಶಿಶಿಲ , ಸುಳ್ಯ
3. ನಾನು ಸ್ವಿರುಚಿಯಲ್ ಅಲ್ಲ– ಚಿತ್ರ ರಾಮಚಂದ್ರನ್, ಬೆಂಗಳೂರು
4. ಬೇಡದ ಅತಿಥಿಗಳು - ನಾಗರತ್ನ ಚಂದ್ರಶೇಖರ್, ಬೆಂಗಳೂರು
5. ನಿಮ್ಮನ್ನೆಲ್ಲೋ ನೋಡಿದ ಹಾಗಿದೆಯಲ್ಲ - ಎಚ್.ಎಸ್.ನವೀನ್‌ಕುಮಾರ್, ಹೊಸದುರ್ಗ
6. ಸಂಭವಾಮಿ ಸುಬ್ಬಕ್ಕ - ಎನ್.ಪ್ರಕಾಶ್, ಮೈಸೂರು
7. ವೈಕುಂಟ ಸಮಾರಾಧನೆ - ಡಾ.ಎಮ್.ಎಸ್.ಎಸ್.ಮೂರ್ತಿ, ಬೆಂಗಳೂರು

ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಗಳಿಸಿದ ಲೇಖಕರಿಗೆ ಡಿಸೆಂಬರ್ 25 ರಂದು ಬೆಂಗಳೂರಿನಲ್ಲಿ ನಡೆಯುವ ಹಾಸ್ಯೋತ್ಸವದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಹಾಗೂ ಆ ಲೇಖನಗಳನ್ನು ಅಪರಂಜಿ ಹಾಸ್ಯೋತ್ಸವ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು. ಮೆಚ್ಚುಗೆ ಗಳಿಸಿದ ಲೇಖನಗಳನ್ನು ಕ್ರಮೇಣ ಅಪರಂಜಿ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಎಲ್ಲ ಬಹುಮಾನಿತರಿಗೂ ಹಾಗೂ ಮೆಚ್ಚುಗೆ ಗಳಿಸಿದ ಲೇಖನಗಳ ಲೇಖಕರಿಗೂ ವೈಯಕ್ತಿಕವಾಗಿ ಪತ್ರ ಬರೆದು ತಿಳಿಸಲಾಗುವುದು.

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ ಪಡುಕೋಣೆ
ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ-2006 ಯಲ್ಲಿ
ಪ್ರಥಮ ಬಹುಮಾನ ಪಡೆದ ಲೇಖನ.

ಹಪ್ಪರ ಮೂಗಿನ ಚಪ್ಪರ ಬದನೆ...?

✧ ಉಮಾ ರಾಮಚಂದ್ರ

ನನಗೇಕೊ ಯಾರ ಮುಖವನ್ನು ಕಂಡರೂ ಅವರ ಮೂಗಿನ ಮೇಲೆ ಮೊದಲು ಕಣ್ಣು ಬೀಳುವುದು. ಅವರ ಮೂಗಿನ ಅಳತೆ ಎಷ್ಟಿರಬಹುದು? ಅವರ ಮುಖಕ್ಕೆ ಅದು ಎಷ್ಟು ಸಮಂಜಸವಾಗಿದೆ? ಯಾವ ವಿಧದ ಮೂಗು? ಗಿಳಿ ಮೂಗೊ - ಗಿಡುಗನ ಮೂಗೊ, ಸಂಪಿಗೆ ಮೂಗೊ - ಸೇವಂತಿಗೆ ಮೂಗೊ, ಹೀಗೆ ಅದರ ಸಮೀಕ್ಷೆ ನಡೆಯುತ್ತ ಸಾಗುತ್ತದೆ. ಬಹುಶಃ ನನ್ನ ಮೂಗು ರೂಪಿನ ಗುಂಪಿಗೆ ಸೇರದೆ ಇರುವುದರಿಂದಲೊ ಏನೋ ನನಗೆ ಇನ್ನೊಬ್ಬರ ಮೂಗಿನ ಮೇಲೆ ಕಣ್ಣು. ಒಮ್ಮೊಮ್ಮೆ ಸಂಪಿಗೆ ಮೂಗಿನವರು ಸಿಕ್ಕರೆ ತಕ್ಷಣ ನನ್ನ ಕೈ ನನ್ನ ಮೂಗನ್ನ ಮುಚ್ಚಲು ಪ್ರಯತ್ನಿಸುತ್ತದೆ. ನನಗೇ ಗೊತ್ತಾಗದ ರೀತಿ ಈ ಕೆಲಸ ನಡೆದು ಹೋಗುತ್ತದೆ. ನಾನು ಆದಷ್ಟು ನನಗಿಂತ ಕೆಟ್ಟ ಆಕೃತಿಯ ಮೂಗಿನವರನ್ನೇ ಸ್ನೇಹ ಬೆಳೆಸುವುದು ಹೆಚ್ಚು. ಆಗ ಕೆಟ್ಟದರಲ್ಲಿ ಮಧ್ಯಸ್ಥ ಎಂಬಂತೆ ನನ್ನ ಮೂಗಿಗೆ ಮೊದಲ ಸ್ಥಾನ. (ಅದು ನಾನೇ ಕೊಟ್ಟುಕೊಂಡಿರುವುದು!)

ಬ್ರಹ್ಮ ನನ್ನನ್ನು ಸೃಷ್ಟಿ ಮಾಡುವಾಗ ಮೂಗಿನ ವಿಷಯದಲ್ಲಿ ಸ್ವಲ್ಪ ಸೋಮಾರಿತನ ತೋರಿಸಿದ್ದಾನೆ. ಅದಕ್ಕೊಂದು ಆಕಾರ ಕೊಡುವಾಗ ಅಪ್ಪಚ್ಚಿ ಮಾಡಿಬಿಟ್ಟಿದ್ದಾನೆ. ಹಾಗಾಗಿ ನನ್ನ ಮೂಗು ಸ್ವಲ್ಪ ಅದುಮಿದಂತೆ ಕಾಣುತ್ತದೆ. ಮನೆಯವರಿಗೆಲ್ಲ ಒಂದೇ ಆಕಾರದ ಮೂಗು ಕೊಟ್ಟು ನನಗೆ ಮಾತ್ರ ಮೂಗನ್ನು ಬಲವಾಗಿ ತಟ್ಟಿ ಮೋಸ ಮಾಡಿದ್ದಾನೆ. ಹಾಗಾಗಿ ನಾನು ಮನೆಯ ಮಿಕ್ಕೆಲ್ಲರಿಗಿಂತ ಸ್ವಲ್ಪ ಭಿನ್ನವಾಗಿ ಕಾಣುತ್ತೇನೆ. ನಮ್ಮನ್ನೆಲ್ಲ ಯಾರಾದರೂ ಒಟ್ಟಿಗೆ ನೋಡಿದಾಗ ಅವರು ತಕ್ಷಣ ನನ್ನ ಮೂಗಿನ ಭಿನ್ನತೆಯನ್ನು ಪತ್ತೆಹಚ್ಚಿ ಅದಕ್ಕೆ ದೊಡ್ಡ ವ್ಯಾಖ್ಯಾನ ಕೊಟ್ಟು ಭಾಷಣ ಬಿಗಿದು ತಲೆಯನ್ನು ಕೆಡಿಸಿಬಿಡುತ್ತಾರೆ. ಜೊತೆಗೆ ಸಲಹೆಗಳನ್ನು ಕೊಡುತ್ತಾರೆ ಬೆಳೀತ ಕೆಲವರಿಗೆ ಮೂಗು ಬೆಳೆಯುತ್ತೆ ಬಿಡು. ಇಲ್ಲದಿದ್ದರೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿದರಾಯಿತು, ದುಡ್ಡು ಕೊಟ್ಟು ಅವರೇ ಮಾಡಿಸುವಂತೆ ಭರವಸೆಯಲ್ಲಿ ಮಾತನಾಡುತ್ತಾರೆ. ನಾನೇನೊ ಸಾಕಷ್ಟು ದೈತ್ಯಾಕಾರವಾಗೆ ಬೆಳೆದೆ. ಆದರೆ ಮೂಗು ತನ್ನ ಮೊದಲಿನ ಸ್ಥಾನವನ್ನು ಬಿಟ್ಟುಕೊಡಲೇ ಇಲ್ಲ.

ಚಿಕ್ಕ ವಯಸ್ಸಿನಲ್ಲಿ ಇದರ ಬಗ್ಗೆ ನನಗೇನು ಅಷ್ಟು ಕಾಳಜಿ ಇರಲಿಲ್ಲ. ತಿಳಿಯುತ್ತಲೂ ಇರಲಿಲ್ಲ. ಏನೋ ಉಸಿರಾಡಲು ಒಂದು ಮೂಗು ಮುಖದಲ್ಲಿ ಇದ್ದರೆ ಸರಿ, ಅದರ

ಆಧಾರಸ್ತಂಭ ನೆಟ್ಟಗಿಲ್ಲದಿದ್ದರೇನು? ಎಂಬಂತೆ ಉಡಾಫೆಯಲ್ಲೇ ಬಾಲ್ಯವನ್ನು ಕಳೆದೆ. ಆದರೆ ಯೌವ್ವನಾವಸ್ಥೆಗೆ ಬರುವ ವೇಳೆಗೆ ನನಗೆ 'ಹಪ್ಪರ ಮೂಗಿನ ಚಪ್ಪರ ಬದನೆ' ಎಂಬ ಅಡ್ಡ ಹೆಸರೊಂದು ಬಂದುಬಿಟ್ಟಿತ್ತು. ಮೊದಲಾದರೆ ಅದರ ಅರ್ಥ ಸರಿಯಾಗಿ ತಿಳಿದಿರಲಿಲ್ಲ. ಇದೂ ಒಂದು ನನ್ನಲ್ಲಿರುವ ವಿಶೇಷತೆ ಎಂದು ತುಂಬಾ ಹಗುರವಾಗಿ ತೆಗೆದುಕೊಂಡಿದ್ದೆ. ಇದನ್ನೆಲ್ಲ ತಮಗೆ ತಿಳಿಸಲು ಸಂಕೋಚವೇನಿಲ್ಲ ಬಿಡಿ. ಯಾರಾದರೂ ಮಾತನಾಡುವಾಗ ನೀನು ಮಧ್ಯೆ ಮೂಗು ತೂರಿಸಬೇಡ ಎಂದು ಗದರಿದರೆ ಇಲ್ಲದ ಮೂಗನ್ನು ಎಲ್ಲಿಂದ ತೂರಿಸಲಿ ಎಂದು ಸಮಜಾಯಿಷಿಕೊಳ್ಳುತ್ತಿದ್ದೆ. ಸ್ವಲ್ಪ ಕೋಪ ಬಂದರೂ ಅಬ್ಬ ಇದಕ್ಕೆ ಮೂಗಿನ ತುದಿಯಲ್ಲೇ ಕೋಪ ಎಂದು ರೇಗುತ್ತಿದ್ದರು. ಮೂಗಿನ ತುದಿಯೇ ಇಲ್ಲ ಇನ್ನು ಕೋಪವೆಲ್ಲಿಂದ? ನೀವೇ ಹೇಳಿ.

ಈ ಚೆಂದುಳ್ಳಿ ಮೂಗಿಗೆ ಮೂಗುತಿ ಚುಚ್ಚಿಸುವಂತೆ ನಮ್ಮಮ್ಮನಿಗೆ ಯಾರೋ ಕಿವಿ ಚುಚ್ಚಿದರು. ಆಗಲಾದರೂ ಮುಖ ಸ್ವಲ್ಪ ಲಕ್ಷಣವಾಗಿ ಕಾಣಬಹುದೆಂದು ಅವರ ಊಹೆ. ಇರಲಿ, ಇದರಿಂದ ನನ್ನ ಮೂಗಿಗೆ ಬಂತು ಫಜೀತಿ. ನನ್ನಮ್ಮ ನನ್ನನ್ನು ಕಿವಿ-ಮೂಗು ಚುಚ್ಚುವ ಆಚಾರಿ ಹತ್ತಿರ ಎಳೆದುಕೊಂಡು ಹೋದರು. ಆ ಆಚಾರಿಯೊ ಇಂತಹ ಮೂಗನ್ನು ತನ್ನ ಸರ್ವೀಸ್‌ನಲ್ಲೇ ಕಂಡಿರಲಿಲ್ಲವೇನೋ ಎಂಬಂತೆ ಕನ್ನಡಕದ ಸಂದಿಯಿಂದ ಮೂಗಿನ ಸೈಡ್ ಪೋಸು, ಫ್ರಂಟು ಅಂತೆಲ್ಲ ಕಡೆಯಿಂದ ಗುರಾಯಿಸುತ್ತ, ಮೂಗು ಬಹಳ ಬಲಿತುಬಿಟ್ಟಿದೆ. ಚರ್ಮ ತುಂಬಾ ದಪ್ಪ. ಮೂಗುತಿ ಕೂರಿಸಲು ಜಾಗವೆ ಇಲ್ಲವೆ ಎಂದೆಲ್ಲ ಹೇಳುತ್ತ ತಮ್ಮ ಮೂಗನ್ನು ಸವರಿಕೊಂಡರು. ನಮ್ಮಮ್ಮ ಬಿಡಬೇಕಲ್ಲ. ಇದ್ದಿದ್ದರಲ್ಲೇ ಜಾಗ ಮಾಡಿ ಇಡಿ ಆಚಾರ್‍ರೇ ಎಂದು ದುಂಬಾಲು ಬಿದ್ದರು. ಕಡೆಗೂ ಆಚಾರಿಯು ಮೂಗೆ ಇಲ್ಲದ ಜಾಗದಲ್ಲಿ ಹುಡುಕಿ ಕಷ್ಟಪಟ್ಟು ಒಂದು ಚಿನ್ನದ ಮೂಗಿತಿಯನ್ನು ಚುಚ್ಚಿಟ್ಟು ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯಪಡುವಂತೆ ಮಾಡಿದರು. ನಮ್ಮಮ್ಮ ಮೂಗಿಗೆ ಮಂಗಳಾರತಿ ಮಾಡುವಂತೆ ಕೊಬ್ಬರಿಯ ಹೋಳನ್ನು ಮೂಗಿನ ಮುಂದೆ ಒಂದು ಸುತ್ತು ತಿರುಗಿಸಿ ಪಟ್ ಎಂದು ಮುರಿದು ಎಲ್ಲರಿಗೂ ತಿನ್ನಲು ಹಂಚಿದರು. ರಾತ್ರಿ ಚುಚ್ಚಿದ ಜಾಗಕ್ಕೆ ಸ್ವಲ್ಪ ಸೀಮೆ ಎಣ್ಣೆ ಬಿಡುವಂತೆ ಆಚಾರ್‍ರು ತಿಳಿಸಿದರು.

ಮನೆಗೆ ಬಂದು ಕನ್ನಡಿ ಮುಂದೆ ನಿಂತರೆ ಮುಖಕ್ಕೆಲ್ಲ ಮೂಗೆ ದೊಡ್ಡದಾಗಿ ಕಂಡಿತು. ಮೂಗು ಸ್ವಲ್ಪ ಊದಿರುವುದರಿಂದ ಹಾಗಾಗಿರಬೇಕು. ಇಷ್ಟೇ ಆಗಿದ್ದಲ್ಲಿ ತೊಂದರೆ ಇರಲಿಲ್ಲ. ರಾತ್ರಿ ಊಟಕ್ಕೆ ಕೂತರೆ ಅನ್ನ ಜಗಿಯಲು ಆಗದೆ ಕಷ್ಟಪಟ್ಟೆ. ಮುಖದಲ್ಲಿ ಸಣ್ಣಗೆ ನೋವು ಪ್ರಾರಂಭವಾಯಿತು. ರಾತ್ರಿ ಮಲಗಿದ್ದಾಗ ಹೊದ್ದ ಹೊದಿಕೆಯ ದಾರ ಮೂಗುತಿಗೆ ಸಿಕ್ಕಿಕೊಂಡು ಯಮ ಯಾತನೆಯಾಯಿತು. ನಿದ್ರೆ ಇಲ್ಲದೆ ರಾತ್ರಿ ಕಳೆದು ಬೆಳಗಾಗುವುದರೊಳಗಾಗಿ ಹೊತ್ತು ಹೊತ್ತಿಗೆ ಮೂಗು ಬುರುಬುರನೆ ಪೂರಿಯಂತೆ ಊದತೊಡಗಿತು. ಮುಖದ ಮೇಲೆ ಭಾರದ ಮೂಟೆ ಇಟ್ಟಂತೆ ಭಾಸವಾಗುತ್ತಿತ್ತು. ಮುಖಕ್ಕೆಲ್ಲ ಮೂಗೆ ವಿಜೃಂಭಿಸಿತು. ಎಲ್ಲರ ಬಾಯಿಗೂ ಮತ್ತೊಮ್ಮೆ ನನ್ನ ಮೂಗು ತುತ್ತಾಯಿತು. ಇದರಿಂದಾಗಿ ನಾಲ್ಕು ದಿನ ನನ್ನ ಕೆಲಸ ಸ್ಥಗಿತ. ಬಾತ ಮೂಗನ್ನು ಹೊತ್ತುಕೊಂಡು ಹೋಗುವುದಾದರೂ ಎಲ್ಲಿಗೆ ನೀವೆ ಹೇಳಿ?

ನನ್ನಮ್ಮನ ಕೈಚಳಕದಿಂದ ನಾಲ್ಕು ದಿನ ಸೀಮೆ ಎಣ್ಣೆ ಕುಡಿದ ಮೂಗುತಿ ಚುಚ್ಚಿದ ಜಾಗ ಶಾಂತವಾಗಿ ಮೂಗು ಮತ್ತೆ ಮೊದಲಿನ ಸ್ಥಿತಿಗೆ ತಿರುಗಿತು, ಮೊದಲೇ ಮುಖದಲ್ಲಿ ಹೂತು ಹೋಗಿದ್ದ ಮೂಗಿಗೊಂದು ಮೂಗುತಿ ಬಂದು ಅದೂ ಮೂಗಿನಲ್ಲಿ ಹೂತು ಹೋಗಿತ್ತು. ಎಲ್ಲೋ ಬೆಳಕು ಬಿದ್ದಾಗ ಮಾತ್ರ ಮೂಗುತಿ ಒಮ್ಮೊಮ್ಮೆ ಫಳಕ್ ಎಂದು ಮಿಂಚಿ ಮರೆಯಾಗುತ್ತಿತ್ತು. ಇದರಿಂದೇನು ಮೂಗು ಸುಧಾರಿಸಲಿಲ್ಲ. ಮೂಗುತಿಯನ್ನು ಆಗಾಗ್ಗೆ ತಿರುಗಿಸುತ್ತಿರಬೇಕೆಂದು ಅಮ್ಮನ ಆಜ್ಞೆಯಾಯಿತು. ಅದು ಸಾಧ್ಯವಾಗದೆ ಅದರ ಯೋಚನೆ ಅಲ್ಲೇ ಬಿಟ್ಟೆ. ಆದರೆ ತಿಂಗಳು ಕಳೆದು ನೋಡಿದರೆ ಮೂಗುತಿ ಒಳಗಿನ ತಿರುಪೆ ಮಾಯ, ಕೈಯಾಡಿಸಿದರೆ ಸಿಕ್ಕಂತೆ ಅನಿಸಿ, ನೋಡಿದರೆ ಕಾಣದು, ಓಡಿದೆ ಡಾಕ್ಟರ ಬಳಿ. ಅವರು ಟಾರ್ಚ್ ಹಾಕಿ ನೋಡಿ ನೋಡಮ್ಮ ಇದು ತಿರುಪಿನ ಮೇಲೆ ಚರ್ಮ ಬೆಳೆದು ಬಂದಿದೆ. ಅದನ್ನು ಕಟ್‌ಮಾಡಿ ಮೂಗುತಿ ತೆಗೆಯಬೇಕಾಗುತ್ತದೆ ಎಂದು ಸಲಹೆ ಇತ್ತರು. ಅಯ್ಯೋ ಮೂಗೆ, ಕನಿಕರದಿಂದ ಡಾಕ್ಟರ ಸಲಹೆಯನ್ನು ಪಾಲಿಸಿ ಮೂಗುತಿಯನ್ನು ಹೊರತೆಗೆಸಿದ್ದಾಯಿತು. ಅಲ್ಲಿಗೆ ಮೂಗುತಿ ಕಥೆ ಮುಕ್ತಾಯವಾಯಿತು. ಆದರೆ ಚುಚ್ಚಿದ ಗುರುತು ಮಾತ್ರ ಈಗಲೂ ಇದೆ. ದೃಷ್ಟಿ ಬೊಟ್ಟಿನಂತೆ.

ಮೂಗು ಎಂದಾಗ ಏಕೊ ಬರ್ನಾಡ್‌ಷಾರ ನೆನಪಾಗುತ್ತದೆ, ಅವರೊಮ್ಮೆ ಹೊಟೆಲ್‌ಗೆ ಹೋಗಿ ಕುಳಿತಿದ್ದಾಗ ಎದುರಿಗೆ ಹುಡುಗಿಯೊಬ್ಬಳು ಬಂದು ಕೂತಳಂತೆ. ನೋಡಲು ಸುಂದರಿಯಾಗಿದ್ದರೂ ಮೂಗು ಬಹಳ ಮೊಂಡಾಗಿ ಇದ್ದು ಅವಳ ರೂಪನ್ನೇ ನುಂಗಿ ಹಾಕಿತ್ತಂತೆ. ಅದನ್ನು ಕಂಡ ಬರ್ನಾಡ್‌ಷಾ ರವರು ಅವಳಿಗೆ ನಿನ್ನ ಮೂಗಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊ ಎಂದು ಹಣವನ್ನು ನೀಡಿ ಹರಸಿದರಂತೆ. ಆಹಾ! ನನಗೊಬ್ಬ ಬರ್ನಾಡ್‌ಷಾನಂತ ಗಂಡ ಸಿಗಬಾರದೆ ಹಪಹಪಿಸಿತು ಮನಸ್ಸು, ಊಹುಂ ಅಪ್ಪನ ಚಪ್ಪಲಿ ಸವೆಯಿತೆ ಹೊರತು ಬರ್ನಾಡ್‌ಷಾನಂತ ಗಂಡಿರಲಿ ಆರ್ಡಿನರಿ ಗಂಡೆ ಸಿಗದಾಯಿತು. ಬಂದವರಲ್ಲಿ ಬೇಡವೆಂದು ಮೂಗು ಮುರಿದವರೆ ಹೆಚ್ಚು, ಅಮ್ಮನಿಗೆ ಯಾರೊ ಹೇಳಿದರಂತೆ ಗರುಡನಿಗೆ ಒಂದು ಚಿನ್ನದ ಮೂಗು ಮಾಡಿಸಿಕೊಡಲು ಹರಸಿಕೊಳ್ಳಿ ಗಂಡು ಸಿಗುತ್ತದೆಂದು, ತಮಾಷೆಗೆ ಹೇಳಿದರೊ, ಶ್ರದ್ಧೆಯಿಂದ ಹೇಳಿದರೊ ಅಂತೂ ಕಾಕತಾಳೀಯವೆಂಬಂತೆ ಗರುಡನ ಮೂಗಿನ ಗಂಡೆ ಸಿಕ್ಕಿತು. ಅಮ್ಮ ಗರುಡನಿಗೆ ಚಿನ್ನದ ಮೂಗು ಮಾಡಿಸಿಕೊಟ್ಟಳೊ ಇಲ್ಲವೊ ಗೊತ್ತಿಲ್ಲ. ನನಗೆ ಹುಟ್ಟಿದ ಮಗುವಿನ ಮೂಗುಮಾತ್ರ ನನ್ನ ತರಹವೇ ಹಪ್ಪರ ಮೂಗಾಯಿತು. ಮಗುವನ್ನು ನೋಡಲು ಬಂದ ಮಾವ, ಮಗು ಎಲ್ಲ ನಿನ್ನ ತರಹವೆ ಕಾಣುತ್ತದೆ, ಏನಿಲ್ಲದಿದ್ದರು ಮೂಗಂತು ಪ್ರಿಂಟು. ಗೇಟಿನ ಹತ್ತಿರ ಮಗು ನಿಂತಿದ್ದರೆ ಸಾಕು ಇದೇ ನಿನ್ನ ಮನೆಯೆಂದು ಎಲ್ಲರಿಗೂ ತಿಳಿಯುವುದು. ಮೂಗಿನ ಮೇಲೆ ಒಂದು ಛೇರು ಹಾಕಿ ಕೂರಬಹುದು ಎಂದೆಲ್ಲ ತಮಾಷೆ ಮಾಡುತ್ತ ಮೂಗಿಗೊಂದು ಸ್ಥಾನ ಕೊಟ್ಟರು. ಮತ್ತಗೆ ಅಭಿಮಾನದಿಂದ ನನ್ನ ಕೈಯ್ಯಿ ಮೂಗನ್ನು ಸವರುತ್ತಿತ್ತು. ಇನ್ನೊಂದು ಹಪ್ಪರ ಮೂಗಿನ ಚಪ್ಪರ ಬದನೆಯ ಜನನವಾಯಿತು.

❖❖❖

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ ಪಡುಕೋಣೆ
ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ-2006 ಯಲ್ಲಿ
ದ್ವಿತೀಯ ಬಹುಮಾನ ಪಡೆದ ಲೇಖನ.

ವಿದ್ಯಾರ್ಥಿಗಳಿಗೆ ಮನೆ ಬಾಡಿಗೆ ಕೊಟ್ಟಿದ್ದೀರಾ?

✧ ಶೈಲಾ ಛಬ್ಬಿ

ವೆಂಕು ತನ್ನ ಗಂಡನ ಬೆನ್ನು ಹತ್ತಿ ತಮ್ಮ ಮನೆಯ ಮೇಲೊಂದು ಮನೆ ಕಟ್ಟಿಸಿದಳು. ಊರಲ್ಲಿ ಬಹಳಷ್ಟು ಜನ ತಮಗೊಂದಲ್ಲದೆ ಬಾಡಿಗೆಗೆ ಇನ್ನೊಂದು ಮನೆ ಕಟ್ಟಿಸಿ ತಮ್ಮ ಆದಾಯ ಹೆಚ್ಚಿಸಿಕೊಂಡದ್ದನ್ನು ಆಕೆ ಕಂಡಿದ್ದಳು. ಹೌದು ತನ್ನ ಗಂಡನಿಗೂ ನಿವೃತ್ತಿಯ ವಯಸ್ಸು ಹತ್ತಿರ ಬರುತ್ತಿದೆ. ಹೀಗಾಗಿ ಇನ್ನೊಂದು ಮನೆ ಕಟ್ಟಿಸಿ ಬಾಡಿಗೆಗೆ ಕೊಟ್ಟರೆ ನಿವೃತ್ತ ಜೀವನದಲ್ಲಿ ನಿರಾಳವಾಗಿರುತ್ತದೆ ಎಂದು ಮುಂದಾಲೋಚನೆ ಮಾಡಿ ಎರಡು ಬೆಡ್‌ರೂಂ ಮನೆ ಕಟ್ಟಿಸಿದಳು. ಇವರ ಬಡಾವಣೆಯಲ್ಲಿ ಸಾಕಷ್ಟು ಜನ ಕಾಲೇಜು ವಿದ್ಯಾರ್ಥಿಗಳಿಗೆ ಮನೆ ಬಾಡಿಗೆಗೆ ಕೊಟ್ಟು ದೊಡ್ಡ ಮೊತ್ತದ ಬಾಡಿಗೆ ವಸೂಲಿ ಮಾಡುತ್ತಿದ್ದರು. ಇವರ ಕಾಲೊನಿಯ ಹತ್ತಿರವೇ ಖಾಸಗಿ ಇಂಜಿನಿಯರಿಂಗ್ ಕಾಲೇಜು ಇದ್ದು ತುಂಬಾ ವಿದ್ಯಾರ್ಥಿಗಳು ಕಾಲೇಜು ಹತ್ತಿರದ ಸ್ಥಳವನ್ನೇ ವಾಸಕ್ಕಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇದು ಆಕೆಗೆ ವರವಾಗೇ ಪರಿಣಮಿಸಿತು.

ಕೆಲ ಗೃಹಸ್ಥರು ಬಂದು ಮನೆ ಬಾಡಿಗೆಗೆ ಕೇಳಿದರೂ ವೆಂಕು ಒಪ್ಪದೆ ಅದನ್ನು ಕಾಲೇಜು ವಿದ್ಯಾರ್ಥಿಗಳಿಗಾಗೇ ಮೀಸಲಿಟ್ಟಳು. ಕಾಲೇಜಿನಲ್ಲಿ ಹೊಸ ವರ್ಷ ಆರಂಭವಾಗುತ್ತಲೇ ನಾಲ್ಕು ವಿದ್ಯಾರ್ಥಿಗಳು ವೆಂಕು ಮನೆಗೆ ಬಾಡಿಗೆಗೆ ಬಂದೇಬಿಟ್ಟರು. ಇವಳು ಕೇಳಿದ ಬಾಡಿಗೆ ಕೊಡಲು ಸಿದ್ಧರೂ ಆದರು. ವೆಂಕುಗೆ ಸಂಭ್ರಮವೋ ಸಂಭ್ರಮ. ಗೃಹಸ್ಥರಿಗೆ ಕೊಟ್ಟರೆ ಈ ಪಾಟಿ ಬಾಡಿಗೆ ದಕ್ಕುತ್ತಿತ್ತಾ ಎಂದುಕೊಂಡು ಉಬ್ಬಿದಳು ಕೊಬ್ಬಿದಳು.

ಖಾಸಗಿ ಇಂಜಿನಿಯರಿಂಗ್ ಕಾಲೇಜಿಗೆ ದೊಡ್ಡ ಮೊತ್ತದ ಡೊನೇಶನ್ ಕೊಟ್ಟು ವಿದ್ಯಾರ್ಥಿಗಳು ಸೀಟು ಗಿಟ್ಟಿಸಿಕೊಂಡಿರುತ್ತಾರೆ. ಉತ್ತರ ಭಾರತದ ಅಂಥ ನಾಲ್ಕು ವಿದ್ಯಾರ್ಥಿಗಳು ವೆಂಕುಳ ಮನೆಗೆ ಬಾಡಿಗೆದಾರರಾಗಿ ಬಂದರು. ಬಂದ ಹೊಸದರಲ್ಲಿ ಎಲ್ಲ ಚೆನ್ನಾಗಿಯೇ ಇತ್ತು. ಹೊಸ ಊರು, ಹೊಸ ಕಾಲೇಜು, ಹೊಸ ವಾತಾವರಣ, ಅರಿಯದ ಭಾಷೆ - ಹೀಗಾಗಿ ಹುಡುಗರು ವಿನಯಶೀಲರಾಗಿಯೇ ವರ್ತಿಸಿದರು. ಬರಬರುತ್ತ ಹುಡುಗರು ಕಾಲ್ನಡಿಗೆ ಬಿಟ್ಟು ಮೋಟರ್‌ಸೈಕಲ್‌ನ ದಾಸರಾದರು. ಮನೆಯಲ್ಲಿ ದೊಡ್ಡ ಸ್ಕ್ರೀನಿನ ಟಿ.ವಿ. ಮೂಲೆಯನ್ನಲಂಕರಿಸಿತು. ಮ್ಯೂಜಿಕ್ ಸಿಸ್ಟಮ್, ಡೆಕ್‌ನಂತ ಸಂಗೀತ ಸಾಧನಗಳು ದಾಂಗುಡಿ ಇಟ್ಟವು. ಬಹುಶಃ ತಾವಷ್ಟೇ ಸಂಗೀತ ಕೇಳಿದರೆ ಸಾಲದು, ಊರ ಜನರೆಲ್ಲ ಪುಕ್ಕಟೆಯಾಗಿ ಈ ಸಂಗೀತ ಸುಧೆಯನ್ನು ಸವಿಯಲಿ ಎಂಬ ಸದುದ್ದೇಶದಿಂದ

ಫುಲ್ ವಾಲ್ಯುಮ್‌ನಲ್ಲಿ ಸಂಗೀತವನ್ನು ಟ್ಯೂನ್ ಮಾಡಿದರು. ಪಾಶ್ಚಾತ್ಯ ಸಂಗೀತ, ಸಿನೆಮಾ ಸಂಗೀತಗಳು ಓತಪ್ರೋತವಾಗಿ ಹರಿದು ಬರತೊಡಗಿದವು. ವೆಂಕು ದೇವರ ಪೂಜೆ, ತುಳಸಿಪೂಜೆ ಮಾಡುತ್ತ ಮಂತ್ರೋಚ್ಚಾರಣೆ ಮಾಡುತ್ತಿರುವಂತೆ ಅಟ್ಟದ ಮೇಲಿಂದ ಹಾಡುಗಳು ಕರ್ಕಶವಾಗಿ ಕೂಗತೊಡಗಿದವು. ಪಾಪ ಆಕೆಗೆ ಮಂತ್ರವೇ ಮರೆತುಹೋಯಿತು. ಕಿವಿಯಲ್ಲಿ ಕೂರ್ದಶಿ ಹೊಡೆದ ಅನುಭವ. ಸಿಟ್ಟಿನಿಂದ ಕಷ್ಟಪಟ್ಟು ಅಟ್ಟಯೇರಿ ಹೋಗಿ ಜೋರು ಮಾಡಿದಾಗ ಗುಜರಾಥಿ ಹುಡುಗ ಹರಕಚಂದನು ಹಿಂದಿಯಲ್ಲಿ 'ಮಾಜಿ, ನೀವೇಕೆ ತೊಂದರೆ ತೆಗೆದುಕೊಂಡು ಬಂದಿರಿ? ಕೆಳಗಿನಿಂದಲೇ ಕೂಗಿದ್ದರೆ ಆಗ್ತಿತ್ತಲ್ಲ. (ಸಂಗೀತದ ಆರ್ಭಟದಲ್ಲಿ ಇವರಿಗೆ ಏನೂ ಕೇಳುವದಿಲ್ಲ ಎನ್ನುವ ಮಾತು ಬೇರೆ) ಸುಮ್ಮನೆ ತೊಂದರೆ ತೆಗೆದುಕೊಂಡಿರಿ' ಎಂದು ಸುಳ್ಳು ಕಾಳಜಿ ತೋರಿದ. ಮರುದಿನ ಮತ್ತೆ ಸೂರು ಹಾರುವಂತೆ ಹಾಡು ಹಚ್ಚಿದಾಗ ವೆಂಕು ತಕರಾರು ಮಾಡದೆ ಬಿಡಲಿಲ್ಲ. 'ಏನು ಮಾಡುವದು ಮಾಜಿ, ನನ್ನ ರೂಂ ಮೇಟ್ ರಾಕೇಶನಿಗೆ ಕಿವಿ ಸರಿಯಾಗಿ ಕೇಳುವದಿಲ್ಲ. ಹಾಳಾದೋನು ಜೋರಾಗಿ ಒದರಿಸುತ್ತಾನೆ. ನೀವು ಚಿಂತೆ ಮಾಡಬೇಡಿ. ನಾನು ನೋಡಿಕೊಳ್ಳುತ್ತೇನೆ' ಎಂದು ಹುಸಿ ಸಮಾಧಾನ ಹೇಳಿ ಕಳಿಸಿದ್ದ ಆ ಹರಕಚಂದ - ಬಲು ಚಾಲು ಹುಡುಗ. ಆದರೆ ಆ ಸಂಗೀತದ ಗರ್ಜನೆಯೇನು ಕಡಿಮೆಯಾಗಲಿಲ್ಲ. ವೆಂಕು ಹಾಗೂ ಅವಳ ಗಂಡನೇ ಅದಕ್ಕೆ ಹೊಂದಿಕೊಂಡರು. ಹೊಸ ಸಿನೆಮಾ ಹಾಡು, ಇಂಗ್ಲಿಷ್ - ಹಿಂದಿ ಆಲ್ಬಮ್ ಸಾಂಗ್ಸ್ನಿ ಎಂದರೇನೆಂದು ತಿಳಿಯದ ಈ ಮುಗ್ಧ ದಂಪತಿಗಳು ಈಗ ಅವನ್ನೆಲ್ಲ ಕಲಿತಿದ್ದಾರೆ ಎಂಬುದು ಒಂದು ಪ್ರಗತಿಯ ಸಂಕೇತವೇ ಸರಿ.

ಕ್ರಿಕೆಟ್, ಫುಟ್‌ಬಾಲ್ ಸುಗ್ಗಿ ಬಂದುಬಿಟ್ಟರಂತೂ ಹುಡುಗರನ್ನು ಹಿಡಿಯುವುದೇ ಕಷ್ಟ. ಈ ಹುಡುಗರ ಜೊತೆಗೆ ಮತ್ತೆಂಟು ಕಪಿಗಳು ಸೇರಿ ಮಹಡಿಯ ಮೇಲೆ ಧಾಂದಲೆಯೋ ಧಾಂದಲೆ. ಆನಂದ, ಆತಂಕ ಉದ್ವೇಗಗಳು ನಿರಂತರವಾಗಿ ಅವರ ಬಾಯಿಂದ ಹೊರಹೊಮ್ಮುತ್ತಿರುತ್ತವೆ. ಅವರ 'ಹೋ' ಎಂಬ ಕೂಗಿಗೆ ಏನು ಅನಾಹುತವಾಯಿತೊ ಎಂದು ವೆಂಕು ಹಾಗೂ ಆಸುಪಾಸಿನವರು ಓಡಿ ಬಂದದ್ದಿದೆ. ಈ ತರುಣರೆಲ್ಲ ಧಡಧಡ ಅಟ್ಟ ಏರುವುದು, ಇಳಿಯುವುದು, ಮಹಡಿಯ ಮೇಲೆ ಕುಣಿಯುವದು - ಇಂಥ ಎಲ್ಲ ಗೌಜು ಗದ್ದಲವನ್ನು ಮಾಲಿಕರು ತಲೆಮೇಲೆ ಕೈಹೊತ್ತು ಸಹಿಸಿಕೊಳ್ಳಬೇಕಾಗಿದೆ.

ಮೋಟರ್ ಬೈಕ್ ಅಂತೂ ಇವರ ಪಾಲಿಗೆ ಕೇವಲ ಒಂದು ಸಾರಿಗೆ ಸಾಧನವಾಗಿಲ್ಲ. ಅದು ಪ್ರತಿಷ್ಠೆಯ ಸಂಕೇತ, ಯುವಶಕ್ತಿಯ ಪ್ರತೀಕ ಅತಿ ದುಬಾರಿಯಾದ ಬೈಕುಗಳನ್ನು ಪೂರ್ತಿ ವೇಗದಲ್ಲಿ ಸೈಲೆನ್ಸರ್ ತೆಗೆದು ಆರ್ಭಟಿಸುತ್ತ ಅಡ್ಡಾಡಿಸುವ ಹುಚ್ಚು ಯಾಕೊ! ಬೈಕಿನ ಈ ರಣಕರ್ಕಶ ಸದ್ದು ಕೇಳುತ್ತಲೇ ಬೀದಿಯ ಜನರೆಲ್ಲ ಕೈಯಲ್ಲಿ ಜೀವ ಹಿಡಿದು ದಿಕ್ಕಾಪಾಲಾಗಿ ದೂರ ಸರಿಯುತ್ತಾರೆ. ಇಷ್ಟಕ್ಕೆ ನಿಂತಿಲ್ಲ ಇವರ ಚೇಷ್ಟೆಗಳು. ಇತ್ತೀಚೆಗೆ ಇವರ ಬೈಕ್ ಏರಿ ಹುಡುಗರನ್ನು ಬಿಗಿಯಾಗಿ ತಬ್ಬಿದ ಬಿಗಿಬಿಗಿ ಉಡುಪಿನ ಬೆಡಗಿಯರು, ಲೋ ವೇಸ್ಟ ಜೀನ್ ಹಾಗೂ ಶಾರ್ಟ್ ಹಾಗೂ ಸ್ಲೀವ್‌ಲೆಸ್ ಟಾಪಿನ ವೈಯ್ಯಾರಿಯರೂ ವೆಂಕುಳ ಅಟ್ಟಯೇರಿ ಬರುತ್ತಿದ್ದಾರೆ.

'ಮಕ್ಕಳೇ, ನೀವು ಹೀಗೆ ಹುಡುಗಿಯರನ್ನು ಕರೆತರುವುದು ನನಗೆ ಸರ್ವಥಾ ಸಮ್ಮತವಿಲ್ಲ. ಇದಕ್ಕೆ ನಾನು ಅವಕಾಶ ಕೊಡುವವಳಲ್ಲ' ಎಂದು ವೆಂಕು ಗದರಿದರೆ 'ಮಾಜಿ, ನೀವನ್ನುವದು ಬರೋಬರಿಯಾಗಿದೆ. ವಿದ್ಯಾರ್ಥಿಗಳಾದ ನಾವು ಹಾಗೆಲ್ಲ ಹುಡುಗಿಯರ ಸಹವಾಸ ಮಾಡಬಾರದು ನಿಜ. ಆದರೆ ಈ ತರುಣಿ ನೀವು ತಿಳಿದಂತೆ ನನ್ನ ಗೆಳತಿಯಾಗಲಿ, ಪ್ರೇಯಸಿಯಾಗಲಿ ಅಲ್ಲ. ಈಕೆ ನನ್ನ ಕಜಿನ್. ನನ್ನ ಕಾಲೇಜಿನಲ್ಲೇ ಓದುತ್ತಾಳೆ' ಎಂದು ವಿನಯವಾಗಿ ನುಡಿಯುತ್ತಾರೆ. ಇಷ್ಟು ದಿನ ಹುಟ್ಟಿಕೊಳ್ಳದ ಈ cousin ಅದ್ಹೇಗೆ ಹೊಸದಾಗಿ ಉದ್ಭವಿಸಿದಳೊ ದೇವರೇ ಬಲ್ಲ 'ಕಜಿನ್' ಎಂಬ ಹೊಸ ಸಂಬಂಧ ಯುವ ವಲಯದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿದೆ. ಎಲ್ಲ ಆಕ್ಷೇಪಾರ್ಹ ಸಂಬಂಧಗಳೂ ಕಜಿನ್ ಪದದಡಿಯಲ್ಲಿ ಸುರಕ್ಷಿತವಾಗಿ ಆಶ್ರಯ ಪಡೆದಿವೆ. ವೆಂಕು 'ಹೌದೆ?' ಎನ್ನುತ್ತ ಸುಮ್ಮನಾಗುತ್ತಾಳೆ. ಈಗ ನಾಲ್ಕೂ ಜವ್ವನಿಗರಿಗೂ ಕಜಿನ್‌ಗಳು ಹುಟ್ಟಿಕೊಂಡಿದ್ದಾರೆ. ಒಬ್ಬೊಬ್ಬರಿಗೆ ಒಂದಕ್ಕಿಂತ ಹೆಚ್ಚು ಕಜಿನ್‌ಗಳೂ ಇದ್ದಾರೆ. ದಿನಗಳೆದಂತೆ ಹಳಬರು ಹೋಗಿ ಹೊಸ ಕಜಿನ್‌ಗಳೂ ಜನ್ಮಿಸುತ್ತಿರುತ್ತಾರೆ. ವೆಂಕುಳ ಅಟ್ಟದ ಮೇಲೆ ಹೈಹೀಲ್ಡ್‌ಗಳ ಕಟಕಟ, ನಗುವಿನ ಕಿಲಕಿಲದಿಂದಾಗಿ ಒಂದು ರೊಮ್ಯಾಂಟಿಕ್ ವಾತಾವರಣ ನಿರ್ಮಾಣವಾಗಿದೆ. ನಡುರಾತ್ರಿಯ ವರೆಗಿನ ಪಾರ್ಟಿಗಳು, ನೃತ್ಯ, ಕೇಕೆ ಕೂಗಾಟಗಳು ಸರ್ವೇಸಾಮಾನ್ಯವಾಗಿವೆ.

ಒಮ್ಮೆ ಆಕಾಶನಿಗೆ ಜ್ವರವೆಂದು ಕಷಾಯ ಮಾಡಿಕೊಂಡು ವೆಂಕು ಮೇಲೆ ಒಯ್ದಾಗ ಆಕಾಶನಿಗೆ ಕಜಿನ್ ಶಿಲ್ಪಾ ಅವನ ಹಾಸಿಗೆಯ ಮೇಲೇ ಕುಳಿತು ಅವನಿಗೆ ಪ್ರೀತಿಯ ಸೇವೆಗೈಯುತ್ತಿದ್ದಳು.

ಆತ 'ಮಾಜಿ, ನೀವೇಕೆ ಹೀಗೆ ಧಡಪಡಿಸುತ್ತೀರಿ? ನನ್ನ ಕಜಿನ್ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಅವಳಿಂದಾಗಿಯೇ ನಾನಿಷ್ಟು ಬೇಗ ವಾಸಿಯಾಗುತ್ತಿದ್ದೇನೆ. ದೇವರು ಎಲ್ಲ ಹುಡುಗರಿಗೂ ಇಂಥ ಕಜಿನ್ ಕೊಟ್ಟಿರಲಿ. ನಾನು ಪೂರ್ಣ ಗುಣವಾಗುವವರೆಗೆ ಈಕೆ ಇಲ್ಲೇ ಇರುತ್ತಾಳೆ. ರಾತ್ರಿ ಮಾತ್ರ ಮನೆಗೆ ಹೋಗುತ್ತಾಳೆ. ಇದಕ್ಕೆ ನೀವು ಅನುಮತಿ ಕೊಡಬೇಕು' ಎಂದು ಸಮ್ಮತಿ ಪಡೆದುಬಿಟ್ಟ. ಪಾಪ ವೆಂಕು ಭೋಳೆ ಹೆಂಗಸು. ಈ ತುಂಟರ ನಾಟಕ ಅವಳಿಗೆ ತಿಳಿಯುತ್ತಲೇ ಇರಲಿಲ್ಲ, ಆಕಾಶನ ಅನಾರೋಗ್ಯ 10-15 ದಿನ ಲಂಬಿಸಿತು.

ಮೊದಲೆಲ್ಲ ಸರಿಯಾಗಿ ಬಾಡಿಗೆ ಕೊಡುತ್ತಿದ್ದ ಅಂತೇವಾಸಿಗಳು ಈಗ ಸಬೂಬು ಹೇಳುತ್ತಾರೆ. ಪರೀಕ್ಷೆಗೆ ಹಣ ಕಟ್ಟಬೇಕಿತ್ತು. ಸಾವಿರ ರೂಪಾಯಿ ಕೆಮ್ಮಿ ಇದೆ. ಮುಂದಿನ ತಿಂಗಳು ಕೊಡುತ್ತೇವೆ ಎಂದವರು ಪರೀಕ್ಷೆಯ ನಂತರ ಎರಡು ತಿಂಗಳು ಮಾಯವಾಗಿ ಬಿಡುತ್ತಾರೆ. ಊರಿಂದ ಬರಲಿ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ಈ ವರ್ಷ ಬಾಡಿಗೆ ಹೆಚ್ಚಿಸುತ್ತೇನೆ ಎಂದು ಆಕೆ ಕಾಲ ನೂಕುತ್ತಾಳೆ.

ಹುಡುಗರು ಬಂದ ಒಂದು ವಾರಕ್ಕೆ ಆಕೆ ಇಂದು ನಿಮ್ಮೊಡನೆ ಮಾತಾಡಬೇಕಿದೆ ರೂಮಿಗೆ ಬರುತ್ತೇನೆ ಎಂದು ಮುಂಜಾನೆಯೇ ಹೇಳಿಟ್ಟಿರುತ್ತಾಳೆ. ಸಂಜೆ ತನ್ನ ಹೊರಲಾರದ ಭಾರವನ್ನು ಹೊತ್ತು ಅಟ್ಟ ಏರುತ್ತಿರುವದರ ಸುಳಿವು ಹಿಡಿದ ಆ ಪುಂಡರು

ಒಂದು ಹೊಸ ಥಾಲನ್ನು ಹಿಡಿದು ಸನ್ನದ್ಧರಾಗಿರುತ್ತಾರೆ. ವೆಂಕು ಏದುಸಿರು ಬಿಡುತ್ತ ಅವರ ಮನೆ ಹೊಕ್ಕಾಗ 'ಛೀ ಛೀ ಛೀ' ಎಂದು ಹೇಸಿಕೊಳ್ಳುತ್ತ ಹೊರನಡೆದುಬಿಡುತ್ತಾಳೆ. 'ಮಾಜಿ ಆಯಿಯೆ, ಆಯಿಯೆನಾ' ಎಂದು ಬಹು ಆದರದಿಂದ ಕರೆಯುತ್ತಾರೆ. ಆದರೆ ಆಕೆ ಬಂದಂತೆಯೇ ಇಳಿದುಬಿಡುತ್ತಾಳೆ. ಕಾರಣ ಎಲ್ಲ ತರುಣರೂ ಕಾಚಾದ ಮೇಲೆ ನಿರ್ಭಿಡೆಯಿಂದ ಕುಳಿತಿರುತ್ತಾರೆ. ವೆಂಕುಳ ಫಜೀತಿ ಮಾಡುತ್ತಾರೆ. ಆಕೆ ಪ್ರತಿ ವರುಷ ಬಾಡಿಗೆ ಏರಿಸಲು ಪ್ರಯತ್ನಿಸಿದಾಗಲೆಲ್ಲ ಒಂದೊಂದು ನಾಟಕ ನಡೆಯುತ್ತದೆ. ಒಮ್ಮೆ 'ಮಾಜಿ ನೀವು ತುಂಬಾ ಒಳ್ಳೆಯವರು ನಿಮ್ಮನ್ನು ಕಂಡಾಗಲೆಲ್ಲ ನನಗೆ ನನ್ನ ತಾಯಿಯದೇ ನೆನಪು. ನಿಮ್ಮ ಪ್ರೀತಿಪೂರ್ಣ ಮಾತು, ಕಾಳಜಿ - ಕಳಕಳಿಯಲ್ಲಿ ನನ್ನ ಅಮ್ಮನನ್ನೇ ಕಾಣುತ್ತೇನೆ. ನಿಮ್ಮ ಬಗ್ಗೆ ಮನೆಯಲ್ಲಿ ಬಹಳ ಹೇಳುತ್ತಿರುತ್ತೇನೆ. ನಿಮಗಾಗಿ ನನ್ನಮ್ಮ ತುಪ್ಪದಲ್ಲಿ ಮಾಡಿದ ಮಿಠಾಯಿ ಕಳಿಸಿದ್ದಾರೆ. ಮಾಜಿ, ನೀವು ಒಮ್ಮೆ ನಮ್ಮೂರಿಗೆ ಬರಲೇಬೇಕು' ಎಂದು ಹರಕಚಂದನು ಅವಳನ್ನು ಆಗ್ರಹಪೂರ್ವಕವಾಗಿ ಆಹ್ವಾನಿಸುತ್ತಾನೆ. ಸಿಟ್ಟಿನ ಬೆಟ್ಟ ಹೊತ್ತು ಬಂದ ಆಕೆಯ ಸಿಟ್ಟನ್ನು ಮಂಜಿನಂತೆ ಕರಗಿಸಿಬಿಡುತ್ತಾರೆ. ಮರುವರುಷ ಮತ್ತೆ ಬಾಡಿಗೆ ಹೆಚ್ಚಿಸಲು ಪ್ರಸ್ತಾಪಿಸಿದಾಗ ಸೂರಜ 'ಮಾಜಿ ಮೈ ಕ್ಯಾ ಬತಾವೂ? ನನ್ನ ತಂದೆ ಬಹಳ ಅಜಾರಿ ಇದ್ದಾರೆ. ಅವರ ಹೊಟ್ಟೆಯ ಶಸ್ತ್ರಚಿಕಿತ್ಸೆಯಾಗಬೇಕಿದೆ. ಬಹಳ ಖರ್ಚು. ಇನ್ನು ನಾನು ಬಾಡಿಗೆಗಾಗಿ ಎಲ್ಲಿಂದ ಹಣ ಹೊಂದಿಸಲಿ? ಅಷ್ಟಾಗಿಯೂ ಕೊಡಲೇಬೇಕೆಂದು ನೀವು ಒತ್ತಾಯಿಸಿದರೆ ಇಕೊ ನನ್ನ ವಾಚ್ ತೆಗೆದುಕೊಂಡು ಲೆಕ್ಕ ಹೊಂದಿಸಿಕೊಳ್ಳಿ' ಎಂದು ಅಳುಮುಖ ಮಾಡುತ್ತಾನೆ. ಪಾಪ ವೆಂಕು ಬಂದ ದಾರಿಗೆ ಸುಂಕವಿಲ್ಲವೆಂದು ಬೆನ್ನು ತಿರುಗಿಸುತ್ತಲೂ ಹುಡುಗರು 'ಹುರ್ರೆ' ಎಂದು ವಿಜಯೋತ್ಸವ ಆಚರಿಸುತ್ತಾರೆ. ಇವರ ಊಟ, ಪಾರ್ಟಿ, ಹೊಟೆಲು, ಸಿನಿಮಾ, ಬೈಕ್‌ಸವಾರಿ, ಮೋಜು-ಮಸ್ತಿಗಳಿಗೆ ಯಾವತ್ತೂ ಹಣದ ಕೊರತೆಯಾಗಿಲ್ಲ. ಆದರೆ ಬಾಡಿಗೆ ಏರಿಕೆಯ ಜುಜುಬಿ ಹಣಕ್ಕೆ ಯಾವಾಗಲೂ ಖೋತಾ. ಇವರು ರಜೆಯಲ್ಲಿ ಊರಿಗೆ ಹೋದಾಗ ಇವರ ಸ್ನೇಹಿತ ಅಥವಾ ಸಹೋದರರೆನಿಸಿಕೊಳ್ಳುವ ಬೇರೆ ನಾಲ್ಕು ಹುಡುಗರು ಮನೆಯನ್ನು ಆಕ್ಯುಪೈ ಮಾಡಿರುತ್ತಾರೆ. ಬಹುಶಃ ಆ ಅವಧಿಯ ಬಾಡಿಗೆಯನ್ನು ಅವರೇ ತುಂಬುತ್ತಾರೆಂದು ಕಾಣುತ್ತದೆ. ಹರಕಚಂದ ಅ್ಯಂಡ್ ಕಂಪನಿ ಆ ಬಾಡಿಗೆ ಉಳಿಸಿಕೊಂಡು ತಮ್ಮ ಮೋಜಿಗೆ ಬಳಸಿಕೊಳ್ಳುತ್ತಾರೆ. ವೆಂಕುಗೆ ಈ ವಂಚನೆ ಬಹಳ ಅರ್ಥವಾಗುವುದಿಲ್ಲ. ಜಗಳಾಡಬೇಕೆಂದರೆ ಆಕೆಗೆ ಹಿಂದಿಯಾಗಲಿ, ಇಂಗ್ಲೀಷಾಗಲಿ ಸರಿಯಾಗಿ ಬರುವದಿಲ್ಲ. ಅವಳ ಆಂಗಿಕ ಭಾಷೆ ಅಪೇಕ್ಷಿತ ಫಲಿತಾಂಶವನ್ನು ಕೊಡುವದಿಲ್ಲ. ಹೀಗಾಗಿ ಅವಳ ಯೋಜನೆಗಳೆಲ್ಲ ಡುಮುಕಿ ಹೊಡೆಯುತ್ತವೆ. ವೆಂಕೂಳ ಗಂಡ ಯಾವದೇ ವ್ಯವಹಾರದಲ್ಲಿ ತಲೆ ಹಾಕದೆ ತಾನು, ಆಫೀಸು, ಕ್ಲಬ್ಬು ಎಂದು ತನ್ನ ಪಾಡಿಗೆ ತಾನು ಇದ್ದುಬಿಡುತ್ತಾನೆ. ಎಲ್ಲದಕ್ಕೂ ಇವಳೇ ಒದ್ದಾಡಬೇಕು.

ಕೊನೆಗೆ ನಾಲ್ಕನೇ ವರ್ಷವಾದರೂ ಬಾಡಿಗೆ ಏರಿಸಿಯೇ ತೀರಬೇಕೆಂದು ವೆಂಕು ಪಣತೊಟ್ಟು ಮಹಡಿ ಏರಿ ಹೋಗುವಷ್ಟರಲ್ಲಿ ರಾಕೇಶನ ತಂದೆ-ತಾಯಿ

ಮಾರವಾಡದಿಂದ ಬಂದಿದ್ದರು. ರಾಕೇಶನ ತಂದೆ 'ಬಹನ್‌ಜಿ, ನಾನು ವಿಪರೀತ ಬಡವ. ನನ್ನ ಸಂಬಳ 6 ಸಾವಿರ ಮಾತ್ರ. ಅದರಲ್ಲೇ ಮಕ್ಕಳ ವಿದ್ಯಾಭ್ಯಾಸ, ಮನೆ ಖರ್ಚು ಎಲ್ಲಾ ತೂಗಿಸಬೇಕು. ಬಹನ್, ನಿಮಗೆ ಬಡವರ ಕಷ್ಟ ಗೊತ್ತಿಲ್ಲ. ಇಂಥದರಲ್ಲಿ ನೀವು ಬಾಡಿಗೆ ಹೆಚ್ಚಿಸಿದರೆ ನಾನು ಕೊನೆಯ ವರ್ಷ ಓದುತ್ತಿರುವ ಮಗನ ವಿದ್ಯಾಭ್ಯಾಸ ನಿಲ್ಲಿಸಿ ಊರಿಗೆ ಕರೆದೊಯ್ಯಬೇಕಾಗುವದು' ಎಂದು ಕಣ್ಣೀರ್ಗರೆದನು. ತಾಯಿಯೂ ಕಣ್ಣಿಗೆ ಸೆರಗು ಹಚ್ಚಿದಳು. ಅಯ್ಯೋ ಪಾಪ ನಾನೇಕೆ ಇಂಥ ತಪ್ಪು ಮಾಡಿದೆ? ಎಂದು ವ್ಯಥೆ ಪಡುತ್ತ ಆ ದಂಪತಿಗಳನ್ನು ಸಮಾಧಾನಪಡಿಸಿ ಅವರು ಹೆಚ್ಚಿನ ಬಾಡಿಗೆ ಕೊಡಬೇಕಿಲ್ಲವೆಂದು ಭರವಸೆ ನೀಡಿ, ತಾನೇ ಐನೂರು ರೂಪಾಯಿಗಳನ್ನು ಅವರ ಪ್ರಯಾಣದ ಖರ್ಚಿಗೆಂದು ಕೊಟ್ಟಳು.

ಕೆಲ ತಿಂಗಳು ಗತಿಸಿದವು. ಮುಂದೊಂದು ದಿನ ವೆಂಕು, ಗೆಳತಿ ರಂಗೂನ ಮನೆಗೆ ಹೋದಳು. ರಂಗೂ ಕೂಡ ತನ್ನ ಮನೆಯ ಅಟ್ಟವನ್ನು ಕಾಲೇಜು ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಟ್ಟಿದ್ದಳು. ಅಲ್ಲಿ ವೆಂಕು ಒಬ್ಬ ದಂಪತಿಗಳು ವಿದ್ಯಾರ್ಥಿಗಳೊಡನೆ ನಿಂತದ್ದನ್ನು ಕಂಡಳು. ಎಲ್ಲೋ ನೋಡಿದ ಮಸುಕು ನೆನಪು. ರಂಗೂ ಹೇಳಿದಳು 'ನೋಡೆ ವೆಂಕು, ಇವತ್ತು ನಮ್ಮ ಬಾಡಿಗೆ ಹುಡುಗನ ಪಾಲಕರು ಯು.ಪಿ. ದಿಂದ ಬಂದಿದ್ದಾರೆ ತುಂಬಾ ಬಡವರಂತೆ. ಬಾಡಿಗೆ ಏರಿಸಬಾರದೆಂದು ಬೇಡಿಕೊಳ್ಳುತ್ತಿದ್ದಾರೆ. ಏರಿಸಿದ್ದಾದರೆ ತಮ್ಮ ಮಗನ ಓದು ಬಿಡಿಸಿ ಊರಿಗೆ ಕರೆದೊಯ್ಯುತ್ತಾರಂತೆ. ಪಾಪ ಮಕ್ಕಳ ಓದಿಗಿಂತ ನಮಗೆ ಹಣ ಮುಖ್ಯವೇ ಹೇಳು? ಆಗಲಿ ಸಾಧ್ಯವಾದಷ್ಟೇ ಬಾಡಿಗೆ ಕೊಡಿ ಎಂದು ಸಂತೈಸಿ ಬಂದೆ' ಎಂದಳು. ವೆಂಕೂಗೆ ಆಗ ಎಲ್ಲ ಸ್ಪಷ್ಟ ನೆನಪಾಯಿತು. 'ಎಲಲಾ ಕಳ್ಳ ಬಡ್ಡಿ ಮಕ್ಕಳಾ, ಬಾಡಿಗೆ ಅಮ್ಮ-ಅಪ್ಪನ್ನ ತಂದು ಬಡತನದ ಸೋಗು ಹಾಕುತ್ತೀರಾ? ನಿಮ್ಮನ್ನ ಸುಮ್ಮನೆ ಬಿಡುವದಿಲ್ಲ ಅಬ್ಬಾ ಬರುವಾಗ ಸೂಜಿಯಷ್ಟಿದ್ದವರು ಬರಬರುತ್ತ ಡಬ್ಬಣದಂತಾದರಲ್ಲ' ಎಂದು ಹಲ್ಲು ಕಡಿದಳು.

ಹೌದು ಹುಡುಗರು ನಾಟಕ ಕಂಪನಿಯವರನ್ನೋ ಕೂಲಿನಾಲಿಯವರನ್ನೋ ಇನ್ನಾರನ್ನೋ ಹಿಡಿದು ತಮ್ಮ ಮಾತಾ-ಪಿತರೆಂದು ಪರಿಚಯಿಸುತ್ತಿದ್ದರು. ತಂದೆ ತಾಯಿಗಳು ಒಮ್ಮೊಮ್ಮೆ ಹಿಂದಿ ಮಾತಾಡಿದರೆ ಮತ್ತೊಮ್ಮೆ ಅಸ್ತಿತ್ವದಲ್ಲೇ ಇಲ್ಲದ ಯಾವದೋ ಭಾಷೆಯನ್ನು ಆಡಿದಂತೆ ನಟಿಸುತ್ತಿದ್ದರು. ಹುಡುಗರೇ ಆ ಮಾತನ್ನು ಹೀಗೆ ಹೀಗೆ ಎಂದು ವಿವರಿಸಿ ಹೇಳುತ್ತಿದ್ದರು.

ವೆಂಕು ಅಂದು ರಂಗೂನ ಮನೆಯಿಂದ ಬಂದು ಧಪಧಪ ಹೆಜ್ಜೆ ಹಾಕುತ್ತ ಹುಡುಗರ ಮನೆ ಸೇರಿದಾಗ ಆ ಠಕ್ಕರು 'ಮಾಜಿ, ಆಪ್ ಲೊ ಇನ್ಸಾನ್ ನಹೀ ಹೈ ದೇವಿ ಹೈ ದೇವಿ...' ಮುಂತಾದ ಹೊಗಳಿಕೆಯ ಮಾತುಗಳಿಂದ ಅವಳ ಕೋಪಾಗ್ನಿಯನ್ನು ಶಮನಗೊಳಿಸಿಬಿಟ್ಟರು. ಇಷ್ಟು ವರ್ಷವೇ ತಡೆದುಕೊಂಡಿದ್ದೇನೆ. ಇನ್ನೇನು ಪರೀಕ್ಷೆ ಬಂದೇ ಬಿಟ್ಟಿತು. ಇನ್ನು ಕೆಲ ತಿಂಗಳುಗಳಿಗಾಗಿ ಏಕೆ ಬಾಡಿಗೆ ಹೆಚ್ಚಿಸಿ ಕೆಟ್ಟವಳಾಗಲಿ? ಎಂದು ತಣ್ಣಗಾಗಿಬಿಟ್ಟಳು.

ವಿದ್ಯಾರ್ಥಿಗಳ ಪರೀಕ್ಷೆ ಮುಗಿದು ಊರ ದಾರಿ ಹಿಡಿಯುವ ಸನ್ನಾಹದಲ್ಲಿದ್ದರು. 'ಮಾಜಿ'ಯ ಜೊತೆ ಸಂಭಾವಿತರಂತೇ ವರ್ತಿಸಿದರು. ಮುಂಜಾನೆ ಇವರ ಟ್ರೇನು ನಸುಕಿನ 5.30 ಕ್ಕೇ ಇದ್ದುದರಿಂದ ಕತ್ತಲಿರುವಾಗಲೇ ಮನೆ ಖಾಲಿ ಮಾಡಿ ಹೊರಟರು. ವೆಂಕು ಹಾಗೂ ರಾಯರು ಇನ್ನೂ ಮಲಗಿದ್ದರು. ಮುಂಜಾನೆ ಎದ್ದು ಆಕೆ ಮೇಲೆ ಹೋಗಿ ನೋಡುತ್ತಾಳೆ ಮನೆಯ ಅವಸ್ಥೆ ಯಾವ ದೇವರಿಗೂ ಬ್ಯಾಡಾ. ಅಂದಗೆಟ್ಟ ಮನೆ, ನಲ್ಲಿ ನೀರು ಸೋರುತ್ತಿತ್ತು, ಲೈಟುಗಳು ಜ್ವಲಿಸುತ್ತಿದ್ದವು. ಸಿಗರೇಟಿನ ರಾಶಿ ರಾಶಿ ಖಾಲಿ ಪ್ಯಾಕುಗಳು, ಸುಟ್ಟ ಸಿಗಾರುಗಳು, ಕಾಗದದ ಪ್ಲೇಟು, ವಿಸ್ಕಿ ಬಾಟಲುಗಳು ಮತ್ತೇನೇನೋ ಕಸದ ಗುಡ್ಡೆ. ಮನೆ ಗಬ್ಬು ನಾರುತ್ತಿತ್ತು. ಇನ್ನೆಂದೂ ಕಾಲೇಜ್ ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಡುವದಿಲ್ಲವೆಂದು ದೃಢ ನಿರ್ಧಾರ ಮಾಡಿದಳು.

ತಿಂಗಳು ಕಳೆಯಿತು. ಮನೆ ಬಾಡಿಗೆಗೆ ಯಾರೂ ಬರಲಿಲ್ಲ. ಕಂಪೌಂಡ್ ಎಲ್ಲ ಬಿಕೊ ಎನ್ನುತ್ತಿತ್ತು. ಮನಸ್ಸಿಗೆ ಏನೋ ಖಾಲಿ ಖಾಲಿ. ವೆಂಕುಗೆ ಬಾಡಿಗೆ ಹುಡುಗರು ತನಗೆ ಪೇಟೆಗೆ, ಆಸ್ಪತ್ರೆಗೆ ಲಿಫ್ಟ್ ಕೊಟ್ಟದ್ದು ನೆನಪಾಯಿತು. ಆಕೆಯ ಗಂಡ ಅಪಘಾತದಲ್ಲಿ ಕಾಲು ಮುರಿದುಕೊಂಡಾಗ ಈ ಹುಡುಗರೇ ಅಲ್ಲವೇ ಅವನನ್ನು ಆಸ್ಪತ್ರೆ ಸೇರಿಸಿ ಸೇವೆ ಮಾಡಿದ್ದು? ತಾವು ಮಕ್ಕಳ ಊರಿಗೆ ಹೋದಾಗ ಪಾಪ ಮನೆ ಕಾಯುತ್ತಿದ್ದರು. ಹುಡುಗರು ರಾತ್ರಿ 3, 4ರ ವರೆಗೆ ಎಚ್ಚರವಿರುತ್ತಿದ್ದರಿಂದ ಕಳ್ಳಕಾಕರ ಭಯವಿರಲಿಲ್ಲ. ಹೀಗೇ ಏನೇನೋ ನೆನಪುಗಳು ಮರುಕಳಿಸಿದವು.

ಮತ್ತೆ ಇಂಜಿನಿಯರಿಂಗ್ ಕಾಲೇಜು ಪುನರಾರಂಭವಾಯಿತು. ಪ್ರಥಮ ವರ್ಷದ ವಿದ್ಯಾರ್ಥಿಗಳು ಬಾಡಿಗೆಗೆ ಮನೆ ಕೊಡುತ್ತೀರಾ ಎಂದು ಬಂದರು. ವೆಂಕು ಹುರುಪಿನಿಂದ ಅವರಿಗೆ ಬೀಗದ ಕೈ ಕೊಟ್ಟಳು. ಅವರು ಸೂಜಿಯಂತೆ ಒಳಹೊಕ್ಕರು.

✧✧✧

ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜನೆ ಮಾಡಿದ್ದ ಪಡುಕೋಣೆ
ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆ-2006 ಯಲ್ಲಿ
ತೃತೀಯ ಬಹುಮಾನ ಪಡೆದ ಲೇಖನ.

ಹೈಟೆಕ್ ಮೊಮ್ಮಗ

✧ ಚಿತ್ರಚಂದ್ರ, ಕೋಟೇಶ್ವರ

ಶ್ರೀಧರರಾಯರ ಮನೆಯಲ್ಲಿ ಒಂಥರ ಗಡಿಬಿಡಿ ವಾತಾವರಣ ನಿರ್ಮಾಣವಾಗಿತ್ತು. ಸುಭದ್ರಮ್ಮ ಅಡುಗೆ ಮನೆಯಲ್ಲಿ ಬೆವರು ಒರೆಸಿಕೊಳ್ಳುತ್ತಾ ತಿಂಡಿ ತೀರ್ಥದ ತಯಾರಿಯಲ್ಲಿ... ಅವರ ಅತ್ತೆ ನೇತ್ರಮ್ಮ ತಮ್ಮ ಹಳೇ ಪೆಟ್ಟಿಗೆಯನ್ನು ಬಿಚ್ಚಿಟ್ಟುಕೊಂಡು ಇದ್ದುದನ್ನೆಲ್ಲ ಹರವಿ ಏನೋ ಹುಡುಕುತ್ತಿದ್ದರು. ಮಗ ಸಂಜಯ್ ಯಾರದೋ ಹಿತ್ತಲಿನಿಂದ ತಂದ ಮಾವಿನ ಎಲೆಯಿಂದ ತೋರಣವನ್ನು ಮಾಡಿ ಬಾಗಿಲಿಗೆ ಸಿಕ್ಕಿಸುತ್ತಿದ್ದ. ಅವನಿಗೂ ಸಂಭ್ರಮ. ಶ್ರೀಧರರಾಯರು ತಮ್ಮ ದಪ್ಪನೆಯ ಕನ್ನಡಕವನ್ನು ಮೂಗಿಗೇರಿಸಿಕೊಂಡು (ಮೂಗೇ ಇಲ್ಲದಿದ್ದರೆ ಕನ್ನಡಕ ಏರಿಸುವುದಾದರೂ ಹೇಗೆ?) ಏನೋ ಹುಡುಕಾಟದಲ್ಲಿ ಮಗ್ನರಾಗಿದ್ದರು. ಅರವತ್ತಾಗಿರಲಿಲ್ಲವೇ ಅವರಿಗೂ!

ಸುಭದ್ರಮ್ಮ ಸೆರಗಿಗೆ ಕೈ ಒರೆಸಿಕೊಳ್ಳುತ್ತಾ ಅಡುಗೆಮನೆಯಿಂದ ಹೊರಬಂದರು.

''ಸಿಗಲಿಲ್ಲವೇನ್ರೀ ಇನ್ನೂ... ಅದಿಲ್ಲದಿದ್ರೆ ಇವತ್ತಿನ ಕೆಲಸವೆಲ್ಲಾ ಕುಲಗೆಟ್ಟು ಹೋಗುತ್ತಲ್ರೀ... ನೀವ್ಯಾವಾಗಲೂ ಹೀಗೇ... ಈಗ ಹೇಳಿದ್ದು ಈಗ ಮರ್ತುಬಿಟ್ಟಿರ್ತೀರ... ಇನ್ನು ವಾರದ ಹಿಂದೆ ಎಲ್ಲೋ ಇಟ್ಟಿದ್ದು ನೆನಪಿಗೆ ಬರ್ತದಾ?...''

ಅವರ ಮಾತನ್ನು ಅರ್ಧದಲ್ಲೇ ತುಂಡರಿಸಿದ ಶ್ರೀಧರರಾಯರು, ''ನಿನ್ನ ಕೆಲಸ ನೀನು ನೋಡ್ಕೊ. ನಾನು ಇಟ್ಟಿದ್ದು ನಾನೇ ಹುಡುಕಿ ತೆಗೆಯುತ್ತೇನೆ. ಈ ಮನೆಯಲ್ಲಿ ಇಟ್ಟಿದ್ದು ಇಟ್ಟಲ್ಲೇ ಯಾವಾಗಲೂ ಇದ್ದದ್ದಂತೆ ಇದೆಯೇ?... ಆ ಸಂಜುವಿಗಂತೂ ಹರಡಿ ಹಾಕಲು ಇಡೀ ಮನೆಯೇ ಸಾಕಾಗೊಲ್ಲ... ಕಲಿಯುವುದು ಎಂಟನೆಯ ಕ್ಲಾಸಾದರೂ ಇನ್ನೂ ಶಿಸ್ತೆಂಬುದಿಲ್ಲ... ಇನ್ನು ನೀನು ಮನೆ ಕ್ಲೀನು ಮಾಡುವಾಗ ಎಲ್ಲೆಲ್ಲಿ ಇರುತ್ತದೆಯೋ ಅಲ್ಲೇ ಇಡು ಅಂದ್ರೆ, ಕೇಳುವುದಿಲ್ಲ... ನಿನ್ನದೇ ಒಂದು ಶಿಸ್ತು... ಅಮ್ಮನಿಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ. ಎಲ್ಲಿ ಒಲೆಗೆ ಬಿಸಾಕಿದರೂ ಹಾಕುವವಳೆ...''

ಶ್ರೀಧರರಾಯರು ಎಂದಿನಂತೆ ತಮ್ಮ ತಪ್ಪೇನೂ ಇಲ್ಲ ಎಂದು ಬ್ಯಾಂಕಿನ ಬ್ಯಾಲೆನ್ಸ್ ಶೀಟ್ ಟ್ಯಾಲಿ ಮಾಡಿದಂತೆ ಹೇಳಿಬಿಟ್ಟರು. ಎಷ್ಟಾದರೂ ಅವರು ಬ್ಯಾಂಕಿನಿಂದ ಸ್ವಯಂ ನಿವೃತ್ತಿ ತೆಗೆದುಕೊಂಡು ಹೊರಬಿದ್ದವರಷ್ಟೇ!

With Best Compliments

from



WELL WISHER

With Best Compliments from

Vijayashree Shell Sands

1943, 4th Main - 1st Cross
Vinobanagar
Kundawada Road
Davanagere - 577 006

ಗಂಡನ ಮಾತು ಕೇಳಿ ಸಿಟ್ಟು ನೆತ್ತಿಗೇರಿದಂತಾಯಿತು. ಇವರ ಮರೆಗುಳಿತನ ನನಗೇನು ತಿಳಿಯದೇ? ಈ ಬ್ಯಾಂಕು ಬ್ಯಾಂಕು ಅಂತ ಒಂದಿನವೂ ಮನೆಯ ಕಡೆ ಜವಾಬ್ದಾರಿಯನ್ನು ತೆಗೆದುಕೊಂಡವರಲ್ಲ. ಅವರ ಸೊತ್ತು ಮನೆಯ ಸೊತ್ತು ಅಂತ ಜಾಗ್ರತೆಯಿಂದ ತೆಗೆದಿಡುವವಳು ನಾನೇ. ಇಲ್ಲದಿದ್ದರೆ ಇವರಿಗೆ ಇನ್ನೆಷ್ಟು ವಾಚು, ಕನ್ನಡಕ, ಕರ್ಚೀಫುಗಳು ಬೇಕಾಗುತ್ತಿದ್ದವೋ... ಇನ್ನು ಅತ್ತೆ ಪ್ರಾಯಸಂದವರು... ಅವರು ಇಡೀ ಹೊತ್ತು ಹುಡುಕಾಟದಲ್ಲಿಯೇ ಕಳೆಯುವವರು... ಅವರ ಸಾಮಾನುಗಳನ್ನೂ ಜೋಪಾನ ಮಾಡುವುದೂ ನಾನೇ. ಸುಭದ್ರಮ್ಮ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದರು. ಈ ಸಿಟ್ಟಿನಲ್ಲಿಯೂ ಅವರಿಗೆ ನಗು ಉಕ್ಕಿಸುವ ಪ್ರಸಂಗವೊಂದು ನೆನಪಾಯಿತು.

ಕಡೆಯವನಾಗಿ ಹುಟ್ಟಿದ ಸಂಜಯನಿಗೆ ಆಗ ಐದಾರು ತಿಂಗಳಾಗಿದ್ದವೋ ಏನೋ... ಊರ ಅಮ್ಮನವರ ಗುಡಿಯ ಜಾತ್ರೆ. ಧನು, ವಜ್ಜು, ಸಜ್ಜುವನ್ನು ಬಿಟ್ಟು ಸಂಜುವನ್ನು ಕಟ್ಟಿಕೊಂಡು ಗಂಡನೊಡನೆ ದೇವಸ್ಥಾನದ ಉದ್ದನೆಯ ಕ್ಯೂನಲ್ಲಿ ನಿಂತು ದರ್ಶನ, ಹಣ್ಣುಕಾಯಿ ಮಾಡಿಕೊಂಡು ಹೊರಬರುವಾಗ ಸಾಕುಬೇಕಾಗಿತ್ತು. ಗಂಡ ಬೇರೆ ಬನಿಯನ್ನು ತೆಗೆದು ಗಂಡಸರ ಕ್ಯೂನಲ್ಲಿ. ಶ್ರೀಧರರಾಯರು ಹೊರಬಂದವರೇ ''ಅಯ್ಯೋ ಏನೇ ಇದು... ಸಂಜುವನ್ನು ಬಿಟ್ಟು ಯಾವ ಮಗುವನ್ನು ಕಂಕುಳಲ್ಲಿ ಹೊತ್ಕೊಂಡು ಬಂದಿದ್ದೀಯಾ?'' ಎಂದು ಹೌಹಾರಿಬಿಟ್ಟರು. ಸುಭದ್ರಮ್ಮ ಕಂಗೆಟ್ಟು ಸೆರಗೆತ್ತಿ, ಎದೆಗೆ ಬಾಯಿ ಹಾಕಿದ ಮಗುವಿನ ಮುಖವನ್ನು ನೋಡಿ ''ಥೀ, ಏನ್ರೀ ಇದು. ನಮ್ಮ ಸಂಜೂನೇ.''

''ಮತ್ತೆ ಅವನಿಗೆ ನೀನು ನೀಲಿ ಶರ್ಟು ಹಾಕಿದ್ದಲ್ಲವೇನೇ?''

''ಅಯ್ಯೋ ಅವನು ಉಚ್ಚೆ ಮಾಡಿಕೊಂಡ ಅಂತ ಬದಲಾಯಿಸಿ ಈ ಕೆಂಪಂಗಿ ಚಡ್ಡಿ ಹಾಕಿದೇರಿ... ಮಗುವಿನ ಬಟ್ಟೆ ನೋಡಿ ಕಿರುಚಿಕೊಳ್ಳುವುದೇ...''

''ಹೊರಗೆ ಹೋಗುವಾಗ ನೀನು ಗಳಿಗೆಗೊಮ್ಮೆ ಅವನ ಬಟ್ಟೆ ಬದಲಾಯಿಸಬೇಡ ಮಾರಾಯ್ತಿ. ನನಗೆ ಸಣ್ಣ ಮಕ್ಕಳೆಲ್ಲ ಒಂದೇ ತರಹ ಕಾಣಿಸ್ತಾರೆ''

''ಕಾಣಿಸದೆ ಏನು ಮತ್ತೆ? ಒಂದು ದಿನವಾದರೂ ಮಕ್ಕಳನ್ನು ಹತ್ತಿರ ಕೂರಿಸಿಕೊಂಡದ್ದಿದೆಯೇ? ಮಕ್ಕಳ ಮುಖ ಸರಿಯಾಗಿ ನೋಡಿದ್ದಿದೆಯೆ?''

ಸುಭದ್ರಮ್ಮನಿಗೆ ಇಂತಹ ಹಲವಾರು ಘಟನೆಗಳು ನೆನಪಾಗಿ ನಗು ಬರುವುದಿದೆ. ಈಗಲೂ ಅವರು ಬದಲಾದದ್ದಿಲ್ಲ.

''ಈಗ ಬೇಗನೆ ತಿಂಡಿಯ ಕೆಲಸ ಆಗಲಿ ಮಾರಾಯ್ರೇ... ಮತ್ತೆ ನನಗೆ ಅಡುಗೆಯ ಕೆಲಸ ಶುರುಮಾಡುವುದಿದೆ.''

ಹಳೇ ಪೆಟ್ಟಿಗೆಯನ್ನು 'ಕೊಂಯ್' ಎಂದು ಮುಚ್ಚಿ ನೇತ್ರಮ್ಮ ಎದ್ದರು. ರಥಬೀದಿಯ ಶೇಟರ ಮನೆಗೆ ಮಧ್ಯಾಹ್ನಕ್ಕೆ ಜಿಲೇಬಿ, ಚಕ್ಕುಲಿಗೆಂದು ಆರ್ಡರ್ ಕೊಟ್ಟಿದ್ದು ನೆನಪಿಸಲೆಂದು ಹೋದ ವಜ್ಜು ಅಲಿಯಾಸ್ ವನಜ, ಸಜ್ಜು ಅಲಿಯಾಸ್ ಸುಜಾತ

ಬಂದರು. ಜೊತೆಗೆ ಅವರ ಚಳ್ಳಂಪಿಳ್ಳೆ ಹೆಗಲಲ್ಲೊಂದು... ಬಗಲಲ್ಲೊಂದು... ಎಂಬಂತೆ. ಇಬ್ಬರೂ ಬೆಂಗಳೂರಿನಿಂದ ನಿನ್ನೆಯಷ್ಟೇ ಬಂದಿದ್ದರು.

ಹಲಸಿನೆಲೆಯ ಕಡುಬು ಚಟ್ನಿ.

''ಅಮ್ಮಾ, ಧನಂಜಯನ ಮಗ ಹೇಗಿದ್ದಾನೋ ಏನೋ...''

''ಅವನ ಹಾಗೇ ಬಿಳಿಯೇ... ಅತ್ತಿಗೆಯ ಹಾಗೆ ಕಪ್ಪೇ?''

''ಹೇಗೇ ಇರಲಿ ಬಿಡ್ರೇ... ನನ್ಗೆ ಬಂಗಾರದ ದೀಪದಲ್ಲಿ ನೋಡುವ ಯೋಗ ತಂದನಲ್ಲ...'' ಮೊಮ್ಮಕ್ಕಳ ಮಾತಿಗೆ ನೇತ್ರಮ್ಮನ ಸಮಾಧಾನ.

''ಅಮ್ಮಾ, ನಾನ್ಯಾವ ಡ್ರೆಸ್ ಹಾಕಿಕೊಳ್ಳಲಿ?'' ಸಂಜುವಿನ ಪ್ರಶ್ನೆಗೆ, ''ನಿನಗೆ ಹುಡ್ಗಿಯನ್ನು ನೋಡಲು ಹೋಗುವುದಲ್ಲವಲ್ಲ ಈಗ, ಯಾವುದಾದರೊಂದು ಹಾಕ್ಕೋ ಮಾರಾಯ'' ಅಂತ ವನಜ ಛೇಡಿಸಿದಳು.

★★★

''ಬೇಗ ಊಟ ಮಾಡ್ರೋ, ಆಗಲೇ ವೆಂಕಟೇಶನ ಫೋನ್ ಬಂದಿತ್ತು. ಸರಿಯಾಗಿ ನಾಲ್ಕು ಗಂಟೆಗೆ ಬರಲು ಹೇಳಿದ್ದಾನೆ'' ಶ್ರೀಧರರಾಯರ ಎಂದಿನ ಗಡಿಬಿಡಿ.

''ಮತ್ತೆ ಅಪ್ಪಾ, ಅದೇನೋ ಹುಡುಕ್ತಿದ್ರಲ್ಲ, ಸಿಕ್ತಾ?'' ''ಹ್ಞೂಂ, ನನ್ನ ತಯಾರಿ ಆಯ್ತು, ನಿಮ್ಮಮ್ಮನಿಗೆ ಸೀರೆ ಉಡ್ಲಿಕ್ಕೆ ಒಂದು ಗಂಟೆ ಬೇಕು...''

ಎಲ್ಲರೂ ತಯಾರಾಗಿ ನಿಂತಿದ್ದರು. ಸುಭದ್ರಮ್ಮ ತಾವುಟ್ಟ ಹೊಸ ರೇಷ್ಮೆ ಸೀರೆಯ ಚುಂಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡರು. ನೇತ್ರಮ್ಮ ಸೊಂಟದಲ್ಲಿಟ್ಟುಕೊಂಡ ಸಂಚಿಯನ್ನು ಎರಡೆರಡು ಬಾರಿ ಮುಟ್ಟಿ ನೋಡಿಕೊಂಡರು. ಕೊರಳಲ್ಲಿದ್ದ ಚಕ್ರಸರವನ್ನು ಸರಿಮಾಡಿಕೊಂಡರು. ಕನ್ನಡಕವನ್ನೊಮ್ಮೆ ಉಜ್ಜಿ ಹಾಕಿ ನೋಡಿಕೊಂಡರು. ಬಾಗಿದ ಬೆನ್ನನ್ನೇ ಸ್ವಲ್ಪ ಸರಿಮಾಡಿಕೊಳ್ಳಲು ಪ್ರಯತ್ನಪಟ್ಟರು.

ವಜ್ಜು, ಸಜ್ಜು ಸಿಹಿತಿಂಡಿಯ ಚೀಲವನ್ನು ಹೆಗಲಿಗೇರಿಸಿಕೊಂಡರು. ಮಕ್ಕಳು ಸಂಜಯನ ಕೈಹಿಡಿದವು. ಶ್ರೀಧರರಾಯರು ಕಿಸೆಯಲ್ಲಿದ್ದ ಚೀಟಿಯನ್ನು ಬಿಡಿಸಿ ಓದಿ ಸಮಾಧಾನ ಪಟ್ಟರು.

ಎಲ್ಲರೂ ಟ್ಯಾಕ್ಸಿ ಮಂಜನ ಕ್ವಾಲಿಸ್ ಕಾರನ್ನು ಹತ್ತಿದರು. ಈ ಹಳ್ಳಿಯಲ್ಲಿ ಶ್ರೀಧರರಾಯರು ಎಲ್ಲೇ ಹೊರಡಲಿ ಟ್ಯಾಕ್ಸಿ ಮಂಜ ಕಾರು ತಂದು ನಿಲ್ಲಿಸುತ್ತಿದ್ದ. ಅವರು ಬ್ಯಾಂಕಿನಿಂದ ಲೋನು ಕೊಡಿಸಿ ಅವನಿಗೊಂದು ದಾರಿ ತೋರಿಸಿದ್ದರು. ''ನಿಮ್ಮುಪಕಾರಾನ ಮರಿಯಂಗಿಲ್ಲ, ನೀವೆಲ್ಲೇ ಹೋಗುವುದಿದ್ದರೆ ಹೇಳಿ. ಬಾಡಿಗೆ ಬೇಡ. ಪೆಟ್ರೋಲ್ ಹಾಕಿಸಿಕೊಡಿ'' ಎನ್ನುತ್ತಿದ್ದ.

ಈಗ ಇಲ್ಲೇ ಎರಡು ಮೈಲು ಆಚೆ ಇರುವ ಧನಂಜಯನ ಗೆಳೆಯ ವೆಂಕಟೇಶನ ಮನೆಗೆ ವಯಸ್ಸಾದವರು, ಮಕ್ಕಳು... ಇರಲಿ ಎಂದು ಮಂಜನನ್ನೇ ಕರೆದಿದ್ದರು ರಾಯರು.

''ತೆಗೋ, ವೆಂಕಟೇಶ ಮಾಮನಿಗೆ ಈ ಚೀಟಿ ಕೊಡು'' ಅಂತ ಸಂಜಯನನ್ನು ಮೊದಲು ಓಡಿಸಿದರು.

''ಬನ್ನಿ, ಬನ್ನಿ, ಈಗ ಕರೆಂಟೂ ಇದೆ. ಧನಂಜಯ ನನ್ನ ಹತ್ರ ಈಗಷ್ಟೇ ಚಾಟ್ ಮಾಡಿದ...'' ವೆಂಕಟೇಶನ ಸ್ವಾಗತ. ಹಿಂದೆಯೇ ಅವನಮ್ಮ ಬರಮಾಡಿಕೊಂಡರು.

★★★

ದೊಡ್ಡದಾದ ಹಾಲಿನಲ್ಲಿ ವೆಂಕಟೇಶನ ಕಂಪ್ಯೂಟರ್ ರಾರಾಜಿಸುತ್ತಿತ್ತು. ಇನ್ನು ತಡ ಮಾಡುವುದು ಬೇಡ ಎಂದು ಆನ್ ಮಾಡಿ ಇಂಟರ್ನೆಟ್ ಸಂಪರ್ಕ ಕೊಟ್ಟು ವೆಂಕಟೇಶ ಕೈಲಿದ್ದ ಚೀಟಿಯನ್ನು ನೋಡಿ ''ಶ್ರೀಧರ ಮಾಮ, ನಿಮ್ಮ ಐಡಿ ಹಾಕಿದ್ದೇನೆ. ಮುಂದೆ ಬಂದು ಕೂತ್ಕೊಳ್ಳಿ: ನೀವೇ ಪಾಸ್‌ವರ್ಡ್ ಹಾಕಿ. ನಾನು ಹೇಳಿಕೊಡುತ್ತೇನೆ'' ಎಂದ.

ಕ್ಯಾಲ್ಕುಲೇಟರನ್ನೂ ಮುಟ್ಟದೆ ಕೈಬಾಯಲ್ಲೇ ಕರಾರುವಕ್ಕಾಗಿ ಬಡ್ಡಿ ಲೆಕ್ಕ ಮಾಡುತ್ತ ಬ್ಯಾಂಕಿನ ಸರ್ವೀಸನ್ನು ಮುಗಿಸಿದ್ದ ರಾಯರು ಈಗ ಕಂಪ್ಯೂಟರಿನ ಎದುರು ಕೂತು ವೆಂಕಟೇಶ ಹೇಳಿದಂತೆ ಮಾಡತೊಡಗಿದರು. ಮೌಸ್ ಹಿಡಿದ ಕೂಡಲೇ ಕೈ ಎಲ್ಲೆಲ್ಲೋ ಓಡುತ್ತಿತ್ತು.

''ಓಹ್! ಈಗ ನಿಮ್ಮ ಮಗನ ಜೊತೆಗೆ ಚಾಟ್ ಮಾಡುವ'' ಅಂತ ವೆಂಕಟೇಶ ಯಾವುದೋ ಸ್ಕ್ರೀನ್ ಓಪನ್ ಮಾಡಿದ.

''ನಿಮ್ಮ ಮಗ ಲೈನಿನಲ್ಲಿ ಕಾಯುತ್ತಿದ್ದಾನೆ'' ವೆಂಕಟೇಶ ಏನೇನೋ ಟೈಪು ಮಾಡಿದ. ಅಂತೂ ಇಲ್ಲಿ ಎಲ್ಲರೂ ಕಾಯುತ್ತಿದ್ದಾರೆ ಅಂತ ಗೊತ್ತಾದ ಕೂಡಲೇ ಕ್ಯಾಲಿಫೋರ್ನಿಯಾದಲ್ಲಿದ್ದ ಧನಂಜಯ ''ವೆಬ್ ಕ್ಯಾಮಿನಲ್ಲಿ ಮಗನನ್ನು ತೋರಿಸುತ್ತೇನೆ'' ಎಂದು ತನ್ನ ಮನೆಯ ಒಳಾಂಗಣವನ್ನು ತೋರಿಸಿ ನಂತರ ತೊಟ್ಟಿಲ ಬಳಿ ತಂದ.

''ಅಲ್ನೋಡೇ, ಇಲ್ನೋಡ್ರೇ...'' ಗಲಾಟೆಯೋ ಗಲಾಟೆ. ನೇತ್ರಮ್ಮ ಕೂಡಲೇ ಸಂಚಿಯಿಂದ ಬಂಗಾರದ ದೀಪ ಹೊರತೆಗೆದು ಬತ್ತಿ ಹಚ್ಚಿದರು. ಆ ದೀಪದಲ್ಲಿ ಮರಿಮಗನನ್ನು ಕಂಡು ಧನ್ಯರಾದರು. ಕಂಪ್ಯೂಟರ್ ಮಾಯ ಪೆಟ್ಟಿಗೆಯಲ್ಲಿ ಮರಿಮಗ ಪವಡಿಸಿದ್ದು ನೋಡುವ ಭಾಗ್ಯ ತನ್ನ ಗಂಡನಿಗಿಲ್ಲವಾಯಿತಲ್ಲ ಅಂತ ಹಲವು ವರ್ಷಗಳ ಹಿಂದೆ ಗತಿಸಿದ ತನ್ನ ಪತಿಯನ್ನು ನೆನಪಿಸಿಕೊಂಡರು. ಮಕ್ಕಳು ಮಾನಿಟರಿನ ಮೇಲೆ ಬರುತ್ತಿದ್ದ ಅಮೆರಿಕನ್ ಮನೆಯ ಅಂದ ಚಂದ ನೋಡುತ್ತಾ ಧನಂಜಯನ ಮಗ ಆದಿತ್ಯನ ಸೌಂದರ್ಯವನ್ನು ವರ್ಣಿಸುತ್ತಿದ್ದರು. ''ನೋಡೋ, ಬಿಳೀನೇ ಇದೆಯಲ್ಲ, ಪುಣ್ಯ!'' ''ಅಷ್ಟೂ ಗೊತ್ತಾಗಲ್ವಾ? ಅಮೇರಿಕದಲ್ಲಿ ಎಲ್ಲರೂ ಬಿಳಿಯೇ'' ಸಂಜಯನ ಉವಾಚ.

ಸುಭದ್ರಮ್ಮ ಕನ್ನಡಕವನ್ನು ಏರಿಸಿಕೊಂಡು ಮಗನ ಮಗನನ್ನು ತೊಟ್ಟಿಲಿಗೆ ಹಾಕುವ ಕಾರ್ಯಕ್ರಮವನ್ನು ಸವಿಯುತ್ತಿದ್ದರು. ಎಲ್ಲಾ ರೆಕಾರ್ಡರ್ ಫೋಟೊಗಳನ್ನೂ ಧನಂಜಯ ತೋರಿಸುತ್ತಿದ್ದ. ಸೊಸೆಯ ಬಯಕೆ ಮದುವೆ, ಸೀಮಂತ ಯಾವುದೂ ಮಾಡಲು ಆಗದ

ಸುಭದ್ರಮ್ಮ ಎಲ್ಲಾ ಈಗ ಕಂಪ್ಯೂಟರಿನಲ್ಲೇ ನೋಡಿ ಆನಂದಿಸಿದರು. ಮಗ ಕಳುಹಿಸಿದ ಡಾಲರ್ ದುಡ್ಡಿನಲ್ಲಿ ಕೊಂಡ ಸೀರೆಯನ್ನು ಉಟ್ಟಿದ್ದರು. ಅದನ್ನೇ ಮೈಕಿನಲ್ಲಿ ಹೇಳಿದರು. 'ಇಲ್ಲಿ ಆಸ್ಪತ್ರೆಯಿಂದ ಹೊರಬರುವಾಗಲೇ ಹೆಸರು ಕೊಡಬೇಕು; ನಾಮಕರಣ ಮತ್ತೆ ಮನೆಯಲ್ಲಿ ಶಾಸ್ತ್ರಕ್ಕೆ'. ಧನಂಜಯನ ಮಾತು ಆ ಕಡೆಯಿಂದ ಇಲ್ಲಿ ಕೇಳಲು ಕೆಲವು ಸೆಕೆಂಡು ತಡ. ಇಲ್ಲಿಂದಲೂ ಹಾಗೇ. ಅಂತೂ ಒಂದಕ್ಕೊಂದು ತಾಳ ತಂತಿ ಸಿಗದೆ ಅರ್ಧ ಗಂಟೆ ಸಂಭಾಷಣೆ ಕಳೆಯಿತು. ಎಲ್ಲರೂ ಕುಟುಂಬದ ಮೊಮ್ಮಗನನ್ನು ನೋಡಿ ಧನ್ಯರಾದರು. ಆದಿತ್ಯ ನಿದ್ದೆಗೆ ಜಾರಿದ. ಇನ್ನೊಮ್ಮೆ ನೆಟ್‌ನಲ್ಲಿ ಸಿಗುತ್ತೇವೆ ಎಂದು ಮಗ ಸೊಸೆ 'ಗುಡ್ ಬೈ' ಅಂದರು. ನೆಟ್ಟು ಜಾರಿತು. ಎಲ್ಲ ಧನ್ಯತಾ ಭಾವದಿಂದ ಎದ್ದರು.

ವೆಂಕಟೇಶನ ಅಮ್ಮ ನಳಿನಿ, 'ಏನೇ ಆಗಲಿ, ಸುಭದ್ರಮ್ಮ, ನೀವು ಹೈಟೆಕ್ ಮೊಮ್ಮಗನನ್ನು ಇಲ್ಲಿಂದಲೇ ನೋಡಿದಿರಲ್ಲ. ಕಾಲ ಬದಲಾಯಿತು ನಿಜ' ಎನ್ನುವಷ್ಟರಲ್ಲೇ, ನೇತ್ರಮ್ಮ ಅರೆತೆರೆದ ಕಿವಿಯಲ್ಲಿ ಕೇಳಿಸಿಕೊಂಡು, 'ಧನುಗೆ ಅಮೇರಿಕದಲ್ಲಿ ಕೆಲಸ ಸಿಕ್ಕಾಗ ಎಲ್ಲೂ್ರ ಖುಶಿ ಪಟ್ರಿ. ಈಗ ಬಸಿರು ಬಾಣಂತನ ನಮ್ಮ ಮನೇ ಅಂಗಳದಲ್ಲಿ ಆಗ್ಬೇಕು ಅಂದ್ರೆ ಆಗ್ತದಾ? ಕಾಲಾಯ ತಸ್ಮೈನಮಃ. ಎಲ್ಲದಕ್ಕೂ ಹೊಂದ್ಕೊಳ್ಳಿ...'' ಅಂದು ತಮ್ಮ ಹೈಟೆಕ್ ಮಾತುಗಳನ್ನು ಆಡಿದರು. ''ಅಮ್ಮಾ, ಮತ್ತೆ ಈ ಬಂಗಾರದ ದೀಪದಲ್ಲಿ ಮರಿಮಗನನ್ನು ನೋಡಿ ಭಟ್ಟರಿಗೆ ದಾನ ಮಾಡ್ಬೇಕಲ್ವೇ?'' ರಾಯರು ಛೇಡಿಸಿದ ಮಾತಿಗೆ ನೇತ್ರಮ್ಮ, ''ಬಿಡೋ, ಮೊದಲು ಅದೆಲ್ಲ ಭಟ್ರು ತೆಗೊಳ್ಳೋಕೆ ಮಾಡಿದ ಪ್ಲಾನು. ಇದು ಈಗ ಇರಲಿ. ನಾನೇನು ನಿಜವಾಗಿ ಇದರಲ್ಲಿ ಮೊಮ್ಮಗನನ್ನು ನೋಡಿದೆನೆ? ಧನು ಬಂದಾಗ ಅವನ ಮಗನಿಗೇ ಏನಾದರೂ ಮಾಡಿಸಿ ಹಾಕುತ್ತೇನೆ'' ಎಂದು ಸಂಚಿಯೊಳಗೆ ಭದ್ರವಾಗಿರಿಸಿಕೊಂಡರು.

''ಎಷ್ಟಾದರೂ ಶಾಸ್ತ್ರ ಬಿಡಲಿಕ್ಕೆ ಆಗ್ತದೆಯೇ ನಳಿನಮ್ಮ, ತೆಗೊಳ್ಳಿ ಇಲ್ಲೇ ಬಾಯಿ ಸಿಹಿ ಮಾಡಿಕೊಳ್ಳೋಣ'' ಸುಭದ್ರಮ್ಮ ಅಂದಕೂಡಲೇ ತಂದ ಸಿಹಿಯನ್ನು ವಜ್ಜು ಸಜ್ಜು ಬಿಚ್ಚಿ ಹಂಚಿದರು.

ಭಾರತದ ಮೂರೂರೆಂಬ ಹಳ್ಳಿಯಲ್ಲಿ ಸೂರ್ಯ ಪಶ್ಚಿಮದತ್ತ ಸಾಗುತ್ತಿದ್ದರೆ, ಕ್ಯಾಲಿಫೋರ್ನಿಯಾದಲ್ಲಿ ಬೆಳಗಿನ ಬ್ರೇಕ್ ಫಾಸ್ಟ್‌ಗೆ ಎಲ್ಲರೂ ತಯಾರಾಗುತ್ತಿದ್ದರು.

✧✧✧

ಉತ್ತರದ ಸೆರಗಿನಲ್ಲಿ

✧ ಓಂ ಪ್ರಕಾಶ್

ಎಷ್ಟೋ ದಿನದಿಂದ ಮಾಡಿದ್ದ ಯೋಚನೆ ಕೊನೆಗೂ Action plan ಆಯಿತು. ಯಮುನೇತ್ರಿ, ಗಂಗೋತ್ರಿ, ಬದ್ರೀನಾಥ್, ಕೇದಾರ್ ಯಾತ್ರೆ ಮಾಡುವ ಅವಕಾಶ ಸಿಕ್ತು ಸರಿ, ಗಡ್‌ವಾಲ್‌ನಿಗಂನ ಸಿಬ್ಬಂದಿ ಜೊತೆ ಎಲ್ಲ ಏರ್ಪಾಡೂ ಮಾಡಿದ್ದು ನಂ ಟೀಂ ಲೀಡರ್ - ಗುರೂಜಿ! ನಿಜ ನಾಮಧೇಯ ಕಲ್ಯಾಣರಾಮನ್. ಇತರರು, ಶ್ರೀರಾಂ, ರಘುರಾಂ ಮತ್ತು ರಾಜ. ರಾಜನೇ ನಮ್ಮ ಗುಂಪಿನಲ್ಲಿ ಅತಿ ಚಿಕ್ಕವನು. ಹಾಗಾಗಿ ಅವನಿಗೆ ಚೋಟು ಅಂತ ನಾಮಕರಣ ಆಯ್ತು!

ದೆಹಲಿಗೆ, ನಂತರ ಹರಿದ್ವಾರ, ರಿಶಿಕೇಶ್‌ಗೆ ಒಂದೇ ದಿನದಲ್ಲಿ ಪ್ರಯಾಣ. ಹರಿದ್ವಾರದಲ್ಲಿ ನಮ್ಮನ್ನ ಸ್ವಾಗತಿಸಿದ್ದು ನಗುಮುಖದ ಯುವಕ - ಚಂದರ್‌ಸಿಂಗ್! ಸುಮಾರು 35 ವಯಸ್ಸು, ಸದಾ ಹಸನ್ಮುಖಿ. ಮುಂದಿನ 15 ದಿನ ಅವನೇ ನಮ್ಮ ಗೆಳೆಯ ಹಾಗೂ ಮಾರ್ಗದರ್ಶಿ. ಹಿಂದಿ ಮೀಡಿಯಂನಲ್ಲಿ ಬಿ.ಕಾಂ. ಮಾಡಿ, ಕೆಲಸ ಸಿಗದೆ, ಗಡ್‌ವಾಲ್‌ನಿಗಂನ ಡ್ರೈವರ್ ಆಗಿ ಕೆಲಸ ಮಾಡ್ತಿದ್ದ ಅವನು. ದಿನಾ ಮೂರು, ನಾಲ್ಕು ಗಂಟೆ ಆ ಬೆಟ್ಟದ ದಾರಿಗಳಲ್ಲಿ ಡ್ರೈವ್ ಮಾಡೋದು ಬಹಳ ಕಷ್ಟ. ಆದರೆ ಈ ನಿಪುಣ ಬಹು ಜಾಗರೂಕ. ನಮ್ಮಂತಹ ಅಂಜುಬುರುಕರೂ ಆರಾಮವಾಗಿ ಮಾತಾಡ್ತಾ ಇದ್ವಿ. ಮೂರು ನಾಲ್ಕೇ ದಿನದಲ್ಲಿ ಅವನ ಮಾತುಕತೆ, ಹಾಸ್ಯಪ್ರಜ್ಞೆ, ನಡವಳಿಕೆ ಎಲ್ಲ ನಮ್ಮೆಲ್ಲರನ್ನೂ ಆಶ್ಚರ್ಯವಾಗುವಂತೆ ಮಾಡಿದವು!

ಬಿಲ್‌ಕ್ಲಿಂಟನ್ ದೆಹಲಿಯಿಂದ ಆಗ್ರಾಕ್ಕೆ ಹೋದ Convoy ನಲ್ಲಿ ಚಂದರ್‌ಸಿಂಗ್ leading car ಅಂತೆ! ದೆಹಲಿ, ರಾಜಾಸ್ಥಾನ ಹಾಗೂ ಚಾರ್‌ಧಾಮ್ ಯಾತ್ರೆಗಳಿಗೆಲ್ಲ ಹೋಗಿ, ಟೂರಿಸ್ಟ್‌ಗಳಿಗೆಲ್ಲ ಸಹಾಯಮಾಡ್ತಿದ್ದ - ಸುಮಾರು 12 ವರ್ಷಗಳ ಅನುಭವ ಇತ್ತು ಅವನಿಗೆ. ಬೆಟ್ಟದ ರಸ್ತೆಗಳು ತಿರುವುಗಳನ್ನು ನೋಡಿ ತಲೆ ತಿರುಗುತ್ತಿದ್ದ ನನ್ನ ಸಂಗಡಿಗರಿಗೆ ಸ್ವಲ್ಪ ಹೊತ್ತು ಸಮಾಧಾನ ಆಯಿತು. ದೆಹಲಿಯಲ್ಲಿ ಐದು ವರ್ಷ ಇದ್ದ ಪ್ರಭಾವದಿಂದಲೋ ಏನೋ ನನ್ನ ಹಿಂದಿ ಇತರರಿಗಿಂತ ಸ್ವಲ್ಪ ಚೆನ್ನಾಗಿತ್ತು; ಚಂದರ್‌ಸಿಂಗ್‌ಗೆ ನನ್ನ ಕಂಡರೆ ಅಕ್ಕರೆ. ತನ್ನ ಜೀವನದ ಬಗ್ಗೆ ಅವನಿಗಿದ್ದ ಅಭಿಮಾನ, ತನ್ನ

ಕೆಲಸದ ಬಗ್ಗೆ ಉತ್ಸಾಹ, ತನ್ನ ಅನುಭವಗಳಿಂದ ಕಲಿತ ಪಾಠಗಳು ಇವೆಲ್ಲ ನಮ್ಮನ್ನು ಚಕಿತರಾಗಿ ಮಾಡಿದವು.

ವಿದೇಶಗಳಿಂದ ಬಂದ ಪ್ರವಾಸಿಗಳೇ ಗಡ್‌ವಾಲ್ ಪ್ರದೇಶದ ಮೂಲಧನ. ಅವರಿಗೆ ಇಲ್ಲಿನ Antiques ತೋರಿಸಿ, ಮರುಳುಮಾಡಿ, ಅಪಾರವಾದ ಬೆಲೆಗೆ ಮಾರುವ ಚಮತ್ಕಾರದ ಉದಾಹರಣೆಗಳನ್ನು ನಮ್ಮ ಮುಂದಿಟ್ಟ. ಅಮೆರಿಕದಿಂದ ಒಬ್ಬ ಭಾರೀ ಧನವಂತ, ಅವನ ಹೆಂಡತಿ ಬಂದರು. ರಿಶಿಕೇಶ್‌ನಲ್ಲಿ ಅವರು ಹಲವು ಅಂಗಡಿಗಳಿಗೆ ಭೇಟಿಕೊಟ್ಟರು. ಚಂದರ್ ಜೊತೆ ಒಬ್ಬ Antiques ಮಧ್ಯವರ್ತಿ, ಅರ್ಥಾತ್ Middleman. ದಂಪತಿಗಳು ಒಂದು ಹಳೇ ಅಂಗಡಿಗೆ ಹೋದರು. ಅಲ್ಲಿ ಹಲವಾರು ಕಾರ್ಪೆಟ್‌ಗಳು, ಸರಮಾಲೆಗಳು, ಸ್ಫಟಿಕದ ದೇವ-ದೇವತೆಗಳು - ಇತ್ಯಾದಿ ಹೇರಳವಾಗಿದ್ದವು. ಒಂದು ಮೂಲೆಯಲ್ಲಿ ಬಹು ಸುಂದರವಾದ ತೊಟ್ಟಿಲು; ಪುಟ್ಟ ಗಂಟೆ, ಮೆತ್ತನೆ ಹಾಸಿಗೆ, ಇತ್ಯಾದಿ ಅಲಂಕೃತ ತೊಟ್ಟಿಲನ್ನು ನೋಡಿ ದಂಪತಿಗಳು ಬಹಳ ಖುಷಿಯಾದರು. ಈ ತೊಟ್ಟಿಲನ್ನು ನಾವೇ ತಗೋತೀವಿ, ಬೆಲೆ ಎಷ್ಟು ಅಂದರು. ಅಂಗಡಿ ಮಾಲೀಕನಿಗೆ ಇಂಗ್ಲಿಷ್ ಬರದೆ ಇದ್ದದ್ದರಿಂದ ಮಧ್ಯವರ್ತಿಯೇ ಮುಖ್ಯ ವ್ಯಕ್ತಿ! ಅಂಗಡಿಯವನು ತೊಟ್ಟಿಲು ಮಾರಾಟಕ್ಕಿಲ್ಲ ಅಂತ ಖಡಾಖಂಡಿತವಾಗಿ ಹೇಳಿದ. ದಂಪತಿಗಳು ಬಿಡಲಿಲ್ಲ. ಮೂರು ದಿನ ಅವನ್ನ ಸತಾಯಿಸಿದರು. ಅಂಗಡಿಯವನು ಕೊನೆಗೆ, 'ನೋಡಿ, ಇದು ನಂ ವಂಶಕ್ಕೆ ಬಹು ಹಿಂದಿನಿಂದ ಬಂದಿರುವ Heircoom! ನಾನಿದನ್ನ ಮಾರಿದರೆ ನಂ ತಾಯಿ ನನ್ನ ಕ್ಷಮಿಸುಲ್ಲ' ಅಂದ. ಕೊನೆಗೆ ದಂಪತಿಗಳೇ ಗೆದ್ದರು. ಅಂಗಡಿಯವನು 'ಈ secret ಯಾರಿಗೂ ಹೇಳಬೇಡಿ! ಇದು ಬಾಲಕೃಷ್ಣ ಮಲಗಿದ್ದ ತೊಟ್ಟಿಲು!' ಅಂದ. ಬೆಲೆ ಒಂದೂವರೆ ಲಕ್ಷಕ್ಕೆ ಏರಿತು. ದಂಪತಿಗಳು ತೊಟ್ಟಿಲು ಸಮೇತ ಅಮೆರಿಕಕ್ಕೆ ಹೋದರು. ನಾನು ಇದೆಲ್ಲ ಕೇಳಿ, ನಿನಗೆಷ್ಟು ಸಿಕ್ಕಿತು ಅಂದೆ. ಚಂದರ್ ತೊಂಬತ್ತು ಸಾವಿರ ಎಂದ. ಒಳ್ಳೆಯದಾಯಿತು ಬಿಡು ನಿನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಆಗುತ್ತೆ ಅಂದೆ. ಚಂದರ್ ನಸುನಕ್ಕ. 'ಮೂರು ದಿನಗಳಲ್ಲಿ Hilton hotel ನಲ್ಲಿ ಪೂರಾ ಖರ್ಚಾಯಿತು!' ಎಂದ. ನಮಗೆಲ್ಲ ಅಚ್ಚರಿ! ಏಕೆ ಅಂತ ಹುಬ್ಬೇರಿಸಿದೆವು. 'ನಮ್ಮಮ್ಮ ಹೇಳಿದ್ದರು, ಅನ್ಯಾಯದ ಹಣದಿಂದ ಒಳ್ಳೆ ಕೆಲಸ ಮಾಡಲು ಹೋಗಬೇಡ!' ಅಂತ!

ನಮ್ಮ ಕ್ವಾಲಿಸ್ ರಸ್ತೆಯಲ್ಲಿ ಎಲ್ಲಲ್ಲೂ ನಿಂತರೂ ಹಲವಾರು ಜನ ಮುತ್ತಿಗೆ ಹಾಕೋರು. ಸರಗಳು, Post card ಗಳು, ರುದ್ರಾಕ್ಷಿಗಳು ಇತ್ಯಾದಿ ಮಾರುಕ್ಕೆ, ಎಲ್ಲಿ ಮೋಸ ಹೋಗ್ತೀವೋ ಅಂತ ಭಯ. ಒಂದು ಸಲ ಚಂದರ್‌ನ ಕೇಳಿದೆ, 'ಅಲ್ಲಯ್ಯ ನೀನು ಇಲ್ಲೇ ಇರೋನು! ಅವರೆಲ್ಲ ಜಾಸ್ತಿ ಬೆಲೆ ಹೇಳಿದರೆ ಸುಮ್ಮನೆ ಕೂತಿರ್ತೀಯಲ್ಲ?' ಅವನು ಗಂಭೀರವಾಗಿ ಹೇಳಿದ. 'ನೀವು ನಾಳೆ ಹೊರಟು ಹೋಗ್ತೀರ; ನಾನಿಲ್ಲೇ ಇರಬೇಕು. ಈ ಬಡ ಜನಕ್ಕೆ ನಾನು ಎರಡು ಬಗೆದರೆ ಅದು ತಪ್ಪಲ್ಲವೆ?' ಚಂದರ್‌ನ ಧರ್ಮಸೂಕ್ಷ್ಮಕ್ಕೆ ನಾವೆಲ್ಲ ತಲೆದೂಗಬೇಕಾಯ್ತು!

ಚಾರ್‌ಧಾಮ್‌ನ ಸೌಂದರ್ಯ, ಜನರ ಕಷ್ಟ ಸಹಿಷ್ಣುತೆ, ನೂರಾರು ಜನ ಭಗವಂತನ ಸನ್ನಿಧಿಗೆ ಬರುವುದರ ಮಹತ್ವ - ಇನ್ನೂ ಹಲವಾರು ವಿಷಯಗಳ ಬಗ್ಗೆ ನಂ ಗುರೂಜಿ

ಹತ್ರ ಚರ್ಚೆ ನಡೀತಿತ್ತು. ಕೇದಾರದಿಂದ ವಾಪಸ್ ಬರುವಾಗ ನಾನೊಂದು ಸವಾಲು ಎಸೆದೆ. ನೂರು ಜನ ದೇವಸ್ಥಾನಕ್ಕೆ ಬಂದರೆ ಅದರಲ್ಲಿ ಎಷ್ಟು ಜನ ನಿಜವಾದ surrendering ಮನೋಭಾವದಿಂದ ಬರ್ತಾರೆ, ಎಷ್ಟು ಜನ ತಮ್ಮ ವೈಯಕ್ತಿಕ ಸಮಸ್ಯೆಗಳ ಪರಿಹಾರ ಮಾಡು ಅಂತ ಭಗವಂತನಿಗೆ ಜ್ಞಾಪಿಸಲು ಬರ್ತಾರೆ ಅಂತ. ನಾವು ಇಂಗ್ಲಿಷ್‌ನಲ್ಲಿ ಮಾತಾಡ್ತಾ ಇದ್ರೂ, ಚಂದರ್‌ಸಿಂಗ್‌ಗೆ ಅರ್ಥ ಆಗ್ತಾ ಇತ್ತು ಅಂತ ಕಾಣುತ್ತೆ. ಆದರೂ ನಾನವನ್ನ ಇದೇ ಪ್ರಶ್ನೆ ಕೇಳಿದೆ. ಅವನು ಒಂದು ಕ್ಷಣವೂ ಯೋಚನೆ ಮಾಡದೆ, ಶತಾಂಶ ನೂರು ಜನ ತಮ್ಮ ಉದ್ಧಾರಕ್ಕೆ ಬರ್ತಾರೆ ಅಂದ. ನಾನು ಅವನ್ನ ಕೆಣಕಲು, 'ಹಾಗಾರೆ ಇವರ್ನೆಲ್ಲ ದೇವರ ಹತ್ರ ಕರಕೊಂಡು ಹೊಗ್ತೀಯಲ್ಲ, ಯಾಕೆ?' ಅಂದೆ. ಅವ ನಗುತ್ತ ಹೇಳಿದ - 'ನನ್ನ ಉದ್ಧಾರ ಆಗಬೇಕಲ್ಲ!'

ಕೇದಾರದಿಂದ ಬರುತ್ತ ಇದ್ದಾಗ ಇದ್ದಕ್ಕಿದ್ದಂತೆ ಒಂದು ಕಿತ್ತಳೆ ಹಣ್ಣಿನ ಗಾತ್ರದ ಕಲ್ಲು ನಂ ಕಾರಿನ wind shieldಗೆ ಹೊಡೀತು! ಗಾಜು ಚುಪ್ಪಾ ಚೂರಾಯಿತು. ನಾವೆಲ್ಲ ಬೆದರಿದೆವು. ಚಂದರ್ ಒಂದು ಚೂರೂ ವಿಚಲಿತನಾಗಲಿಲ್ಲ. ನಿಧಾನವಾಗಿ ಗಾಜಿನ ಚೂರುಗಳನ್ನೆಲ್ಲ ಹೆಕ್ಕಿ ತೆಗೆದ. ತಲೆಗೆ ಅರಬ್ ದೇಶದವರ ತರಹ ಬಟ್ಟೆ ಸುತ್ತಿಕೊಂಡು ಡ್ರೈವ್ ಮಾಡಲು ಶುರು ಮಾಡಿದ. ಇದೆಲ್ಲ ಇಲ್ಲಿ ಸಾಮಾನ್ಯ ಅಂದ. ಮುಂದಿನಿಂದ ಹಾದು ಹೋಗುತ್ತಿದ್ದ ಕಾರುಗಳ ಜನರು ನಮ್ಮ ವಿಂಡ್‌ಶೀಲ್ಡ್ - ರಹಿತ ಕಾರನ್ನು ಚಕಿತರಾಗಿ ನೋಡ್ತಾ ಇದ್ದರು. ಆಗ ಚಂದರ್ ಉವಾಚ: 'ಆ ಗಾಡಿಗಳ ಡ್ರೈವರ್‌ಗಳು ಏನು ಯೋಚಿಸ್ತಿದಾರೆ ಗೊತ್ತೆ?' ನಾವೆಲ್ಲ 'ಇಲ್ಲ' ಅಂದೆವು. 'ಈ ಕಾರಿನ ಡ್ರೈವರ್ wind shield ಇಷ್ಟು ಕ್ಲೀನಾಗಿ ಹೇಗೆ ಇಟ್ಟಿದಾನೆ? ಅಂತ' - ಅಂದು ಗಹಗಹಿಸಿ ನಕ್ಕ!

ನಮ್ಮ ಯಾತ್ರೆ ಮುಗಿಯುತ್ತ ಬಂತು. ಹರಿದ್ವಾರಕ್ಕೆ ವಾಪಸ್ ಬರ್ತಾ ಚಂದರ್‌ನ ಸಂಸಾರದ ಬಗ್ಗೆ ಮಾತು ಬಂತು. ನನಗೆ ಒಬ್ಬಳೇ ಹೆಂಡತಿ, ಎರಡು ಮಕ್ಕಳು ಅಂದ! ಗುರೂಜಿ ತಮಾಷೆಯಾಗಿ ಹೇಳಿದರು - 'ಚಂದರ್‌ಸಿಂಗ್, ನಂ ಜೊತೇನೇ ಬಂದ್ಬಿಡು ಬೆಂಗಳೂರಿಗೆ, ಒಳ್ಳೆ ಕೆಲಸ ಕೊಡಸ್ತೀವಿ'. ಅವನು ನಸುನಕ್ಕ. 'ಯಾವ ಗಿಡಾನೂ ತನ್ನ ನೆಲದಲ್ಲಿ ಬೆಳೆಯೋದೇ ಒಳ್ಳೆದು; ಬೇರೆ ಹವ ಸರಿಹೋಗಲ್ಲ!'' ಎಂದ.

ಚಾರ್‌ಧಾಮ್‌ನ ಯಮುನೋತ್ರಿ, ಕೇದಾರ್, ಬದ್ರೀನಾಥ್‌ಗಳ ದರ್ಶನದಿಂದ ಸಂತೋಷಪಟ್ಟೆವು. ಉತ್ತರಾಂಚಲ್‌ನ ಜನ ಜೀವನದ ಬಗ್ಗೆ ಅರಿತೆವು. ಆದರೆ ಇಷ್ಟೇ ಮುಖ್ಯವಾಗಿ ಚಂದರ್‌ಸಿಂಗ್‌ನ ಸ್ನೇಹ ಸಂಪಾದಿಸಿದೆವು!! ಮನೆಕಡೆ ಹೋಗುವ ಕಾಲ ಬಂತು. ಆಂಜನೇಯನ ತರಹ ದಕ್ಷಿಣಾಭಿಮುಖವಾಗಿ ಹಾರಿದೆವು!!

✧✧✧

ಗ್ರಾಮ ಭಾರತ

✧ ಶ್ರೀನಿವಾಸ ವೈದ್ಯ

ಅರವತ್ತರ ದಶಕದ ಕೊನೆಯ ವರುಷಗಳಲ್ಲಿ ಹಾಗೂ ಎಪ್ಪತ್ತರ ದಶಕದ ಮೊದಲಿನೆರಡು ವರುಷಗಳಲ್ಲಿ, ಬ್ಯಾಂಕುಗಳ ರಾಷ್ಟ್ರೀಕರಣ, ಕೃಷಿ ಸಾಲಗಳು, ಬ್ಯಾಂಕಿಂಗ್ ಸೇವೆಯನ್ನು ಗ್ರಾಮೀಣ ಕ್ಷೇತ್ರಗಳಿಗೆ ವಿಸ್ತರಿಸುವುದು ಇತ್ಯಾದಿ ವಿಷಯಗಳು ರಾಷ್ಟ್ರವ್ಯಾಪೀ ಚರ್ಚೆಗೊಳಗಾದ ವಿಷಯಗಳಾಗಿದ್ದವು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಡೆದ ಅಂದಿನ ದಿಢೀರ್ ಕ್ರಾಂತಿಯನ್ನು ಜನ ಅರ್ಧ ದಿಗ್ಭ್ರಮೆಯಿಂದ ಹೆಚ್ಚಿನ ಮೆಚ್ಚುಗೆಯಿಂದ ನೋಡುತ್ತಿದ್ದರು. ಬ್ಯಾಂಕ್ ಅಧಿಕಾರಿಗಳು ಇಂತಿಷ್ಟು ಕನಿಷ್ಟ ಅವಧಿಯ ಸೇವೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಲ್ಲಿಸಲೇಬೇಕೆಂಬುದು ಕಡ್ಡಾಯವಾಗಿತ್ತು.

ಅಂತಹ ದಿನಗಳಲ್ಲಿ ಮುಂಬಯಿಯ ಚೌಪಾಟೀ ಶಾಖೆಯಲ್ಲಿ ಒಬ್ಬ ಕಿರಿಯ ಅಧಿಕಾರಿಯಾಗಿದ್ದ ನನ್ನನ್ನು ಮೇಲು ದರ್ಜೆಗೆ ಬಡತಿಕೊಟ್ಟು ಉತ್ತರ ಕರ್ನಾಟಕದ (ಹಾಗೆ ನೋಡಿದರೆ ಉತ್ತರೋತ್ತರ ಕರ್ನಾಟಕದ, ಎಂದರೆ ಬೆಳಗಾವಿ ಜಿಲ್ಲೆಯ ತೀರ ಉತ್ತರ ದಿಕ್ಕಿಗಿರುವ) ಒಂದು ಚಿಕ್ಕ ಹಳ್ಳಿ 'ಸಣ್ಣೂರಿ'ಗೆ ವರ್ಗ ಮಾಡಿದ್ದರು.

'ಸಣ್ಣೂರು' ಹಸಿರು ಮುರಿಯುವ ಒಂದು ಪುಟ್ಟ ಮುಗ್ಧ ಹಳ್ಳಿಯಾಗಿತ್ತು. ಇಂದಿನ ಕ್ಷುದ್ರ ರಾಜಕೀಯ ಊರಿನಲ್ಲಿ ಆದೇ ತಾನೇ ಹಣಕಿಕ್ಕಿದ್ದರೂ, ಸಣ್ಣೂರು ಇನ್ನೂ ಸಾಕಷ್ಟು ತಿಳಿಯಾಗಿಯೇ ಇತ್ತು.

ಇವತ್ತಿಗೂ ಈ ಹಳ್ಳಿ ನನ್ನ ನೆನಪಿನಲ್ಲಿ ಸದಾ ಹರಿದ್ವರಿತವಾದ ಒಂದು ನಡುಗಡ್ಡೆಯಾಗಿ ಉಳಿದುಬಿಟ್ಟದೆ.

ತಿರುಗುವ ಕುರ್ಚಿ

ಬ್ಯಾಂಕಿನ ಸಣ್ಣೂರು ಶಾಖಾ ಪ್ರಾರಂಭಕ್ಕೆ ಮುನ್ನ ಕಟ್ಟಡಕ್ಕೆ ಬಣ್ಣ ಬಳಿಯುವುದನ್ನು ಬೆಳಗಾವಿಯಿಂದ ಟ್ರಕ್ಕುಗಳಲ್ಲಿ ಬರುವ ಗೋದ್ರೇಜ ತಿಜೋರಿ, ಬೀರು ಹಾಗೂ ಇತರ ಪೀಠೋಪಕರಣಗಳನ್ನೂ ಜನ ಗುಂಪುಗುಂಪಾಗಿ ಬೆರಗುಗಣ್ಣುಗಳಿಂದ ನೋಡುತ್ತ ನಿಲ್ಲುತ್ತಿದ್ದರು. ಪೀಠೋಪಕರಣಗಳಲ್ಲಿ ಮ್ಯಾನೇಜರ್ ಕೂತುಕೊಳ್ಳುವ ಒಂದು ಗೋದ್ರೇಜ ತಿರುಗು ಕುರ್ಚಿ ಹಳ್ಳಿಗರನ್ನು ತುಂಬ ಆಕರ್ಷಿಸಿತ್ತು.

ಸಣ್ಣೂರು ಶಾಖೆಯ ಪ್ರಾರಂಭೋತ್ಸವ ಜರುಗಿ ಕೆಲವು ದಿನಗಳೇ ಕಳೆದಿದ್ದರೂ ಹಳ್ಳಿಯ ನಾಲ್ಕಾರು ಪ್ರಮುಖರನ್ನುಳಿದು ಉಳಿದವರಾರೂ ಬ್ಯಾಂಕಿಗೆ ಬಂದಿರಲೇ ಇಲ್ಲ. ಅಥವಾ ಬ್ಯಾಂಕಿನ ಜತೆ ವ್ಯವಹರಿಸುವಂತಹ ಅಗತ್ಯವೇ ಜನರಿಗಿರಲಿಲ್ಲವೇನೋ? ಸಣ್ಣೂರು ಶಾಖೆಯಲ್ಲಿ ಮ್ಯಾನೇಜರನೆಂದು ನಾನು, ನನ್ನ ಸಹಾಯಕ್ಕೆ ಒಬ್ಬ ಗುಮಾಸ್ತ, ಒಬ್ಬ ಸಿಪಾಯಿ ಹೀಗೆ ಮೂರು ಜನ ಇದ್ದೆವು. ಮೂರು ಬಿಡಿ, ಒಬ್ಬರಿಗೆ ಸಾಕಾಗುವಷ್ಟು ಕೆಲಸವೂ ಇರಲಿಲ್ಲ. ಹೊಸದಾಗಿ ಸುಣ್ಣ ಬಣ್ಣ ಮಾಡಿಸಿದ್ದಕ್ಕೋ ಏನೋ ಬ್ಯಾಂಕಿನಲ್ಲಿ ನೊಣಗಳೂ ಬರುತ್ತಿರಲಿಲ್ಲ.

ಹಳ್ಳಿಯ ಕೆಲವು ಹುಡುಗರು, ಕೆಲವು ನಿರುದ್ಯೋಗಿಗಳು ಸದೋದಿತ ಬೀದಿಯ ಬಾಗಿಲಿನ ಹೊರಗೆ ನಿಂತು, ಒಳಗೆ ಹಣಿಕಿಕ್ಕಿ, ತಿರುಗು ಕುರ್ಚಿಯಲ್ಲಿ ಕುಳಿತ ನನ್ನನ್ನು ಒಬ್ಬ ಪವಾಡ ಪುರುಷನಂತೆ ನೋಡುತ್ತ "ಅಗಾ... ಅಗಾ... ಅಲ್ಲೆ ತಿರುಗೂ ಕುರ್ಚಿಮ್ಯಾಲ ಕುಂತಾನಲ್ಲಽಽ ಅವ ಮ್ಯಾನೇಜರ ಸಾಹೇಬ... ಹಂಗಽಽ ಸಾದಾ ಕುರ್ಚಿ ಮ್ಯಾಲ ಕುಂತಾನಲ್ಲಽಽ ಅವ ಕಾರಕೂನ ಸಾಹೇಬ... ಈ ಕಡೇ ಬಾಕಿನ ಮ್ಯಾಲ ಕುಂತಾನಲ್ಲಽಽಽ ಅವ ಸಿಪಾಯಿ ಸಾಹೇಬ" ಎಂದು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು.

ಸಣ್ಣೂರಿನಿಂದ ನಾಲ್ಕಾರು ಮೈಲು ದೂರದಲ್ಲಿ ವೀರಶೈವ ಮಠದವರು ನಡೆಸುತ್ತಿದ್ದ ಒಂದು ಶಾಲೆಗೆ ಸಣ್ಣೂರಿನ ಹುಡುಗರೂ ಹೋಗುತ್ತಿದ್ದರು. ಈ ಹುಡುಗರು ಬಗಲಿಗೆ ಸ್ಕೂಲಿನ ಚೀಲವನ್ನು ನೇತಾಡಿಸುತ್ತ ಹೊರಟವರು ಶಾಲೆಗೆ ಹೋಗುವದನ್ನು ಮರೆತು ನನ್ನ ತಿರುಗುವ ಕುರ್ಚಿಯನ್ನು ನೋಡುತ್ತ ನಿಂತುಬಿಡುತ್ತಿದ್ದರು. ನಾನು ಹಳ್ಳಿಗರೊಡನೆ ಸ್ನೇಹ ಬೆಳೆಸಿ ಬ್ಯಾಂಕಿನ ವ್ಯವಹಾರ ಬೆಳೆಯಿಸಲು ಸಹಾಯವಾದೀತೆಂದು, ಸ್ಕೂಲಿಗೆ ಹೊರಟ ಈ ಹುಡುಗರಲ್ಲಿ ಒಬ್ಬಿಬ್ಬರನ್ನು ಕರೆದು, ನನ್ನ ತಿರುಗು ಕುರ್ಚಿಯಲ್ಲಿ ಕೂಡ್ರಿಸಿ, ಒಂದೆರಡು ಸುತ್ತು ತಿರುಗಿಸಿ ಕಳಿಸತೊಡಗಿದೆ. ಆಮೇಲಾಮೇಲೆ ಹುಡುಗರು "ಇವತ್ತು ನನ್ನ ಪಾಳಿ... ನಾಳೆ ನಿನ್ನ ಪಾಳೀ..." ಎನ್ನುತ್ತ ಮೈಛಳಿ ಬಿಟ್ಟು ತಾವು ತಾವೇ ತಿರುಗು ಕುರ್ಚಿಯಲ್ಲಿ ಕೂತು ತಿರುಗತೊಡಗಿದರು.

ಕ್ರಮೇಣ ಈ ಹುಡುಗರ ಹಿರಿಯರು ದೂರ ನಿಂತು, ತಮ್ಮ ಮಕ್ಕಳ ಈ ರೀತಿಯ ಪೀಠ ಪರಿಭ್ರಮಣವನ್ನು ನೋಡುತ್ತ "ಐ! ನಮ್ಮ ಬಸಣ್ಯಾ ಹೆಂಗ ಧೈರೇದಿಂದ ಕುಂತಾನ ನೋಡು!" "ಐ! ತಳವಾರ ನಿಂಗವ್ವನ ಮಗ ಹ್ಯಾಂಗ ಕುರ್ಚಿ ಮ್ಯಾಗ ಜಗಿಯಾಕ ಹತ್ಯಾನ ನೋಡ" ಎಂದು ಸಂತಸಪಡುತ್ತಿದ್ದರು. ಬರ್‍ತಾ ಬರ್‍ತಾ ಒಂದಿಬ್ಬರು ತಾಯಂದಿರು ತಮ್ಮ ಕೈಗೂಸುಗಳನ್ನು ತಂದು "ಸಾಹೇಬರಽಽ ಒಂದಳತೀ ರಚ್ಚಿ ಹಿಡದು ಅಳಾಕ ಹತ್ತೇತಿ... ಒಂದೀಟು ತಿರುಗು ಕುರ್ಚಿ ಮ್ಯಾಗ ಕುಂದರಸರಿ" ಎಂದು ತಮ್ಮ ಹಸೀ ಹಸೀ ಹಸುಳೆಗಳನ್ನು ಕೂಡಿಸಿ ನನ್ನ ತಿರುಗೂ ಕುರ್ಚಿಯನ್ನು ಒದ್ದೆ ಮುದ್ದೆಯಾಗಿಸುತ್ತ ಪಾವನಗೊಳಿಸುತ್ತಿದ್ದರು.

ಈ ರೀತಿ ಹಳ್ಳಿಗರೊಡನೆ ಬ್ಯಾಂಕಿನ ಸ್ನೇಹವೇನೋ ಬೆಳೆಯಿತು. ಆದರೆ ಬ್ಯಾಂಕಿಂಗ್ ವ್ಯವಹಾರ ಮಾತ್ರ ಇದ್ದಲ್ಲಿಯೇ ಇತ್ತು.

ಮುಂದಿನ ದಿನಗಳಲ್ಲಿ ನಾನು ಬ್ಯಾಂಕಿನ ಸೇವೆಯನ್ನು ಜನಪ್ರಿಯಗೊಳಿಸಲು, ಹಳ್ಳಿಯ ಹಿರಿಯರ ಮನೆಗಳಿಗೂ ಅಕ್ಕಪಕ್ಕದ ಹಳ್ಳಿಗಳಿಗೂ ಬೈಸಿಕಲ್ ತುಳಿಯುತ್ತ ಹೋಗಿ ಬರತೊಡಗಿದೆ. ಅಂತೂ ನನ್ನ ಸತತ ಪ್ರಯತ್ನದ ಫಲವಾಗಿ, ಆಕರ್ಷಕ ಮಾತುಗಳ ಪರಿಣಾಮವಾಗಿ ಹಳ್ಳಿಗರು ನಾನಿಲ್ಲದಾಗ ಬ್ಯಾಂಕಿಗೆ ಬಂದು ಐದೈದು ರೂಪಾಯಿಗಳ ಉಳಿತಾಯ ಖಾತೆಗಳನ್ನು ತೆರೆಯತೊಡಗಿದರು. ಈ ರೀತಿ ದಿನಾಲು ಏಳೆಂಟರಂತೆ ಉಳಿತಾಯ ಖಾತೆಗಳು ಬೆಳೆಯತೊಡಗಿದವು. ನಾನು ಸಂತಸದಿಂದ ನನ್ನ ಮುಖ್ಯ ಕಚೇರಿಗೆ ಸಣ್ಣೂರು ಶಾಖೆಯ ಪ್ರಗತಿಯ ಬಗ್ಗೆ, ನನ್ನ ಸತತ ಪ್ರಯತ್ನದ ಬಗ್ಗೆ, ವ್ಯವಹಾರ ಕುಶಲತೆಯ ಬಗ್ಗೆ ಬರೆಬರೆದು ಕೊಚ್ಚಿಕೊಳ್ಳತೊಡಗಿದೆ. ಈ ಮಧ್ಯೆ ನನ್ನ ಸಹೋದ್ಯೋಗಿಗಳಾದ ಕಾರಕೂನ ಸಾಹೇಬರೂ, ಸಿಪಾಯಿ ಸಾಹೇಬರೂ ಅದೇಕೋ ನನ್ನನ್ನು ಕಂಡು ಒಳಗೊಳಗೇ ಮಾರ್ಮಿಕವಾಗಿ ಮುಗುಳು ನಗುತ್ತಿದ್ದುದೂ ನನ್ನ ಗಮನಕ್ಕೆ ಬಂದಿತ್ತು.

ನಾಲ್ಕಾರು ದಿನ ಬಿಟ್ಟು ಒಮ್ಮೆ ನಾನು ಬೆಳಿಗ್ಗೆ ಬ್ಯಾಂಕಿಗೆ ಬಂದು ಬಾಗಿಲು ತೆಗೆಯುವ ಮೊದಲೇ ಬಾಗಿಲ ಬಳಿ ಒಬ್ಬ ಬುರ್ಖಾ ಧರಿಸಿದ ಧಡೂತಿ ಮಹಿಳೆಗೂ, ನಮ್ಮ ಕಾರಕೂನ ಸಾಹೇಬ, ಸಿಪಾಯಿ ಸಾಹೇಬರಿಗೂ ಏನೋ ಬಿರುಸಿನ ಮಾತುಕತೆ ನಡೆದದ್ದನ್ನು ಕಂಡೆ. ನಾನು ಹತ್ತಿರ ಹತ್ತಿರ ಬರುತ್ತಿದ್ದಂತೆಯೇ ನನ್ನ ಸಹೋದ್ಯೋಗಿಗಳಿಬ್ಬರೂ ತಬ್ಬಿಬ್ಬಾಗಿ ಆ ಬೃಹತ್ ಬುರ್ಖಿಣಿಯ ಬಾಯಿ ಮುಚ್ಚಿಸಿ ಅವಳನ್ನು ಶಾಂತವಾಗಿರಿಸಲು ಹರಸಾಹಸ ಪಡುತ್ತಿದ್ದುದ್ದನ್ನು ಕಂಡು ನಾನು ಆಶ್ಚರ್ಯದಿಂದ ಇದೆಲ್ಲ ಏನೆಂದು ಕೇಳುತ್ತ ಮೆಟ್ಟಲೇರುತ್ತಿದ್ದಂತೆಯೇ ನಮ್ಮ ಪಕ್ಕದ ಗೂಡಂಗಡಿಯಾತ ಬಂದು; "ಸಾಹೇಬರಽಽ ದಿನಾ ನೀವಿಲ್ಲದಾಗ ಕಾರಕೂನ ಸಾಹೇಬರೂ, ಸಿಪಾಯಿ ಸಾಹೇಬರೂ ಮಸಲತ್ತು ಮಾಡಿ ಮಂದಿಗೆಲ್ಲ ಅಯಿದಯಿದ ರೂಪಾಯಿದ ಚಾಲತೀ ಖಾತೆ ತಗದಾರ ಅಯಿದಯಿದು ಮಿನೀಟು ತಿರುಗೂ ಕುರ್ಚಿ ಮ್ಯಾಲ ಕುಂದರಾಕ ಕೊಡತಾರರೀ... ಹಂಗಾಗಿ ದಿನಾ ನಾಲ್ಕೈದು ಮಂದಿ ಖಾತೆ ತಗಿಯೂದೂ ಆಮ್ಯಾಲ ಅಯಿದಯಿದ ಮಿನೀಟ ತಿರುಗು ಕುರ್ಚಿ ಮ್ಯಾಲ ಕುಂದರೂದೂ ನಡೆದೈತ್ರೀ.... ಇವತ್ತ ಮುಂಜಾಲಿಂದ ಈ ಮುಸಲರ ಬೂಬಮ್ಮ ನಾನೂ ಅಯಿದ ರೂಪಾಯಿ ಕಾತೇ ತೆಗೀತೇನು ನನ್ನೂ ತಿರುಗೂ ಕುರ್ಚಿಮ್ಯಾಲ ಕುಂದರಾಕ ಬಿಡರೀ ಅನ್ನಾಕ ಹತ್ಯಾಳರೀ... ಇವರಿಬ್ಬರೂ ನೀವು ಬರೂದ ನೋಡಿ ಈಗ ಬ್ಯಾಡ, ಆಮ್ಯಾಲೆ ಸಾಹೇಬರು ಇಲ್ಲದಾಗ ಬಾ ಅನ್ನಾಕ ಹತ್ಯಾರ್ರೀ" ಎಂದು ನಗುನಗುತ್ತ ವರದಿ ಒಪ್ಪಿಸಿದ.

ಕಳೆದ ಕೆಲವು ದಿನಗಳಿಂದ ನಮ್ಮ ಸಣ್ಣೂರು ಶಾಖೆ ಸಾಧಿಸುತ್ತಿದ್ದ ಕ್ಷಿಪ್ರ ಪ್ರಗತಿಯ ಅದ್ಭುತ ಮಾಯಾ ರಹಸ್ಯ ಆ ಕ್ಷಣಕ್ಕೆ ನನಗೆ ವೇದ್ಯವಾಯಿತು!

ಸರಿ, ಆವತ್ತು ಬೆಳಿಗ್ಗೆ ನಾನೂ ಮಾರ್ಮಿಕವಾಗಿ ಮುಗುಳುನಗುತ್ತ ಬೂಬಮ್ಮನಿಗೆ ಖಾತೆ ತೆರೆಯಲು ಅನುವು ಮಾಡಿಕೊಟ್ಟು ತಿರುಗೂ ಕುರ್ಚಿಯಿಂದ ದೂರ ಸರಿದು ನಿಂತೆ. ಅಷ್ಟೊತ್ತಿಗೆ ಸುತ್ತ ನೆರೆದ ಹತ್ತಾರು ಜನ ಬೂಬಮ್ಮನ ಉಳಿತಾಯ ಖಾತೆಯ ಉದ್ಘಾಟನಾ

ಸಮಾರಂಭವನ್ನು ನೋಡಲು ಮುಗಿಬೀಳತೊಡಗಿದ್ದರು. ಅಂದಿನ ಮುಖ್ಯ ಅತಿಥಿ ಬೃಹತ್ ಸುತ್ತಳತೆಯ ಬೂಬಮ್ಮ ತಿರುಗುಕುರ್ಚಿಯಲ್ಲಿ ಹಾಗೂ ಹೀಗೂ ತುರಿಕಿಕೊಂಡು ಇನ್ನೇನು ಊರಿ ಕುಳಿತಳೆಂದಾಗ, ಪಾಪ ತಿರುಗು ಕುರ್ಚಿ ಮೊದಲು ಲಿಕಿಲಿಕಿಯಾಗಿ ಕಿರುಗುಟ್ಟಿ, ಆಮೇಲೆ ಕುಯ್ಯೋ ಮರ್ರ್ರೋ ಎನ್ನುತ್ತ ಏಳೆಂಟು ತುಂಡುಗಳಾಗಿ ಮುರಿದುಬಿತ್ತು!!

ಬೆಳಗಾವಿಯಿಂದ ಇನ್ನೊಂದು ತಿರುಗು ಕುರ್ಚಿ ಬರುವವರೆಗೆ ಸಣ್ಣೂರು ಶಾಖೆಯ ಪ್ರಗತಿ ಸಂಪೂರ್ಣವಾಗಿ ಸ್ಥಗಿತವಾಗಿತ್ತು.

ಎಂಟು ರೂಪಾಯಿ ಲಂಚ

''ಬರೀ ಠೇವಣಾತಿಗಳ ಬಗ್ಗೆ ಚಿಂತಿಸದೇ ಕೃಷಿ ಸಾಲಗಳನ್ನೂ ಬೆಳೆಸಬೇಕೆಂದೂ ರೂರಲ್ ಶಾಖೆಗಳ ಮುಖ್ಯ ಉದ್ದೇಶ ಕೃಷಿಗೆ ಸಹಾಯ ಮಾಡುವದೇ ಆಗಿದೆಯೆಂದೂ'' ಮುಖ್ಯ ಕಚೇರಿಯಿಂದ ಪದೇ ಪದೇ ನೆನಪಿನೋಲೆಗಳು ಬರತೊಡಗಿದ್ದವು. ಆಮೇಲೆ ನಾನು ಸಣ್ಣೂರು ಶಾಖೆಯಿಂದ ಬೆಳೆ ಸಾಲ, ಗೊಬ್ಬರ, ಬಿತ್ತನೆ ಬೀಜ ಕೊಳ್ಳಲು ಎಮ್ಮೆ ಹಸು ಕೊಳ್ಳಲು ಎನ್ನುತ್ತ ಆಯಿದು ನೂರರಿಂದ ಆಯಿದು ಸಾವಿರದವರೆಗೆ ಸಾಲ ಮಂಜೂರು ಮಾಡತೊಡಗಿದೆ. ನಮ್ಮ ಶಾಖೆಯಲ್ಲಿ ಸಾಲಗಳನ್ನು ಶೀಘ್ರವಾಗಿ ಮಂಜೂರು ಮಾಡಿ ಅಷ್ಟೇ ಶೀಘ್ರವಾಗಿ ಬಟವಡೆ ಮಾಡುತ್ತಿದ್ದ ವಾರ್ತೆ ಜನಜನಿತವಾಗಿ ನಮ್ಮ ಜನಪ್ರಿಯತೆ ಬೆಳೆಯತೊಡಗಿತು. ಜನ ನಮ್ಮ ಬಗ್ಗೆ ಮೆಚ್ಚಿ ಮಾತಾಡಕೊಳ್ಳತೊಡಗಿದರು. ಈ ಮೆಚ್ಚುಗೆಯ ಮಾತುಗಳ ನಡುವೆಯೇ ಒಂದೆರಡು ಸಲ ಏನೇನೋ ರಹಸ್ಯಮಯ ಗುಸುಗುಸು ಪಿಸುಪಿಸು ಮಾತುಗಳೂ ನನ್ನ ಕಿವಿಗೆ ಬೀಳತೊಡಗಿದವು.

''ಮ್ಯಾನೇಜರ ಸಾಹೇಬ ಛೊಲೋ ಅದಾನಽಽ.... ಆಯಿನೂರ ಇರಲೀ ಆಯಿದ ಸಾವಿರ ಇರಲಿ... ಸಾಲದ ರಕಮು ಎಷ್ಟಽ ಇದ್ದರೂ ಬರೇ ಎಂಟು ರೂಪಾಯಿ ಲಂಚ ತಿಂತಾನು.''

''ಎಂಟು ರೂಪಾಯಿ ಅಂದ ಏನೂ ಅಲ್ಲ ತಗೀ.... ಸೊಸೈಟಿಯವರಗತೆ ನೂರಕ್ಕೆ ಮುವತ್ತು ನಲವತ್ತು ಬ್ಯಾರೆ ಕೇಳೂದಿಲ್ಲ...''

''ಎಂಟು ರೂಪಾಯಿದಾಗ ಮೂರು ಮಂದಿ ಹ್ಯಾಂಗ್ ಹಂಚಿಕೋತಾರೋ ಏನೋ...''

ಈ ರೀತಿ ತುಂಡು ತುಂಡಾದ ಮಾತುಗಳು ನನ್ನ ಕಿವಿಗೆ ಬೀಳತೊಡಗಿದ್ದವು. ಈ ತರಹದ ಮಾತು ಕೇಳಿದಾಗೊಮ್ಮೆ ನನಗೆ ಆಶ್ಚರ್ಯವಾಗುತ್ತಿತ್ತು, ನೋವಾಗುತ್ತಿತ್ತು, ಕೊನೆಗೆ ನಮ್ಮ ಕಾರಕೂನ ಸಾಹೇಬರೊಡನೆ ಈ ವಿಷಯ ಮಾತನಾಡಿದಾಗ, ಈ ಎಂಟು ರೂಪಾಯಿ ಲಂಚದ ಗುಟ್ಟು ಬಯಲಾಗಿ ನಗು ಬಂತು. ನಡೆಯುತ್ತಿದ್ದುದು ಇಷ್ಟು.

ಸಾಲ ಮಂಜೂರು ಮಾಡಬೇಕಾದರೆ, ಸಾಲಗಾರ ಮೊದಲು ಬ್ಯಾಂಕಿನ ಗ್ರಾಹಕನಾಗಿರಬೇಕು. ಎಂದರೆ ಒಂದು ಸಣ್ಣ ಪ್ರಮಾಣದ ಚಾಲತೀ ಖಾತೆಯನ್ನಾದರೂ

ಹೊಂದಿರಬೇಕು. ಆಮೇಲೆ ಉಳಿದ ಸಾಲ ಪತ್ರಗಳ ಜತೆಗೆ ಒಂದು ಛಾಪಾ ಕಾಗದದ ಅಗ್ರೀಮೆಂಟ್ ಮೇಲೆ ಹೆಬ್ಬೆರಳೊತ್ತಬೇಕು. ಆರೆ ನಮ್ಮ ಬಳಿ ಸಾಲಕ್ಕೆ ಬರುವ ರೈತಾಪಿ ಜನಗಳೋ ಬರಿಗೈಯಿಂದ ಬರುತ್ತಿದ್ದರಷ್ಟೇ ಅಲ್ಲದೇ ಯಾವದಕ್ಕೂ ಕಿಲುಬು ಕಾಸೂ ಬಿಚ್ಚುತ್ತಿರಲಿಲ್ಲ. ಹಾಗಾಗಿ ನಾವೇ ಸಾಲ ಮಂಜೂರು ಮಾಡಿ ಸಾಲದ ರಕಮನಿಂದಲೇ ಒಂದು ಆಯಿದು ರೂಪಾಯಿಯ ಚಾಲತೀ ಖಾತೆಯನ್ನು ಅವರ ಹೆಸರಿನಲ್ಲಿ ತೆಗೆದು, ಮೂರು ರೂಪಾಯಿಯ ಛಾಪಾ ಕಾಗದದ ರಕಮನ್ನೂ ಸಾಲದಲ್ಲಿಯೇ ಹಿಡಿಯುತ್ತಿದ್ದೆವು. ಹಾಗಾಗಿ ಒಂದು ಸಾವಿರ ರೂಪಾಯಿಯ ಸಾಲ ಮಂಜೂರಾದರೆ, ಆಯಿದು ರೂಪಾಯಿಗಳನ್ನು ಚಾಲತೀ ಖಾತೆಗೂ, ಮೂರು ರೂಪಾಯಿಗಳನ್ನು ಛಾಪಾ ಕಾಗದಕ್ಕೂ ಮುರಿದುಕೊಂಡು ಅವರಿಗೆ ಒಂಬೈನೂರ ತೊಂಭತ್ತೆರಡು ರೂಪಾಯಿಗಳನ್ನು ಕೊಡುತ್ತಿದ್ದೆವು.

ಇದೇ ಎಂಟು ರೂಪಾಯಿಗಳ ಲಂಚದ ಭಾರೀ ರಕಮು!

ಮುದುಕಪ್ಪನ ಹೊಸ್ಸಾ ಕೋರಾ ನೋಟುಗಳು

ಒಮ್ಮೆ ಒಬ್ಬ ವಯಸ್ಸಾದ ರೈತ ಮುದುಕಪ್ಪ ಬ್ಯಾಂಕಿಗೆ ಬಂದ. ಬಯಲುಶೀಮೆಯ ಬಿಸಿಲ ಹೊಲಗಳಲ್ಲಿ ಮೈಮುರಿ ದುಡಿದು ಕಲ್ಲಿನಂತೆ ಗಟ್ಟಿಯಾದ ಮೈಕಟ್ಟು, ಮುಖದ ತುಂಬ ಗಲ್ಲದಿಂದ ಕಿವಿಯವರೆಗೆ ವರ್ತುಳ ವರ್ತುಳಾಕಾರವಾಗಿ ಹರಡಿದ ಕಲ್ಲೀ ಮೀಶೆ. ಕೆಂಪು ಚೌಕಡಿಯ ರುಮಾಲು, ಕಿವಿಯಲ್ಲಿ ಹಿತ್ತಾಳೆಯ ಬಾವಲಿ, ಮಿರಿ ಮಿರಿ ಮಿಂಚುವ ಬರಿಮೈಮೇಲೊಂದು ಹೆಗಲಿನಿಂದ ಇಳಿಬಿಟ್ಟ ಅರ್ಧ ಮಡಿಸಿದ ಕರೀ ಕಂಬಳಿ, ಕೈಯಲ್ಲೊಂದು ಉದ್ದನೆಯ ಗೆಣ್ಣೆ ಗೆಣ್ಣೆಯಾದ ಕೋಲು ಏವಂಗುಣ ವಿಶಿಷ್ಟನಾದ ಮುದುಕಪ್ಪ ಬಂದ. ಬಂದ ಎನ್ನುವದಕ್ಕಿಂತ ಐತಂದ ಎಂದರೆ ಸೂಕ್ತವಾದೀತು.

ಮುದುಕಪ್ಪ ಒಳಗೆ ಬಂದು ಆಢ್ಯತೆಯಿಂದ 'ಸುತ್ತಮುತ್ತಲೂ ಮೇಲಕೆ ಕೆಳಗೆಲ್ಲ' ದೃಷ್ಟಿ ಹಾಯಿಸಿ, ನನ್ನ ಎದರು ನೆಲದಲ್ಲಿ ಕಂಬಳಿ ಹಾಸಿಕೊಂಡು ಆಢ್ಯತೆಯಿಂದ ಕುಳಿತ. ಕುಳಿತುಕೊಂಡು ತಲೆಯ ಮೇಲಿನ ಕೆಂಪು ಚೌಕಡೀ ರುಮಾಲು ತೆಗೆದು ಅದರಿಂದ ಮುಖದ ಮೇಲಿನ ಮೈಮೇಲಿನ ಬೆವರು ಒರೆಸಿಕೊಂಡು ನಿಧಾನವಾಗಿ ಸೊಂಟದಿಂದ ಒಂದು ಮಣ್ಣಿನ ಚಿಲುಮೆ ತೆಗೆದು ಅದಕ್ಕೆ ನಿಧಾನವಾಗಿ ತಂಬಾಕು ತುಂಬಿ, ಕಡ್ಡಿಗೀರಿ, ಎರಡೂ ಅಂಗೈಗಳ ಮಧ್ಯದಲ್ಲಿ ಚಿಲುಮೆಯನ್ನು ಗಟ್ಟಿಯಾಗಿ ಹಿಡಿದು, ಮುಖವನ್ನು ಮೇಲೆ ಮಾಡಿ, ಕಣ್ಣು ಮುಚ್ಚಿ, ದೀರ್ಘವಾಗಿ ಎರಡು ದಮ್ಮು ಎಳೆದುಕೊಂಡು ಬ್ರಹ್ಮ ಸಮಾಧಿಯನ್ನು ತಲುಪಿದ. ಒಂದೆರಡು ಕ್ಷಣ ಬಿಟ್ಟು ಸಮಾಧಿಯಿಂದ ಹೊರಬಂದು ಕಣ್ಣುಬಿಟ್ಟ. ಕಣ್ಣು ಬಿಟ್ಟು ಪ್ರಸನ್ನವದನನಾಗಿ ಗೊಗ್ಗರದನಿಯಲ್ಲಿ,

''ನಿಮ್ಮ ಪೈಕಿ ಮ್ಯಾನೇಜರ ಅಂದರ ಯಾರೋ ತಮ್ಮ'' ಅಂದ. ಆಮೇಲೆ ನಾನೇ ಮ್ಯಾನೇಜರನೆಂದು ತಿಳಿದು ''ಇಕಡೇ ಬಾ ಒಂದೀಟು'' ಎಂದು ನನ್ನನ್ನು ಕರೆದು ಕಂಬಳಿಯ ಮೇಲೆ ಕೂಡಿಸಿಕೊಂಡು ಧೋತರದ ಉಡಿಯ ಗಂಟು ಸಡಿಲಿಸಿ, ಒಂದು ಪುಡಿಕೆ ಹೊಸ ನೋಟುಗಳ ಕಟ್ಟು ತೆಗೆದು, ''ಎರಡ ಸಾವಿರ ಅದಾವ, ಎಣಿಸಿಗೋ.

ಕುರಿಬೀ ರೊಕ್ಕ, ಕೊಲ್ಹಾಪುರದಿಂದ ಇದS ಇನ್ನೂ ತಂದೇನಿ... ಹೊಸ್ಸಾ ಕೋರಾ ನೋಟ ಆದಾವ ನೋಡು... ಅದೇನು ಮಾಡತೀಯೋ ಮಾಡಿಕೋ.... ಆರ ತಿಂಗಳ ಆದಿಂದ, ಬಿತಗೀ ಮುಂದ ಒಂದ ಬಿಲ್ಲೀ ಬಿಡಧಂಗ ಅಷ್ಟೂ ರೊಕ್ಕಾನೂ ನನಗೆ ಹೊಳ್ಳಿ ಕೊಡಬೇಕು... ಈಗ ಹೇಳಿರತೀನಿ... ಆಯತಾ ವ್ಯಾಳ್ಯಾಕ್ಕ ನೀ ಕಮಕ್ ಕಿಮಕ್ ಅಂದೀ ಮತ್ತ ನೀ ಉಳಿಯಾಕಿಲ್ಲ'' ಎನ್ನುತ್ತ ಒಮ್ಮೆ ಗೆಣ್ಣೆಕೋಲ ಮೇಲೆ ಕೈಯಾಡಿಸಿದ.

ನಾನು ಒಮ್ಮೆ ನಖಶಿಖಾಂತ ನಡುಗಿದೆ. ಆಮೇಲೆ ಸುಧಾರಿಸಿಕೊಂಡು ಮುದುಕಪ್ಪನನ್ನು ಮಾತಿಗೆಳೆದು 'ಚಾ' ತರಿಸಿಕೊಟ್ಟು ಅವನು ''ಸೊಡರ್... ಸೊಡರ್'' ಎಂದು ಚಾ ಹೀರುತ್ತಿದ್ದಾಗ ಅವನ ಹೆಸರಿಗೊಂದು ಆರು ತಿಂಗಳ ಫಿಕ್ಸೆಡ್ ಡಿಪಾಸಿಟ್ ರಶೀದಿ ಕೊಟ್ಟು ಅವನು ಕೊಟ್ಟ ಹೊಸ್ಸಾ ಕೋರಾ ನೋಟುಗಳನ್ನು ಡ್ರಾಯರನಲ್ಲಿಟ್ಟುಕೊಂಡೆ.

ಆಗ ನಮ್ಮ ಶಾಖೆಯ ಇನ್ನೊಬ್ಬ ಗ್ರಾಹಕ ಎಣ್ಣೆ ವ್ಯಾಪಾರಿ ಸಾಂತಪ್ಪ ಬಂದು ''ಸಾಹೇಬರSS ಎರಡ ಸಾವಿರ ರೂಪಾಯಿ ಬೇಕಾಗಿತ್ತರೀ'' ಎನ್ನುತ್ತ ಒಂದು ವಿತ್‌ಡ್ರಾವಲ್ ಹಾಳೆಗೆ ಹೆಬ್ಬೆರಳು ಒತ್ತಿಕೊಟ್ಟ. ಆಗ ನಾನು ಹೇಗೂ ಎಣಿಸಿ ಸಿದ್ಧಪಡಿಸಿದ ಹಣವೇ ಉಂಟಲ್ಲವೇ ಎಂದು ಅದೇ ಆಗ ಮುದುಕಪ್ಪ ಕೊಟ್ಟ ಎರಡು ಸಾವಿರ ರೂಪಾಯಿನ 'ಹೊಸ್ಸಾ ಕೋರಾ' ನೋಟುಗಳನ್ನು ಸಾಂತಪ್ಪನಿಗೆ ಕೊಟ್ಟೆ.

ಆ ಕ್ಷಣಕ್ಕೆ ಏನಾಯಿತೋ ಏನೋ ಮುದುಕಪ್ಪ ಸ್ಫೋಟಗೊಂಡು ಹಾಸಿದ ಕಂಬಳಿಯಿಂದ ಪುಟಿದೆದ್ದು ಸಾಂತಪ್ಪನ ಮುಂಗೈಯನ್ನು ತನ್ನ ಉಕ್ಕಿನ ಹಿಡಿತದಲ್ಲಿ ಹಿಡಿದು, ಉರಿಗಣ್ಣಿನಿಂದ ನನ್ನನ್ನು ನೋಡುತ್ತ ಝಾಡಿಸತೊಡಗಿದ.

''ಯಾಕೋ ಯಪ್ಪಾ! ಹ್ಯಾಂಗ ಕಾಣತೈತಿ... ಇದS ಇನ್ನೂ ಈಗ ನಾ ಕೊಟ್ಟ ರೊಕ್ಕಾ ನನ್ನೆದುರSS... ನಾ ಇರತSS... ನನ್ನ ಹುಜರSS... ಇನ್ನೊಬ್ಬಾವಗ ಕೊಡಾಕ ಹತ್ತೀ?.... ಇದSS ಏನ ನಿನ್ನ ಬ್ಯಾಂಕ ಧಂಧೆ... ಇದಕ್ಕSS ಏನ ನೀ ಮ್ಯಾನೇಜರ ಆಗಿರೂದುSSS ನಾ ಇನ್ನೂ ನಿನ್ನ ಎದುರSS ದೆವ್ವನ ಹಾಂಗ ಕುಂತೇನು... ಸತ್ತಿಲ್ಲ... ಹಂತಾದು... ಕಾಣಾಕಾಣಾ ನನ್ನ ಹುಜರSS ನಾ ಕೊಟ್ಟದ್ದ ಹೊಸ್ಸಾ ಕೋರಾ ನೋಟ ಅವಗ ಕೊಡಾಕ ಹತ್ತೀದೀ... ನಾಚಿಗಿ ಬರೋದಿಲ್ಲ ನಿನಗ? ನಾ ಇದ್ದಾಗSS ಹೀಗSS ನಾಳೆನಾ ಸತ್ತಿಂದ ಏನು ಮಾಡವರೋ ಯಪ್ಪಾ ನೀವು... ಅದಕS ಈ ಸಾಲೀ ಕಲತ ಮಂದೀ ಸಹವಾಸನS ಬ್ಯಾಡಂತಾರ ನೋಡು...'' ಎನ್ನುತ್ತ ಸಾಂತಪ್ಪನ ಕೈಯಿಂದ ತನ್ನ ಹೊಸ್ಸಾ ಕೋರಾ ನೋಟುಗಳನ್ನು ಕಿತ್ತುಕೊಂಡು, ''ಇಗಾ ಇದು ತಗೋ ನಿನ್ನ ಹೊಲಸ ರಸೀದಿ'' ಎನ್ನುತ್ತ ನಾನು ಕೊಟ್ಟ ಫಿಕ್ಸೆಡ್ ಡಿಪಾಸಿಟ್ ರಶೀದಿಯನ್ನು ಚರಾಪರಾ ಹರಿದು ನನ್ನ ಮುಖಕ್ಕೆಸೆದು ಮೆಟ್ಟಿಲಿಳಿದು ನಡೆದುಬಿಟ್ಟ!

ಮಠ ಮಾನ್ಯರು

ಒಮ್ಮೆ ಮಠದ ಸ್ವಾಮಿಗಳು ನನ್ನನ್ನು ಕಾಣಬೇಕೆಂದು ಹೇಳಿ ಕಳಿಸಿದ್ದರು. ಹೋಗಿದ್ದೆ. ವಿಶೇಷವೇನೂ ಇರಲಿಲ್ಲ. ಅದೊಂದು ಔಪಚಾರಿಕ ಭೇಟಿ.

ಸ್ವಾಮಿಗಳು ನಿಜವಾಗಿ ವಿರಕ್ತರು. ಅವರ ವರ್ಚಸ್ವೀ ಗೌರವಾನ್ವಿತ ವ್ಯಕ್ತಿತ್ವದೆದುರು ಯಾರಿಗಾದರೂ ಆದರ ಹುಟ್ಟೀತು. ಆ ಪುಟ್ಟ ಹಳ್ಳಿಯಲ್ಲಿನ ಅವರ ಸಾಮಾಜಿಕ ಕಳಕಳಿ ಮೆಚ್ಚಬೇಕಾದ್ದೇ. ಅವರು ಆ ಹಳ್ಳಿಯಲ್ಲೊಂದು ಹೈಸ್ಕೂಲು, ಒಂದು ಬಾಲಕಿಯರ ಶಾಲೆ ನಡೆಸುತ್ತಿದ್ದರು.

ಸ್ವಾಮಿಗಳು ನನ್ನನ್ನು ಕೂಡ್ರಿಸಿಕೊಂಡು ಕುಶಲೋಪರಿ ಕೇಳಿ, ಆ ಸುತ್ತಲಿನ ಭಾಗಕ್ಕೆ ಬ್ಯಾಂಕಿನಿಂದ ಏನೇನು ಪ್ರಯೋಜನಗಳಾಗಬಹುದೆಂದು ಚರ್ಚಿಸತೊಡಗಿದರು. ನಾನು ಹೋದದ್ದು ಸೋಮವಾರ ವಿಶೇಷ ದಿನ; ಹಾಗಾಗಿ ಸ್ವಾಮಿಗಳ ಎದುರಿಗೆ ಇಟ್ಟ ಒಂದು ದೊಡ್ಡ ತಟ್ಟೆ ತುಂಬ ಭಕ್ತರು ಅರ್ಪಿಸುತ್ತಿದ್ದ ಕಾಣಿಕೆಯ ನೋಟುಗಳು ಏರ ತೊಡಗಿದ್ದವು. ಆಗ ನನ್ನೊಳಗಿನ ಬ್ಯಾಂಕ್ ಮ್ಯಾನೇಜರ ಜಾಗೃತನಾಗಿ ನಾನು ಸ್ವಾಮಿಗಳಿಗೆ, ''ಸ್ವಾಮಿಗಳು ಈ ಹಣವನ್ನು ಏನು ಮಾಡುತ್ತೀರಿ?'' ಎಂದು ಕೇಳಿದೆ. ಸ್ವಾಮಿಗಳು ''ನಮ್ಮ ಕಾರಕೂನ ಶಂಕರೆಪ್ಪ ದುಡ್ಡಿನ ವ್ಯವಹಾರ ನೋಡಿಕೊಂತಾನರೀ ಒಳಗಽ ಒಂದು ಸಿದ್ದೇಶ್ವರ ತಿಜೋರಿ ಅಯಿತೀರೀ... ಅದರಾಗ ತಗದ ಇಟ್ಟು... ಮುಂದ ಸಾಲೀ ಖರ್ಚು... ಮಾಸ್ತರಗೊಳ ಪಗಾರ... ಮಠದ ರಿಪೇರಿ... ದಾಸೋಹ... ಪ್ರಸಾದಽ... ಇದ್ದಽ ಇರತೈತೆಲ್ಲರೀ'' ಎಂದರು.

ಆಗ ನಾನು ನಮ್ಮ ಸಣ್ಣೂರು ಶಾಖೆಯಲ್ಲಿ ಮಠದ ಹೆಸರಿನಿಂದ ಒಂದು ಉಳಿತಾಯ ಖಾತೆಯನ್ನು ತೆಗೆಯಬೇಕೆಂದೂ... ಖರ್ಚಿಗೆ ಬೇಕಾದಾಗ ಬೇಕಾದಷ್ಟು ತೆಗೆಯಬಹುದೆಂದೂ ನನ್ನ ನಿತ್ಯದ ರೆಕಾರ್ಡನ್ನು ಹಾಕಿದೆ.

ಆಗ ಸ್ವಾಮಿಗಳ ಶಿವಪೂಜೆಯ ಸಮಯವೆಂದು ತೋರುತ್ತದೆ. ಸ್ವಾಮಿಗಳು ಎದ್ದರು. ಮಠದ ಕಾರಕೂನ ಶಂಕರೆಪ್ಪ ಬಂದು ಹಣದ ತಟ್ಟೆಯನ್ನು ಎತ್ತಿ ಒಳಗೆ ತಿಜೋರಿಯಲ್ಲಿಡಲು ಬಂದ. ಆಗ ಸ್ವಾಮಿಗಳು ಅವನನ್ನು ತಡೆದು ನನ್ನೆಡೆಗೆ ತಿರುಗಿ,

''ಮ್ಯಾನೇಜರ ಸಾಹೇಬರಽಽ ಒಂದು ಕೆಲಸಾ ಮಾಡಿರಿ. ನೀವು ಹೇಳಿದಗತೇನಽಽ ನಿಮ್ಮ ಬ್ಯಾಂಕಿನ್ಯಾಗ ಒಂದು ಖಾತೇ ತೆಗೀರೀ... ಹಂಗಽ ಹಿಂದಕ್ಕಽ ಒಮ್ಮೆ ಬೆಳಗಾವಿಯಿಂದ... ಕೊಲ್ಹಾಪುರದಿಂದ ಬ್ಯಾಂಕಿನವರು ಬಂದಿದ್ದರು... ನಾವಽಽ ಧೂರಾ ಬಾರಾ ಬ್ಯಾಡಂತ ಬಿಟ್ಟಿದ್ದಿವಿ. ಈಗ ನಮ್ಮೂರಿಗೇ ಬ್ಯಾಂಕ ಬಂದೈತಿ ಅಂದ್ರಽ ನಮಗೂ ಅನುಕೂಲಽಽ.... ಇವತ್ತ ಈ ತಾಟಿನ್ಯಗಿಂದು ಯಲ್ಲಾ ನಮ್ಮ ಖಾತೀಕ್ಕ ಹಾಕರಿ... ಮುಂದ ಬಂದ ಬಂದ ಹಂಗ ಖಾತೇಕ್ಕ ತುಂಬೂಣಾಂತಽಽಽ... ಯಾಕರೀ ಶಂಕರೆಪ್ಪ?'' ಎಂದು ಅಪ್ಪಣೆ ಕೊಡಿಸುತ್ತಲೂ ನಾನು ಹಣವನ್ನು ಎಣಿಸಿಕೊಂಡೆ. ಸುಮಾರು ಎರಡೂವರೆ ಸಾವಿರದಷ್ಟಿತ್ತು. ಅಲ್ಲೇ ನನ್ನ ಆಫೀಸ್ ಬ್ಯಾಗ್‌ನಿಂದ ಉಳಿತಾಯ ಖಾತೆಗಳ ವಿವಿಧ ಫಾರ್ಮುಗಳಿಗೆ ಸ್ವಾಮಿಗಳ ಸಹಿ ಪಡೆದು, ಅಲ್ಲೇ ಅದೇ ಕ್ಷಣಕ್ಕೇ ಅವರಿಗೆ ಚಲನದ ರಸೀದಿ, ಪಾಸ್ ಪುಸ್ತಕ ಇತ್ಯಾದಿಗಳನ್ನು ಕೊಟ್ಟುಬಿಟ್ಟೆ.

ಸ್ವಾಮಿಗಳು ಸಂತುಷ್ಟರಾಗಿ ನಗುತ್ತ, ''ಬೇಶಿ ಆಯಿತೆಲ್ಲರೀ... ನಿಮ್ಮ ಬ್ಯಾಗ್‌ನ್ಯಾಗ ಪೂರಾ ಬ್ಯಾಂಕಽ ಹೊತಗೊಂಡು ಅಡ್ಡಾಡೂ ಹಾಂಗ ಕಾಣತೈತಿ'' ಎಂದರು.

ಅದು ಮೊದಲುಗೊಂಡು, ನಾನು ದಿನಾಲೂ ಮಠಕ್ಕೆ ಹೋಗಿ, ಒಂದರ್ಧ ಗಂಟೆ ಹರಟೆ ಅವತ್ತವತ್ತಿನ ತಟ್ಟೆಯ ಕಾಣಿಕೆಯನ್ನು ಮಠದ ಖಾತೆಗೆ ಜಮಾ ಮಾಡತೊಡಗಿದೆ. ನಾಲ್ಕರು ವಾರಗಳಲ್ಲಿ ಮಠದ ಖಾತೆಯ ಉಳಿತಾಯ ಸುಮಾರು ಇಪ್ಪತ್ತೈದು ಸಾವಿರಕ್ಕೆ ಮಿಕ್ಕಿತ್ತು. ಸ್ವಾಮಿಗಳು ''ಅಷ್ಟು ಆಕ್ಕೈತೇನರೀ... ನಾವು ಲಕ್ಷನಽ ಕೊಟ್ಟಿದ್ದಿಲ್ಲ ನೋಡಿರಿ... ನೀವು ಬಂದ ಟೈಮು ಛೊಲೋ ಇರಾಕ ಬೇಕು'' ಎಂದು ಸಂತೋಷಪಟ್ಟರು. ಆದರೆ ಕೆಲವು ದಿನಗಳಾದ ನಂತರ ಮಠದಲ್ಲಿ ಕಾರಕೂನ ಶಂಕರೆಪ್ಪ ಯಾಕೋ ನನ್ನ ಜತೆ ತುಸು ವಿಚಿತ್ರವಾಗಿ ವರ್ತಿಸತೊಡಗಿದ. ನನ್ನ ಬಗ್ಗೆ ನನ್ನನ್ನು ಕಂಡು ಏನೋ ಅಸಡ್ಡೆಯಿಂದ ವರ್ತಿಸತೊಡಗಿದ.

''ಸಾಹೇಬರಽ ನೀವು ದಿನಾ ಯಾಕ ಬರಾಕ ಒದ್ದ್ಯಾಡತೀರಿಽಽ... ವಾರಕ್ಕೊಮ್ಮೆ ನಾನಽ ಬ್ಯಾಂಕಿಗೆ ಬಂದು ರೊಕ್ಕ ತುಂಬತೇನಿ ಬಿಡರಿ'' ಎನ್ನತೊಡಗಿದ. ಆಗೀಗ ''ಸಾಹೇಬರಽ... ನೀವು ದಿನಾ ಮೂರು ನಾಲ್ಕು ಮೈಲು ಸಾಯಕಲ್ ಮ್ಯಾಗ ಬಂದು ಮಠದ ಖಾತೇಕ್ಕ ರೊಕ್ಕಾ ತೊಗೊಂಡು ಹೋಗತೀರಿ... ಏನಿಲ್ಲಂದರೂ ಎರಡು ಮೂರು ಸಾವಿರ ರೂಪಾಯಿ ಇರತಾವುಽಽ ನಡಬರಕ ಎರಡ ಮೈಲು ನಿರ್ಜಣ ರಸ್ತೆ... ನಾಳೆ ಒಂದ ಹೋಗಿ ಒಂದಾದೀತ ನೋಡ್ರಿ...'' ಎನ್ನುತ್ತ ಹೆದರಿಕೆ ಹುಟ್ಟಿಸತೊಡಗಿದ. ಸ್ವಾಮಿಗಳಾದರೂ ನನ್ನ ಬಗ್ಗೆ ಸಾಕಷ್ಟು ಪ್ರೀತಿ ವಿಶ್ವಾಸ ತೋರುತ್ತಿದ್ದರು. ಈಗೀಗ ನನಗೆ ಮಠದಿಂದ ಬರುವಾಗ ಆ 'ನಿರ್ಜಣ' ರಸ್ತೆ ಏನೆಲ್ಲ ಹೆದರಿಕೆ ಹುಟ್ಟಿಕೊಳ್ಳತೊಡಗಿದವು.

ಈ ದಿನಗಳಲ್ಲಿಯೇ ಒಬ್ಬ ನಮ್ಮ ಸಣ್ಣೂರು ಶಾಖೆಯ ಹಿರಿಯ ಗೌರವಾನ್ವಿತ ಗ್ರಾಹಕರೊಬ್ಬರು ಒಂದು ದಿನ ಬ್ಯಾಂಕಿಗೆ ಬಂದಾಗ ತುಸು ತಗ್ಗಿದ ದನಿಯಲ್ಲಿ ''ಸಾಹೇಬರಽಽಽ.... ದಿನಾ ಮಠಕ್ಕೆ ಹೋಗಿ ರೊಕ್ಕಾ ತರಾಕ ಹತ್ತೀರೆಂತ ಕೇಳಿದೆ... ಸ್ವಲ್ಪ ಜ್ವಾಕಿ... ಎಚ್ಚರದಿಂದ ಇರ್ರೀ... ನೀವು ಮಠದ ಕಾರಕೂನ ಶಂಕರೆಪ್ಪನ ಕೆಣಕಾಕ ಹತ್ತೀರಿ... ಅವನಽ ಹೊಟ್ಟೀಮ್ಯಾಲ ಕಾಲಕೊಡಾಕ ಹತ್ತೀರಿ... ದಿನಾ ಕಾಣಿಕೀ ತಾಟು ಒಳಗಽ ತಿಜೋರಿಯೊಳಗ ಇಡೋಽ ಮುಂದ ಹಗಽರಕ ಒಂದೆರಡ ಸಣ್ಣೂ ಧೊಡ್ಡೂ ನೋಟು ಕಿಶೇದಾಗ ಹಾಕ್ಕೋತಿದ್ದ... ಹೀಂಗ ಮಾಡಿ ಮಾಡಿ ಊರಾಗ ಹೊಲಾ ಮನೀ ಮಾಡ್ಯಾನಽಽ... ಈಗ ನೀವು ಅವನ ಹೆಡೀ ಮ್ಯಾಗ ಕಾಲಿಟ್ಟರಿ... ಅದಕ್ಕಽಽ ನಿರ್ಜಣ ರಸ್ತೇದ ಮಾತ ತಗದಾನಽಽ... ಎಚ್ಚರದಿಂದ ಇರ್ರೀ'' ಎಂದು ಹೇಳಿದರು. ಈಗ ನನಗೆ ಶಂಕರೆಪ್ಪ ಹಳಿದ 'ನಿರ್ಜಣ' ರಸ್ತೆಯ ಮಾತಿನರ್ಥ ತಿಳಿದು ಮೈನಡುಗಿತು. ಪುಣ್ಯಕ್ಕೆ ಅಷ್ಟೊತ್ತಿಗೆ ನನ್ನ ಗ್ರಾಮೀಣ ಸೇವೆಯ ಅವಧಿ ಮುಗಿದು ನನ್ನನ್ನು ಬೇರೆಡೆಗೆ ರವಾನಿಸಿದ ವರ್ಗದ ಆಜ್ಞೆ ಬಂದಿತು.

ಈ ಸಲ 'ತಿರುಗೂ ಕುರ್ಚಿ' ಬಹಳ ರಭಸದಿಂದ ತಿರುಗಿತ್ತು. ನಾನು ಕೊಯಿಮತ್ತೂರಿನ ಇನ್‌ಸ್ಪೆಕ್ಷನ್ ವಿಭಾಗದ ಮುಖ್ಯಸ್ಥನಾಗಿ ಕಳಿಸಲ್ಪಟ್ಟಿದ್ದೆ.

◇◇◇

ಸಮಯಾ ಸಮಯ ಉಂಟೆ

✧ ಬೇಲೂರು ರಾಮಮೂರ್ತಿ

ಸಮಯದ ಪರಿಜ್ಞಾನ ನಮ್ಮಲ್ಲಿ ಎಷ್ಟು ಜನಕ್ಕೆ ಇದೆಯೋ ಗೊತ್ತಿಲ್ಲ. ಆದರೆ ಸಮಯದ ನಿರ್ವಹಣೆ ಕಡೆ ಯಾರಾದ್ರೂ ಗಮನ ಕೊಟ್ಟಿದಾರಾ ಅಂದ್ರೆ ಅದೂ ಇಲ್ಲ. ಒಂದು ಮಾತು ಮಾತ್ರ ಎಲ್ಲರೂ ಹೇಳ್ತಾರೆ. ಏನಂದ್ರೆ ಯಾತಕ್ಕೂ ಟೈಮೇ ಇಲ್ಲ ಅಂತ. ದುಡಿಯೋ ಹೆಂಗಸರನ್ನ ಕೇಳಿ. ಮನೆಗೆಲಸ, ಆಫೀಸ್ ಕೆಲಸ, ಸಾಕಾಗಿ ಹೋಗುತ್ತೆ ಯಾವುದಕ್ಕೂ ಟೈಮೇ ಇರಲ್ಲ ಅಂತಾರೆ. ಇನ್ನು ಮನೇಲೇ ಇರೋ ಹೆಂಗಸರನ್ನ ಕೇಳಿ ಅವರು ''ಯಜಮಾನರನ್ನ, ಮಕ್ಕಳನ್ನ, ರೆಡಿಮಾಡಿ ಕಳಿಸೋದೇ ಸಾಕಾಗುತ್ತೆ, ಇನ್ನು ಮನೆಕೆಲಸ, ಪಾತ್ರೆ, ಬಟ್ಟೆ ಅಂತ ವಿಪರೀತ ಕೆಲಸ ಆಗಿ ನನಗೆ ಟೈಮೇ ಇರಲ್ಲ'' ಅಂತಾರೆ. ಕರಕ್ಟು, ಒಪ್ಕೊಳೋಣ, ''ಆದರೆ, ತಾಯಿ, ನೀವು ಟಿವಿ ಮುಂದೆ ಕೂತ್ಕೊಂಡು ಬರೋ ಧಾರಾವಾಹಿಗಳನ್ನೆಲ್ಲ ನೋಡ್ತೀರಲ್ಲ, ಅದಿಕ್ಕೆ ಟೈಮಿರುತ್ತಾ'' ಅಂತ ಕೇಳಿದರೆ, ''ಧಾರಾವಾಹಿ ನೋಡಕ್ಕೆ ಅಂತಾನೇ ಕೂತ್ಕಳಲ್ಲ, ಹೋಗ್ತಾ ಬರ್ತಾ ನೋಡ್ತೀವಿ'' ಅಂತಾರೆ. ಇಲ್ಲಿ ನಾನು ಕೆಲವು ಉದಾಹರಣೆಗಳನ್ನು ಕೊಟ್ಟೆ. ಇವರಿಗೆಲ್ಲ ದಿನಕ್ಕೆ 24 ಗಂಟೆ ಸಾಕಾಗೋದೇ ಇಲ್ಲ ಅಂದ್ರೆ ಏನು ಮಾಡೋದು'' ಆ ಬ್ರಹ್ಮನಿಗೆ ಹೇಳಿ, ಇನ್ಮುಂದೆ ದಿನಕ್ಕೆ 48 ಗಂಟೆ ಮಾಡಪ್ಪಾ ಅನ್ನೋಣವೇ.

ಟೈಮ್ ಆಗ್ಲಿಲ್ಲ ಅನ್ನೋದನ್ನ ಯಾರೂ ಒಪ್ಪೋಕಾಗೋದಿಲ್ಲ. ಹಾಗಂದ್ರೆ ನಮ್ಮ ಪ್ಲಾನಿಂಗ್‌ನಲ್ಲಿ ಏನೋ ಕೊರತೆ ಇದೆ ಅಂತ ಆಯ್ತು, ಮೂಲತಃ ನಾವು ಮಾಡೋ ಕೆಲಸವನ್ನು ನಾವು ಗೌರವಿಸಬೇಕು, ಅದಕ್ಕೆ ಬೆಲೆ ಕೊಡಬೇಕು. ಬೆಳಿಗ್ಗೆ ಒಂಭತ್ತು ಗಂಟೆಯಾದ್ರೆ ತಿಂಡಿಗೆ ತಟ್ಟೆ ಇಟ್ಕೊಂಬಿಡ್ತೀವಿ, ರಾತ್ರಿ ಒಂಭತ್ತು ಗಂಟೆಯಾದ್ರೆ ಊಟಕ್ಕೆ ತಟ್ಟೆ ಇಟ್ಕೊತೀವಿ, ಅದಕ್ಕೆ ಮಾತ್ರ ಟೈಮಿರುತ್ತಾ ಅಂತ ಏನಾದ್ರೂ ಕೇಳಿ. ನಿಮ್ಮ ಮೇಲೇ ರೇಗ್ತಾರೆ, ''ಏನ್ರೀ ಊಟ ತಿಂಡಿ ಮಾಡದೇ ಇರಕ್ಕೆ ಆಗುತ್ತಾ'' ಅಂತ. ಸರಿ ಸ್ವಾಮಿ ಊಟ, ತಿಂಡಿ ಮಾಡ್ದೇ ಯಾರೂ ಇರಕ್ಕಾಗಲ್ಲ. ಆದ್ರೆ ಊಟ, ತಿಂಡಿಗೆ ಅಂತ ಒಂದು ಟೈಮ್ ಕೊಡ್ತೀರಲ್ಲ ಹಾಗೆ ಬೇರೆ ಕೆಲಸಕ್ಕೂ ಯಾಕೆ ಕೊಡಬಾರದು ಅಂತ. ನೋಡಿ ನಮಗೋಸ್ಕರ ಬೇರೆಯವರು ಕಾದರೆ ನಾವೇ ಗ್ರೇಟ್ ಅನ್ನೋ ಕೆಟ್ಟ ನಂಬಿಕೆ ಬಂದುಬಿಟ್ಟಿದೆ. ಅದಕ್ಕೋಸ್ಕರಾನೇ ಎಲ್ಲಿಗಾದ್ರು ಸರಿ ತಡವಾಗೇ ಹೋಗೋದು. ಏನ್ರೀ ಲೇಟು ಅಂದ್ರೆ, ಇವತ್ತು ಏನಾಯ್ತು ಗೊತ್ತಾ ಅಂತ ಕಾರಣಗಳ ಪಟ್ಟಿನೇ ಕೊಡ್ತಾರೆ.

ಸ್ವಾಮೀ ನೀವು ಟೈಮಿಗೆ ಸರಿಯಾಗಿ ಬರಲಿಲ್ಲ ಅನ್ನೋದೆ ಸತ್ಯ ಮಿಕ್ಕಿದ್ದೆಲ್ಲ ಮಿಥ್ಯ ಅದಕ್ಕೆ ಕಾರಣಗಳ ಬಾಲಂಗೋಚಿ ಯಾಕೆ ಬೇಕು.

ನೋಡಿ ಸ್ವಾಮಿ ಎಲ್ರಿಗೂ ಇರೋದೇ 24 ಗಂಟೆ ಈ 24 ಗಂಟೆಗಳನ್ನು ನಾವು ಹೇಗೆ ಡಿವೈಡ್ ಮಾಡಿ ಉಪಯೋಗ ಮಾಡ್ಕೊತೀವಿ ಅದು ಮುಖ್ಯ. ಸಮಯ ಪ್ರಜ್ಞೆ ಅನ್ನೋದನ್ನ ಬೆಳೆಸಿಕೊಂಡ್ರೆ ಇಷ್ಟೊತ್ತ್ಗೇ ಏಳಬೇಕು, ಇಷ್ಟೊತ್ತ್ಗ ಆಫೀಸಿಗೆ ಹೊರಡಬೇಕು. ಇಷ್ಟು ಹೊತ್ಗೆ ಮನೆಗೆ ಬರಬೇಕು ಹೀಗೆ ನಾವು ವೇಳಾಪಟ್ಟಿ ಹಾಕ್ಕೊಬಹುದು. ಈಗ ಯಾರನ್ನಾದರೂ ಕೇಳಿ ಅವರು ಹೇಳೋದು ಒಂದೇ ಮಾತು ಏನ್ ಗೊತ್ತಾ... ನಾನು ಸರಿಯಾದ ಸಮಯಕ್ಕೆ ಮನೆಬಿಟ್ಟೆ ಆದರೆ ಹಾಳಾದ್ದು ದಾರೀಲಿ ಎಂಥಾ ಟ್ರಾಫಿಕ್ಕು ಅಂತೀಯಾ ಅಂತ ಹೇಳಿಬಿಟ್ರೆ ಮುಗಿದುಹೋಯ್ತು ಬೆಂಗಳೂರಿನಂಥ ನಗರಗಳಲ್ಲಿ ವಾಸ ಮಾಡೋದು ದಾರೀಲಿ ಟ್ರಾಫಿಕ್ ಸಮಸ್ಯೆನೂ ಗಮನದಲ್ಲಿಟ್ಟುಕೊಂಡು ಮನೆ ಬಿಡಬೇಕು. ಲೇಟಾಗಿ ಬಂದು ಯಾರು ಬೇಕಾದರೂ ಕಾರಣ ಕೊಡಬಹುದು. ಅದಲ್ಲ ಮುಖ್ಯ ಆದರೆ ಎಷ್ಟೇ ತೊಂದರೆ ಇದ್ರೂ ಸಮಯಕ್ಕೆ ಸರಿಯಾಗಿ ಬರೋದಿದೆಯಲ್ಲ ಅದು ಮುಖ್ಯ.

ಸಮಯದ ನಿರ್ವಹಣೆ ವಿಚಾರದಲ್ಲಿ ಗಂಡ ಹೆಂಡ್ತಿ ನಡುವೆ ಮಾತು ನಡೀತನೇ ಇರುತ್ತೆ. ಸಾಮಾನ್ಯವಾಗಿ ಹೆಂಗಸರು ಎಲ್ಲಿಗೆ ಹೊರಡೋದಾದ್ರೂ ಲೇಟು ಅನ್ನೋ ಮಾತಿದೆ. ಅದರಲ್ಲೂ ಕನ್ನಡಿ ಮುಂದೆ ನಿಂತ್ರೆ ಮುಗಿದೇ ಹೋಯ್ತು ಅಂತ ಗೊಣಗೋ ಗಂಡಸರಿಗೇನೂ ಕಮ್ಮಿ ಇಲ್ಲ. ನೋಡಿ ಇಬ್ಬರು ಸ್ನೇಹಿತರು ಮಾತಾಡ್ಕೊತಾ ಇದ್ದಿದ್ದು ಹೀಗೆ.

ಒಬ್ಬ ಹೇಳಿದ ''ನನ್ನ ಹೆಂಡ್ತಿ ಜೊತೆ ಎಲ್ಲಾದ್ರೂ ಹೋಗೋದು ಅಂದ್ರೆ ಭಾರೀ ಹಿಂಸೆ''

''ಯಾಕಯ್ಯ ಅವರ ಪಾಡಿಗೆ ಅವರು ನಡ್ಕೊಂಡು ಬರ್ತಾರೆ ನೀನೇನು ಅವರನ್ನ ಹೊತ್ಕೊಂಡು ಹೋಗಬೇಕಾ''

''ಅದು ಕರಕ್ಟು ಮನೆಯಿಂದ ಹೊರಟ್ರೆ ತಾನೇ ನಡ್ಕೊಂಡ್ ಬರೋದು. ಆಯ್ತು ಇನ್ನೊಂದೈದ್ ನಿಮಿಷ ಒಂಚೂರು ತಲೆಗೂದಲು ಸರಿಮಾಡ್ಕೊಂಡ್ ಬಿಡ್ತೀನಿ ಅಂತ ಹೇಳ್ತಾನೇ ಇರ್ತಾಳೆ. ನಾವು ಎಲ್ಲಿ ಹೋದ್ರೂ ಲೇಟೇ. ಅದಿಕ್ಕೆ ನಮಗೆ ಲೇಟ್ ಕಪಲ್ಸ್ ಅಂತ ಹೆಸರಿಟ್‌ಬಿಟ್ಟಿದ್ದಾರೆ. ಅದ್ಸರಿ ನೀನು ನಿನ್‌ಹೆಂಡ್ತಿನ ಎಲ್ಲಾ ಕಡೆ ಕರ್ಕೊಂಡ್ ಹೋಗ್ತೀಯಲ್ಲ ಅವರು ಲೇಟ್ ಮಾಡಲ್ವ''

''ಮಾಡ್ದಲೆ ಏನು ಅದಿಕ್ಕೆ ನಾನು ಎಲ್ಲಿ ಹೋಗಬೇಕಾದರೂ ಒಂದು ಒಂದೂವರೆ ಗಂಟೆ ಮುಂಚೆ ಹೇಳಿಬಿಟ್ಟಿದ್ದೀನಿ. ಆಗ ಟೈಮ್ ಸರಿಹೋಗುತ್ತೆ''

''ಅದ್ಸರಿ ಇದು ಅವರಿಗೆ ಗೊತ್ತಾಗಿಬಿಟ್ಟರೆ''

''ಇನ್ನು ಗೊತ್ತಾಗಿಲ್ಲ ಗೊತ್ತಾಗಿಬಿಟ್ರೆ ಅದಕ್ಕೆ ಇನ್ನೊಂದು ದಾರಿ ಕಂಡ್ಕೊಬೇಕು.''

ಕೇಳಿದ್ರಾ ಈ ಸಂಗತೀನ... ಗಂಡ ಹೆಂಡ್ತಿ ಇಬ್ರಲ್ಲಿ ಒಬ್ಬರಿಗಾದರೂ ಟೈಮ್ ಸೆನ್ಸ್ ಇಲ್ಲದೇ ಹೋದ್ರೆ ಹೇಗಾಗುತ್ತೇ ಅಂತ.

ನಾವೆಲ್ಲ ಒಂದು ಮುಖ್ಯವಾದ ವಿಚಾರವನ್ನು ಚೆನ್ನಾಗಿ ನೆನಪಿಟ್ಕೊಬೇಕು. ಏನಂದ್ರೆ ನಾವು ಸಮಯ ನಿರ್ವಹಣೆಯನ್ನು ಸರಿಯಾಗಿ ಮಾಡಿದರೆ ಬರೀ ನಮ್ಮ ಸಮಯ ಅಲ್ಲ, ಬೇರೆಯವರ ಸಮಯವನ್ನೂ ನಾವು ಕಾಪಾಡ್ತೀವಿ. ಅದು ಸರಿತಾನೇ? ಸಮಯ ಅನ್ನೋದು ಎಲ್ರಿಗೂ ಒಂದೇ ನಮ್ಮ ಸಮಯ ವೇಸ್ಟಾಗಬಾರದು, ಬೇರೆಯವರ ಸಮಯ ವೇಸ್ಟಾದರೂ ಪರವಾಗಿಲ್ಲ ಅಂದ್ರೆ ಹೇಗೆ?

ಸಮಯ ನಿರ್ವಹಣೆ ಅಂದಾಗ ಇದು ಬರೀ ಆಫೀಸಿಗೆ ಅಥವಾ ಬರೀ ಮನೆ ವ್ಯವಹಾರಕ್ಕೆ ಸಂಬಂಧಿಸಿದ್ದು ಅಂತಲ್ಲ. ನಾವು ಇರುವ ಎಲ್ಲ ಕಡೆ ಸಮಯವನ್ನು ಗೌರವದಿಂದ ನಡೆಸಿಕೊಳ್ಳಬೇಕು.

ಕೆಲವರನ್ನು ನಾನು ಗಮನಿಸಿದೀನಿ. ಈಗ ವಿಚಾರ ಹೇಳಿದರೆ ಅಂಥವರನ್ನು ನೀವೂ ಗಮನಿಸಿರ್ತೀರ. ಅದು ನಿಮಗೂ ಜ್ಞಾಪಕ ಬರುತ್ತೆ. ಈಗ ಆಫೀಸಿಗೆ ಹತ್ತು ಗಂಟೆಗೆ ಹೊರಡಬೇಕು ಅಂದ್ರೆ, ಒಂಭತ್ತೂವರೆ ಹೊತ್ತಿಗೆ ನಿಮ್ಮ ಊಟವೊ, ತಿಂಡಿಯೋ ಮುಗಿದಿರಬೇಕು, ಅಂದ್ರೆ ನೀವು ಒಂಭತ್ತಕ್ಕೆ ಸ್ನಾನಕ್ಕೆ ಹೋಗಿರಬೇಕು. ಒಂಭತ್ತಕ್ಕೆ ಬಚ್ಚಲುಮನೆ ಖಾಲಿ ಇರಬೇಕು ಅಂದ್ರೆ ನೀವು ಎಂಟೂವರೆ ಎಂಟೂ ಮುಕ್ಕಾಲಿಗೆ ಪೇಪರ್ ಓದಿ ಷೇವ್ ಮುಗಿದಿರಬೇಕು. ಅಂದ್ರೆ ನೀವು ಎಂಟು ಗಂಟೆಗೆ ಜಾಗಿಂಗ್ ಮುಗಿಸಿಕೊಂಡು ಬಂದಿರಬೇಕು... ಏಳು ಗಂಟೆಗೆ ಸರಿಯಾಗಿ ಜಾಗಿಂಗ್‌ಗೆ ಹೋಗಿರಬೇಕು... ಅಂದ್ರೆ ಆರೂವರೆಗೆ ಎದ್ದಿರಬೇಕು ಇದು ವರ್ಕ್‌ಬ್ಯಾಕ್ ಮೆಥೆಡ್ ಅಂತ ಅಂದ್ರೆ ನಮ್ಮ ಗುರಿಯಿಂದ ಹಿಡಿದು ಎಲ್ಲ ಚಟುವಟಿಕೆಗಳನ್ನು ಹಿಂದಕ್ಕೆ ಸರಿಸಿಕೊಂಡು ಹೋದರೆ ಪ್ರಾರಂಭದ ಪಾಯಿಂಟ್‌ಗೆ ಬರ್ತೀವಿ. ಆಗ ನಮಗೆ ಒಂದು ಅಂದಾಜು ದೊರೆಯುತ್ತದೆ. ನಾನಾಗ್ಲೇ ಹೇಳಿದ ಹಾಗೆ ಒಂದೊಂದು ಕಾರ್ಯಚಟುವಟಿಕೆಗೂ ಇಂತಿಷ್ಟು ಅಂತ ಕಾಲಾವಧಿಯನ್ನು ನಾವು ನಿರ್ಣಯ ಮಾಡಿದೀವಿ. ಯಾವುದೇ ಕಾರಣಕ್ಕೂ ಇದು ಮೀರಬಾರದು. ಒಂದು ವೇಳೆ ಒಂದು ಚಟುವಟಿಕೆಯ ಸಮಯ ಮೀರಿದರೆ ಅದನ್ನು ಇನ್ನೊಂದು ಚಟುವಟಿಕೆಯ ಸಮಯದಿಂದ ಹೊಂದಾಣಿಕೆ ಮಾಡಿಕೊಳ್ಳಬೇಕು. ಆಗ ಮಾತ್ರ ನಾವು ಹತ್ತುಗಂಟೆಗೆ ಹೊರಡಲು ಸಾಧ್ಯ. ಸಮಯ ಪ್ರಜ್ಞೆಯ ಅರಿವಿಲ್ಲದೇ ಇದ್ದರೆ, ಏಳೋದು ಲೇಟು, ಜಾಗಿಂಗ್ ಲೇಟು, ಸ್ನಾನ ಲೇಟು ಹೀಗೆ ಕಡೆ ಗಳಿಗೆಯಲ್ಲಿ ಧಾವಂತ ಉಂಟಾಗಿ ಎಲ್ಲರ ಮೇಲೂ ರೇಗುವಂತಾಗುತ್ತದೆ.

ಇನ್ನೊಂದು ಸಣ್ಣ ಉದಾಹರಣೆ ಕೇಳೋಣ

ಸಾಮಾನ್ಯವಾಗಿ ಗೃಹಿಣಿಯರು ಇರುವಂತಹ ಪ್ರದೇಶಗಳಲ್ಲಿ ಅಕ್ಕಪಕ್ಕದ ಮನೆಯವರೊಂದಿಗೆ ಸಾಮರಸ್ಯ ಮಾತುಕತೆ ಇವೆಲ್ಲ ಇರುತ್ತೆ. ಊಟ ಆಯ್ತೆ, ತಿಂಡಿ ಆಯ್ತೆ, ಏನಡಿಗೆ, ಯಾವ ಸೀರೆ ತಗೊಂಡ್ರಿ, ಇತ್ಯಾದಿ ಮಾತುಕತೆಗಳು ಸಾಮಾನ್ಯ.

ಪಕ್ಕದ ಮನೆಗೆ ಹೊಸಾ ಫ್ಯಾಮಿಲಿ ಬಂದಿತ್ತು. ಗಂಡ ಹೆಂಡ್ತಿ ಇಬ್ಬರೇ. ಒಂದು ದಿನ ಈ ಕಡೆ ಪಕ್ಕದ ಮನೆಯ ಸಂಧ್ಯ ಊಟ ಮಾಡಿ ಹೊರಗಡೆ ಬಂದಾಗ ಆ ಕಡೆ ಪಕ್ಕದ ಮನೆಯ ರಾಧ ಹೊರಗಡೆ ನಿಂತಿದ್ರಂತೆ ಅವರ ಸಂಭಾಷಣೆ ಕೇಳಿ ಮೊದಲು ಮಾತಾಡೋಳು ಸಂಧ್ಯ ಆಮೇಲೆ ಮಾತಾಡೋಳು ರಾಧ.

''ಏನು ರಾಧ ಊಟ ಆಯ್ತೆ''

''ಇನ್ನು ಇಲ್ಲ ಸಂಧ್ಯ ನಿಮ್ಮದಾಯ್ತಾ''

''ಈಗತಾನೇ ಆಯ್ತು ಅದ್ಸರಿ ಯಾಕಿನ್ನು ಊಟ ಮಾಡಿಲ್ಲ''

''ನಮ್ಮ ಯಜಮಾನರಿಗೆ ಕಾಯ್ತಿದೀನಿ''

''ಹೌದಾ ಆಗಲೇ ಎರಡು ಗಂಟೆ ಆಯ್ತು''

''ಹೌದು ದಿನಾ ಒಂದೂವರೆಗೆ ಬರೋರು ಇವತ್ತು ಯಾಕೋ ಇನ್ನೂ ಬಂದೇ ಇಲ್ಲ''

''ಅಯ್ಯೋ ಅವರಿಗೋಸ್ಕರ ನೀವ್ಯಾಕೆ ಕಾಯ್ತೀರ. ಈ ಗಂಡಸರು ಹೊರಗಡೆ ಹೋದ್ರೆ ಅವರಿಗೆ ಮನೆ ಕಡೆ ಗಮನನೂ ಇರಲ್ಲ ಹೆಂಡ್ತಿ ಕಾಯ್ತಿರ್ತಾಳೆ ಅನ್ನೋ ಜ್ಞಾನವೂ ಇರೋಲ್ಲ. ನೀವು ನಡೀರಿ ಊಟ ಮಾಡಿ''

''ಇಲ್ಲರೀ ಅವರು ಬಂದ್‌ಬಿಡ್ಲಿ''

''ನೋಡಿ ಗಂಡಸರು ಕೈಗೆ ಗಡಿಯಾರ ಕಟ್ಕೊಂಡಿರ್ತಾರೆ ಆದರೆ ಅದರ ಕಡೆ ನೋಡೋದೇ ಇಲ್ಲ. ನೀವು ಊಟ ಮಾಡಿ ಅವರಿಗೋಸ್ಕರ ನೀವ್ಯಾಕೆ ಹಸ್ಕೊಂಡಿರ್ತೀರ''

''ಪರವಾಗಿಲ್ಲ ಅವರು ಬರ್ಲಿ''

''ಅಯ್ಯೊ ನಿಮಗೆ ಬುದ್ಧಿ ಇಲ್ಲ. ಗಂಡಸರು ಹೊರಗಡೆ ಹೋದಾಗ ಅದೂ ಇದೂ ತಿಂದ್‌ಬಿಡ್ತಾರೆ. ನೀವು ಅವರಿಗೆ ಕಾಯ್ಬೇಡಿ ನಾನು ಬಡಿಸ್ತೀನಿ ಬನ್ನಿ''

''ಬೇಡಾರೀ ಅವರು ಬರ್ಲಿ''

''ಯಾಕೆ ಗಂಡ ಬಂದ್ಮೇಲೆ ಊಟ ಅಂತ ಯಾಕೆ ಹಠ ನಿಮಗೆ''

''ಯಾಕೇಂದ್ರೆ ಅವರು ಬಂದು ಅಡಿಗೆ ಮಾಡಿದ ಮೇಲೆ ತಾನೇ ಊಟ''

ಕೇಳಿದ್ರಾ, ಗಂಡನಿಗೋಸ್ಕರ ರಾಧ ಯಾಕೆ ಕಾಯ್ತಿದ್ದಾರೆ, ಅವಳ ಗಂಡ ಹೆಂಡ್ತಿನ ಯಾಕೆ ಕಾಯಿಸ್ತಿದಾನೆ ಅಂತ. ಎಷ್ಟೋ ಜನ ಹೆಂಡ್ತಿ ತಾನೇ ಕಾಯ್ತಾಳೆ ಬಿಡು ಅನ್ನೋ ಧೋರಣೆ ಇಟ್ಕೊಂಡಿರ್ತಾರೆ. ಗಂಡನಿಗೆ ಕಾಯೋದು ಹಣೆಬರಹ ಕಾಯ್ತಾನೆ ಅನ್ನೋ ಧೋರಣೆ ಹೆಂಡ್ತಿಗೂ, ಹೆಂಡ್ತಿ ಆದೋಳು ಕಾಯಲೇಬೇಕು ಅನ್ನೋ ಧೋರಣೆ ಗಂಡನಿಗೂ ಸರಿಯಲ್ಲ.

ಇನ್ನು ಕೆಲವರಿರ್ತಾರೆ. ನಮ್ಮ ಮನೆಗೆ ಬರಬೇಕಾದರೆ ಎಷ್ಟು ಹೊತ್ತಿಗೆ ಬರ್ಲಿ ಅಂತ ಕೇಳ್ತಾರೆ ಒಳ್ಳೆ ಅಭ್ಯಾಸ. ನಾವು ಹತ್ ಗಂಟೆಗೆ ಬನ್ನಿ ಅಂತೀವಿ. ಅವರು ಹತ್ ಗಂಟೆಗೆ ಬರ್ತಾರೆ ಅಂತ ನಾವು ಬೇರೆ ಕೆಲಸಗಳನ್ನು ಮುಂದೂಡಿರ್ತೀವಿ. ತುಂಬಾ ಆಪ್ತರಾದರೆ ಕಾಫಿ ತಿಂಡಿಗೂ ಏರ್ಪಾಡು ಮಾಡಿರ್ತೀವಿ. ಆದ್ರೆ ಆ ಭೂಪತಿ ಹತ್ತು ಗಂಟೆಗೆ ಬರೋದೇ ಇಲ್ಲ. ಹತ್ತೂವರೆ ಆಯ್ತು ಹನ್ನೊಂದಾಯ್ತು ಹನ್ನೊಂದೂವರೆ ಆಯ್ತು. ಅವರಿಗೋಸ್ಕರ ಕಾದು ನಮ್ಮ ಬೇರೆ ಕೆಲಸಗಳೂ ಹಾಳು. ಲೇಟಾಗುತ್ತೆ ಅಂತ ಫೋನ್ ಮಾಡಬಾರ್ದಾ ಅಂತ ಬೈಕೊಳೋ ಸಮಯಕ್ಕೆ ಸರಿಯಾಗಿ ಹಾಜರು. ಅದೇನಾಯ್ತು ಗೊತ್ತಾ ನಿಮ್ಮನೆಗೇಂತನೇ ಹೊರಟೆ ಅಷ್ಟರಲ್ಲಿ ಅಂತ ಏನೋ ಕಾರಣ ಹೇಳ್ತಾರೆ. ಅದು ಸಕಾರಣವೇ ಇರಬಹುದು

ಇಲ್ಲ ಸುಳ್ಳೆ ಇರಬಹುದು ಅದು ನಿಮಗೆ ಬೇಡ. ಆದರೆ ಲೇಟಾಗುತ್ತೆ ಅಂತ ಗೊತ್ತಾದೋರು ಆಗಲೇ ಫೋನ್ ಮಾಡಿ ಮತ್ತೆ ಹೇಳಬಹುದಲ್ಲ ಹತ್ತುಗಂಟೆಗೆ ಆಗಲ್ಲ ಹನ್ನೊಂದು ಗಂಟೆಗೆ ಬರ್ತಿನಿ ಅಂತ. ಇಂತಹವರು ಖಂಡಿತಾ ಸಮಯಕ್ಕೆ ಗೌರವ ಕೊಡುವಂತಹವರಲ್ಲ. ಇನ್ನು ಕೆಲವರು ಇರ್ತಾರೆ ಬರ್ತೀನಿ ಅಂತ ಹೇಳಿದ್ದು ಮರೆತೇಬಿಟ್ಟು ನೀವೇ ಜ್ಞಾಪಿಸಿದಾಗಲೂ ಹೌದಾ ಅಯ್ಯೋ ನೋಡು ಮರೆತೇಬಿಟ್ಟಿದ್ದೆ ಅಂದುಬಿಡ್ತಾರೆ, ಅದೂ ಕೇವಲವಾಗಿ.

ಇದು ಒಂದು ರೀತಿಯಾದರೆ ಇನ್ನೊಂದು ರೀತಿ ಕೇಳಿ. ನಿಮಗೆ ಯಾರಿಂದಲೋ ಏನೋ ಕೆಲಸ ಆಗಬೇಕಿರುತ್ತೆ ಸರಿ ಎಷ್ಟೊತ್ತಿಗೆ ಬರ್ಲಿ ಅಂತ ಕೇಳ್ತೀರ ಅದಕ್ಕೆ ಅವರು ಬನ್ನಿ ಮಧ್ಯಾನ್ಹ 3 ಗಂಟೆಗೆ ಬನ್ನಿ ಆಫೀಸಲ್ಲೇ ಇರ್ತಿನಿ ಅಂತಾರೆ. ನೀವು ಸಮಯ ನಿರ್ವಾಹಕರು ತಾನೇ ಸರಿಯಾಗಿ ಮೂರು ಗಂಟೆಗೆ ಹೋಗ್ತೀರ. ಆದರೆ ಆ ಸಮಯಕ್ಕೆ ಅವರು ಬಿಸಿ ಯಾರನ್ನೂ ಮಾತಾಡಿಸೋ ಸ್ಥಿತೀಲಿರಲ್ಲ. ಆದರೂ ನೀವು ಬಂದಿರುವ ವಿಚಾರ ತಿಳಿಸಿದರೆ ಆಯ್ತು ಕೂತಿರಕ್ಕೆ ಹೇಳು ಅಂತಾರೆ. ಅದು ಗಂಟೆಗಟ್ಲೆ ಆಗಬಹುದು. ನೀವು ಅಲ್ಲಿ ಕಾಯುವ ಹಾಗೂ ಇಲ್ಲ, ಎದ್ದು ಬರುವ ಹಾಗೂ ಇಲ್ಲ ಅಂಥಾ ಪರಿಸ್ಥಿತಿಗೆ ತಂದಿಟ್‌ಬಿಡ್ತಾರೆ. ಮೂರು ಗಂಟೆಗೆ ಅವರು ನಿಮ್ಮನ್ನು ಯಾಕೆ ಬರಹೇಳಬೇಕು... ಅವರಿಗೆ ಮೊದಲೇ ಅವರ ಪ್ರೋಗ್ರಾಂ ಗೊತ್ತಿರಲಿಲ್ವೆ. ಅಥವಾ ನೀವು ಸರಿಯಾಗಿ ಮೂರು ಗಂಟೆಗೆ ಬರೋರಲ್ಲ ಅಂತ ನಿಮಗೆ ಬನ್ನಿ ಅಂತ ಹೇಳಿರಬಹುದೇ ಆದರೆ ನಿಮಗೊಂದು ಸಮಯ ಅಂತ ಕೊಟ್ಟಮೇಲೆ ಹತ್ತು ನಿಮಿಷವಲ್ಲದಿದ್ದರೆ ಐದೇ ಐದು ನಿಮಿಷವನ್ನಾದರೂ ಕೊಡಬೇಡವೇ ಅಥವಾ ಇದು ಅವನ ಕೆಲಸ ಆದ್ರಿಂದ ಎಷ್ಟು ಕಾಯಿಸಿದರೂ ಕಾಯ್ತಾನೆ, ಎಷ್ಟು ಸಾರಿ ಬಾ ಅಂದರೂ ಬರ್ತಾನೆ ಅನ್ನೋ ಧೋರಣೆ ಇದ್ದರೂ ಇದ್ದೀತು. ನಮ್ಮ ವೇಳಾಪಟ್ಟಿ ನೋಡದೇ ಎಲ್ಲರಿಗೂ ಸಮಯ ಕೊಡುವುದೂ ತಪ್ಪು.

ಯಾರನ್ನೇ ಒಲಿಸಲಾಗಲೀ, ಒಲ್ಲೈಸಲಾಗಲೀ ನಾವು ಸಮಯ ನಿರ್ಣಯ ಮಾಡಬಾರದು. ಪ್ರತಿಯೊಂದು ಕೆಲಸಕ್ಕೂ ತನ್ನದೇ ಆದ ಸಮಯ ಇರುತ್ತದೆ. ಒಂದು ಕಿಲೋಮೀಟರ್ ಕ್ರಮಿಸಲು ಹತ್ತು ನಿಮಿಷ ಬೇಕು ಅಂದ್ರೆ ಬೇಕೇಬೇಕು. ಆದರೆ ಅದು ಒಂಭತ್ತು ನಿಮಿಷ ಆಗಬಹುದು ಕೆಲವು ವೇಳೆ ಎಂಟು ನಿಮಿಷ ಆಗಬಹುದು. ಆದರೆ ಒಂದು ನಿಮಿಷವಂತೂ ಆಗೋದಿಲ್ಲ. ಸಮಯ ನಿರ್ವಹಣೆಯಲ್ಲೂ ವೃತ್ತಿಪರತೆ ಬೇಕು. ಇಲ್ಲವಾದಲ್ಲಿ ಅಗತ್ಯಕ್ಕಿಂತ ಹೆಚ್ಚು ಸಮಯ ತಗೋತೀವಿ ಅಥವಾ ಅಗತ್ಯಕ್ಕಿಂತ ಕಡಿಮೆ ಸಮಯ ತಗೊಂಡು ಕೆಲಸ ಕೆಡಿಸಿರ್ತೀವಿ. ವೃತ್ತಿ ಪರತೆ ಅಂದರೆ ಅಧ್ಯಯನ ಪೂರ್ವಕ ವೇಳಾಪಟ್ಟಿ ತಯಾರಿಸಿಟ್ಟುಕೊಳ್ಳೋದು ಮತ್ತು ಅದರಂತೆ ನಡೆಯೋದು. ಸಮಯ ಪ್ರಜ್ಞೆ ನಮಗೊಬ್ಬರಿಗಿದ್ದರೆ ಸಾಲದು. ನಮ್ಮ ಜೊತೆ ಇರುವ ಎಲ್ಲರಿಗೂ ಅದರ ಅವಶ್ಯಕತೆ ಇರುತ್ತೆ ಮತ್ತು ಅವರೂ ಹಾಗೆ ನಡೆದುಕೊಳ್ಳಬೇಕು. ಇಲ್ಲವಾದಲ್ಲಿ ನೀವೊಬ್ಬರೇ ಸಮಯ ಸಮಯ ಅಂತ ತಲೆ ಚಚ್ಕೊತಾ ಇರ್ತೀರ ಮಿಕ್ಕವರು ಆರಾಮವಾಗಿರ್ತಾರೆ.

ಸಮಯ ನಿರ್ವಹಣೆ ವಿಚಾರದಲ್ಲಿ ಗಂಡಸರನ್ನು ಹೆಂಗಸರು ದೂರೋದು, ಹೆಂಗಸರನ್ನು ಗಂಡಸರು ದೂರೋದು ಇದ್ದೇ ಇದೆ. ಆದರೆ ಸಮಯ ನಿರ್ವಹಣೆ

ಅನ್ನೋದು ಬರೀ ಸಂಸಾರಕ್ಕೆ ಸೀಮಿತವೇ! ಖಂಡಿತಾ ಇಲ್ಲ. ಒಂದು ದೇಶ, ಒಂದು ರಾಜ್ಯ, ಒಂದು ಸಂಸ್ಥೆ ನಡೀತಾ ಇರೋದೇ ಪರಿಪಕ್ವವಾದ ಸಮಯ ನಿರ್ವಹಣೆಯಿಂದ ತಾನೇ. ಹಾಗಾದರೆ ಅಲ್ಲಿ ಯಾವುದಕ್ಕೂ ತಡ ಇಲ್ವೆ ಅಂತ ಕೇಳಿದರೆ ಇಲ್ಲ ಅಂತ ಉತ್ತರ ಹೇಳಲಾಗದು. ಆದರೆ ಸಮಯ ನಿರ್ವಹಣೆಯಲ್ಲಿ ವೃತ್ತಿಪರತೆ ಇದೆ ಒಬ್ಬ ಅಧಿಕಾರಿ ಅಥವಾ ಮಂತ್ರಿ ದಿನದಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಒಪ್ಪಿಕೊಂಡರೆ ಎಲ್ಲಾದರೂ ಒಂದೆರಡು ಕಡೆ ತಡ ಆಗುತ್ತೆ. ಆಗ ಅವರು ಹೇಳೋದು ಏನಂದ್ರೆ ನಾವು ಜನಸೇವಕರು, ಜನರಿಂದ ಹಾಗೆ ಬಲವಂತವಾಗಿ ಬಿಡಿಸಿಕೊಂಡು ಬರೋಕೆ ಆಗಲ್ಲ ಅಂತ. ಅದು ನಿಜ. ಅದು ವಾಸ್ತವ ಹೌದೋ ಅಲ್ಲವೋ ಅನ್ನೋದು ಬೇರೆ ಮಾತು, ನಾಯಕರು ಬರ್ತಾರೆ ಅಂತ ಜನಪ್ರತಿನಿಧಿಗಳು, ಕಾರ್ಯಕರ್ತರು ಕಾಯೋದನ್ನ ನಾವೇ ಕಂಡಿದ್ದೇವಲ್ಲ.

ಸಮಯದನ್ವಯ ಕೆಲಸ ಆಗಲಿಲ್ಲ ಅಂದ್ರೆ ಖರ್ಚು ಹೆಚ್ಚಾದಂತೆ ಲೆಕ್ಕ. ಈಗ ಉದಾಹರಣೆ ಒಂದು ಮೇಲ್‌ಸೇತುವೆ ಕಟ್ತಿದಾರೆ ಅಂದ್ಕೊಳಿ. ಅದಕ್ಕೊಂದು ವೇಳಾಪಟ್ಟಿ ಇರುತ್ತೆ ಆ ವೇಳಾಪಟ್ಟಿ ಅನ್ವಯ ಮೇಲ್‌ಸೇತುವೆ ಕಾರ್ಯ ಮುಗಿದರೆ ಅಂದಾಜು ಹಾಕಿರುವಷ್ಟೇ ವೆಚ್ಚವಾಗುತ್ತದೆ. ಇಲ್ಲದಿದ್ದರೆ ಕಾಲ ಮುಂದು ಮುಂದಕ್ಕೆ ಹೋದ ಹಾಗೆ ವೆಚ್ಚವೂ ಹೆಚ್ಚಾಗುತ್ತಲೇ ಹೋಗುತ್ತದೆ. ಈ ವೆಚ್ಚದ ಹೊರೆಯನ್ನು ಸಾಮಾನ್ಯ ಪ್ರಜೆಗಳಾದ ನಾವೇ ಭರಿಸಬೇಕು. ಇದು ನಾವು ಮನೆ ಕಟ್ಟುವ ಸಂದರ್ಭಕ್ಕೂ ಅನ್ವಯವಾಗುತ್ತದೆ. ಇಂಥಾ ವಿಷಯಗಳನ್ನು ಎಲ್ಲರೂ ಅರ್ಥ ಮಾಡ್ಕೊಬೇಕು ಮತ್ತು ಕ್ರಿಯೆಗೆ ಸರಿಯಾದ ಒತ್ತು ಕೊಡಬೇಕು.

ಆದರೆ ನಾವು ಒಬ್ಬೊಬ್ಬರೂ ಸಮಯ ನಿರ್ವಹಣೆ ಬಗ್ಗೆ ಗಮನ ಕೊಟ್ಟರೆ ಖಂಡಿತಾ ಪರಿಸ್ಥಿತಿ ಸುಧಾರಿಸುತ್ತದೆ. ಆದರೆ ನಾವು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದರಲ್ಲಿ ನಿಸ್ಸೀಮರು. ಅವನೇ ತಡವಾಗಿ ಬರ್ತಾನೆ, ನಾನ್ಯಾಕೆ ಬೇಗ ಹೋಗಬೇಕು ಅನ್ನುವ ಭಾವನೆ ಬಹಳ ಜನರಿಗಿದೆ. ಆದರೆ ನಾವೂ ಸರಿಯಾದ ಸಮಯಕ್ಕೆ ಹೋಗಿ ಇತರರೂ ಸರಿಯಾದ ಸಮಯಕ್ಕೆ ಬರುವಂತೆ ಪ್ರಚೋದಿಸುವ ಕೆಲಸ ಮಾಡಬೇಕು ಅನ್ನುವುದನ್ನು ಮರೆತಿರ್ತಾರೆ, ಯಾರೋ ನಮ್ಮ ಮೇಲೆ ಸವಾರಿ ಮಾಡ್ತಿದಾರೆ ಅಂದಾಗ ಮಾತ್ರ ನಾವು ಸಮಯಕ್ಕೆ ಸರಿಯಾಗಿ ಕೆಲಸ ಮಾಡೋದು. ಇದನ್ನು ಬಿಟ್ಟು ನಮಗೆ ನಾವೇ ಕಟ್ಟುಪಾಡು ಹಾಕ್ಕೊಬಹುದಲ್ವೆ.

ಇನ್ನೊಂದು ವರ್ಗದ ಜನರಿದ್ದಾರೆ. ಯಾಕೆಂದರೆ ಅವರಿಗೆ ಲಾಭವಾಗುವುದಿದ್ದರೆ ಮಾತ್ರ ಸಮಯಕ್ಕೆ ಸರಿಯಾಗಿ ಬರೋದು, ಇಲ್ಲದಿದ್ದರೆ ಇಲ್ಲ. ಎಲ್ಲ ವಿಚಾರದಲ್ಲೂ ಸಮಯದ ಪರಿಜ್ಞಾನ ಇರಬೇಕು ಅದು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಸಮಯ ನಿರ್ವಹಣೆಯ ಬಗೆಗಿನ ಎಚ್ಚರ ವಿದ್ಯಾರ್ಥಿಯಾದ ಸಮಯದಿಂದಲೇ ಬಂದರೆ ಮುಂದೆ ಅವರ ಭವಿಷ್ಯ ರೂಪಿಸಿಕೊಳ್ಳಲು ಇದು ಸಹಾಯ ಮಾಡುತ್ತದೆ. ಒಂದೊಂದು ನಿಮಿಷವೂ ಅಮೂಲ್ಯ ಅಂತ ಅರಿತು ಕಾರ್ಯಪ್ರವೃತ್ತರಾದರೆ ಯಶಸ್ಸು ಖಂಡಿತ. 'ಟೈಮೇ ಇಲ್ಲ' ಅನ್ನುವ ರಾಗವನ್ನು ಯಾರೂ ಹಾಡಬೇಕಿಲ್ಲ.

✧✧✧

...ಕ್ಕೆ/ಇಗೆ ಏನಾಗಿದೆ

✧ ಅ.ರಾ.ಸೇ.

ನಮ್ಮ ಸಾಹಿತ್ಯ ಲೋಕಕ್ಕೆ ಏನಾಗಿದೆ ಎಂಬ ಪ್ರಶ್ನೆಯನ್ನು ಗೆಳೆಯ ದಿವಾಕರ ಅವರು ಕೇಳಿದಾಗಿನಿಂದ ಇದುವರೆಗೂ ಚರ್ಚೆ ಅವ್ಯಾಹತವಾಗಿ ಮುಂದುವರಿಯುತ್ತಿದೆ. ಹೀಗಾದರೂ ಸಾಹಿತ್ಯ ಚರ್ಚೆಯಾಗುತ್ತಿದೆಯಲ್ಲಾ ಎಂದು ಸಂತೋಷ ಪಡಬೇಕು. ಚರ್ಚೆಯ ಮಜಲಿನಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ನಾವು ಯಾರು ನಮಗೇನು (ರನ್ನ ಕೇಳಿದಂತೆ) 'ಎಂಟೈರ್ದೆ' ಇದೆಯೇ? ಕೆಲವು ದಶಕಗಳ ಹಿಂದೆ ನಾವು ಕನ್ನಡ ಕವಿಪುಂಗವರನ್ನು ಕುರಿತು ಬರೆದ ಲೇಖನಗಳನ್ನು ಇಂದು ಬರೆದಿದ್ದರೆ ಅದು ಅಚ್ಚಾಗುತ್ತಿದ್ದವೇ? ಜನ ನಮ್ಮನ್ನು ಹರಿದು ಮುಕ್ಕದೆ ಸುಮ್ಮನೆ ಬಿಡುತ್ತಿದ್ದರೇ?

ಈ ಪ್ರಶ್ನೆಗೆ ಮುಖ್ಯವಾಗಿ ಕಾರಣೀಭೂತ ಹೇಳಿಕೆಯನ್ನಿತ್ತವರೂ ನಮ್ಮ ಪ್ರಿಯ ಮಿತ್ರರೇ! ಅವರು ಏನು ಹೇಳಿದರೋ, ಯಾಕೆ ಹೇಳಿದರೋ? ಅವರ ತಲೆಯನ್ನು ಕೊರೆದ ಹುಳವಾವುದೋ ಯಾರು ಬಲ್ಲರು?

ಮೊದಲು ನಮ್ಮನ್ನು ಕುರಿತು ಹೇಳಿಕೊಳ್ಳಬೇಕು. ನಾವು ಕಳೆದ ಹಲವು ವರ್ಷಗಳಿಂದ ಪತ್ರಿಕೆಗಳಿಗೆ ಬರೆದಿಲ್ಲ. ಬರೆದಿದ್ದರೂ ಅಚ್ಚಾಗುತ್ತಿರಲಿಲ್ಲ ಎಂಬ ಗುಮಾನಿ ನಮಗಿದೆ. ಇಂದಿನ ಇಂಡಿಯದ ಸಂದರ್ಭದಲ್ಲಿ ನನ್ನ ಹಿರಿಯರೊಬ್ಬರು (ಅವರ ಆತ್ಮ ಶಾಂತಿಯಿಂದಿದೆ) ಕೊಟ್ಟ ಒಂದು ಸಲಹೆಯನ್ನು ಇಲ್ಲಿ ಹೇಳುವುದು ಪ್ರಸ್ತುತ, ಏನೇನು ಪ್ರಸ್ತುತ ಎಂದು ಹೇಳಲು ನಾವು ಹೋಗುವುದಿಲ್ಲ. ಅವರು ಹೇಳಿದರು 'ನೀನು ಏನು ಬರೆಯುತ್ತಿರುವೆಯೋ ಅದು ನನಗೆ ಆಶಾದೀಪ, ಆದರೆ ಇದರಿಂದ ನಿನಗೆ ಏನೂ ಲಾಭವಿಲ್ಲ. ಮಾರಾಟವಾಗುವ ಸರಕನ್ನು ಬರೆದು ಒಂದಿಷ್ಟು ದುಡ್ಡು ಮಾಡಿಕೋ' ನನ್ನ ಉತ್ತರ ನನ್ನ ಮಟ್ಟಿಗೆ ಅಪ್ರಸ್ತುತ.

ನಾನು ಹೇಳಿದೆ: ನೀವು ಹೇಳಿದ ಹಾಗೆ ಬರೆಯಲು ಹೊರಟರೆ, ನಿಮಗೆ ನಾನು ಆಶಾದೀಪವಾದೇನೇ? ಹೋಗಲಿ, ನನ್ನ ಮನಸ್ಸು ಒಪ್ಪುತ್ತದೆಯೇ? ಮೇಲೇ ಅಂತಹ ಗುರುತರ ಅಪವಾದವಿರಬೇಕಾದರೆ, ನಾವು ಇನೊಬ್ಬರ ಬಗ್ಗೆ ಏನು ಹೇಳಲು ಧೈರ್ಯ ಬಂದೀತು. ಇರಲಿ.

ಈ ಚತುರ್ಥೀ ವಿಭಕ್ತಿ ಪ್ರತ್ಯಯದ ಪ್ರಶ್ನೆಗೆ ಬರೋಣ. ಚತುರ್ಥೀ ಪ್ರತ್ಯಯಗಳು ಮೂರು; ಇಗೆ,ಗೆ,ಕ್ಕೆ.

ನಮಗೆ ಏನಾಗಿದೆ? ಪ್ರಪಂಚಕ್ಕೆ ಏನಾಗಿದೆ? ಮಳೆಗೆ ಏನಾಗಿದೆ? ಸರಕಾರಕ್ಕೆ ಏನಾಗಿದೆ? ಮೆಣಸಿನಕಾಯಿಗೆ ಏನಾಗಿದೆ? ದೋಸೆಗೆ ಏನಾಗಿದೆ? ಕಾಫಿಗೆ ಏನಾಗಿದೆ? ಸುಗಮ/ಸಿನಿಮಾ/ಶಾಸ್ತ್ರೀಯ ಸಂಗೀತಗಳಿಗೆ ಏನಾಗಿದೆ? ಹೀಗೆ ಯಾವುದನ್ನು ಕುರಿತಾದರೂ ಈ ಪ್ರಶ್ನೆಯನ್ನು ಕೇಳಬಹುದು. ಕೆಟ್ಟು, ಗಬ್ಬೆಟ್ಟು ಹೋಗಿದೆ ಎಂದರೆ ಅದು ಅದು hasty generalisation ಆಗುತ್ತದೆ. ಅಲ್ಲದೆ ಹಾಗೆ ಹೇಳುವುದು ಮಹಾಪರಾಧ. ನಮ್ಮ ಸಾಹಿತ್ಯ ಲೋಕಕ್ಕೆ ಏನಾಗಿಲ್ಲ ಎಂದರೆ ಅದು ಉತ್ತರವಲ್ಲ.

ಈಗ ಲೇಖನದ ಮುಖ್ಯ ವಾಹಿನಿಗೆ ಬರೋಣ. ನೆನಪಿಡಿ, ಇದುವರೆಗೆ ಬರೆದುದೂ ಮುಖ್ಯ ವಾಹಿನಿಯೇ. ಅದನ್ನು ಕೆಲವು ಮಗ್ಗುಲುಗಳಿಂದ ಅಲ್ಲಿ ನೋಡಲಾಗಿದೆ ಅಷ್ಟೇ.

ನಾವು ಇತ್ತೀಚೆಗೆ ಒಂದು ಧರ್ಮ ಸಂಕಟಕ್ಕೆ ಒಳಗಾದೆವು. ಮುರಾರಿಯು ಒಂದು ದೂರವಾಣಿ ಕರೆಯನ್ನು ಕೊಟ್ಟು 'ಅರ್ಜಂಟ್ ಮೆ ಅರ್ಜೆಂಟ್ ಬರ್ಲೇ ಬೇಕಲೇ ನೀನು. ರಾಯರೇ, ಕೇಳಿಸ್ತೇ? ತಿಳಿತೇನೋ?'

ಇದರಿಂದ ನಾನು ಚಿಂತಾಕ್ರಾಂತನಾದೆ.

ಮುರಾರಿಯು ಲೋಕಪ್ರಸಿದ್ಧ, ಮುಗಿಲುಹಳ್ಳಿಯ ನೋಬೆಲ್ ಪ್ರೈಸ್ ಎಂದೇ ಪ್ರಸಿದ್ಧವಾಗಿರುವ, ಮುಗಿಲುಹಳ್ಳಿ ಅಥೇನಿಯಂ ನೀಡುವ 'ಲಾರೆಲ್ ಪ್ರಶಸ್ತಿ' ಅವನಿಗೆ ಎರಡು ಬಾರಿ ಸಿಕ್ಕಿದೆ. ಕಳೆದ ಹದಿನೈದು ವರ್ಷಗಳಲ್ಲಿ ಅದನ್ನು ನೀಡಿರುವುದು ಎರಡೇ ಬಾರಿ. ಅಥೇನಿಯಂ ಅಧ್ಯಕ್ಷ ದುಬ್ಬೀರ್ಗ ಉರ್ಫ್ ವೀರಣ್ಣ ಎರಡು ಬಾರಿಯೂ ಒಪ್ಪಲಿಲ್ಲ. ಆದರೆ ನನ್ನ ಬಲವಂತದಿಂದ ಒಪ್ಪಿದ. ಸಂಬಂಧಿಸಿದ ಚೆಕ್ ಅನ್ನು ಅವನಿಗೆ ಎರಡನೇ ಬಾರಿ ಕಳಿಸಿರುವುದು ಅನುಮಾನ. ಅಥೇನಿಯಂ ಪರಮಾಧ್ಯಕ್ಷರು ಅಣ್ಣ, ಅವರು ವೀರಣ್ಣನನ್ನು ಕೈಬಿಡುವುದಿಲ್ಲ, ವೀರಣ್ಣ ಇನ್ನು ಈ ಕೆಟ್ಟ ಕಾಲದಲ್ಲೂ ನನ್ನ ಮಾತನ್ನು ಮೀರುವುದಿಲ್ಲ. ಹಾಕಿದ ಗೆರೆ ದಾಟುವುದಿಲ್ಲ. ಅವನು ಹಗಲೆಲ್ಲಾ ನನಗೆ ಹೀಗೆ ಹೇಳುತ್ತಾನೆ ''ರಾಯಲೇ ಈ ಊರ್ನಗೆ ನಿನ್ನ ಬಿಟ್ಟು ಸರ್‍ಯಾಗಿ ಬರೆಯಕ್ಕೆ ಇನ್ಯಾರಿಗೂ ಬರದಿಲ್ಲ. ನೀನೇ ತಗೋ ಲಾರೆಲ್'' ನನ್ನ ಸ್ಟ್ಯಾಂಡರ್ಡ್ ಉತ್ತರ.

''ನೋಡಲೇ ಈರ್ಗ, ಈ ಜಗತ್ನಗೆ ನಿನ್ನಂಥ ಮಿತ್ರರು ನಂಗೆ ಒಂದು ಎಂಟ್ಹತ್ತು ಜನ ಇದ್ದಾರು. ನಂಗೆ ಪ್ರೈಜ್ ಬಂದ್ರೆ ಅವರು ಮುಖ ಎತ್ತಿ ನೋಡಲ್ಲ ನನ್ನ.''

ಮುರಾರಿ ಹಾಗಲ್ಲ. ಅವನು ಮುಗಿಲುಹಳ್ಳಿ ಸಾಲ್ಮನ್ ರಷ್ದಿ, ಡಿ.ಎಚ್. ಲಾರೆನ್ಸ್, ಖುಷ್ವಂತ್ ಸಿಂಗ್. ತಿಂಗಳಲ್ಲಿ ಹದಿನೈದು ದಿನ ಯಾವುದಾದರೂ ಮೀಟಿಂಗಿಗೆ ಕರೆಯುತ್ತಾರೆ. ಅವನೊಂದು ಸ್ಟ್ಯಾಂಡರ್ಡ್ ಹೇಳಿಕೆ ಇಟ್ಟಿದ್ದಾನೆ.

ಗಾಂಧೀ ಜಯಂತಿ: ಗಾಂಧೀಜಿ ಇಂದಿಗೂ ಪ್ರಸ್ತುತ, ಸಂಕಣ್ಣನ ಜನ್ಮಶತಮಾನೋತ್ಸವ; 'ಬಿಂಕದ ಸಂಕಣ್ಣನವರ ಉಜ್ವಲ ಸಂದೇಶಗಳು ಇಂದಿಗೂ ಪ್ರಸ್ತುತ.'

ಮಾಬು ಸ್ಮರಣ ವೇದಿಕೆ: ಜಗತಿಗೆ ಮಾಬು ನೀಡಿರುವ ಮೇಲ್ಪಂಕ್ತಿ, ಸಂದೇಶಗಳು ಇಂದೂ ಪ್ರಸ್ತುತ.

ಆದರೆ ಕಳೆದ ಆರು ತಿಂಗಳಿಂದ ಮುರಾರಿಯು ಯಾರ ಸಂದೇಶಗಳೂ ಪ್ರಸ್ತುತ ಎಂದು ಹೇಳಿಲ್ಲ. ಮುಗಿಲು ಹಳ್ಳಿಯ ಸಿಟಿಕೇಬಲ್ ಚಾನಲ್‌ನಲ್ಲಿ ಅವನ ಮುಖ ಕಾಣಿಸಿಲ್ಲ. ಆದರೆ, ಇತ್ತೀಚೆಗೆ ಮುಗಿಲುಹಳ್ಳಿ ಸಿಟಿ ಕೇಬಲ್ ಒಂದು ಆಘಾತಕರ ಸುದ್ದಿಯನ್ನು ಬಿತ್ತರಿಸಿತು.

'ಮುಂದಿನವಾರ ನಡೆಯುವ ಸ್ಥಳೀಯ ಮಾನಸಿಕ ಅಸ್ವಸ್ಥರ ಮಹೋತ್ಸವಕ್ಕೆ ಲೋಕ ವಿಖ್ಯಾತ ಸಾಹಿತಿ ಮುರಾರಿಯವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಅವರನ್ನು ಸನ್ಮಾನಿಸಿ ನಿಧಿಯನ್ನರ್ಪಿಸಲು ಭರದ ಸಿದ್ಧತೆ ನಡೆದಿದೆ.

ಇದನ್ನು ಕೇಳಿದ ಸ್ಥಳೀಯ ವಿದ್ಯಾವಂತರೆಲ್ಲಾ ಮಾಡಿದ ಉದ್ಗಾರ 'ಇದು ನ್ಯಾಯವೇ?'

ಸ್ಥಳೀಯ ಅಗ್ರ ಪತ್ರಿಕೆ 'ಕರ್ಣಪಿಶಾಚಿ'ಯ ಗುರ್ರಿ, ಇದರ ವಿಷಯವಾಗಿ ಮುಖಪುಟದಲ್ಲಿ ಸಂಪಾದಕೀಯ ಬರೆದ.

''ಯಾರೋ (ಬೆರಕಿಗಳೇ ಇರಬೇಕು), ಮುರಾರಿಯನ್ನು ಮಾನಸಿಕ ಅಸ್ವಸ್ಥರ ಮಹೋತ್ಸವಕ್ಕೆ ಅಧ್ಯಕ್ಷನನ್ನಾಗಿ ಮಾಡಿರುವುದು ಕಳವಳಕಾರಿ. ಅನುಮಾನ ಪಡಲು ಎಲ್ಲರಿಗೂ ಹಕ್ಕಿದೆ. ಆದರೆ ಅದು ವೈಯಕ್ತಿಕವಾಗಿರಬೇಕು. ನಮ್ಮ ಶಾಸ್ತ್ರಿ ಹೇಳುವ ಹಾಗೆ ಅದು 'ಸಬ್ಜೆಕ್ಟಿವ್'.

ಒಂದು ಪಕ್ಷ ಮುರಾರಿ ಅಧ್ಯಕ್ಷನಾದರೂ ಅವನು 'ಮಾನಸಿಕ ಅಸ್ವಸ್ಥತೆ ಇಂದೂ (ಹಿಂದೆಂದಿಗಿಂತ ಹೆಚ್ಚು) ಪ್ರಸ್ತುತ' ಎಂದು ಹೇಳಿಕೆ ಕೊಡದಿರಲಿ.

ಇನ್ನು ಅಧ್ಯಕ್ಷರಿಗೆ ನಿಧಿ ಕೊಡುವ ವಿಚಾರ. ಓದುಗರೇ ನಾನು ಮೂರ್ಖನಾದ ಒಂದು ಪ್ರಸಂಗ ಕೇಳಿ. ಈಗ ಮೂರು ವರ್ಷಗಳ ಹಿಂದೆ ಇದೇ ಬೆರಕಿಗಳು ನನಗೆ ಸನ್ಮಾನ, ನಿಧಿ ಅರ್ಪಣೆ ಏರ್ಪಡಿಸಿದ್ದರು. ಮೀಟಿಂಗ್ ಖರ್ಚಿಗೆಂದು ನನ್ನ ಪತ್ರಿಕೆಯ ಓದುಗರಿಂದ ನಾನೇ ಹತ್ತುಸಾವಿರ ವಸೂಲು ಮಾಡಿ ಈ ಕಂತ್ರಿಗಳಿಗೆ ಕೊಟ್ಟೆ. ಏನಾಯಿತು? ನನ್ನನ್ನು ಕರೆದುಕೊಂಡು ಹೋಗಿ ಒಂದು ಹೂವಿನ ಹಾರ ಹಾಕಿದರು. ಅಬ್ಬಬ್ಬಾ ಎಂದರೆ ಐವತ್ತು ರೂಪಾಯಿ ಇರಬಹುದು ಅದಕ್ಕೆ ಒಂದು ಶಾಲು ಥೆಥೆ ಶಲ್ಯ ಹೊದಿಸಿದರು. ಅದು ಯಾರದೋ ಮನೆಯ ಹರಿದ ಹಳೆಯ ಶಲ್ಯ. ಒಂದು ಪೈಸಾನೂ ಕೊಡಲಿಲ್ಲ.

ಮುರಾರಿಯಿಂದ ಎಷ್ಟು ವಸೂಲಿ ಮಾಡುತ್ತಾರೆ ಯಾರು ಬಲ್ಲರು? ಆದರೆ ಒಂದು ಪಕ್ಷ ಅವನು ಮೀಟಿಂಗಿಗೆ ಬಂದರೂ ಅವನಿಗೆ ಒಂದು ಮೆಣಸಿನಕಾಯಿ, ಹಾಫ್ ಛಾ ಸಿಕ್ಕರೆ ಹೆಚ್ಚು.

ವಿಶ್ವ ಮಾನಸಿಕ ಅಸ್ವಸ್ಥರಿಗೆ ಜಯವಾಗಲಿ. ಆಶ್ಚರ್ಯವೇನೆಂದರೆ ಮುಗಿಲು ಹಳ್ಳಿಯಲ್ಲಿ ಈ ಸಂಪಾದಕೀಯದ ಬಗ್ಗೆ ಮುಕ್ತ ಅಥವಾ ಮುಚ್ಚಿದ ಚರ್ಚೆ ನಡೆಯಲಿಲ್ಲ. ಮುರಾರಿ ಊರಲ್ಲಿ ಎಲ್ಲೂ ಕಾಣಲಿಲ್ಲ. ಬೆಂಗಳೂರಿಗೋ ಬೊಂಬಾಯಿಗೋ

ಹೋಗಿದ್ದಾನೆ ಎಂದು ಕೆಲವರು. ಇನ್ನು ಕೆಲವರು ಎಟ್ನಾ ಅಥವಾ ಇಂಡೋನೇಷಿಯಾ ಪ್ರವಾಸಕ್ಕೆ ಹೋಗಿರಬಹುದು ಎಂದು ಹೇಳಿದರು. ಎಟ್ನಾ, ಇಂಡೋನೇಷಿಯಾ ಏಕೆ ಎಂದು ಕೇಳಿದಾಗ ಅಲ್ಲಿ ಜ್ವಾಲಾಮುಖಿ ಆಸ್ಫೋಟಗೊಂಡಿದೆಯಲ್ಲಾ ಎಂದರು. ಮುರಾರಿ ಪತ್ತೆ ಇಲ್ಲ.

ಮುರಾರಿಯ ಮನೆಯ ಮುಂದೆ ಬೋರ್ಡಿನಲ್ಲಿ ಮುರಾರಿ (ಔಟ್) ಎಂದು ಯಾವಾಗಲೂ ಇರುತ್ತಿತ್ತಂತೆ, ವೀರಣ್ಣ 'ಇವನು ಯಾವಾಗಲೂ ಔಟ್ ಆಗಿರ್ತನಲ್ಲ, ಇಂಡಿಯನ್ ಟೀಮಿಗೆ ಯಾಕೆ ಸೆಲೆಕ್ಟ್ ಮಾಡಿಲ್ಲ ಇವನ್ನ' ಎಂದ. ಹೀಗಿರಲು ದೂರವಾಣಿ ಕರೆ ಕೇಳಿದ ನಾನು 'ಏನೋ ಹಳೇಗೆಳೆಯ. ಕರ್‍ದದನೆ. ಹೋಗಿಬಂದ್ರೊಳ್ಳೇದು' ಎಂದುಕೊಂಡುರು ಹೊರಟೆ. ದಾರಿಯಲ್ಲಿ ದುಬ್ಬೀರ್‍ಗ ಸಿಕ್ಕು ಬೇಡವೆಂದರೂ ನಾಯಿಯ ಹಿಂದೆ ಬಾಲದಂತೆ ನನ್ನನ್ನು ಬೆಂಬತ್ತಿದ.

ವೀರಣ್ಣ: ''ಎತ್ಲಗ್ಹೊಂಟ್ಯೋ, ರಾಯ''

ನಾನು: ''ಮುರಾರಿ...''

ವೀರಣ್ಣ: ''ಅವನ್ಗೆ ಏನೋ ಆಗೆತೆ. ಎಲ್ಲೆಲ್ಲೂ ಸಿಗಲ್ಲ.

ನಾನು: ಏನಾಗಿದ್ದೀತು?

ವೀರಣ್ಣ: ಕ್ಯಾನ್ಸರ್‍ರ್‍ರ್‍ರೋ, ಎಚ್ಚೈವಿನೋ ಆಗಿರ್‍ಬೇಕು. ಹಗ್ಲೆಲ್ಲ ಬೆಂಗ್ಳೂರಿಗೆ ಹೋಗ್ತನೆ.

ನಾನು: ಅವನ್ಗೆಂಥ ಕ್ಯಾನ್ಸರ್‍ರೋ?

ವೀರಣ್ಣ: ಅದೂ ನಿಜ. ಅವ್ನೇ ಈ ಸಮಾಜಕ್ಕೆ ಹಿಡಿದ ಕ್ಯಾನ್ಸರು. ನೀನು ಅವನ್ಹತ್ರ ಯಾಕೆ ಹೊಂಟದಿ?

ನಾನು: ಬಾ ಅಂತ ಬಡ್ಕಂಡ, ಫೋನ್ನಗೆ. ಹೊಂಟೆ. ಅಲ್ಲಲೇ ಈರ್‍ಗ, ಅವನಿಗೂ, ಅಣ್ಣಗೂ ಅದೇನು ಗೆಣೆತನ?

ವೀರಣ್ಣ: ಯಾಕೋ? ನಿನ್ಹಲ್ಲು ಉದರ್‍ತ್ತಿವೀ ಅಂತ ಹೇಳ್ತವೇನು? ನಾನು ಹೇಳಿದ್ನೆಲ್ಲ ಹೆಚ್ಚೈವಿ ಅಂತ ಅದ್ಕೆ ಸಂಬಂಧ್ಲಿದ್ದು.

ಬೋರ್ಡ್ 'ಮುರಾರಿ-ಔಟ್' ಎಂದು ಘೋಷಿಸಿದರೂ ಕರೆಗಂಟೆಯನ್ನು ಒತ್ತಿದೆವು. ದೀನ ಕಳೆಯ ನೊಂದ ಹೆಣ್ಣುಮಗಳೊಬ್ಬಳು ಬಾಗಿಲು ತೆಗೆದಳು. ಒಳ ಹೊಕ್ಕೆವು. ಮುರಾರಿ ಕಿಟಕಿಯಾಚೆಗಿನ ದಿಗಂತವನ್ನು ಶೂನ್ಯ ದೃಷ್ಟಿಯಿಂದ ನೋಡುತ್ತಿದ್ದ.

ಮುರಾರಿ: ಈ ಮೀಟಿಂಗಿಗೆ ಹೋಗಲೋ ಬೇಡವೋ?

ವೀರಣ್ಣ: ಅಲ್ಲಣ್ಣಾ, ನಿನ್ಗಿಂತ ಯಾರದರೆ, ಅಧ್ಯಕ್ಷತೆಗೆ? ಮೊದ್ಲು ಒಪ್ಗೆಂಬಿಡು.

ಮುರಾರಿ ನಿಟ್ಟುಸಿರುಬಿಟ್ಟ. ಒಂದು ಪೇಪರ್ ಕಟಿಂಗ್, ಒಂದು ಲಗ್ನಪತ್ರಿಕೆ ನನಗೆ ಕೊಟ್ಟ. ಪೇಪರ್ ಕಟಿಂಗ್‌ನಲ್ಲಿ ಮುರಾರಿಯ ಮಗನ ನಾಲ್ಕನೆ ಡೈವರ್ಸ್ ಸುದ್ದಿಯಿತ್ತು. ಲಗ್ನಪತ್ರಿಕೆಯಲ್ಲಿ ಅವನ ಐದನೆ ಮದುವೆಗೆ ಆಹ್ವಾನವಿತ್ತು.

ಮುರಾರಿ: ಏನು ಹೇಳಲಿ?

ವೀರಣ್ಣ: ವಿವಾಹ ವಿಚ್ಛೇದನ ಮರುಮದುವೆಗಳು ಎಂದೆಂದೂ ಪ್ರಸ್ತುತ ಅಂತ ಮೀಟಿಂಗ್ನಗೆ ಹೇಳ್ಬಿಡು.

ನಾನು: ಸ್ವಲ್ಪ ಸುಮ್ನಿರೋ ಈರ್ಗಾ, ಮುರಾರಿ ನೀನು ಪ್ರತಿಪಾದಿಸಿದ ತತ್ತ್ವಗಳನ್ನು ನಿನ್ನ ಮಗ ಯಶಸ್ವಿಯಾಗಿ ಆಚರಣೆಗೆ ತಂದಿದ್ದಾನೆ ತಪ್ಪೇನು? ಮೀಟಿಂಗಿಗೆ ಒಪ್ಪಿಕೋ!

ಮುರಾರಿ: ಇವೊತ್ತು ನನ್ನ ಮಗ, ಐದನೇ ಸೊಸೆ ಬರುತ್ತಾರೆ ಏನು ಮಾಡಲಿ. ಗುರ್ರಿ ಬೆನ್ನು ಹತ್ತಿ ವರದಿಗಾರನನ್ನು ಬಿಟ್ಟಿದ್ದಾನೆ. ನನಗೆ ಸ್ವಲ್ಪ ದುಡ್ಡು ಬೇಕು.

ವೀರಣ್ಣ: ನಿನಗೆ ಆ ಕಷ್ಟವೇ ಬೇಡ - ಹೀಗೆ ಹೇಳಿ ವೀರಣ್ಣ ತನ್ನ ಚೀಲದಿಂದ ವಿಕ್ರಮಾರ್ಕನ ಮಂತ್ರಿಯ ಸೀಸೆ ತೆಗೆದು ಮುರಾರಿಗೆ ಕೊಟ್ಟ.

◇◇◇



ಯಾಕೆ ಸುಳಿದೆ... ನನ್ನ ಬಳಿಗೆ... ಒಂದೇ ಗಳಿಗೆ...
ಒಂದೇ ಗುಳಿಗೆ ನನ್ನ ತೂರಿ ನಡೆದೆ ಎಲ್ಲಿಗೆ...

ಬೆನ್‌ಝಿ ಬೌ ಬೌ

✧ ಲೋಕನಾಥ ದೀಕ್ಷಿತ್

''ಏನೇ... ನಿನ್ನೆ ರಾತ್ರಿ ಊಟ ಹಾಕಿದ್ಯೋ ಇಲ್ಲವೊ ಇದಕ್ಕೆ, ಪಾಪ ಅಳ್ತಿದೆ'' ಇವಳನ್ನು ಕೇಳಿದೆ.

''ಹಾಕಿದ್ದೆ, ಏಕೆ ಅಳ್ತಾನೋ ಏನೋ'' ಇವಳು.

ಅಳುತ್ತಿದ್ದವನು ನಮ್ಮಮನೆಯ ಶುನಕ ಅಲಿಯಾಸ್ ಬೆನ್‌ಝಿ. ದೊಡ್ಡದಾಗಿ ಬೆಳೆದಿದ್ದಾನೆ. ತಾಯಿ ಯೂರೋಪ್‌ನವಳಂತೆ, ತಂದೆ ಜರ್ಮನಿಯವನಂತೆ. ಹಾಗಂತ ಹೇಳಿ ನಮ್ಮ ಕಸಮುಸ್ರೆ ಸರೋಜಳ ಗಂಡ ಎಂಟು ಸಾವಿರ ಕಸಿದುಕೊಂಡು ನಾಯಿಯನ್ನು ಬಿಟ್ಟು ಹೋಗಿದ್ದಾನೆ. ನಾನು ಸೇವೆ ಮಾಡಬೇಕಾಗಿದೆ.

''ಏನ್ರೀ ಇವತ್ತು ಹ್ಯಾಗಿದ್ರೂ ಭಾನುವಾರ. ಬೆನ್‌ಝಿ ಗ್ಯಾರೇಜು ಗಬ್ಬು ವಾಸನೆ ಹೊಡಿತಿದೆ. ಚೆನ್ನಾಗಿ ತೊಳೆದು ಬೆನ್‌ಝೀಗೆ ಬಿಸಿ ಬಿಸಿಯಾಗಿ ಸ್ನಾನ ಮಾಡ್ಸೀ, ಎಲ್ಲೊ ಮೈ ಎಲ್ಲಾ ಕಡೀತಿರಬೇಕೂ, ಅದಕ್ಕೆ ಅಳ್ತಿದಾನೆ'' ಆಜ್ಞೆ ಕೊಟ್ಟಳು.

ನನ್ನ ಫಜೀತಿ ನೋಡೂ, ಮನೆ ಎಜಮಾನ ಅನ್ನಿಸಿಕೊಂಡ್ರೆ, ಮನೆ ಟಾಯ್ಲೆಟ್ ತೊಳೆಯೋದು ಅಲ್ಲದೇ ನಾಯಿದು ಕೂಡಾ ತೊಳೀಬೇಕು ಅಲವತ್ತಿಕೊಂಡೆ.

''ನೋಡೀ, ನಾಯಿ ಅಂದ್ರೆ ದತ್ತಾತ್ರೇಯನ ಅವತಾರ. ಹಾಗೆಲ್ಲಾ ಮಾತಾಡಬಾರದೂ'' ನಮ್ಮ ಮನೆ ಮಕ್ಕಳ ತರಃ ನೋಡ್ಕೊಬೇಕೂ. ಜಾಗ ಚೊಕ್ಕಟ ವಾಗಿಡಬೇಕೂ'' ಲೆಕ್‌ಚರ್ ಕೊಟ್ಟಳು.

''ಆಯ್ತು ಆಯ್ತು ಸುಮ್ನೆ ಕೊರಿಬೇಡಾ ಬಿಸಿನೀರು ರೆಡಿಮಾಡು''

''ಗೀಝರ್‌ನಲ್ಲಿ ನೀರು ಕುದಿತಿದೆ, ಬೇಗ ಮಾಡ್ಸೀ ನೀರು ಕರೆಂಟೂ ಇರೊವಾಗ್ಲೆ ಬೆನ್‌ಝಿ ಸ್ನಾನ ಆಗಿಬಿಡಬೇಕು'' ಅಪ್ಪಣೆ ಆಯಿತು.

ಬಚ್ಚಲ ಮನೆಗೆ ಹೋದೆ, ಬಿಸಿನೀರು ಸೋಪು ತೆಗೆದುಕೊಂಡೆ, ಅಂದಹಾಗೆ ''ನಾಯಿ ಬಿಸ್ಕತ್ ಎಲ್ಲೇ'' ಕೇಳಿದೆ.

''ಅಯ್ಯಯ್ಯ ನೀವು ಅದನ್ನ ತಿನ್ನಬೇಡಿ, ನೀವು ಅದನ್ನೂ ತಿಂದ್ರೆ, ನಂ ನಾಯಿ ಏನು ಮಾಡಬೇಕು, ನೀವು ಬರೀ ಡಯಾಬಿಟೀಸ್ ಬಿಸ್ಕತ್ ತಿನ್ನಿ ಸಾಕು'' ಉಪದೇಶಿಸಿದಳು.

ನಾನು ಬಿಸಿನೀರು ತೆಗೆದುಕೊಂಡು ಗ್ಯಾರೇಜಿಗೆ ಹೋದೆ. ''ಏನೇ ಜೆನ್‌ಜ್ಞಿನ ಓದ್ಕೊತಿಯಾ...'' ಕೂಗಿದೆ.

''ನಂದು ಸ್ನಾನ ಆಗಿದೆ, ದೇವರಿಗೆ ದೀಪ ಹಚ್ಚಬೇಕೂ ನಾಯಿನ ಮುಟ್ಕೊಹಾಗಿಲ್ಲ, ನೀವೆ ಗ್ಯಾರೇಜಿಗೆ ಕಟ್ಟಿಹಾಕಿ ಸ್ನಾನ ಮಾಡ್ಸಿ'' ದೇವರ ಮನೆಯಿಂದಲೇ ಕೂಗಿದಳು.

ನಾನು ನಿರುತ್ತರನಾಗಿ ಜೆನ್‌ಜ್ಞಿ ಮುಂದೆ ಬಿಸಿನೀರು ಕುಕ್ಕಿದೆ. ಜೆನ್‌ಜ್ಞೀಗೆ ಏನು ಅನ್ನಿಸಿತೊ ಏನೊ ನನ್ನ ಮೇಲೆ ಎಗರಿತು, ''ಅಯ್ಯೊ'' ಎಂದು ಕೂಗುತ್ತಾ ಅಂಗಾತಲಾಗಿ ಬಿದ್ದೆ. ಬೆನ್ನಿಗೆ ಪೆಟ್ಟಾಯಿತು.

''ಅಯ್ಯೋ ಹೋಗೇ, ನಾಯಿ ಬಿತ್ತೂಂತ ಕಾಣುತ್ತೆ'' ನನ್ನ ಅತ್ತೆ ಕೂಗಿಕೊಂಡರು.

''ಇಲ್ಲಾ.... ನನ್ನ ಎಜಮಾನ್ರು.... ನಾಯಿ ತರಃ ಕೂಗ್ತಿದಾರೆ'' ಅತ್ತೆಗೆ ಸಮಾಧಾನಪಡಿಸಿ, ನಿಧಾನವಾಗಿ ಗ್ಯಾರೇಜಿಗೆ ಬಂದಳು. ನೀರಿನ ಬಕೆಟ್ ಮೈಮೇಲೆ ಹಾಕಿಕೊಂಡು ಬಿದ್ದಿದ್ದ ನನ್ನನ್ನು ನೋಡಿ, ''ಒಂದು ನಾಯಿಗೆ ಸ್ನಾನ ಮಾಡಿಸಲಿಕ್ಕೆ ಬರದಿರೊ ನೀವು ಆಫೀಸಿನಲ್ಲಿ ಅದೇನು ಕೆಲಸ ಮಾಡ್ತಿರೊ ದತ್ತಾತ್ರೇಯನಿಗೇ ಗೊತ್ತು, ನಡಿರಿ ಒಳಕ್ಕೆ, ಏತಕ್ಕೂ ಪ್ರಯೋಜನವಿಲ್ಲಾ'' ಅಂದು ಬಕೆಟ್ ತೆಗೆದುಕೊಂಡು, ನನ್ನನ್ನು ಎಬ್ಬಿಸಿಕೊಂಡು, ನಡೆಸಿಕೊಂಡು ಒಳ ನಡೆದಳು.

ಈಗ ನನ್ನ ಬೆನ್ನು ನೋಯಲು ಪ್ರಾರಂಭವಾಗಿತ್ತು. ಬೆನ್ನು ಹಿಡಿದುಕೊಂಡು ದಿವಾನಿನ ಮೇಲೆ ಮಲಗಿದೆ.

''ಲಲಿತೂ ನೋವು ಹೆಚ್ಚಾಯ್ತು, ಬರಬಾರದೇ...'' ಕೂಗಿದೆ. ಲಲಿತೂ ಬದಲಾಗಿ ಕಸಮುಸ್ರೆ ಸರೋಜ ಪ್ರತ್ಯಕ್ಷ ಆದಳು. ನನ್ನನ್ನು ನೋಡಿದಳು. ''ಇದೇನೂ ನಾಯಿ ಮುದಡ್ಕಂಡು ಮಲಗ್ದಂಗೆ ಮಲಗವ್ರೆ ಸೋಮೇರೂ'' ಕೇಳಿದಳು.

''ಅಯ್ಯೊ ನಾಯಿ ಸ್ನಾನ ಮಾಡಿಸ್ಲಿಕ್ಕೆ ಹೋಗೀ, ಬಿದ್ದು ಹೀಗೆ ಬೆನ್ನು ನೋವು ಮಾಡ್ಕೊಂಡು ಮಲಗಿರೋದು, ಡಾಕ್ಟರ ಹತ್ರ ಕರ್ಕೊಂಡು ಹೋಗಬೇಕು'' ಸರೋಜಂಗೆ ಕಾಫಿ ಕೊಡುತ್ತಾ ಹೇಳಿದಳು.

''ಡಾಕತ್ರು ಗೀಕತ್ರು ಏನೂ ಬ್ಯಾಡಿ... ನಮ್ಮ ಮನ್ಯಾಗೆ 'ಸುವರ್ಣ ಮಂಚೂರಿ ತೈಲಾ' ಅಂತ ಒಂದು ಎಣ್ಣೆ ಐತೆ, ಅದನ್ನ ಆಕಿ ಅದವಾಗಿ ನೀವಿದ್ರೆ ಎಂತಾ ನೋವಿದ್ರೂ ಒಂಟೊಯ್ತದೆ.''

''ಏನೊ ನನ್ನ ಅಳಿಯಂದಿರ ಬೆನ್ನು ಸರಿ ಆದ್ರೆ ಸರಿ... ಮನೆ ಕೆಲಸ ಆಮೇಲೆ ಮಾಡಿದ್ರೆ ಆಗುತ್ತೆ... ಹೋಗಿ ಮನೆಯಿಂದ ಎಣ್ಣೆ ತೊಗೊಂಡು ಬಾ'' ನಮ್ಮತ್ತೆ ಅಡುಗೆ ಮನೆಯಿಂದ ಬಂದರು.

''ಒಂದೇ ನಿಮ್ಸ'' ಅಂದು ಉಡಿಯಿಂದ ಮೊಬೈಲ್ ತೆಗೆದು ಮೊಬೈಲಾಯಿಸಿದಳು. ಐದೇ ನಿಮಿಷಕ್ಕೆ ಗಂಡ ವೀರಭದ್ರ ಎಣ್ಣೆ ಇದ್ದ ಟಿಫಿನ್ ಕ್ಯಾರಿಯರ್ ಹಿಡಿದು ಹಾಜರಾದ. ಸರೋಜಳಿಗೆ ಕೊಟ್ಟ, ಸೈಕಲ್ ಹತ್ತಿ ಮಾಯವಾದ.

''ನಡೀರ ಒಳಕ್ಕೆ'' ಅಂದು ನನ್ನನ್ನು ರೂಮಿನೊಳಕ್ಕೆ ಕರೆದೊಯ್ದಳು. ನಮ್ಮ ಅತ್ತೆ ನೋಡುತ್ತಾ ಇದ್ದಹಾಗೆ ಬಾಗಿಲು ಹಾಕಿದಳು. ಬೆನ್ನಿಗೆ ಹದವಾಗಿ ತಿಕ್ಕಿದಳು. ''ನಾನು... ಹಾಂ... ಹಾಂ... ಇಲ್ಲೀ, ಇಲ್ಲೀ'' ಅನ್ನುತ್ತಿದ್ದ ಒಂದು ಇಪ್ಪತ್ತು ನಿಮಿಷದ ನಂತರ ''ಆಯಿತ್ರಾ, ನಡಿರಿ ಒರಕ್ಕೆ...'' ಅಂದು ಹೊರಗೆ ಬಂದಳು ''ಅಕ್ಕಾರೇ... ಇಂಗೆ ಒಂದು ವಾರ ತಿಕ್ಕಿದ್ರೆ ಎಂತಾ ನೋವಿದ್ರೂ ಹಾರ್ಕೊಂಡು ಒಂಟೊಯ್ತದೆ'' ಅಂದು ಕಸಮುಸ್ರೆಗೆ ಹೋದಳು. ಇವಳು ನನ್ನನ್ನು ದುರುಗುಟ್ಟಿ ನೋಡಿದಳು. ನಾನು ಸ್ನಾನ ಮಾಡಿ ಮಲಗಿದೆ. ಸೊಗಸಾಗಿ ನಿದ್ರೆ ಬಂತು.

ಮಾರನೆ ದಿನ ಬೆಳಗ್ಗೆ ಏಳಕ್ಕೆ ಸರಿಯಾಗಿ ಸರೋಜಳ ಆಗಮನವಾಯಿತು. ರೂಮು ಹೊಕ್ಕೆವು ಸರೋಜಳ ಸೇವೆ ಆಯಿತು, ನಾನು ಮೌನವಾಗಿ ನಾಯಿಯನ್ನು ನಮಿಸಿದೆ.

ಈಗ ಬೆಳಗ್ಗೆ ಏಳಕ್ಕೆ ಸರಿಯಾಗಿ ಬರುತ್ತಾಳೆ. ರೂಮು ಹೊಕ್ಕುತ್ತೇವೆ. ಅವಳು ಬೆನ್ನು ನೀವುತ್ತಾಳೆ. ಇದು ನನಗೆ ಅಭ್ಯಾಸವಾಯಿತು.

ಮಾರನೆ ದಿನ ಏಳಾಯಿತು, ನೆಟ್ ಬನಿಯನ್ ತೆಗೆದು ಸಿದ್ಧವಾದೆ. ಎಂಟಾಯ್ತು, ಒಂಬತ್ತಾಯಿತು ''ಏನೇ ಸರೋಜಂಗೆ ಏನಾಯ್ತೂ, ನನಗೆ ಬೆನ್ನು ನೀವೋಕೆ ಬರಬ್ಯಾಡ್ವೇ...'' ಲಲಿತಳ ಮೇಲೆ ರೇಗಿದೆ.

''ನೋಡೀ, ನೀವು ಬೆಳಗ್ಗೆ ಬೆಳಗ್ಗೆ ಸರೋಜನ ಕರ್ಕೊಂಡು ರೂಂ ಬಾಗಿಲು ಹಾಕ್ಕೊಳ್ಳೊದು ನನಗೆ ಇಷ್ಟವಿಲ್ಲ, ನನ್ನ ಅಮ್ಮನಿಗೂ ಇಷ್ಟವಿಲ್ಲ ಆಯ್ತೆ, ನಿಮಗೆ ಬೆನ್ನುನೋವು ಇದ್ರೂ ಪರವಾಗಿಲ್ಲಾ ಏಡ್ಸ್ ತಂದ್ಕೊಬೇಡಿ, ನಾನೇ ಸರೋಜಂಗೆ ಬರಬೇಡಾಂತ ಹೇಳಿ, ಎಣ್ಣೆ ಬಾಬ್ತೂಂತ ಸಾವಿರ ರೂಪಾಯಿ ಕೊಟ್ಟು ಕಳ್ಸಿದೇನೆ'' ಅಂದು ಒಳಗೆ ಹೋಗಿ ಸ್ಟ್ರಾಂಗ್ ಕಾಫಿ ಮುಂದಿಟ್ಟಳು.

ನಾನು ಕಂಗಾಲಾಗಿ ಸರೋಜಳನ್ನು ನೆನೆಸಿಕೊಂಡು ಕಾಫಿಯನ್ನು ತುಟಿಗೆ ಇಟ್ಟುಕೊಂಡೆ, ಬೆನ್‌ಝ್ ಬೊಗಳೇ ಬೊಗಳುತ್ತಿತ್ತು.

✧✧✧

ಕೊಲೆ

ಗ್ರಂಥಗಳು ಕೊಲ್ಲುತ್ತವೆ
ಎಂದೊಬ್ಬರ ಉಕ್ತಿ
(ಬದುಕಿಸಲೂ ಬಲ್ಲವು)
ಆದರೆ ಗ್ರಂಥಗಳನ್ನೇ ಕೊಲ್ಲುವ
ಪುಣ್ಯಾತ್ಮರೂ ಇದ್ದಾರಲ್ಲ

– ಸಿ.ಪಿ.ಕೆ



ಜೀವನ್ಮುಕ್ತರು

✧ ಹಾ.ರಾ.

ಚಂದ್ರಗುಪ್ತನ ಆಳ್ವಿಕೆಯ ಕಾಲದಲ್ಲಿ ಪಾಟಲೀಪುತ್ರದ ಒಬ್ಬ ಸಾಮಾನ್ಯ ಪ್ರಜೆಯೊಬ್ಬ ದೇವರನ್ನು ಪ್ರತ್ಯಕ್ಷವಾಗಿ ಕಂಡು ತನ್ನ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ವರಗಳನ್ನು ಪಡೆಯಬೇಕೆಂಬ ಆಸೆಯಿಂದ ಘೋರ ತಪಸ್ಸನ್ನು ಮಾಡಿದ. ಅನ್ನಾಹಾರಗಳನ್ನು ಬಿಟ್ಟು ಏಕಾಗ್ರಚಿತ್ತದಿಂದ ತಪಸ್ಸನ್ನಾಚರಿಸುತ್ತಿದ್ದ ಭಕ್ತನನ್ನು ಕಾಣಲು ಪರಶಿವನು ಪತ್ನಿ ಸಮೇತ ಭೂಲೋಕಕ್ಕೆ ಕೈಲಾಸದಿಂದ ವಿಮಾನದಲ್ಲಿ ಬಂದಿಳಿದು ಪ್ರತ್ಯಕ್ಷನಾದ. ಎಲ್ಲಾ ಭಕ್ತರಿಗೂ ಹೇಳುವಂತೆಯೇ 'ಭಕ್ತ, ನಿನ್ನ ತಪಸ್ಸಿಗೆ ಮೆಚ್ಚಿದೆ, ನಿನಗೇನು ವರಗಳು ಬೇಕು ಕೇಳಿಕೋ' ಎಂದ. ಭಕ್ತಶ್ರೇಷ್ಠನು ಕೊಂಚವೂ ವಿಚಲಿತನಾಗದೆ ಇದ್ದಕ್ಕಿದ್ದ ಹಾಗೆ ವೈರಾಗ್ಯಭರಿತನಾಗಿ ಇಹಲೋಕದ ಐಶ್ವರ್ಯ, ಭೋಗಗಳಿಗೆ ಆಸೆಪಡದೆ ಲೋಕದ ಬಂಧಗಳನ್ನು ಕಳಚಿಕೊಂಡು ಮುಕ್ತನಾಗಬೇಕೆಂಬ ಅಭೀಪ್ಸೆಯನ್ನು ತಾಳಿ ''ಪರಮೇಶ್ವರ ನನಗೆ ಇಹಲೋಕದ ಯಾವ ಸುಖ ಸಂಪತ್ತುಗಳೂ ಬ್ಯಾಡ, ನನಗೆ ತುಂಬಾ ಬಾಯಾರಿಕೆಯಾಗುತ್ತಿದೆ ಒಂದು ದೊನ್ನೆ ಪಾನಕ ಕರುಣಿಸು'' ಎಂದು ದೈನ್ಯದಿಂದ ಕೇಳಿದ. ಪರಮೇಶ್ವರನು 'ತಥಾಸ್ತು' ಎಂದ ತಕ್ಷಣ ಭಕ್ತನ ಕೈಗೆ ಒಂದು ದೊನ್ನೆ ನಿಂಬೆ ಹಣ್ಣಿನ ಪಾನಕ ಬಂತು. ಮರುಕ್ಷಣದಲ್ಲಿಯೇ ಕೈಲಾಸದಿಂದ ಕರೆ ಬಂದ ನಿಮಿತ್ತ ದೇವರು ಮಾಯವಾಗಿಬಿಟ್ಟ. ಭಕ್ತ ಪಾನಕ ಕುಡಿದು ಚೇತರಿಸಿಕೊಂಡು ಹೇಗೋ ಬದುಕಿಕೊಂಡ. ಇನ್ನೇನು ಅವನು ಸಾಯುವ ಘಳಿಗೆ ಸಮೀಪಿಸುತ್ತಿದೆ ಎಂದು ಎಲ್ಲರೂ ಊಹಿಸಿದ್ದರು. ಅವನೇನಾದರೂ ಆಮಿಷಗಳಿಗೊಳಗಾಗಿ ಬೇರೆ ಬೇರೆ ವರಗಳನ್ನು ಕೇಳುವ ಯೋಚನೆ ಮಾಡಿಕೊಂಡು ಒಂದು ನಿಮಿಷ ಕಾಲವನ್ನು ವ್ಯರ್ಥ ಮಾಡಿದ್ದರೂ ಅವನ ಪ್ರಾಣಪಕ್ಷಿ ಹಾರಿಹೋಗುತ್ತಿತ್ತು. ಸಮಯದಲ್ಲಿ ಬುದ್ಧಿಯನ್ನು ಸಮತೋಲನದಲ್ಲಿ ಉಪಯೋಗಿಸಿ ದೇವರನ್ನು ಒಂದು ಲೋಟ ಪಾನಕ ಕೇಳಿ, ಪರಮಾತ್ಮನು ಅನುಗ್ರಹಿಸಿದ ತಕ್ಷಣ ಅದನ್ನು ಕುಡಿದು ಚೇತರಿಸಿಕೊಂಡು ಬದುಕಿಕೊಂಡ. ಇದು ಹಳೆ ಕಾಲದ ಕಥೆ ಇದನ್ನು ಕೇಳಿದ ಜನ 'ಅಯ್ಯೋ ಬೆಪ್ಪ' ಎಂದು ನಗೆಯಾಡಿದರು!

★★★

21ನೇ ಶತಮಾನದ ಮಹಾ ಮೇಧಾವಿ ವೈದ್ಯ ವಿಜ್ಞಾನಿಯೊಬ್ಬನು ದೇವರನ್ನು ಕಾಣುವ ಹಂಬಲ ಬೆಳೆಸಿಕೊಂಡು ಮಾನವರನ್ನು ಕಾಡುತ್ತಿರುವ ಅನೇಕ ರೋಗ

ರುಜಿನಗಳಿಗೆ ಸಂಜೀವಿನಿಯಂಥ ಔಷಧಿಗಳನ್ನು ಕಂಡುಹಿಡಿಯುವ ಸಾಧನಗಳನ್ನು ದೇವರಿಂದ ಪಡೆಯಬೇಕೆಂದು ಶ್ರದ್ಧಾನಂದರ ಆಶ್ರಮಕ್ಕೆ ಸೇರಿ ಆತ್ಮವಿದ್ಯೆಯನ್ನು ಅಭ್ಯಾಸ ಮಾಡಿ ಘೋರ ತಪಸ್ಸನ್ನು ಮಾಡಿದನು. ದೇವರನ್ನು ಪ್ರತ್ಯಕ್ಷವಾಗಿ ಕಂಡು ವರಗಳನ್ನು ಬೇಡಿಕೊಳ್ಳಬೇಕೆಂದು. ವಿಜ್ಞಾನಿಗಾದರೋ ಅವನ ಕಾರ್ಯದಲ್ಲಿ ಅಪಾರ ಶ್ರದ್ಧೆ ನಂಬಿಕೆ. ಹೀಗಾಗಿ ಅವನು ತನ್ನಲ್ಲೇ ಮನೆ ಮಾಡಿಕೊಂಡಿದ್ದ ತೀವ್ರ ರೋಗಗಳಿಂದ ಬಳಲಿ ಬೆಂಡಾಗಿದ್ದ. ಇವೆಲ್ಲಕ್ಕೂ ಶಾಶ್ವತವಾದ ಪರಿಹಾರವನ್ನು ಕಂಡುಕೊಂಡರೆ ತಾನು ಮಾನವ ಕುಲಕ್ಕೆ ಏನಾದರೂ ಸೇವೆಯನ್ನು ಸಲ್ಲಿಸಬಹುದೆಂಬ ಅಪೇಕ್ಷೆಯಿಂದ ತನ್ನ ವೈದ್ಯಮಂದಿರದ ಲ್ಯಾಬರೇಟರಿಯಲ್ಲಿ ತಪಸ್ಸಿಗೆ ಕೂತು ಧ್ಯಾನಾಸಕ್ತನಾದ. ಭಗವಂತನು ವೈದ್ಯನ ತಳಮಳವನ್ನು ದಿನನಿತ್ಯ ಬರುತ್ತಿದ್ದ ನೂರಾರು ವರ್ಣಗಳಿಂದ ಅರಿತುಕೊಂಡು ತ್ರಿಲೋಕ ಸಂಚಾರಿಯಾದ ಮಲ್ಯಮಹಾಮುನಿಯಿಂದ ವಿಮಾನ ಸೌಕರ್ಯವನ್ನು ಪಡೆದು ಒಂದು ಮಧ್ಯರಾತ್ರಿ ವೈದ್ಯನ ಲ್ಯಾಬರೇಟರಿಯಲ್ಲಿ ಪ್ರತ್ಯಕ್ಷನಾದ. ಮಾರ್ಗಮಧ್ಯದಲ್ಲಿ I.T., B.T., L.T., ಗಳನ್ನು ಸಂದರ್ಶಿಸಿ ಭೂಲೋಕದ ಡೆಂಗ್ಯೂ, ಚಿಕುನ್‌ಗುನ್ಯ, ಡಯಾಬಿಟಿಕ್ಸ್ ಮುಂತಾದ ರೋಗಗಳನ್ನು ಗುಣಪಡಿಸಲು ಹಾತೊರೆಯುತ್ತಿರುವ ವೈದ್ಯ ವಿಜ್ಞಾನಿಗೆ ಸಹಾಯ ಮಾಡಬೇಕೆಂಬುದು ಅವನ ಇಚ್ಛೆಯಾಗಿತ್ತು. ವೇಷಭೂಷಣಗಳನ್ನು ನೋಡಿದ ಮೇಲೆ ತನ್ನ ಮುಂದೆ ನಿಂತಿರುವವನೇ ಭಗವಂತನೆಂದು ವೈದ್ಯನಿಗೆ ಖಾತರಿಯಾಯ್ತು. ಅವನು ಭಗವಂತನಿಗೆ ವಿನಮ್ರತೆಯಿಂದ ಕಾಲಿಗೆ ಅಡ್ಡಬಿದ್ದು ಲ್ಯಾಬರೇಟರಿಯಲ್ಲಿ ತನ್ನ ಮುಂದೆಯೇ ಇದ್ದ ಸ್ಕ್ಯಾನಿಂಗ್, ಡಯಾಬಿಟಿಸ್, ಅನಾಟಮಿಕ್ ಮೆಡಿಕಲ್ ಪ್ಲಾಂಟ್ ಮುಂತಾದ ಯಂತ್ರಗಳನ್ನು ದೂರಕ್ಕೆ ಸರಿಸಿ ಶ್ರದ್ಧಾನಂದರ ಆಶ್ರಮದಲ್ಲಿ ಕಲಿತಿದ್ದ ಶಾಂತಿ ಮಂತ್ರವನ್ನು ಪಠಿಸಿದನು. ದೇವರಿಗೆ ಸಂತೋಷವಾಯಿತು. "ಅಯ್ಯಾ ವೈದ್ಯ ವಿಜ್ಞಾನಿ, ನೀನು ನಿನ್ನ ಕೆಲಸದಲ್ಲಿ ನಿಷ್ಠಾವಂತನೆಂಬುದು ನನಗೆ ಗೊತ್ತು. ಮಾನವನನ್ನು ಕಾಡುತ್ತಿರುವ ಭಯಂಕರ ರೋಗ ರುಜಿನಗಳಿಗೆ ಶಾಶ್ವತವಾದ ಪರಿಹಾರಗಳನ್ನು ಕಂಡುಹಿಡಿಯಬೇಕೆನ್ನುವ ನಿನ್ನ ಮಹದಾಶೆ ಮತ್ತು ಪ್ರಯೋಗ ಶಾಲೆಯಲ್ಲಿ ನೀನು ಎಡೆಬಿಡದೆ ನಡೆಸುತ್ತಿರುವ ಹುಟ್ಟು - ಸಾವಿನ ಪ್ರಯೋಗಗಳು ನಮಗೆ ಈಗಾಗಲೆ ವೈದ್ಯಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಗಳನ್ನು ಪಡೆದು ಇಲ್ಲಿಗೆ ಬಂದಿರುವ ಡಾ|| ಕಾರ್ಸಿನೋಯ, ಡಾ|| ವಾಷರ್‌ಮ್ಯಾನ್, ಡಾ|| ಅರ್ಜೆಮ್‌ಸೋಂಡೆಕ್ ಮುಂತಾದವರಿಂದ ತಿಳಿದು ಬಂದಿದೆ. ನಿನ್ನ ಕೋರಿಕೆಗಳನ್ನು ಈಡೇರಿಸಬೇಕೆಂದೇ ನಾವು ನಿಮ್ಮ ಪಿ.ಎಂ. ಮನಮೋಹನಸಿಂಗರ ಆಶಯದಂತೆ ಇಲ್ಲಿಗೆ ಬಂದಿದ್ದೇನೆ. ಕೇಳು" ಎಂದ ಭಗವಂತ. ವೈದ್ಯನು ನಾರಾಯಣ ಸ್ವರೂಪನಾದ ಭಗವಂತನ ವಿಶಾಲವಾದ ವಕ್ಷಸ್ಥಳವನ್ನೂ ವಪೆಯ ಉಬ್ಬರವಿಳಿತವಿಲ್ಲದ ಉದರವನ್ನೂ ಮಿಂಚುತ್ತಿದ್ದ ವದನವನ್ನೂ ದೃಷ್ಟಿಸಿ ನೋಡುತ್ತ; ಶರೀರದ ಅಂಗಾಂಗಗಳ ಕಡೆ ಕೃಶವಾದ ನೋಟವನ್ನು ಹರಿಸುತ್ತ ಭಗವಂತನನ್ನು ಒಂದಾದ ಮೇಲೊಂದು ವರವನ್ನು ಕೇಳುತ್ತ ಕರುಳಿನ ಸಂಕಟವನ್ನು ಅನುಭವಿಸುತ್ತಿದ್ದ. ಸಂಕಟ ತಡೆಯಲಾರದೆ ತಕ್ಷಣ ಮೂರು ಮಾತ್ರೆಗಳನ್ನು ನುಂಗಿ, ತೊಡೆಗೆ ಸೂಜಿ ಮದ್ದನ್ನು ಚುಚ್ಚಿಕೊಂಡು, ಕಿವಿಗೆ ಹಿಯರಿಂಗ್

ಏಡ್ ಸಿಕ್ಕಿಸಿಕೊಂಡು, ಸ್ಟೆತಸ್ಕೋಪನ್ನು ಹೃದಯದ ಎಡಭಾಗದ ಸಂದಿಯಲ್ಲಿಟ್ಟು, ಬಡಿತವನ್ನು ಆಲಿಸುತ್ತ ಮಿಡಿತವನ್ನು ಲೆಕ್ಕಿಸಿ ಕೈಯನ್ನು ಡೈಯಾಲಿಸಿಸ್ ಯಂತ್ರಕ್ಕೆ ಕೊಟ್ಟು, ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾದ. ಮತ್ತೊಮ್ಮೆ 'ಹೇಳು, ಭಕ್ತ' ಎಂದ ಪರಮಾತ್ಮ.

''ಪರಶಿವನೆ, ನನ್ನನ್ನು ಡಯಾಬಿಟಿಸ್‌ನಿಂದ ಪಾರುಮಾಡು. ರಕ್ತದಲ್ಲಿ ಸಕ್ಕರೆ ಪ್ರಮಾಣ 400ಕ್ಕೆ ಏರಿದೆ. ಇನ್‌ಸುಲೀನ್ ಚುಚ್ಚಿ ಸಾಕಾಗಿದೆ.''

''ತಥಾಸ್ತು'' ಎಂದ ಪರಮಾತ್ಮ.

''ಹಾಗಾದರೆ ನಾನು ಮಧುಮೇಹದಿಂದ ಮುಕ್ತನೆ, ಭಗವಂತ?''

''ಪರೀಕ್ಷಿಸಿಕೋ ಬೇಕಾದರೆ - ಗ್ಲೂಕೋಮೀಟರ್ ಇಲ್ಲೇ ಇದೆ''

''ಹೈಪರ್ ಟೆನ್ಷನ್ ನನ್ನನ್ನು ಕಾಡುತ್ತಿದೆ. ಬಿ.ಪಿ. 225ಕ್ಕೇರಿದೆ. ಎಲ್ಲಾ ಔಷಧಿಗಳೂ ಮುಗಿಯಿತು. ಅನ್ಯಥಾ ಶರಣಂನಾಸ್ತಿ'' ಎಂದ ವೈದ್ಯ.

''ತಿಳಿಯಿತು. ಈಗ ನಾರ್ಮಲ್‌ಗೆ ಇಳಿಸಿದ್ದೇನೆ. ಸಿಸ್ಟರ್‌ಗೆ ಹೇಳಿ ಬೇಕಾದರೆ ಪರೀಕ್ಷೆ ಮಾಡಿಸಿಕೋ. ಇನ್ನು ನಿನಗೆ ಬಿ.ಪಿ.ಯೇ ಇರುವುದಿಲ್ಲ'' ಎಂದ ದೇವರು.

''ಹೆಚ್.ಐ.ವಿ. ಚಿಹ್ನೆಗಳಿವೆ. ರಿಪೋರ್ಟು ನೋಡು'' ಎಂದ ವೈದ್ಯ.

''ಭಯಪಡಬೇಡ ರಿಪೋರ್ಟಿನಲ್ಲಿ + ಅಂತ ಇರುವುದನ್ನು ನೋಡಿದೆ. ಅದನ್ನು ಮೈನಸ್ ಮಾಡಿದ್ದೇನೆ. ಇನ್ನು ನಿನಗೆ ಹೆಚ್.ಐ.ವಿ. ಭಯವಿಲ್ಲ. ಆದರೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೋಗುವಾಗ ಹೆಚ್.ಟಿ.ವಿ.ಗಳಿಂದ ದೂರವಿರುವುದು ಲೇಸು'' ಎಂದು ಹೇಳಿ ದೇವರು ಒಂದು ಎಚ್ಚರಿಕೆಯನ್ನೂ ನೀಡಿದ.

ಹೀಗೆ ವೈದ್ಯ ವರಗಳನ್ನು ಕೇಳುವುದು, ದೇವರು 'ತಥಾಸ್ತು' ಎನ್ನುವುದು ಮುಂದುವರೆಯುತ್ತ ಹೋಯಿತು.

''ಪಿತ್ತಜನಕಾಂಗ ಏನೇನೂ ಕೆಲಸ ಮಾಡುತ್ತಿಲ್ಲ. ಲಿವರ್ ಸಿರೋಸಿಸ್ ಆಗಿರಬೇಕು''

''ಚಿಂತೆ ಇಲ್ಲ. ಹೊಸ ಲಿವರನ್ನು ಬ್ರಹ್ಮಪುರಿಯಿಂದ ತರಿಸಿ ಈಗಲೇ ಗ್ರಾಫ್ಟ್ ಮಾಡಿಸಿಕೊಡುತ್ತೇನೆ ಯೋಚಿಸಬೇಡ. ಈಗ ಹೇಗಿದೆ? ನಿನಗೆ ಗೊತ್ತಾಗುತ್ತಿಲ್ಲವೆ? ಚೆನ್ನಾಗಿ ಹಸಿವು ಕಾಣಿಸಿಕೊಂಡಿರಬೇಕಲ್ಲ''

''ಹೌದು. ತುಂಬ ಹಸಿವಾಗುತ್ತಿದೆ, ಸ್ವಲ್ಪ ಸ್ವಲ್ಪ ಪಾನೀಯಗಳನ್ನು ಇನ್ನು ಮೇಲೆ ತೆಗೆದುಕೊಳ್ಳಬಹುದು, ಭಗವಂತ.''

''ಖಂಡಿತ. ಲೋಕಲ್ ಖೋಡೆ ಮುಂತಾದವುಗಳು ಬ್ಯಾಡ. ಬೇಕಾದರೆ ಕಿಂಗ್‌ಫಿಷರ್ ತಗೊ.''

''ನಾನು ನಿನ್ನನ್ನು ಚೆನ್ನಾಗಿ ನೋಡುವುದಕ್ಕೇ ಆಗುತ್ತಿಲ್ಲ ಪ್ರಭು ನನ್ನ ಕಣ್ಣು ದೃಷ್ಟಿ ತುಂಬಾ ಹದಗೆಟ್ಟಿದೆ. ಡಯಾಬಿಟಿಸ್‌ನಿಂದ 'ಕಾರ್ನಿಯ' ಡ್ಯಾಮೇಜ್ ಆಗಿದೆ. ಗ್ಲುಕೋಮ ಬಂದಿದೆ ಭಗವಂತ''

''ಚಿಂತಿಸಬೇಡ - ಅದೇನು ಮಹಾ - ಕಣ್ಣುಬಿಡು, ಸೋನೋಲೇಸ್ ತಂತ್ರಜ್ಞಾನ ಮತ್ತು ಫೆಕೋ ಎಮಿಲ್‌ಸಿಫಿಕೇಶನ್‌ನಿಂದ ಪೊರೆಯನ್ನು ತೆಗೆದಿದ್ದೇನೆ. ಇದು ಕಣ್ಣಿನ

ಹೊರಪೂರೆ. ಒಳ ಪೂರೆಯನ್ನು ನೀನೇ ಪ್ಲಾಸ್ಟಿಕ್‌ನಿಂದ ತೆಗೆದುಕೊಳ್ಳಬಹುದು. ನೀನು ಆಶ್ರಮದಲ್ಲಿ ಆತ್ಮಜ್ಞಾನವನ್ನು ಅಷ್ಟೋ ಇಷ್ಟೋ ಕಲಿತುಕೊಂಡಿದ್ದೆಯಲ್ಲ. ಈಗ ಕಣ್ಮುಚ್ಚಿಕೊಂಡು ನನ್ನನ್ನು ಧ್ಯಾನಿಸಿ ನೋಡು. ವ್ಯತ್ಯಾಸವು ನಿನಗೇ ಗೊತ್ತಾಗುತ್ತದೆ.''

ವೈದ್ಯನು ಹೆಚ್ಚು ಕಡಿಮೆ ತನ್ನ ಎಲ್ಲ ಅಂಗಾಂಗಗಳ ರೋಗಗಳನ್ನೂ ಭಗವಂತನಿಗೆ ಹೇಳಿಕೊಂಡು ಗುಣಪಡಿಸಿಕೊಂಡ. ಭಗವಂತನೂ, ಅವನಿಗೆ ಎಲ್ಲಾ ವರಗಳನ್ನೂ ಅನುಗ್ರಹಿಸಿದ. ವೈದ್ಯನಿಗೆ ನವ ಚೈತನ್ಯವುಂಟಾಯಿತು. ಜೀವ ಚಿಲುಮೆ ಉಕ್ಕಿ ನೂತನೋತ್ಸಾಹ ಜಿಗಿಯಿತು. ಅಂಗಾಂಗಗಳೆಲ್ಲ ಚೆನ್ನಾಗಿ ಕೆಲಸ ಮಾಡತೊಡಗಿದವು. ಹಳೆಯ ರೋಗಗಳೆಲ್ಲ ವಾಸಿಯಾಗಿ ಹೊಸ ಜನ್ಮವೇ ಬಂದಂತಾಯಿತು ವೈದ್ಯನಿಗೆ. ಅವನು ಕುಣಿದಾಡಿದ. ದೃಷ್ಟಿದೋಷ ಪರಿಹಾರವಾಗಿತ್ತು. ತಾನೊಬ್ಬ ಸುಖಿಯಾದರೇನು? ಇನ್ನು ಸಾಮಾನ್ಯ ಮಾನವರ ರೋಗ ರುಜಿನಗಳಿಗೆ ಹೊಸ ಹೊಸ ಔಷಧಿಗಳನ್ನು ಕಂಡುಹಿಡಿದು ಅವುಗಳನ್ನೆಲ್ಲ ಗುಣಪಡಿಸಬೇಕು ಎಂಬ ಪ್ರತಿಜ್ಞೆಯನ್ನು ಮಾಡಿ ದೇವರನ್ನು ಕಣ್ಣಾರೆ ಕಂಡ ಅನುಭವವನ್ನು ಎಲ್ಲರೊಡನೆ ಹಂಚಿಕೊಳ್ಳಬೇಕೆಂದು ಮನೆಗೆ ಹೋಗಲು ಲ್ಯಾಬರೇಟರಿಯನ್ನು ಬಿಟ್ಟು ಎರಡು ಹೆಜ್ಜೆ ಹಾಕಿದ. ಹೃದಯಾಘಾತವಾದವನ ಹಾಗೆ ಕೆಳಕ್ಕೆ ಕುಸಿದು ಬಿದ್ದ. ಮತ್ತೆ ಏಳಲಿಲ್ಲ. ಪ್ರಾಣಪಕ್ಷಿ ಹಾರಿಹೋಗಿತ್ತು. ವರಗಳನ್ನು ಕೇಳುವ ಉತ್ಸಾಹದಲ್ಲಿ ಅಷ್ಟೆಲ್ಲ ವರಗಳನ್ನು ಕೇಳುವ ಬದಲು ದೀರ್ಘಾಯುಷ್ಯದ ಒಂದು consolidated ವರವನ್ನು ಕೇಳಿದ್ದರೆ ಸಾಕಾಗಿತ್ತು. ವೈದ್ಯ ವಿಜ್ಞಾನಿಗೆ ಆಗ ಅದು ಹೊಳೆಯಲೇ ಇಲ್ಲ. ಪಾಪ ಅವನ ಆಸೆ ಕಡೆಗೂ ಈಡೇರಲಿಲ್ಲ. ಆಯುಸ್ಸು ಮುಗಿಯಿತು. ತೀರಿಕೊಂಡ, ಎಂದುಕೊಂಡರು ಜನಗಳು. ಭಗವಂತನ ಸಾಕ್ಷಾತ್ಕಾರದಿಂದ ಮುಕ್ತಿಯನ್ನು ಪಡೆದುಕೊಂಡ ಅಂತ ಕಾಣುತ್ತೆ!

ಬಲಿಪಾಡ್ಯಮಿ ದಿವಸ ಜಡ್ಜ್ ವೆಂಕಟರಮಣಯ್ಯರ್ ಈ ಮಹಾಜ್ಞಾನಿಗಳ ಕಥೆ ಹೇಳಿ ಬುದ್ಧಿವಂತರು ಯಾರು ಹೇಳು? ಎಂದು ಕೇಳಿದರು. ಇಬ್ಬರೂ ಜೀವನ್ಮುಕ್ತರು ಎಂದಷ್ಟೇ ಹೇಳಿ ಸುಮ್ಮನಾದೆ. ಒಂದು ಗ್ಲಾಸ್ ಪಾನಕ ಕೊಟ್ಟು ಕುಡಿ ಎಂದರು. ಸಿಹಿ ಹೆಚ್ಚಿಗಿದ್ದ ಪಾನಕವನ್ನು ಕುಡಿದು ನಾನು ಬ್ಲಡ್‌ಟೆಸ್ಟಿಗೆ ಡಾಕ್ಟರ ಕ್ಲಿನಿಕ್‌ಗೆ ಓಡಿದೆ! ಭಗವಂತ ಅಲ್ಲಿ ಕೂತಿರಬಹುದು!

✧✧✧

ಒಗಟು

ಪ್ರಾಣವಿದ್ದರೂ
ಪ್ರಾಣಿ
ಎನ್ನಲಾಗದು
ಮನುಷ್ಯ!

– *ಸಿ.ಪಿ.ಕೆ*

ನಾವು ಬೆಂಗಳೂರಿಗೆ ಬಂದು ಸೇರಿಕೊಂಡಿದ್ದು...!

✧ ಎಚ್. ಗೋಪಾಲಕೃಷ್ಣ

ಬೆಂಗಳೂರು ನಾನು ಹುಟ್ಟಿ ಬೆಳೆದ ಊರು. ಪ್ರಾಥಮಿಕ ಶಿಕ್ಷಣದ ಒಂದೆರಡು ವರ್ಷಗಳನ್ನು ತುಮಕೂರಿನಲ್ಲಿ ಪಡೆದೆ, ನಂತರ ನಮ್ಮ ಇಡೀ ಸಂಸಾರ ಬೆಂಗಳೂರಿನಲ್ಲಿ ನೆಲೆಸಿತು-ಇದು ಐವತ್ತೇಳು-ಐವತ್ತೆಂಟರ ಇಸವಿಯಲ್ಲಿ - ಅಂದರೆ ನಾಲ್ಕೂವರೆ ದಶಕಗಳ ಹಿಂದೆ. ಅಂದಿನಿಂದ ಇಂದಿನವರೆಗೆ ಬೆಂಗಳೂರಿನ ಪ್ರತಿಯೊಂದು ಬೆಳವಣಿಗೆಯ ಹಂತವನ್ನೂ ಬಿಟ್ಟ ಕಣ್ಣು ಮತ್ತು ಬಾಯಿಗಳಿಂದ ನೋಡುತ್ತಾ ಬಂದಿರುವ ನನಗೆ ಈಗಿನ ಬೆಂಗಳೂರು ಒಂದು ವಿಸ್ಮಯದ ಸಂಗತಿ ಹಾಗೂ ಹಳೆಯ ನೆನಪುಗಳನ್ನು ಬಿಚ್ಚಿ ಹರವುವ ಗಣಿಯೆನಿಸಿದೆ.

ತುಮಕೂರಿನಿಂದ ನಾವು ಬಂದು ಸೇರಿದ್ದು ರಾಜಾಜಿನಗರದ ನಾಲ್ಕನೇ ಬ್ಲಾಕಿಗೆ. ದೇಶ ವಿಭಜನೆಯ ಕಾಲದಲ್ಲಿ ನಿರಾಶ್ರಿತರಿಗಾಗಿ ಆಗಿನ ಟ್ರಸ್ಟ್ ಬೋರ್ಡು ಕೆಲವು ಮನೆಗಳನ್ನು ನಿರ್ಮಿಸಿತ್ತು ಮತ್ತು ಅವುಗಳನ್ನು ಬಂದು ಅವಲೋಕಿಸಿದ ನಿರಾಶ್ರಿತರು ಆ ಮನೆಗಳನ್ನು ಒಪ್ಪದೇ ತಿರಸ್ಕರಿಸಿದ್ದರಂತೆ. ಆಗ ತಾನೇ ಬೆಂಗಳೂರಿನಲ್ಲಿ ಸಾರ್ವಜನಿಕ ಉದ್ಯಮಗಳು ಪೈಪೋಟಿಯ ಹಾಗೆ ಸ್ಥಾಪನೆಗೊಂಡಿದ್ದವು. ಹೊರ ರಾಜ್ಯಗಳಿಂದ ಹೇರಳವಾಗಿ ಉದ್ಯೋಗ ಅರಸಿ ಬೆಂಗಳೂರಿಗೆ ಜನ ಬರಲು ಆರಂಭವಾಗಿದ್ದ ಕಾಲ ಅದು. ಇವರಲ್ಲಿ ಸುಮಾರು ಜನ ಈ ಸಾರ್ವಜನಿಕ ಉದ್ಯಮಗಳಲ್ಲಿ ಕೆಲಸ ಗಿಟ್ಟಿಸಿದ್ದರು. ಸಹಜವಾಗಿಯೇ ತನ್ನ ಉದ್ಯೋಗಿಗಳಿಗೆ ನೆಲೆ ಒದಗಿಸಬೇಕಾದ ಜವಾಬ್ದಾರಿ ಸಾರ್ವಜನಿಕ ಉದ್ಯಮಗಳ ಮೇಲೆ ಬಿತ್ತು. ಸಾರ್ವಜನಿಕ ಉದ್ಯಮಗಳು ಹೀಗೆ ತಿರಸ್ಕೃತಗೊಂಡಿದ್ದ ಮನೆಗಳನ್ನು ಅದರ ಉದ್ಯೋಗಿಗಳಿಗೆ ನೀಡಬೇಕೆಂದು ಟ್ರಸ್ಟ್ ಬೋರ್ಡನ್ನು ಕೋರಿ ಅದರಂತೆ ಸುಮಾರು ಮನೆಗಳು ಬೆಂಗಳೂರಿನ ಸಾರ್ವಜನಿಕ ಉದ್ದಿಮೆಗಳಲ್ಲಿನ ನೌಕರರಿಗೆ ವಿತರಣೆಯಾಗಿತ್ತು. ಹೀಗೆ ವಿತರಣೆಯಾದ ಮನೆಗಳು ಎಚ್.ಎ.ಎಲ್., ಎಚ್.ಎಂ.ಟಿ., ಐ.ಟಿ.ಐ. ಮೊದಲಾದ ಕಾರ್ಖಾನೆಗಳ ಸುಪರ್ದಿಗೆ ಬಂದಿದ್ದವು.

ನಮ್ಮ ದೊಡ್ಡ ಅಣ್ಣ ಎಚ್.ಎಂ.ಟಿ.ಯಲ್ಲಿ ಆಗತಾನೇ ನೌಕರಿಗೆ ಸೇರಿದ್ದು ಒಂದು ಮನೆ ಅವರಿಗೆ ಸಿಕ್ಕಿತ್ತು. ನೇರ ತುಮಕೂರಿನಿಂದ ಈ ಮನೆಗೆ ನಾವು ಬಂದು ಸೇರಬೇಕಿತ್ತು. ಬೆಂಗಳೂರಿಗೆ ಬಂದು ಸೇರಿದ ಆ ದಿನ ಇನ್ನೂ ನನ್ನ ನೆನಪಿನಲ್ಲಿ ಹಚ್ಚ ಹಸಿರಾಗಿದೆ.

ತುಮಕೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ಬಂದೆವು. ರೈಲ್ವೆ ಸ್ಟೇಷನ್ನಿನಿಂದ ಆಚೆ ಬಂದರೆ ಅಲ್ಲಿ ರಸ್ತೆಯ ಇಕ್ಕೆಲಗಳಲ್ಲೂ ನಾಲ್ಕೈದು ಜನ ಸೇರಿ ತಬ್ಬಿದರೂ ಓಡಿಯಲಾಗದಂತ ದೊಡ್ಡ ದೊಡ್ಡ ಮರಗಳು ಹೇರಳವಾಗಿ ನೆಲದ ಮೇಲೆ ನೆರಳನ್ನು ಸೂಸುತ್ತಾ ತಂಪು ನೀಡುತ್ತಾ ನಿಂತಿದ್ದವು. ವನಸಿರಿಯನ್ನು ಹೋಲಿಸಿದರೆ ಆಗ ಬೆಂಗಳೂರಿಗೂ ತುಮಕೂರಿಗೂ ಅಂತಹ ದೊಡ್ಡ ವ್ಯತ್ಯಾಸವೇನೂ ಇಲ್ಲ, ಆದರೂ ಅಗಲದ ರಸ್ತೆಯ ಮೇಲೆ ಹರವಿಕೊಂಡಿದ್ದ ತಂಪು ನೆರಳನ್ನು ಕಂಡಾಗ ಅಲ್ಲೇ ಮಲಗಬೇಕೆನಿಸುವಷ್ಟು ಮನಸ್ಸು ಎಳೆಯುತ್ತಿತ್ತು. ಸ್ಟೇಷನ್ನಿನಲ್ಲಿ ಎರಡೋ ಮೂರೋ ಪ್ಲಾಟ್ ಫಾರಮ್ಮುಗಳು ಅವಾಗ ಅಲ್ಲಿದ್ದದ್ದು ಮತ್ತು ಜನಸಂದಣಿ ಏನೂ ಅಷ್ಟಿರಲಿಲ್ಲ (ಬೆಂಗಳೂರು ಬೆಳೆದ ಹಾಗೆಲ್ಲಾ ಸ್ಟೇಷನ್ನಿನ ಸುತ್ತಲಿನ ಮರಗಳು ನಾಶ ಹೊಂದಿದ ಹಾಗೆಲ್ಲಾ ಆಗಿನ ಹಾಗೆಯೇ ರಸ್ತೆಯ ತುಂಬಾ ನೆರಳು ಬೀಳುವ ಮರಗಳೇ ತುಂಬಿದ್ದರೆ ವಲಸೆ ಬರುವವರು ಅದೇ ರಸ್ತೆಯಲ್ಲಿಯೇ ತಮ್ಮ ಸಂಸಾರವನ್ನು ಹೂಡುತ್ತಿದ್ದರೇನೋ ಮರಗಳು ಹೋಗಿದ್ದು ಒಳ್ಳೆಯದೇ ಎಂಬ ಕುಹಕವನ್ನೂ ನಾನು ಅನುಭವಿಸಿದ್ದೇನೆ).

ಸ್ಟೇಷನ್ನಿನಿಂದ ಹೊರ ಬಂದ ಕೂಡಲೇ ಜಟಕಾ ಗಾಡಿಯನ್ನು ಓಡಿಸುವವರು - ಇವರಿಗೆ ಆಗ ಜಟಕಾ ಸಾಬಿಗಳು ಎಂದೇ ಹೆಸರು, ಈಗ ಕಾಲ ಬದಲಾಗಿ ಬೇರೆ ಯಾವ ಹೆಸರಿನಿಂದ ಅವರನ್ನು ನಾವು ಮುಜುಗರದಿಂದ ತಪ್ಪಿಸಿಕೊಳ್ಳಲು ಕೂಗಬಹುದು ಎಂದು ಹಲವಾರು ಬಾರಿ ಚಿಂತಿಸಿದ್ದೇನೆ, ನನಗೆ ಯಾವ ಪರ್ಯಾಯ ಪದವೂ ಸಿಕ್ಕಿಲ್ಲ. ಅದರಿಂದ ಈಗಲೂ ನನ್ನ ಮನಸ್ಸು ಒಪ್ಪದಿದ್ದರೂ ಜಟಕಾ ಗಾಡಿ ಓಡಿಸುವವರನ್ನು ಜಟಕಾ ಸಾಬಿ ಎಂದೇ ಕರೆಯಬೇಕಿದೆ, ಪ್ಲೀಸ್ ಯಾರೂ ತಪ್ಪು ತಿಳಿಯಬೇಡಿ ಎಂದು ಕೋರಿಕೆ - ದಾಳಿಯಿಟ್ಟ ಹಾಗೆ ಬಂದು ನಮ್ಮ ಸುತ್ತ ನೆರೆದರು. ಎಲ್ಲೀಗೆ ಸಾಬ್? ಅನ್ನುವ ಸುರಿಮಳೆ ಪ್ರಶ್ನೆ ಅವರಿಂದ. ನಮ್ಮ ತಂದೆ ''ರಾಜಾಜಿನಗರ್‌ಕೊ ಆತಾ ಕ್ಯಾಜೀ...'' ಅಂತ ಪ್ರಶ್ನೆ ಎಸೆದ ಕೂಡಲೆ ಬರೇ ಮೂರು ಜನರನ್ನು ಬಿಟ್ಟು ಮಿಕ್ಕವರೆಲ್ಲರೂ ಅತ್ತ ಚದುರಿದರು.

ಬೆಂಗಳೂರಿಗೆ ಆಗಿನ್ನೂ ಆಟೋರಿಕ್ಷಾಗಳ ಪ್ರವೇಶವಾಗಿರಲಿಲ್ಲ; ನಮ್ಮ ನೆರವಿಗೆ ಆಗ ಇದ್ದದ್ದು ಆಗಿನ ನಗರ ಸಾರಿಗೆ ವ್ಯವಸ್ಥೆ ಮತ್ತು ಜಟಕಾ ಗಾಡಿ - ಮಧ್ಯಮ ವರ್ಗದವರಿಗೆ ಮತ್ತು ಮೇಲಿನ ವರ್ಗದವರಿಗೆ ಟ್ಯಾಕ್ಸಿಯಾಗಿ ಪರಿವರ್ತನೆ ಹೊಂದಿದ್ದ ಅಂಬಾಸಡರ್ ಕಾರುಗಳು. ಯಾರಾದರೂ ಟ್ಯಾಕ್ಸಿಯಲ್ಲಿ ಹೋಗಿಬರುತ್ತಾರೆ ಎಂದರೆ ಅವರು ಅತಿ ಶ್ರೀಮಂತರು ಎಂಬ ಭಾವನೆ ಸಹಜವಾಗಿಯೇ ಬರುತ್ತಿತ್ತು.

ಜಟಕಾ ಸಾಬಿಗಳು ಚದುರಿದರು ಎಂದೆ, ನಿಂತ ಮೂವರಲ್ಲೇ ನಮ್ಮಪ್ಪ ಚೌಕಾಸಿ ನಡೆಸಿದರು. ಕೊನೆಗೆ ಅರ್ಧ ಗಂಟೆಯ ಚರ್ಚೆಯ ನಂತರ ಹದಿನಾಲ್ಕು ಆಣೆಗೆ ಒಬ್ಬ ಬರಲು ಒಪ್ಪಿದ. ಹದಿನಾಲ್ಕು ಆಣೆ ಎಂದರೆ ಈಗಿನ ಎಂಬತ್ತೆಂಟು ಪೈಸೆ, ಆಗಿನ್ನೂ ಪೈಸೆ ಬಂದ ಹೊಸದು ಮತ್ತು ಆಣೆ ಕಾಸುಗಳ ಲೆಕ್ಕಾಚಾರ ಮುಂದುವರೆದಿತ್ತು. ಅವಾಗಿನ ಹದಿನಾಲ್ಕು ಆಣೆ ಬಹುಶಃ ಈಗಿನ ನೂರಕ್ಕೆ ಸಮವಿರಬಹುದೇನೋ ತಿಳಿಯದು! ಮನೆಯ ಇತರೆ ಸಾಮಾನುಗಳನ್ನು ಲಾರಿಯಲ್ಲಿ ತರುವ ಏರ್ಪಾಡು ಮೊದಲೇ

ಮಾಡಿಕೊಂಡಿದ್ದರಿಂದ ನಮ್ಮ ಬಳಿ ಈಗ ಎರಡು ತಗಡಿನ ಟ್ರಂಕು, ನಾಲ್ಕು ಕೈಚೀಲ ಇವಿಷ್ಟೇ ಇದ್ದದ್ದು. ಅಂದ ಹಾಗೆ ಆಗ ಇನ್ನೂ ಸೂಟುಕೇಸಿನ ಹೆಸರನ್ನು ನಾವು ಕೇಳಿರಲಿಲ್ಲ ಮತ್ತು ಬಟ್ಟೆ ಬರೆ ಇತ್ಯಾದಿಗಳನ್ನು ಕೊಂಡೊಯ್ಯುವ ಸಾಧನ ಈ ಟ್ರಂಕುಗಳು ಅಥವಾ ಗೋಣಿ ಬ್ಯಾಗಿನಲ್ಲಿ ಮೂಟೆ ಕಟ್ಟಿ ಸಾಗಿಸುವುದು. ಜಟಕಾ ಗಾಡಿಯನ್ನು ಆತ ಹೋಗಿ ತಂದ, ಅದಕ್ಕೆ ಒಂದು ಬಡಕಲು ಕುದುರೆ ಕಟ್ಟಿದ್ದ. ಒಳಗೆ ಗೋಣೀ ಚೀಲ ಹಾಸಿ ಅದರಲ್ಲಿ ಹುಲ್ಲು ತುಂಬಿ ಸೀಟು ಮೆತ್ತಗಿರುವ ವ್ಯವಸ್ಥೆಯನ್ನೂ ಸಹ ಮಾಡಿದ್ದ. ಕುದುರೆಯ ಬಾಯಿಗೆ ಒಂದು ಗೋಣೀ ಚೀಲ ನೇತು ಹಾಕಿ ಅದರಲ್ಲಿ ಹುಲ್ಲು ತುಂಬಿದ್ದ ಎಂದು ತೋರುತ್ತದೆ, ಬ್ಯಾಗು ಖಾಲಿಯಿತ್ತು. ಮೊದಲು ಕುದುರೆಯ ಪಕ್ಕದಲ್ಲಿ ಎರಡು ಟ್ರಂಕನ್ನು ಹೇಗೋ ಹೊಂದಿಸಿ ಇಟ್ಟ. ನಂತರ ನಮ್ಮನ್ನು ಹತ್ತಲು ಹೇಳಿದ. ನಾವು ಆರು ಜನ, ಅದು ಹೇಗೋ ಸರ್ಕಸ್ಸು ಮಾಡುತ್ತಾ ಒಳಗೆ ತೂರಿದೆವು. ಎಷ್ಟೇ ಒತ್ತಾಗಿ ಕೂತರೂ ಇನ್ನೂ ಮುಂದೆ ಬನ್ನಿ ಇನ್ನೂ ಮುಂದೆ ಬನ್ನಿ ಎಂದು ಹೇಳುತ್ತಲೇ ಕೊನೆಗೆ ಗಾಡಿಯನ್ನು ಹೈ ಥಲ್ ಎಂದು ಕುದುರೆಗೆ ಆದೇಶ ನೀಡಿದ ಹೊರಡಿಸಿದ. ನಾವು, ನಮ್ಮ ಮೇಲೆ ಚೀಲಗಳು ಹೊರಗಿನಿಂದ ನೋಡಿದವರಿಗೆ ಜಂಬೂ ಸವಾರಿ ನೆನಪು ತಂದಿರಬಹುದು.

ಕುದುರೆ ಗಾಡಿಯನ್ನು ಈ ಮೊದಲೇ ಹತ್ತಿ ಕೂತಿದ್ದರೂ ಅಂದಿನ ಗಾಡಿ ಸವಾರಿ ನನಗೆ ಹೊಸದು ಎಂದೇ ಅನಿಸಿತು, ಕಾರಣ ಅಷ್ಟೊಂದು ಜನ ಇಕ್ಕಟ್ಟಿನಲ್ಲಿ ಕೂತಿದ್ದು ಮತ್ತು ಹೊರಗೆ ಏನೂ ಕಾಣದಿರುವ ಹಾಗೆ ಸುತ್ತಲೂ ಕಟ್ಟಿದ್ದ ತಡಿಕೆ ಗೋಡೆ, ಒಳಗೆ ಇರುಕಿ ಸಿಕ್ಕಿಕೊಂಡಿದ್ದ ನಾವು. ಗಾಡಿ ಹೊರಟಿತು, ಜಟಕಾ ಸಾಬಿ ಕೈಯಲ್ಲಿ ಛಾಟಿ ತೆಗೆದ ಕೊಂಚ ಬಗ್ಗಿ ಗಾಡಿಯ ಚಕ್ರಕ್ಕೆ ಕೋಲನ್ನು ಕೊಟ್ಟು ಟರ್ರ್ ಟರ್ರ್ ಶಬ್ದವನ್ನು ಹೊರಡಿಸಿ ಕುದುರೆಗೆ ಉತ್ತೇಜನದ ಮಾತನ್ನೂ ಆಡುತ್ತಾ ಗಾಡಿಗೆ ಚಾಲನೆ ನೀಡಿದ. ರೈಲು ಸ್ಟೇಷನ್ನಿನಿಂದ ರಾಜಾಜಿನಗರಕ್ಕೆ ಈಗ ಮೂರು ಕಿಲೋಮೀಟರಾದರೆ ಹೆಚ್ಚು, ಆದರೆ ಆಗ ಅದರ ಕಥೆಯೇ ಬೇರೆ. ಅದಕ್ಕೆ ಬರುವೆ.

ಸ್ಟೇಷನ್ನಿನಿಂದ ಹೊರಟು ಕೊಂಚ ದೂರ ಬರುವಷ್ಟರಲ್ಲಿ ಕುದುರೆ ಮುಂದಕ್ಕೆ ಹೋಗದೇ ನಿಲ್ಲುವುದೂ ಜಟಕಾ ಸಾಬಿ ಅದಕ್ಕೆ ಛಾಟಿಯಿಂದ ಬಾರಿಸಿ ಮುಂದೆ ಹೋಗುವುದೂ ನಡೆಯುತ್ತಾ ಬಂದಿತ್ತು. ಒಳಗೆ ಕೂತಿರುವ ನನಗೆ ಏನೂ ಕಾಣದು, ಅಮ್ಮನ ಸೆರಗಿನಲ್ಲಿ ಮುಖ ಹುದುಗಿಸಿ ಹೊರಗಿನ ಟರ್ರ್ ಶಬ್ದದ ಕಡೆಗೇ ಗಮನ. ಮೊದಲು ಈ ಶಬ್ದ ಎಲ್ಲಿಯದು ಎಂದು ತಿಳಿದೇ ಇರಲಿಲ್ಲ. ಬೆಂಗಳೂರಿನ ಜಟಕಾ ಗಾಡಿಗಳ ಅಭ್ಯಾಸವಾದ ನಂತರ ಇದರ ಗುಟ್ಟು ತಿಳಿಯಿತು. ಗಾಡಿ ಓಡಬೇಕಾದರೆ ಕುದುರೆಗೆ ಉತ್ತೇಜಿಸಲು ಚಕ್ರದ ನಡುವೆ ಚಾಟಿಯ ಹಿಂಬಾಗದ ಕೋಲನ್ನು ಇಟ್ಟು ಈ ಟರ್ರ್ ಶಬ್ದ ಹೊರಡಿಸುವರಂತೆ - ಇದನ್ನು ಒಬ್ಬ ಜಟಕಾ ಸಾಬಿಯೇ ನನಗೆ ಹೇಳಿದ. (ಮುಂದೆ ಆಟೋ ರಿಕ್ಷಾ ಕಂಡುಹಿಡಿಯುವುದಕ್ಕೆ ಈ ಶಬ್ದವೇ ಪ್ರೇರಣೆ ನೀಡಿದ್ದು ಎಂದು ಕೊರವಂಜಿಯಲ್ಲಿ ಓದಿದ ನೆನಪು - ಇದೂ ಸಹ ಹಸಿರು!) ಒಂದು ನಿಗದಿತ ಜಾಗ ಸೇರಿದ ನಂತರ ಕುದುರೆಯ ಮುಷ್ಕರ ಹೆಚ್ಚಾದಾಗ ಮತ್ತೊಮ್ಮೆ ಸಾಬಿ ಟರ್ರ್ ಟರ್ರ್ ಅನಿಸಿ

ಚಾಟಿಯಿಂದ ರಪರಪ ನಾಲ್ಕು ಬಾರಿಸಿದ. ಕುದುರೆಗೆ ನೋವು ಜಾಸ್ತಿಯಾಗಿರಬೇಕು, ಕೆನೆದು ಮುಂದೆ ಹೆಜ್ಜೆಯಿಟ್ಟಿತು. ಇಳಿಜಾರಿನಲ್ಲಿ ಅಂದರೆ ಈಗಿನ ಡೌನಿನಲ್ಲಿ ಹೋಗುತ್ತಿದ್ದೇವೆ ಅನಿಸಿತು, ಗಾಡಿಯಲ್ಲಿ ನಾವು ಮುಂದೆ ಮುಂದೆ ಸರಿಯುತ್ತಿರುವದನ್ನು ಅನುಭವಿಸಿದಾಗ. ಜಟಕಾ ಸಾಬಿಯ ಹಿಂದೆಯೇ ಕೂತಿದ್ದ ನಮ್ಮ ಅಪ್ಪ ಆಗಾಗ ಅವನಿಗೆ ಸಲಹೆಗಳನ್ನು ನೀಡುತ್ತಾ ಅವನ ಮನೆ ವಿಷಯವನ್ನು ನಮ್ಮ ಹರಕು ಮುರುಕು ಹಿಂದಿಯಲ್ಲಿ ವಿಚಾರಿಸುತ್ತಾ ತಮ್ಮ ಪಾಂಡಿತ್ಯ (ಹೀಗೆ ನನ್ನ ತಾಯಿ ಹೇಳಿದ್ದು - ಈ ಪ್ರಸಂಗ ಮುಗಿದ ನಂತರ) ಪ್ರದರ್ಶಿಸುತ್ತಿದ್ದರು. ಗಾಡಿ ಇಳಿಜಾರಿನಲ್ಲಿ ಜೋರಾಗೇ ಓಡಿತು, ಅಪ್ಪ ''ಝರಾ ಸ್ಲೋಕರೋ, ಹಗ್ಗ ಪಕಡೋ, ಕುದುರೇಕೋ ಮತ್ ಮಾರ್ನಾ ಛೇ ಮತ್ ಮಾರೊ ಝೀ...'' ಮೊದಲಾದ ಆದೇಶಗಳನ್ನು ನೀಡುತ್ತಲೇ ಇದ್ದರು. ಗಾಡಿ ವೇಗವಾಗಿ ಚಲಿಸಿ ಫಕ್ಕನೆ ನಿಂತೂಬಿಟ್ಟಿತು. ಒಳಗಡೆ ಅವಚಿ ಕೂತಿದ್ದ ನಮಗೂ ಏಕ್ ದಂ ಗಾಡಿ ನಿಂತಾಗ ದೂಡಿದಂತಾಗಿ ಒಬ್ಬರ ಮೇಲೊಬ್ಬರು ಆ ಇಕ್ಕಟ್ಟಿನಲ್ಲಿಯೇ ಬಿದ್ದು ಮತ್ತೆ ಸಾವರಿಸಿಕೊಂಡೆವು. ಜಟಕಾ ಸಾಬು ಗಾಡಿಯಿಂದ ಕೆಳಗಿಳಿದ, ''ಛೆ ಮಾದಿರ್ಛೋದ್, ಛಲ್ರೆ...'' ಅಂತ ಕುದುರೆಗೆ ಮತ್ತೆ ಬಾರಿಸಿದ. ಏನು ಮಾಡಿದರೂ ಕುದುರೆ ಅವನ ಮಾತು ಕೇಳುವುದಿಲ್ಲ ಅಂತ ಹಠ ಹಿಡಿದು ಬಿಟ್ಟಿತು. ಇಷ್ಟು ಹೊತ್ತಿಗೆ ಅಪ್ಪನೂ ಜಟಕಾದಿಂದ ಕೆಳಗಿಳಿದಿದ್ದರು. ಏನಾಗಿದೆ ಎಂದು ಆಚೆ ಇಣುಕಿದೆ, ಈಗ ಇಣುಕಿ ನೋಡುವಷ್ಟು ಸಂದು ಗಾಡಿಯಲ್ಲಿ ಉಂಟಾಗಿತ್ತು! ಎದುರಿಗೆ ರಸ್ತೆ ಏರುಮುಖದಲ್ಲಿದೆ - ಅಂದರೆ ಈಗ ನೀವು ''ಅಪ್ಪು'' ಎಂದು ಹೇಳುವಿರಲ್ಲಾ ಹಾಗೆ. ರಸ್ತೆಯನ್ನು ಕತ್ತರಿಸಿ ನಿಮ್ಮೆದುರು ಅದನ್ನು ಓರೆಯಾಗಿ ನಿಲ್ಲಿಸಿದಂತೆ ಕಾಣುತ್ತಿದೆ. ಕುದುರೆ ಯಾಕೆ ಸ್ಟ್ರೈಕು ಮಾಡುತ್ತಿದೆ ಅಂತ ನಮಗೆ ಅರ್ಥವಾಯಿತು. ನಮ್ಮೆಲ್ಲರನ್ನೂ ಹೊತ್ತು ಈ ಅಪ್ ಏರುವುದು ನನ್ನ ಕೈಲಾಗದ ಸಾಹಸ ಎಂದು ಅದು ಹಾಗೇ ಸಾಬು ಎಷ್ಟೇ ಬಡಿದರೂ ಕೇರೇ ಮಾಡದೇ ನಿಂತಿಬಿಟ್ಟಿತ್ತು.

ಜಟಕಾ ಸಾಬಿ ಮತ್ತೂ ಅದಕ್ಕೆ ಬಾರಿಸಿದ, ಅದು ಇವನು ಚಾಟಿ ಬೀಸಿದ ಹಾಗೆಲ್ಲಾ ಅತ್ತ ಇತ್ತ ಕಾಲುಗಳನ್ನು ಅಡ್ಡಾ ದಿಡ್ಡಿಯಾಗಿ ಹಾಕುತ್ತಾ ಅದು ಹೇಗೋ ಏಟು ತಡೆದುಕೊಂಡಿತ್ತು. ಈ ಮಧ್ಯೆ ನಮ್ಮಪ್ಪ ''ಥೋಡೋ ಝೀ ಥಡೋ ಝೀ... ಮತ್ ಮಾರೋ ಝೀ...'' ಮೊದಲಾದ ಪದಗಳಿಂದ ಸಾಬಿಯನ್ನು ಸಮಾಧಾನ ಪಡಿಸಲು ಯತ್ನಿಸುತ್ತಲೇ ಇದ್ದರು. ಸಾಬಿ ಬಾಯಿನಿಂದ ನಿರರ್ಗಳವಾಗಿ ಕುದುರೆಯ ಮೇಲೆ ಉರ್ದು ಬೈಗುಳದ ಸುರಿಮಳೆಯಾಗುತ್ತಿತ್ತು. ಕುದುರೆ ಸಾಕಷ್ಟು ಬೈಗುಳ ಮತ್ತು ಛಾಟಿ ಏಟು ತಿಂದ ನಂತರ ಲದ್ದಿ ಹಾಕಿ ಉಚ್ಚೆಯನ್ನೂ ಹೊಯಿದು ಮೈ ಹಗುರ ಮಾಡಿಕೊಂಡಿತು. ಸಾಬು ಮತ್ತೊಮ್ಮೆ ಅದನ್ನು ಬೈದು ಛಾವಟಿ ಬೀಸಿ ಒಂದು ಏಟು ಅದರ ಬೆನ್ನ ಮೇಲೆ ಬಾರಿಸಿದ. ಕುದುರೆ ಈ ಏಟಿಗೇ ಕಾದಿದ್ದ ಹಾಗೆ ಒಮ್ಮೆ ಹೂಂಕರಿಸಿತು. ಮರು ನಿಮಿಷ ಮುಂದಿನ ಎರಡೂ ಕಾಲನ್ನೆತ್ತಿ ಹಿಂದಿನ ಎರಡು ಕಾಲಿನ ಮೇಲೆ ನಿಲ್ಲಲು ಸಿದ್ಧತೆಯನ್ನು ಆರಂಭಿಸಿತು. ಇಷ್ಟೂ ಹೊತ್ತು ಇಕ್ಕಟ್ಟಿನಲ್ಲಿ ಕೂತು ಅಪ್ಪನ ಅರೆಬರೆ ಉರ್ದು (ಅದು ಉರ್ದು ಅಂತ ಅಪ್ಪ ತಿಳಿದುಕೊಂಡಿದ್ದರು), ಜಟಕಾಸಾಬಿ ಪಾಪ ಮೂಕಪ್ರಾಣಿಗೆ ಹಾಗೆ ರಾಕ್ಷಸ ಬಡಿದ

ಹಾಗೆ ಬಡಿಯುವುದನ್ನು ನೋಡುತ್ತಾ ಅಪರೂಪಕ್ಕೆ ತೆಪ್ಪಗೆ ಕುಳಿತಿದ್ದ ಅಮ್ಮನಿಗೆ ತಾನೇಕೆ ಸುಮ್ಮನೆ ಕೂತಿದ್ದೇನೆ ಎಂದು ಆಶ್ಚರ್ಯವಾಗಿರಬೇಕು. ಮೂಕಪ್ರಾಣಿಗೆ ಸಾಬಿ ಹೀಗೆ ಹೊಡೀತಿದಾನಲ್ಲಾ ಅಂಬುವ ಚಿಂತೆ ಅವಳ ಮುಖದಲ್ಲಿ ಎದ್ದು ಕಾಣುತ್ತಿತ್ತು.'' ಕುದುರೆ ಮೂಕಿ ಎತ್ತಿ ನಮ್ಮನ್ನೆಲ್ಲಾ ಸಾಯಿಸಿಬಿಡುತ್ತೆ. ಅವನಿಗೆ ಗಾಡಿ ಓಡಕೋ ಅಂತ ಹೇಳಬಾರದೇ? ನಾವು ಇಳಕೋತೀವಿ...'' ಅಂತ ಅಪ್ಪನ ಮೇಲೆ ಸಿಡ ಸಿಡ ಅಂದಳು. ಈವರೆಗೆ ಅಮ್ಮ ಮೌನವಾಗಿದ್ದಕ್ಕೇನೇ ಅಪ್ಪನಿಗೆ ಭಾರೀ ಸಂತೋಷ ಆಗಿತ್ತೂ ಅಂತ ತೋರುತ್ತೆ. ಅದರ ಜತೆಗೆ ಗಾಬರಿಯೂ ಸಹ ಆಗಿರಬಹುದು - ಯಾಕೆ ಇವಳು ತೆಪ್ಪಗೆ ಕೂತಿದಾಳಲ್ಲಾ ಅಂತ. ಆದರೂ ''ಫಕಢೋ ಝೀ ಫಾಢೀ ಝೋ ಫಖಢೋ ಝೀ...'' ಅಂತ ಸಾಬಿ ಮೇಲೆ ರೇಗಿದರು. ಸಾಬಿ ಗಾಡಿಯನ್ನ ಅದು ಹೇಗೋ ಓಡಿದು ನಿಂತ. ಕುದುರೆ ಇದನ್ನ ಅವಲೋಕಿಸುತ್ತಾ ಒಂದು ಕ್ಷಣ ತನ್ನ ಯೋಚನೆಗೆ ವಿರಾಮ ನೀಡಿತ್ತು.

ನಾವೆಲ್ಲರೂ ದಡ ದಡ ಅಂತ ಗಾಡಿಯಿಂದ ಕೆಳಗಿಳಿದೆವು. ಟ್ರಂಕು, ಕೈಚೀಲ ಪಕ್ಕದಲ್ಲಿ ಇರಿಸಿಕೊಂಡೆವು. ಇಳಿದ ನಂತರ ಸುತ್ತಲೂ ಒಮ್ಮೆ ನೋಡಿದೆ. ವಿ ಷೇಪಿನ ರಸ್ತೆಯ ವಿ ಜಾಯಿಂಟಿನಲ್ಲಿ ನಾವು ಇದೀವಿ ಅಂತ ಅರ್ಥವಾಯಿತು. ಇನ್ನು ಏರುದಾರಿ, ಕುದುರೆಗೆ ನಮ್ಮನ್ನೂ ಹೊತ್ತು ಗಾಡಿ ಎಳೆಯಲು ಆಗದು, ಅದಕ್ಕೇ ಹೀಗೆ ತಂಟೆ ಮಾಡುತ್ತಿದೆ ಅಂತ ಅರ್ಥೈಸಿಕೊಂಡೆ.

ಗಾಡಿಯಿಂದ ಇಳಿದಿದ್ದೆವು. ಸಾಬ್ ಬಾಡಿಗೆ ಕೊಟ್ಬುಡಿ. ನಾನ್ ಓಗ್ಬೇಕು... ಅಂದ ಸಾಬು. ಅಪ್ಪ ಜೇಬಿನಿಂದ ದುಡ್ಡು ತೆಗೆದರು. ''ರಾಜಾಜಿನಗರದವರೆಗೂ ಮಾತಾಡಿರೋದು, ಇನ್ನೂ ಅರ್ಧ ದಾರೀನೂ ಬಂದಿಲ್ಲ. ಆರಾಣೆ ತಗೋ...'' ಅಂತ ಇವರು ಅವನು ಅದಾಗಾಗಾಕಿಲ್ಲ, ಪೂರ್ತಿ ಬಾಡಿಗೆ ಕೊಡಿ ಅಂತ ಅವನು. ಅರ್ಧಗಂಟೆ ಚರ್ಚಿಸಿದ ನಂತರ ಹತ್ತಾಣೆಗೆ ಅವನನ್ನು ಒಪ್ಪಿಸಿ ಮುಂದೆ ಟ್ರಂಕು, ಕೈಚೀಲ ಹೊತ್ತು ಆ ಏರುದಾರಿಯನ್ನು ಏರಿಕೊಂಡು ಮನೆ ಸೇರಿಕೊಂಡೆವು. ಆ ಹಳ್ಳದ ಜಾಗವೇ ಈಗಿನ ರಾಮಚಂದ್ರಪುರ ಮತ್ತು ಈ ಹಳ್ಳ ಸುಮಾರು ವರ್ಷ ಹಾಗೇ ಇತ್ತು. 66-68ರ ನಡುವೆ ಸರ್ಕಾರ ಈ ಹಳ್ಳವನ್ನು ಮುಚ್ಚಿ ತಗ್ಗನ್ನು ಏರಿಸಿ ಈಗಿರುವ ರಸ್ತೆಗೆ ರೂಪ ಕೊಟ್ಟಾಯಿತು. ಈಗ ಅಲ್ಲಿ ಒಂದು ಫ್ಲೈ ಓವರು ನಿರ್ಮಾಣವಾಗುತ್ತಲಿದ್ದು ಇದೂ ನಮ್ಮ ನೆನಪಿನಲ್ಲಿ ಸೇರಿಹೋಗಲಿದೆ. ಬೆಂಗಳೂರಿನ ಮನೆ ಸೇರಿದ ಮೇಲೆ ಈ ಕುದುರೆ ಕಥೆಯನ್ನು ಸುಮಾರು ಸಲ ನಮ್ಮ ನೆಂಟರು ಇಷ್ಟರಿಗೆ ಹೇಳಿದ್ದೇವೆ. ನಮ್ಮಮ್ಮನಂತೂ ಗಂಡನ ''ಭಾಷಾ ಪಾಂಡಿತ್ಯದ'' ಬಗ್ಗೆ ಬಿದ್ದು ಬಿದ್ದು ನಗುವಷ್ಟು ಹೇಳಿದ್ದಾಳೆ. ಕುದುರೆ ಗಾಡಿಯವರ ಚಾಲಾಕುತನ ಇದು, ಯಾವ ಗಾಡಿಯೂ ಈ ದಿಬ್ಬ ಹತ್ತೋದಿಲ್ಲ ಜಟಕಾಸಾಬಿ ನಿಮಗೆ ಗಸ್ತು ಕೊಟ್ಟ ಅಂತ ನಂಟರು ಹೇಳಿಕೊಂಡು ನಕ್ಕದ್ದೂ ಉಂಟು! ಇದು ನಿಜ ಇದ್ದರೂ ಇರಬಹುದು ಅಂತ ನಮಗೆ ಅನಿಸಿದ್ದು ಇದೇ ಅನುಭವ ಮತ್ತೆ ಆರೆಂಟು ಸಲ ಪುನರಾವರ್ತನೆಗೊಂಡಾಗ.

ಟ್ರಸ್ಟ್ ಬೋರ್ಡಿನ ಮನೆಗೆ ನಾವು ಸೇರಿಕೊಂಡಿದ್ದು, ಆಗ ಅದಕ್ಕೆ ತಿಂಗಳಿಗೆ ಎರಡೂವರೆ ರೂಪಾಯಿ ಬಾಡಿಗೆ. 68-69ರ ವೇಳೆಗೆ ಇದು ನಾಲ್ಕು ರೂಪಾಯಿಗೆ

ಏರಿತ್ತು. ನಂತರ ಇದೇ ಮನೆಯನ್ನು ವಾಸವಿರುವವರಿಗೇ ಅಂತ ಸರ್ಕಾರ ಮಾರಾಟ ಮಾಡಿತು, ಅಲ್ಲಿಯವರೆಗೆ ಕಟ್ಟಿದ ಬಾಡಿಗೆಯೂ ಸೇರಿದ ಹಾಗೆ ಈ ಮನೆಗಳು ಪದಿನೈದು ಸಾವಿರ ರೂಪಾಯಿಗಳಿಗೆ ಕಾರ್ಮಿಕರಿಗೆ ದಕ್ಕಿತು. ಈಗ ಇಲ್ಲಿ ಅದರ ಬೆಲೆ ಮೂವತ್ತು ಲಕ್ಷ ಅಂದರೆ ತಲೆ ತಿರುಗತ್ತೆ. ರಾಜಾಜಿನಗರ ಮೊದಲನೇ ಬ್ಲಾಕು 56ರ ಸುಮಾರಿಗೆ ಇನ್ನೂ ರೂಪ ತಳೀತಿತ್ತು. ಈಗಿನ ಪವರ್ ಹೌಸಿನ ಮುಂದೆಯೇ ಶಿವನ ಹಳ್ಳಿ ಕೆರೆ ಅಗಲವಾಗಿ ಹರಡಿತ್ತು. ಪ್ರಕಾಶ ನಗರದ ಪಕ್ಕ ಜೂಗನ ಹಳ್ಳಿಕೆರೆ ಇದ್ದು ಆಗಿನ್ನೂ ಮರಿಯಪ್ಪನ ಪಾಳ್ಯದ ಕಲ್ಪನೆಯೇ ಯಾರಿಗೂ ಬಂದಿರಲಿಲ್ಲ! ಈಗಿನ ಪ್ರಕಾಶ ನಗರದಲ್ಲಿ ಒಂದು ಚಿಕ್ಕ ಕಾಲುದಾರಿ ಇದ್ದು ಅದು ಶ್ರೀರಾಮಪುರಕ್ಕೆ ದಾರಿ. ಇವೆರಡರ ನಡುವೆ ವೃಷಭಾವತಿ ನದಿಗೆ (ಈಗಿನ ಗಲೀಜು ನೀರು ಹೋಗುವ ಕಾಲುವೆ - ಆಗಲು ಗಲೀಜು ನೀರು ಹೋಗುತ್ತಿತ್ತು) ಒಂದು ಪುಟ್ಟ ಸೇತುವೆಯಿತ್ತು, ಶ್ರೀರಾಮಪುರಕ್ಕೆ ದಾರಿಯಂತೆ ಪ್ರಕಾಶನಗರದ ಒಂದು ಚಿಕ್ಕ ಗಲ್ಲಿಯಲ್ಲಿ ಇತ್ತು. ಪ್ರಕಾಶ ನಗರ ಎಪ್ಪತ್ತನೆಯ ಇಸವಿಯಲ್ಲಿ ರೂಪು ತಳೆದ ನೆನಪು; ಈಗಿನ ಡಾ॥ ರಾಜ್‌ಕುಮಾರ್ ರಸ್ತೆಯ ಬಲಭಾಗದಲ್ಲಿ ಪೂರಾ ಜಮೀನುಗಳಿದ್ದು ಆಗಾಗ್ಗೆ ಒಂದು ಟೂರಿಂಗ್ ಟಾಕೀಸು ಇಲ್ಲಿ ಡೇರಾ ಹೂಡುತ್ತಿತ್ತು. ಈಗಿನ ಹಾಗೆಯೇ ಆಗಲೂ ಅಲ್ಲಿ ಬರೀ ತಮಿಳು ಸಿನಿಮಾಗಳು ಮತ್ತು ನಾಲ್ಕಾಣೆ ಕೊಟ್ಟು ತಮಿಳಿನ ಅವ್ವೆಯ್ಯಾರ್ ಎಂಬ ಸಿನಿಮಾ ನೋಡಿದ ನೆನಪೂ ನನಗಿದೆ! ಟೆಂಟಿನ ಪಕ್ಕದಲ್ಲೇ ಜೆಮಿನಿ ಸರ್ಕಸ್ಸಿನವರೂ ಸಹ ಒಮ್ಮೆ ಸರ್ಕಸ್ಸು ಡೇರಾ ಹೂಡಿದ್ದರು. ಈಗ ಇರುವ ನವರಂಗ್ ಥಿಯೇಟರು, ಅದರ ಮುಂದಿನ ಸರ್ಕಲ್ಲು, ಸರ್ಕಲ್ಲಿನಿಂದ ಮಲ್ಲೇಶ್ವರದ ದಾರಿ, ಮರಿಯಪ್ಪ ಪಾರ್ಕು, ಯಶವಂತಪುರದ ದಾರಿ... ಎಲ್ಲವೂ ನಂತರ ಹುಟ್ಟಿ ಬೆಳೆದವು.

ಟ್ರಸ್ಟ್ ಬೋರ್ಡಿನ ಮನೆಗೆ ಬಂದು ಸೇರಿದೆವಲ್ಲಾ ಅದರ ನಂತರ ನಾವು ಮೊದಲ ಬಾರಿಗೆ ಬೆಂಗಳೂರಿಗೆ ನೆಲೆಸಲು ಬಂದ ಕಥೆ ನಮ್ಮ ಸಂಸಾರದಲ್ಲಿ ಹಲವಾರು ಭಾರಿ ಪುನರಾವರ್ತನೆಯಾಗಿದೆ. ಜಟಕಾ ಸಾಬಿ ಎದುರು ನಿಮ್ಮ ಭಾಷಾ ಪಾಂಡಿತ್ಯ ತೋರಿಸಿದರಲ್ಲಾ ಎಂದೇ ನಮ್ಮಮ್ಮ ನಮ್ಮಪ್ಪನನ್ನು ಕಾಲು ಕೆರೆದು ಜಗಳಕ್ಕೆ ಆಹ್ವಾನಿಸುತ್ತಿದ್ದಳು. ಆದರೆ ನಮ್ಮಪ್ಪನಿಗೆ ಇದ್ಯಾವುದರ ಗೊಡವೆಯೂ ಇಲ್ಲ! ಈಗಿನ ಕನ್ನಡಿಗರ ಹಾಗೆಯೇ ಯಾರು ಯಾರು ಯಾವ ಭಾಷೆ ಮಾತನಾಡುವರೋ ಅವರೊಂದಿಗೆ ಅವರ ಭಾಷೆಯಲ್ಲಿಯೇ ಇವರೂ ಸಂಪರ್ಕ ಸಾಧಿಸಿ ಮಾತು ಕತೆ ನಡೆಸುತ್ತಿದ್ದರು! ಅಂದರೆ ನಮ್ಮ ಟಿಪಿಕಲ್ ಕನ್ನಡಿಗರ ಹಾಗೆಯೇ.

ರಾಜಾಜಿನಗರದ ಕಾರ್ಮಿಕರೇ ಹೆಚ್ಚಿದ್ದ ಸ್ಥಳದಲ್ಲಿ ನಮ್ಮ ಬೆಂಗಳೂರು ವಾಸ ಆರಂಭವಾದ್ದರಿಂದ ನಾನೂ ನನ್ನ ಬಹುಪಾಲು ವಿದ್ಯಾಭ್ಯಾಸವನ್ನು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿಯೇ ಮುಗಿಸಿದೆ. ಸರ್ಕಾರೀ ಶಾಲೆ ಮತ್ತು ಕಾಲೇಜಿನ ಓದುಗಳು ನನ್ನಲ್ಲಿ ಯಾವ ರೀತಿಯ ಇನ್‌ಫೀರಿಯಾರಿಟಿಯನ್ನೂ ಬೆಳೆಸಲಿಲ್ಲ, ಈಗಿನ ಮಕ್ಕಳು ಗವರ್ನಮೆಂಟು ಶಾಲೆಯಲ್ಲಿ ಓದುವುದು ಘನತೆಗೆ ಕಮ್ಮಿ ಎಂದುಕೊಳ್ಳುವ ಹಾಗೆ ನಮಗೆಂದೂ ಅನಿಸಲೇ ಇಲ್ಲ!

★ ಸರ್ಕಾರೀ ಶಾಲೆಯಲ್ಲಿನ ಒಂದು ಅನುಭವ ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿದೆ - ಈಗ ಅದರ ಪುರಾಣ: ಇದಕ್ಕೆ ಜೊಗಸೆ ತುಂಬಾ ದ್ರಾಕ್ಷಿ ಗೋಡಂಬಿ...! ಪುರಾಣ ಎಂದೇ ಹೆಸರಿಟ್ಟಿದ್ದೇನೆ!

ಅರವತ್ತರ ದಶಕದಲ್ಲಿ ನಾನು ನನ್ನ ಅಣ್ಣ ಪ್ರೈಮರಿ ಶಾಲೆಯನ್ನು ಮುಗಿಸಿ ಮಿಡಲ್ ಶಾಲೆಗೆ ಸೇರಿದ್ದೆವು. ಮನೆ ಹತ್ತಿರದಲ್ಲಿ ಸರ್ಕಾರೀ ಶಾಲೆ ಇಲ್ಲದೇ ಇದ್ದದ್ದು ಮತ್ತು ಇದ್ದ ಒಂದೇ ಒಂದು ಖಾಸಗಿ ಶಾಲೆಗೆ ನೀಡಬೇಕಾದ ಶುಲ್ಕ ನಮ್ಮ ಕೈಗೆ ಮೀರಿದ್ದು ಅಂತ ನಮ್ಮನ್ನು ದೂರದ ಶ್ರೀರಾಮಪುರದ ಸರ್ಕಾರೀ ಶಾಲೆಗೆ ಸೇರಿಸಿದ್ದರು. ರಾಜಾಜಿನಗರದ ನಮ್ಮ ಮನೆಯಿಂದ ಮೂರೂವರೆ ಮೈಲಿನಷ್ಟು ದೂರ ಈ ಶಾಲೆ.

ಪ್ರತಿದಿವಸ ಬೆಳಿಗ್ಗೆ ಅಮ್ಮನಿಗೆ ಅಕ್ಕಿ ತಂದುಕೊಟ್ಟು ಅದರಲ್ಲಿ ಅನ್ನವಾದ ನಂತರ ಇನ್ನೂ ಮುಗಿದಿರದಿದ್ದ ಸಾರಿನ ಸಂಗಡ ಅಂದರೆ ಬೇಳೆ ಕಟ್ಟಿನ ಸಂಗಡ ಅನ್ನ ತಿಂದು ಶಾಲೆಗೆ ಓಡುತ್ತಿದ್ದೆವು. ಬಡತನದ ಕಾರಣವೋ ಅಥವಾ ಆಗಿನ ವ್ಯವಸ್ಥೆಯೇ ಹಾಗೋ ಏನೋ ಅಕ್ಕಿಯನ್ನು ಪ್ರತಿದಿವಸ ಕೊಂಡು ತರುವುದು ಅಭ್ಯಾಸವಾಗಿಬಿಟ್ಟಿತ್ತು. ಮನೆ ಹತ್ತಿರವಿದ್ದ ಒಂದೇ ಅಂಗಡಿಯಲ್ಲಿ ಒಂದು ರೂಪಾಯಿ ಒಂದೂವರೆ ಆಣೆ ಕೊಟ್ಟರೆ ಒಂದೂವರೆ ಸೇರು ಅಕ್ಕಿ ಸಿಗುತ್ತಿತ್ತು. ಇದನ್ನ ನಾನೂ ನಮ್ಮ ಅಣ್ಣನೂ ಜತೆಯಲ್ಲಿ ಹೋಗಿ ತರುತ್ತಿದ್ದೆವು.

ಇದೇ ಅಕ್ಕಿ ನಮ್ಮ ಶಾಲೆಯ ಬಳಿ ಒಂದು ರೂಪಾಯಿ ಒಂದೂ ಕಾಲಾಣೆಗೆ ಸಿಗುತ್ತೆ ಅನ್ನುವುದನ್ನು ನಮ್ಮಣ್ಣ ಒಂದು ದಿವಸ ಪತ್ತೆ ಹಚ್ಚಿದ. ಅಮ್ಮನ ಹತ್ತಿರ ಎಂದಿನ ಹಾಗೇ ಒಂದು ರೂಪಾಯಿ ಒಂದೂವರೆ ಆಣೆ ತೆಗೆದುಕೊಂಡು ಶಾಲೆಯ ಬಳಿ ಒಂದು ರೂಪಾಯಿ ಒಂದೂ ಕಾಲಾಣೆಗೆ ಸಿಗುವ ಅಕ್ಕಿಯನ್ನು ಮೊದಲ ಸಲ ತಂದೆವು. ಖುಷಿಯಿಂದ ಈ ವಿಷಯ ಅಮ್ಮನಿಗೆ ಅಣ್ಣ ತಿಳಿಸಿದ. ಅಮ್ಮ ನಮ್ಮನ್ನು ಮುದ್ದಿಸಿ ಅಯ್ಯೋ ಮಕ್ಕಳಾ ಈಗಲೇ ಅದೆಷ್ಟು ಬುದ್ಧೀನೋ ನಿಮಗೇ ಅಂತ ಹೇಳಿ ನಾವು ಮಿಗಿಸಿದ್ದ ಮೂರು ಕಾಸನ್ನ ನಮಗೆ ಪಾಕೆಟ್ ಮನಿ ಅಂತ ನೀಡಲು ಆರಂಭಿಸಿದಳು. ಪಾಕೆಟ್ ಮನಿ ಎಂಬುದರ ಅರ್ಥವೇ ನಮಗೆ ಆಗ ತಿಳಿಯದು. ಇದೇ ನಮ್ಮ ಮೊದಲ ಪಾಕೆಟ್ ಮನಿ ಎಂಬುವುದು ನಂತರ ಅರಿವಿಗೆ ಬಂದಿತು.

ಮೂರು ಕಾಸು ಅಂದರೆ ಈಗಿನ ಸುಮಾರು ಒಂದೂವರೆ ಪೈಸೆಗೆ ಸಮ! ಒಂದು ರೂಪಾಯಿಗೆ ಆಗ ನೂರಾ ತೊಂಬತ್ತೆರಡು ಕಾಸು, ಹದಿನಾರಾಣೆಗೆ ಒಂದು ರೂಪಾಯಿ, ಪಾವಲಿ ಅಂದರೆ ನಾಲ್ಕಾಣೆ! ಹನ್ನೆರಡು ಕಾಸಿಗೆ ಅಂದರೆ ಒಂದಾಣೆಗೆ - ಒಂದು ಮಸಾಲೆ ಸಿಗುತ್ತಿತ್ತು. ಅಮ್ಮ ಇಬ್ಬರಿಗೂ ಸೇರಿ ಮೂರು ಕಾಸನ್ನ ಪಾಕೆಟ್ ಮನಿ ಅಂತ ಕೊಟ್ಟಳಲ್ಲಾ, ಅದನ್ನ ಜೋಪಾನವಾಗಿ ಇಟ್ಟುಕೊಂಡೆವು. ಶಾಲೆ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಹತ್ತಿರದಲ್ಲಿನ ಈಗಿನ ಸಂಪಿಗೆ ಥಿಯೇಟರಿನಿಂದ ಶ್ರೀರಾಮಪುರಕ್ಕೆ ಹೋಗುವ ದಾರಿಯಲ್ಲಿನ ರೈಲು ಬ್ರಿಡ್ಜು ಎದುರು ಇರುವ ಆಂಜನೇಯನ ಗುಡಿ ಮುಂದೆ ಹೋಗಿ ಮುಚ್ಚಿರುತ್ತಿದ್ದ ದೇವಸ್ಥಾನದ ಬಾಗಿಲ ಸಂದಿಯಿಂದ ದೇವರನ್ನು ನೋಡಿ ಅಲ್ಲಿಯೇ ಪಕ್ಕದಲ್ಲಿನ ಅಂಗಡಿಯಿಂದ ಮೂರು ಕಾಸಿಗೆ ಕಳ್ಳೆಪುರಿ ಕೊಂಡು ತಿನ್ನುತ್ತಿದ್ದೆವು. ಹೀಗೊಂದು ಎರಡು ಮೂರು ದಿವಸ ನಡೆದ ನಂತರ ನಾವಿಬ್ಬರೂ ಅಣ್ಣ ತಮ್ಮ

ಮಧ್ಯಾಹ್ನದ ಬಿಡುವಿನಲ್ಲಿ ಪುರಿ ತಿನ್ನುವುದನ್ನು ಗೆಳೆಯರು ಪತ್ತೆ ಹಚ್ಚಿದರು. ಮಧ್ಯಾಹ್ನದ ಸಮಯ ನಮ್ಮನ್ನು ಹಿಂಬಾಲಿಸಲು ಆರಂಭಿಸಿದರು. ಅವರನ್ನು ಬಿಟ್ಟು ತಿನ್ನುವ ಹಾಗಿಲ್ಲ, ಅದರಿಂದ ಮೂರು ಕಾಸಿನ ಕಳ್ಳೆಪುರಿಯನ್ನು ಆರುಜನ ಹಂಚಿ ತಿನ್ನಲು ಶುರು ಮಾಡಿದೆವು. ಹೀಗೂ ಒಂದೆರಡು ವಾರ ನಡೀತು. ಸಂಜೆ ಆಟದಲ್ಲಿ ಈ ಗುಂಪಿಗೂ ನಮ್ಮ ಗುಂಪಿಗೂ ಜಗಳವಾಗಿ ಈ ನಾಲ್ಕೂ ಜನ ನಮ್ಮ ಸಂಗಡ ಠೂ ಬಿಟ್ಟುಬಿಟ್ಟರು. ಠೂ ಬಿಟ್ಟವರು ನಮ್ಮ ಹತ್ತಿರ ಕಳ್ಳೆಪುರಿ ತಿನ್ನುವುದು ಹೇಗೆ? ಕಳ್ಳೇಪುರಿಗೂ ನಮ್ಮ ಸಂಗಡ ಬರುವುದನ್ನು ನಿಲ್ಲಿಸಿದರು.

ಕಳ್ಳೆಪುರಿ ತಿನ್ನೋದು ಬೇಡ - ಅಂದ ನಮ್ಮಣ್ಣ ಈ ಜಗಳದ ನಂತರ.

ಹಾಗಿದ್ದರೆ ಆ ಕಾಸು ಏನು ಮಾಡ್ತೀಯಾ ಅಂತ ನನ್ನ ಪ್ರಶ್ನೆ.

ಅದನ್ನ ಅಮ್ಮನಿಗೇ ಕೊಟ್ಟುಬಿಡೋಣಾ... ಅಂದ!

ಕಾಸನ್ನ ಅಮ್ಮನಿಗೇ ಕೊಟ್ಟು ಬಿಡೋ ಹಾಗಿದ್ದರೆ ಇನ್ಮೇಲೆ ಅಕ್ಕಿ ತರೋಕ್ಕೆ ನೀನೊಬ್ಬನೇ ಹೋಗು, ನಾನು ಬರೋಲ್ಲ... ಅಂದೆ. ಅಕ್ಕಿ ತರಲು ಬೆಳಿಗ್ಗೆ ನಾನು ಅವನಿಗೆ ಜತೆ. ಅಣ್ಣ ಒಂದು ನಿಮಿಷ ಚಿಂತಿಸಿದ, ಕಳ್ಳೆಪುರಿ ಬೇಡ ಅದರ ಬದಲು ಬೇರೆ ಪ್ಲಾನ್ ಮಾಡೋಣಾ ಅಂದ.

ಒಂದು ವಾರ ಅಕ್ಕಿ ತಂದು ಒಂದೂ ಮುಕ್ಕಾಲು ಆಣೆ ಮಿಗಿಸಿಕೊಂಡಿದ್ದವು. ಒಂದೂ ಮುಕ್ಕಾಲು ಆಣೆ ಅಣ್ಣನ ಜೇಬಿನಲ್ಲಿ ಭದ್ರವಾಗಿ ಕೂತಿತ್ತು. ಎಂಟನೇ ದಿವಸದ ಮೂರು ಕಾಸು ಸೇರಿಸಿದ ನಂತರ ಅವತ್ತಿನ ಶಾಲೆಯ ಮಧ್ಯಾಹ್ನದ ಬಿಡುವಿನಲ್ಲಿ ಎರಡಾಣೆಯನ್ನು - ಮೂರುಕಾಸಿನ ಆರು ಬಿಲ್ಲೆ, ಅರ್ಧಾಣೆಯ ಒಂದು ಬಿಲ್ಲೆಯನ್ನು ಜೇಬಿನಲ್ಲಿ ಇರಿಸಿಕೊಂಡು ಹೆಗಲ ಮೇಲೆ ಸ್ಕೂಲಿನ ಬ್ಯಾಗನ್ನು ಹೊತ್ತು ಬಲಗೈಯಲ್ಲಿ ನನ್ನ ಕೈ ಹಿಡಿದು ಅಣ್ಣ ನನ್ನನ್ನು ಅಕ್ಕಿ ತರುವ ಅಂಗಡಿಯ ಹತ್ತಿರಕ್ಕೆ ಕರೆದುಕೊಂಡು ಹೋದ, ಅಂಗಡಿ ಮುಂದೆ ನಿಂತೆವು.

ಶೆಟ್ರೇ ಎರಡಾಣೆ ಇದೆ, ಅದಷ್ಟಕ್ಕೂ ದ್ರಾಕ್ಷಿ, ಗೋಡಂಬಿ ಕೊಡಿ ಅಂದ! ಶೆಟ್ರು ಎರಡಾಣೆ ಇಸಕೊಂಡರು. ಪಕ್ಕದ ಡಬ್ಬಿಯಿಂದ ಕೈ ಅಳತೆಯಲ್ಲೇ ದ್ರಾಕ್ಷಿಯನ್ನ ತೆಗೆದರು. ಕಾಗದ ಹುಡುಕಲು ಅತ್ತ ನೋಡಿದರು.

ಪೇಪರಿನಲ್ಲಿ ಕಟ್ಟೋದು ಬೇಡ ಶೆಟ್ಟರೇ ಕೈಗೇ ಕೊಡಿ ಜೇಬಿನಲ್ಲೇ ಹಾಕ್ಕೋತೀವಿ... ಅಂದ ಅಣ್ಣ. ಕೈಯನ್ನ ಬೊಗಸೆ ರೀತಿಯಲ್ಲಿ ಹಿಡಿದೆವು. ಒಂದು ಬೊಗಸೆ ತುಂಬಾ ದ್ರಾಕ್ಷಿ ಹಾಕಿದರು. ಗೋಡಂಬಿಯ ಡಬ್ಬಿ ಹುಡುಕಿ ಅದನ್ನೂ ಕೈ ಅಳತೆಯಲ್ಲಿಯೇ ಇನ್ನೊಂದು ಬೊಗಸೆಗೆ ಇಬ್ಬರಿಗೂ ಹಾಕಿದರು. ಇಬ್ಬರಿಗೂ ಬೊಗಸೆ ತುಂಬಾ ದ್ರಾಕ್ಷಿ, ಗೋಡಂಬಿ ಸಿಕ್ಕಿತು! ಮನೆಯಲ್ಲಿ ಒಂದೋ ಎರಡೋ ಚೂರು ದ್ರಾಕ್ಷಿ ಗೋಡಂಬಿಯನ್ನು ಹಬ್ಬ ಹರಿದಿನಗಳಂದು ಪಾಯಸ ಮಾಡಬೇಕಾದರೆ ಅಮ್ಮ ನಮ್ಮ ಕೈಗೆ ನೀಡುತ್ತಿದ್ದಳು. ಈಗ ಇಡೀ ಬೊಗಸೆಯ ತುಂಬಾ ನಮ್ಮ ಕೈಯಲ್ಲಿ ದ್ರಾಕ್ಷಿ ಗೋಡಂಬಿ...! ಯಾರಿಗುಂಟು ಈ ಸುಖ... ಇಡೀ ಎರಡು ದಿವಸ ಆ ದಾಕ್ಷಿ ಗೋಡಂಬಿಯನ್ನು ತಿಂದೆವು...!

ಇದು ಸುಮಾರು ನಾಲ್ಕು ದಶಕಕ್ಕೂ ಹಿಂದೆ ನಡೆದ ಕತೆ. ಸಂಪಾದಿಸಲು ಶುರು ಮಾಡಿದ ನಂತರ ಅದೆಷ್ಟು ಟನ್ ದ್ರಾಕ್ಷಿ ಗೋಡಂಬಿಯನ್ನು ತಿಂದಿದೀನೋ ನೆನಪಿಲ್ಲ, ಆದರೆ ಅವತ್ತು ನಮ್ಮ ಪುಟ್ಟ ಕೈಗಳಲ್ಲಿ ತುಂಬಿಕೊಂಡ ದ್ರಾಕ್ಷಿ ಗೋಡಂಬಿಗಳ ನೆನಪು ಈಗಲೂ ದಿನಕ್ಕೊಮ್ಮೆಯಾದರೂ ಬರುತ್ತದೆ. ಈಗ ನಮ್ಮ ಮಕ್ಕಳಿಗೆ ಕೈತುಂಬಾ ದ್ರಾಕ್ಷಿಯನ್ನೋ ಗೋಡಂಬಿಯನ್ನೋ ನೀಡಬೇಕಾದಾಗಲೆಲ್ಲಾ ಈ ಮಕ್ಕಳು ಮುಂದೆ ಇವುಗಳನ್ನು ನೆನೆಸಿಕೊಳ್ಳುವರೇ ಎನಿಸುತ್ತದೆ.


ಬಹುಶಃ ಈ ರೀತಿಯ ಮಿಗಿಸುವ ಮತ್ತು ಉಣ್ಣುವ ಗುಣದಿಂದಲೇ ಇರಬೇಕು ಈಗ ಯಾವ ವಿಷಯದಲ್ಲೂ ಕೊರತೆ ಎನ್ನುವುದು ಇಲ್ಲದ ಹಾಗೆ ಜೀವನ ನಡೆಸುತ್ತಿದ್ದೇವೆ...!

(ಆದರೆ ಮುಂದೆ ಇದೇ ರೀತಿ ಪಾಕೆಟ್ ಮನಿ ಶೇಖರಗೊಂಡಾಗ ಅದರಲ್ಲಿ ಪುಸ್ತಕ ತಂದು ಓದುತ್ತಿದ್ದೆವು. ಸುಮಾರು ಆ ಸಮಯದಲ್ಲೇ ಕೊಂಡ ಭರಧ್ವಾಜ ಇಂಗ್ಲಿಷ್-ಕನ್ನಡ ಡಿಕ್ಷನರಿ ಇನ್ನೂ ನನ್ನ ಬಳಿಯಲ್ಲಿದೆ!)

ನಗರ ಬೆಳೆಯುತ್ತಾ ಬಂದ ಹಾಗೇ ನಾವೂ ಅದರ ಸಂಗಡ ಬೆಳೆದು ನಗರದ ಹಾಗೇ ಅಗಾಧ ಎನ್ನುವ ಹಾಗೇ ಬೆಳೆದೆವು, ಬೆಳೆಯುತ್ತಲೇ ಬಂದೆವು. ನಗರದ ಸಂಗಡ ನಮ್ಮ ಬೆಳವಣಿಗೆ ಹೇಗಾಯಿತು ಎಂಬುವುದು ಮತ್ತೊಂದು ರೋಚಕ ಕತೆ ಎಂದೇ ನನ್ನ ಭಾವನೆ. ಈ ಕತೆಯನ್ನು ಮತ್ತೊಂದು ಸಲ ನೀವು ಸಿಕ್ಕಿದಾಗ ಹೇಳುತ್ತೇನೆ...!

(ನಾನೇನಾದರೂ ನನ್ನ ಆತ್ಮಚರಿತ್ರೆಯನ್ನು ಬರೆಯುವಷ್ಟು ದೊಡ್ಡ ಮನುಷ್ಯನಾದರೆ ಅದರಲ್ಲಿ ಈ ಛಾಪ್ಟರೂ ಸಹ ಅಳವಡಿಕೆಯಾಗುತ್ತದೆ!)

✧✧✧



ಮುಳುಗುತಿರುವೆ ಹೆರಳಿನಲ್ಲಿ ನಿನ್ನ ನೆರಳ ನೆನಪಿನಲ್ಲಿ ಮೇಲೆ ಎತ್ತಬಾರದೆ
ಗಂಗೆ...ತುಂಗೆ...ಯಮುನೆಯೇ ಪ್ರೀತಿ ಕಡಲ ಸೀಮೆಯೆ ನೀನದೆಷ್ಟು
ನಿಷ್ಕರುಣೆಯೇ... ನಿನ್ನ ನಂಬಿ ನೇಣಿನಲ್ಲಿ... ಏಣಿಯಲ್ಲಿ ಆತ್ಮಹತ್ಯೆ...
ಪ್ರೇಮಿಯೇ....

ಮೆಂತ್ಯದ ಸೊಪ್ಪು

✧ ನುಗ್ಗೇಹಳ್ಳಿ ಪಂಕಜ

ಊಟಕ್ಕೆ ಕರೆದಿದ್ದೆ; ಸಂಭ್ರಮದಿಂದಲೇ ಬಂದರು ಅಳಿಯಂದಿರು!

''ಏನಡಿಗೆ ಮಾಡಿದೀರಿ ಅತ್ತೆ? ಸಾಕ್ಷಾತ್ ಅನ್ನಪೂರ್ಣಾದೇವಿಯೇ ನೀವು! ಎಷ್ಟು ದಿನ ಆಗಿತ್ತೋ, ನಿಮ್ಮ ವಂಡರ್‌ಫುಲ್ ಕೈ ಅಡಿಗೇನ ತಿಂದು!'' ಎಂದೆಲ್ಲ ಪ್ರವೇಶ ವಚನಗಳನ್ನು ನುಡಿಯುತ್ತಾ....

ಆದ್ರೆ...

'ಮೆಂತ್ಯದ ಸೊಪ್ಪಿನ ಹುಳಿ' ಎಂದಾಕ್ಷಣ ಪರಾರಿ!

''ನಂಗೆ ತುರ್ತು ಕಾಲ್ ಬಂದಿದೆ. ಆಫೀಸಿಂದ - ನೀವು ಊಟ ಮಾಡಿ ಆರಾಮವಾಗಿ'' ಎಂದು!

''ಯಾಕೆ, ಮೆಂತ್ಯದ ಸೊಪ್ಪು ಎಂದ್ರೆ ನಿಮ್ಮ ಯಜಮಾನ್ರಿಗೆ ಪ್ರಾಣ ಅಲ್ಲವೇನೇ? ಇನ್ನೂ ನಿಂಗೇ ಅಷ್ಟಾಗಿ ಹಿಡಿಸ್ತಿರಲಿಲ್ಲ - ಅದಕ್ಕಾಗಿ ನಮ್ಮನೇಲಿ ಅದೇನ್ ಜಗಳ - ಜಗಳ, ಅದನ್ನ ತಂದಾಗೆಲ್ಲಾ! ಹಾಗಿರೋವಾಗ...'' ಎಂದು ನಾನು ಅಚ್ಚರಿಪಟ್ಟಾಗ, ಮಗಳಿಂದ ಬಂದ ಜವಾಬು

''ಹೌದಮ್ಮ ಹೌದು... ಆದ್ರೀಗ, ಅವರಿಗೆ ಮೆಂತ್ಯದ ಸೊಪ್ಪಿನ ತಲೆ ಕಂಡ್ರಾಗಲ್ಲ!''

''ಕಾರಣ?''

ಹೇಳಿದಳು ದೊಡ್ಡ ಕಥೆಯನ್ನೇ!

ಇದ್ದಕ್ಕಿದ್ದಂತೆ ನನ್ನ ಮಗಳಿಗೆ ಅನ್ನಿಸ್ತಂತೆ - ತನಗೂ ''ಫ್ಯಾಮಿಲಿ ಖಾಯಿಲೆ'' ಡಯಾಬಿಟಿಸ್ ಬರಬಹುದು, ಅಂತ... ಆಗ, ಪಕ್ಕದ್ಮನೆ ಅತ್ತೆ ಒಂದು ದೊಡ್ಡ ಪಥ್ಯದ ಪಟ್ಟಿಯನ್ನೇ ಕೊಟ್ಟಂತೆ! ''ಈಗ್ಲಿಂದ ಕಟ್ಟುನಿಟ್ಟಾಗಿದ್ರೆ, ಪಿತ್ರಾರ್ಜಿತ ಬಳುವಳಿ ಬರೊಲ್ಲ'' ಎಂದು. ಅದ್ರಲ್ಲಿ ಆ ಡೈಟ್ ಲಿಸ್ಟ್‌ನಲ್ಲಿ ಮುಖ್ಯವಾದದ್ದು ಈ ಮೆಂತ್ಯದ ಸೊಪ್ಪು!

ಕೇಳಿ ಅಳಿಯಂದಿರಿಗೆ ಒಂದೇ ಖುಷಿ!

''ಹೇಗಿದ್ರೂ, ಈಗ ಮೆಂತ್ಯದ ಸೊಪ್ಪಿನ ಕಾಲ.... ದಿನಾ ಸ್ವಲ್ಪ ಸ್ವಲ್ಪ ತಂದು ಮಾಡಿದ್ರಾಯ್ತು'' ಎಂದ್ರಂತೆ, ಸಂಭ್ರಮದಿಂದ.

ಅವರು ಆಫೀಸಿನಿಂದ ಬರೋದು ತಡವಾಗಿ; ಅಷ್ಟಲ್ಲಿ ಒಂದಷ್ಟು ತಂದುಬಿಡೋಣ ಅಂತ, ಪಕ್ಕದಲ್ಲೇ ಇದ್ದ ಮಾರ್ಕೆಟ್ಟಿಗೆ ಹೋದಳಂತೆ ನೋಡ್ತಾಳೆ, ಎಲ್ಲೆಲ್ಲೂ ಮೆಂತ್ಯದ ಸೊಪ್ಪಿನ ಮಾರಾಟ! ಯಾರ ಕೈಲಿ ನೋಡಿದ್ರೂ, ಮೆಂತ್ಯದ ಸೊಪ್ಪಿನ ದೊಡ್ಡ ದೊಡ್ಡ ಬೊಕೇ!

'ಚೀಪು! ಚೀಪು!' ಅಂತ, ಎಲ್ರೂ ಅದನ್ನ ತಗೊಂಡಿದ್ರೂ ತಗೊಂಡಿದ್ದೇ!

ಸಕ್ಕರೆ ಖಾಯಿಲೆ ಅವರುಗಳಿಗೂ ಇದೆಯೋ?

ಎಂದೂ ಒಂದು ಕೊತ್ತಂಬರಿ ಸೊಪ್ಪನ್ನ ಸಹಾ ವ್ಯಾಪಾರ ಮಾಡದಿದ್ದ ಇವಳು, ಅಂದು ಸಂತಸದಿಂದ ಒಂದು ಮಂಕರಿ ಮೆಂತ್ಯದ ಸೊಪ್ಪನ್ನ ವ್ಯಾಪಾರ ಮಾಡಿದಳು! ''ಅಳಿಯಂದಿರಿಗೆ ಸರ್‌ಪ್ರೈಸ್ ಆಗತ್ತೆ, ಆನಂದದಿಂದ ಕುಣಿದೇಬಿಡ್ತಾರೆ ಶಹಭಾಸಗಿರಿ ಕೊಡ್ತಾರೆ!'' ಅಂತೆಲ್ಲಾ ಮನಸ್ನಲ್ಲೇ ಥಕಥಕ ಕುಣೀತಾ ಮನೆಗೆ ತಂದಳು - ಕೂಲಿ ಹುಡುಗನೊಬ್ಬನನ್ನ ಹಿಡಿದು, ಅವನ ತಲೆಯ ಮೇಲೆ ಹೊರಿಸಿ...

ಮನೆ ಬೀಗ ಹಾಕ್ಕೊಂಡು ಬಂದಿದ್ದಳು; ಬಾಗಿಲಲ್ಲೇ ಕಾಯ್ತಾ ನಿಂತಿದ್ರು, ಯಜಮಾನ್ರು; ಅವರ ಕೈಯಲ್ಲೂ ಒಂದು ಬುಟ್ಟಿ ಇತ್ತು...

ಅದ್ರ ತುಂಬಾ ಮೆಂ...ತ್ಯ....ದ ಸೊಪ್ಪು!

ಸರಿ, ಇಬ್ರಿಗೂ ಹತ್ಕೊಂತು ಜಗಳ! ಗೊತ್ತೇ ಇದೆಯಲ್ಲಾ? ''ಮೊದಲೇ ಹೇಳಬೇಡ್ವೇ? ಕೇಳಬೇಡ್ವೇ? ಏನು, ನಿಂಗೆ ಹೇಳೋರು ಕೇಳೋರು ಯಾರೂ ಇಲ್ವೇ? ಹೋಗಿ ಹೋಗಿ, ಇಷ್ಟಾ ತರೋದು? ನೀವೇನು ಕಮ್ಮಿ? ಏನು, ಸಮಾರಾಧನೆ ಮಾಡೋಕ್ಕೆ ಹೊರಟಿದೀಯಾ ಏನು? ನಿಂದು ಸ್ವಲ್ಪಾನೂ ಚೆನ್ನಾಗಿಲ್ಲ! ದನಗಳಿಗೆ ಹಾಕೋ ಹಾಗಿದೆ! ನಿಮ್ಮದೇನು ಸ್ಪೆಷಲ್ಲಾ, ಗಬ್ಬು ವಾಸನೆ! ಎಷ್ಟೊಂದು ಜಾಸ್ತಿ ದುಡ್ಡು ಬೇರೆ ಕೊಟ್ಟಿದೀ! ಸ್ವಲ್ಪಾನೂ ಮನೀವ್ಯಾಲ್ಯೂ ಇಲ್ಲ!

ಹೌದ್‌ಹೌದು! ನಿಮ್ಮನೇವ್ರ ತಲೇಗೇ ಗಿಫ್ಟ್ ಮಾಡಿರೋದು ಬ್ರಹ್ಮ - ಪ್ರಪಂಚದಲ್ಲಿರೋ ಮೆದುಳನ್ನೆಲ್ಲಾ ನಿಮ್ಮ ತಂಗಿ...''

ಯಜಮಾನ್ರ ತಂಗಿ ತಾನೇ ಫಸ್ಟ್ ಟಾರ್ಗೆಟ್ಟು? ಅಲ್ಲಿಂದ, ಅತ್ತೆ-ಓರಗಿತ್ತಿ, ಎಲ್ರವರೆಗೂ ಏರಿತು!

ಹಣ ಕೊಟ್ಟು ತಂದದ್ದನ್ನ ಬಿಸಾಕೋಕಾಗುತ್ಯೇ? ಒಬ್ಬರಿಗೊಬ್ರು ಬೆನ್ನು ತಿರುಗಿಸಿ, ಅವರವರು ತಂದದ್ದನ್ನ ಅವವರೇ ಬಿಡಿಸಿದ್ರು - ರಾತ್ರಿಯೆಲ್ಲಾ ಜಾಗರಣೆ ಮಾಡಿ! ಫ್ರಿಜ್‌ನಲ್ಲಿ ತುರುಕಿದ್ರು... ಪಕ್ಕದ್ಮನೆಯ ಫ್ರಿಜ್‌ನಲ್ಲೂ ಇಟ್ರು! ಪಾಕಶಾಸ್ತ್ರ ಪುಸ್ತಕಗಳನ್ನೆಲ್ಲಾ ಹೊರತೆಗೆದು, ರಾತ್ರಿಯೋ ರಾತ್ರಿ ಅಭ್ಯಸಿಸಿ, ಮೆಂತ್ಯದ ಸೊಪ್ಪಿನ ಅಡಿಗೆ - ತಿಂಡಿಗಳನ್ನೆಲ್ಲಾ ಮಾಡಿದ್ರು - ಇಬ್ಬರನ್ನೊಬ್ರು ಗಿನಿಪಿಗ್ ಮಾಡಿ! ಸದ್ಯ, ಎಲ್ಲಾ ಮುಗೀತಲ್ಲಪ್ಪಾ! ಎಂದು ನಿರಾಳವಾಗಿ ಉಸಿರಾಡೋಕ್ಕಿಲ್ಲ, ನಾದಿನಿಯಮ್ಮ ಅದೇ ಯಜಮಾನ್ರ ತಂಗಿ, ಒಂದು ರಾಶಿ ಮೆಂತ್ಯದ ಸೊಪ್ಪನ್ನ ಕಾರಲ್ಲಿ ಹಾಕ್ಕೊಂಡು ಬಂದು

ತಂದಿಟ್ಟಳು - ''ನಮ್ಮ ಎಸ್ಟೇಟ್‌ನಲ್ಲಿ ಬಿಟ್ಟದ್ದು ಅಣ್ಣ - ನಿಂಗಿಷ್ಟ ಅಂತ, ಸ್ಪೆಶಲ್ಲಾಗಿ ಬೆಳೆಸಿದೆ... ಅಷ್ಟು ದೂರದಿಂದ ತಂದಿದೀನಿ'' ಅಂತ...

ಸರಿ, ಮತ್ತೆ ಹತ್ತೊಂಡ್ತು, ದಂಪತಿಗಳಿಬ್ರಿಗೂ ಜಗಳ!

''ಒಳ್ಳೇ ಜಮೀನುದಾರಿಣಿ ನಿಮ್ಮ ತಂಗಿ! ಅಲ್ಲಾ, ಅಷ್ಟೆಲ್ಲಾ ತೆಂಗು, ಮಾವು, ಅವರೆಕಾಯಿ, ಹುರುಳಿಕಾಯಿ, ಬಾಳೆಹಣ್ಣು, ಕಿತ್ತಲೆ ಹಣ್ಣು, ಹಲಸಿನಹಣ್ಣು ಅಂತೆಲ್ಲಾ ಊರೆಲ್ಲಾ ಬೆಳೀತಾಳೆ... 'ದಾನಧರ್ಮ' ಅಂತ, ಸದಾ ನಂಗೆ ಉಪದೇಶ ಮಾಡ್ತಿರ್‍ತಾಳೆ ಹೋಗೀ ಹೋಗಿ, ಬರೀ ಮೆಂತ್ಯದ ಸೊಪ್ಪನ್ನೇ ಅಣ್ಣನಿಗೆ ತಂದು ಕೊಡೋದು! ದೊಡ್ಡದಾಗಿ ಕಾರಲ್ಲಿ ಶೋ ಮಾಡ್ಕೊಂಡು!...''

''ಅಷ್ಟಾದ್ರೂ ತಂದಳಲ್ಲ ನನ್ನ ತಂಗಿ! ಅದೇ ನಿಮ್ಮ ಮನೇವ್ರು? ಹಿತ್ತಲಲ್ಲಿ ಬಿಟ್ಟಿರೋ, ಕೊತ್ತಂಬರಿ ಸೊಪ್ಪನ್ನೂ ಕೊಡಲ್ಲ ನಿಂಗೆ! ಸಾಕು ಸುಮ್ಮನಿರೆ! ಕಂಡಿದೀನಿ, ನಿನ್ನ ತೌರ್‍ಮನೆ ಬುದ್ಧೀನ!''

ಹೀಗೆ - ಅವರಿಬ್ರ ಈ ಮೆಂತ್ಯಸೊಪ್ಪಿನ ಕಲಹ, ಡೈವೋರ್ಸ್ ಪಾಯಿಂಟ್‌ವರೆಗೂ ಹೋಗಿತ್ತಂತೆ! ಆಗ ಅವಳ ಅಕ್ಕ ಅಂದ್ರೆ ನನ್ನ ಹಿರಿಯ ಮಗಳು, ಇನ್ನಷ್ಟು ರಾಶಿ ಮೆಂತ್ಯದ ಸೊಪ್ಪನ್ನ ತಂದುಕೊಟ್ಟಳಂತೆ ಆಟೋದಲ್ಲಿ...

''ನಿಂಗೆ ಡಾಕ್ಟರ್ ಹೇಳಿದಾರಂತೆ 'ತುಂಬಾ ಮೆಂತ್ಯದ ಸೊಪ್ಪನ್ನ ತಿನ್ನಬೇಕು' ಅಂತ. ನಿಮ್ಮನೆ ಕೆಲಸದವಳು ಹೇಳಿದಳಂತೆ ನಮ್ಮನೆ ಕೆಲಸದವಳಿಗೆ. ತಕ್ಷಣ, ಮನೇಲಿ ಬಿಟ್ಟದ್ದಷ್ಟನ್ನೂ ಬ್ಯಾಗಲ್ಲಿ ಹಾಕ್ಕೊಂಡು ಬಂದುಬಿಟ್ಟೆ.... ಇನ್ನಾ ಸ್ವಲ್ಪ ಬೇಕಾದ್ರೆ ಸಂಕೋಚ ಪಟ್ಕೊಳ್ದೆ ಕೇಳೇ.

ಏನು, ದುಡ್ಡು ಕೊಡ್ಬೇಕಾ - ಕಾಸು ಕೊಡ್ಬೇಕಾ? ಬೇಕಾದ್ರೆ, ಅಕ್ಕಪಕ್ಕದ ಮನೇವ್ರ ತೋಟದಿಂದಾನೂ ಕಿತ್ತು ತಂದ್ಹಾಕ್ತೀನಿ...'' ಅಂತೆಲ್ಲಾ ಅದಕ್ಕೇ ಈಗ...

''ಮೆಂತ್ಯದ ಸೊಪ್ಪು ಅಂದ್ರೆ ಅಲರ್ಜಿ ಆಗ್ಬಿಟ್ಟಿದೆ, ಅಳಿಯಂದಿರಿಗೆ''.... ಮಗಳ ಕಥೆಗೆ ಮುಕ್ತಾಯ ಹಾಡಿದೆ.

✧✧✧

ಸಮಾಧಾನ

''ಈಗ ಜಗತ್ತೆ ಒಂದು
ಜಾಗತಿಕ ಗ್ರಾಮ''
ಎಂಬ ಹೇಳಿಕೆಯಿಂದ
ಹಳ್ಳಿಯ ಮಂದಿ
ಸಮಾಧಾನಪಟ್ಟುಕೊಳ್ಳಬಹುದು!

– ಸಿ.ಪಿ.ಕೆ

ಮದುವೆ ಮುಂಚಿನ ನನ್ನ LOVE AFFAIRS

✧ ಎಚ್.ಜಿ. ಸೋಮಶೇಖರ ರಾವ್

ಮದುವೆಗೆ ಮುಂಚೆ ನಾನು 'ಬ್ರಹ್ಮಚಾರಿ'ಯಾಗಿದ್ದೆ ಅಂತ ಹೇಳಬೇಡಿ, ಜೋಕೆ! ಅದಕ್ಕೆ ಬುದ್ಧಿವಂತರು "when I was unmarried', "before my marriage' ನಾನು bachelor ಆಗಿದ್ದಾಗ ಅನ್ನುವ ಮಾತುಗಳನ್ನು ಹೇಳುತ್ತ ತಮ್ಮ ಯೌವನದಲ್ಲಿ ನಡೆದ ಪ್ರೇಮಪ್ರಸಂಗಗಳನ್ನು ಮರೆಮಾಚುತ್ತಾರೆ. ಹುಡುಗಿಯೋ, ಹುಡುಗನೋ ತನ್ನ ಯೌವನ ಕೊನರುವ ಕಾಲದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರೀತಿ-ಪ್ರೇಮದ ಅನುಭವ ಪಡೆದಿರುತ್ತಾರೆ. ಹಾಗಿಲ್ಲವೆನ್ನುವವರು ತಮ್ಮ ಎದೆಯ ಮೇಲೆ ಕೈ ಇಟ್ಟುಕೊಂಡು, ಅವರು ಏಕಾಂಗಿಯಾಗಿದ್ದಾಗ ಈ ಮಾತನ್ನು ಹೇಳಿಕೊಳ್ಳಲಿ, ನೋಡೋಣ! ಅಂತಹ ಪ್ರಸಂಗಗಳು ನಾನಾ ಬಗೆಯದ್ದಾಗಿರುತ್ತೆ. ಹುಡುಗ-ಹುಡುಗಿಯನ್ನೊ, ಹುಡುಗಿ ಹುಡುಗನನ್ನೋ ಅಟಕಾಯಿಸಿಕೊಂಡು ಓಡಾಡಿದ್ದಿರಬಹುದು; ಕದ್ದು ಕೈಹಿಡಿದು ತನ್ನ ಪ್ರೀತಿಯನ್ನು ತೋರಿಸಿದ್ದಿರಬಹುದು; ಬಹಳ intense ಆಗಿ ಲೌವ್ ಮಾಡಿ, ಮದುವೆಯೂ ಆಗಿ ಕೊನೆಗೆ ಡೈವೋರ್ಸ್ ಆಗಿರಲೂಬಹುದು; ಏನಿಲ್ಲವೆಂದರೂ ಯಾವುದೂ ಸಾಧ್ಯವಾಗದಿದ್ದಾಗ ಮನೋವೇದಿಕೆಯಲ್ಲಿ ತನ್ನ ಕಲ್ಪನಾಶಕ್ತಿಯಿಂದ ಕಣ್ಣಿಗೆ ಚಂದವೆನ್ನಿಸಿದ ವ್ಯಕ್ತಿಯನ್ನು ತಂದುಕೊಂಡು ಪ್ರೀತಿಯ ಮಳೆಗರೆದಿರಬಹುದು. ಆ ವಯಸ್ಸಿನಲ್ಲಿ ಆಗುವ ಈ ಅನುಭವ ತುಂಬ ವೈಯಕ್ತಿಕವಾಗಿರಬಹುದು. ಕನಸುಗಳನ್ನು ಕಾಣುವ ಕಾಲವದು; ಅದಕ್ಕೆಲ್ಲಿದೆ ಕಡಿವಾಣ? ಪ್ರೀತಿಸುವ ವ್ಯಕ್ತಿ ಎದುರಿಗೆ ಕಾಣುತ್ತಲಿರಬೇಕೆಂದೇನೂ ಇಲ್ಲ - 'ಮೇಘದೂತ'ದಲ್ಲಿ ಪ್ರೇಯಸಿ ಪ್ರೇಮಿಗೆ ಮೋಡಗಳ ಮೂಲಕ ಪ್ರೀತಿಯನ್ನು ರವಾನಿಸಲಿಲ್ಲವೇ?

ನನ್ನ ಯೌವನದ ಕಾಲದಲ್ಲೂ ನಾನು ಪ್ರೀತಿಯ ಕಕ್ಷೆಯಲ್ಲಿ ಸಿಕ್ಕಿದ್ದೆ. ಆದರೆ ನನ್ನ ಪ್ರೇಮಪ್ರಸಂಗಗಳೆಲ್ಲಾ One-way traffic ಆಗಿತ್ತು. ನನ್ನ ಏಕಮುಖವಾದ ಪ್ರೇಮದಿಂದ ನಾನು ಪ್ರೀತಿಸುವ ಹುಡುಗಿಯರಿಗೂ ಸುಳಿವು ಸಿಗದೇ ಹೋಗಿತ್ತು!

ಮುಂದೊಂದು ದಿನ ನಾನು ಗಾಢವಾಗಿ ಪ್ರೀತಿಸಿದ್ದು ಹುಡುಗಿಯನ್ನಲ್ಲ; ಹುಡುಗಿಯ ಹೆಸರನ್ನು! ಆ ಹೆಸರಿನವಳು ಹೀಗಿರಬಹುದು, ಹಾಗಿರಬಹುದೆಂಬ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತ, ಎಂದಾದರೂ ಅವಳು ನನ್ನ ಕಣ್ಣಿಗೆ ಬೀಳಬಹುದೆಂಬ

ಆಸೆಯಿಂದಿದ್ದೆ. ನಾನು ಕಾಣದ ಅವಳೊಡನೆ ನನ್ನ ಸರಸದ, ರಸಿಕತೆಯ ಆಟ ನಡೆದೇ ಇತ್ತು. ಆದರೆ ನನಗೆ ಆಕೆಯ ದರ್ಶನವೇ ಆಗದೆ ಹೋಗಿ ನಾ ಕಾಣದ ಆ ಕಲ್ಪನೆಯ ಸುಂದರ ವದನದ ಹುಡುಗಿಯನ್ನು ಈ ಇಳಿವಯಸ್ಸಿನಲ್ಲಿ ಪ್ರೀತಿಸುತ್ತಿದ್ದೇನೆ. ಅವಳಿಗಿನ್ನೂ ಹದಿನೆಂಟು, ನನಗಾಗಲೇ ಎಪ್ಪತ್ತೆರಡು! (ನೋಡಿ ನನ್ನ 'ಸೋಮಣ್ಣನ ಸ್ಟಾಕ್‌ನಿಂದ') ವಿಚಿತ್ರರೀತಿಯ ಭಗ್ನಪ್ರೇಮಿ ನಾನು.

ಅದೇನೇ ಇರಲಿ. ಇಷ್ಟೆಲ್ಲಾ ಹೇಳಲು ಕಾರಣ ನಾನು ಮುಂದೆ ನನ್ನ ಬದುಕಿನಲ್ಲಿ ನಡೆಸಿದ ಚಿಕ್ಕಚಿಕ್ಕ ಪ್ರೇಮಪ್ರಸಂಗಗಳೆಲ್ಲಾ ನಾನು ನೌಕರಿ ಮಾಡಿದ ಸಂಸ್ಥೆಗಳೊಡನೆ! ಅಲ್ಲಿ ನಡೆದ ಕೆಲವು ಪ್ರಸಂಗಗಳನ್ನು ಬರೆಯುತ್ತೇನೆ.

ಎರಡು ವರ್ಷಗಳ ನಿರುದ್ಯೋಗಾನಂತರ ನನಗೊಂದು ಕೆಲಸ ಸಿಕ್ಕಿತು! ಅದು ವಿಶ್ವವಿದ್ಯಾಲಯದ ಮನಶ್ಶಾಸ್ತ್ರ ವಿಭಾಗದಲ್ಲಿ - ಸಂಶೋಧನಾ ಕ್ಷೇತ್ರದಲ್ಲಿ. ಮನಶ್ಶಾಸ್ತ್ರ ನಾನು ಓದಿದ ವಿಷಯವಲ್ಲ; ನನ್ನದು ಸಮಾಜಶಾಸ್ತ್ರ. ನನ್ನ ವಿಭಾಗದ ಮುಖ್ಯಸ್ಥರು ನನ್ನನ್ನು ಕೆಲವು ಪ್ರಶ್ನೋತ್ತರಗಳ ಕಟ್ಟನ್ನು ಕೊಟ್ಟು, ಸುತ್ತಮುತ್ತಲಿನ ಹಳ್ಳಿಗಳಿಗೆ ಕಳಿಸಿ, ಅಲ್ಲಿರುವ ಹಳ್ಳಿಗರ ಅಭಿಪ್ರಾಯಗಳನ್ನು ಕಲೆಹಾಕುವ ಕೆಲಸ ಕೊಟ್ಟಿದ್ದರು. ಮೊದಲು ಹಳ್ಳಿಹಳ್ಳಿತಿರುಗಾಡಿದೆ. ಮಾಹಿತಿ ಸಂಗ್ರಹ ಮಾಡಿದೆ. ನನ್ನ ಹಾಗೆ ಜೊತೆಯಲ್ಲಿದ್ದ ಸಹೋದ್ಯೋಗಿಗಳೂ ತಿರುಗಾಡುತ್ತಲೇ ಇದ್ದರು. ನನಗೆ ಎರಡು-ಮೂರು ತಿಂಗಳಾದ ಮೇಲೆ ಒಂದು ವಿಷಯ ಹೊಳೆಯಿತು! ಇದುವರೆಗೂ ಸಂಗ್ರಹಿಸಿದ ಮಾಹಿತಿಗಳಲ್ಲಿ ಒಂದು ರೀತಿಯ ಸಮಾನತೆಗಳು. ಉತ್ತರಿಸುವವರು ಹೆಚ್ಚು ಕಡಿಮೆ ಅದದೇ ಉತ್ತರ ಹೇಳುತ್ತಿರುವುದನ್ನು ಗಮನಿಸಿ, ಸುಮ್ಮನೆ ಊರೂರು ತಿರುಗುವುದೇಕೆ ಎಂದು ನನ್ನ ಕೋಣೆಯಲ್ಲೇ ಕೂತು, ಬಾಗಿಲು ಜಡಿದು, ನಾನು ಊರಲ್ಲಿಲ್ಲ ಅನ್ನಿಸಿಕೊಂಡು, ನನಗೆ ಕೊಟ್ಟಿದ್ದ ಪ್ರಶ್ನಾವಳಿಗಳಿಗೆ ಕಲ್ಪನೆಯ ಹೆಸರಿನಲ್ಲಿ ನಾನೇ ವಿಧವಿಧವಾಗಿ ಉತ್ತರ ಹುಡುಕಿ ದಾಖಲಿಸಿಬಿಟ್ಟೆ. ಅದನ್ನು ವಿಭಾಗದ ಮುಖ್ಯಸ್ಥರಿಗೆ ಕೊಟ್ಟೂ ಆಯಿತು. ಅವರು ಒಂದು ಮೀಟಿಂಗ್ ಕರೆದು, ಮಿಕ್ಕೆಲ್ಲರನ್ನೂ ಕರೆಸಿ ಕೂಡಿಸಿ, ನಾನು ಸಂಪಾದಿಸಿದ ಮಾಹಿತಿ ಮತ್ತು ಅದರ ಬಗ್ಗೆ ನಾನು ಬರೆದಿದ್ದ ನನ್ನ ಸಂಶೋಧನಾ ವಿಚಾರಗಳ ಬಗ್ಗೆ ಹೊಗಳಿ ಮಾತಾಡಿ ತಮ್ಮ ಮೆಚ್ಚುಗೆಯ ಸರ್ಟಿಫಿಕೇಟ್ ಕೊಟ್ಟುಬಿಟ್ಟರು! ನನ್ನ ಸಹೋದ್ಯೋಗಿಗಳಲ್ಲಿ ಇಬ್ಬರಿಗೆ ನನ್ನ "ಸಂಶೋಧನೆ"ಯ ಗುಟ್ಟು ಗೊತ್ತಿದ್ದು ಅವರು ಗೊಣಗಾಡಿದರು. ಆಗ ನನಗೆ ಗೊತ್ತಾದ ನನ್ನ ಪ್ರೀತಿಯ ಕೆಲಸದ ಮುಖ್ಯ ಅಂಶ. ಮುಂದೆ ನಾನೆಲ್ಲೋ ಓದಿದ ಮಾತುಗಳು... Statitics... Statitics... and lies ಎಂಬ ಮಾತಿನ ಅರ್ಥ. ನಾನು ಅತ್ಯಂತ 'ಪ್ರೀತಿ'ಸಿದ ಈ ನೌಕರಿ ಹಂಗಾಮಿಯಾಗಿದ್ದು ಒಂದು ವರುಷದೊಳಗೇ ಸಂಸ್ಥೆಯೊಂದಿಗೆ ನಾನು ಬೆಳೆಸಿಕೊಂಡಿದ್ದ love affair ಗೆ ಮುಕ್ತಾಯ ಹಾಡಿದ್ದಾಯಿತು.

ನನ್ನ ಎರಡನೇ love affair ಶುರುವಾದ್ದು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ವೆಲ್‌ಫೇರ್ ಆಫೀಸರ್ (ill-fare officer!!) ಆಗಿದ್ದಾಗ... ಗುಡ್ಡದ ಮೇಲಿದ್ದ ಕಾಡಿನ ಮಧ್ಯೆ ನನಗೆ ಮನೆ. ಇನ್ನೂ ಲಗ್ನವಾಗಿರಲಿಲ್ಲ. ಸಾವಿರಕ್ಕೂ ಮೀರಿ ಕೂಲಿಗಳಿದ್ದರು. ಒಂದು ದಿನ ಸುಮಾರು ಬೆಳಗಿನ ಜಾವದ 4 ಗಂಟೆಗೆ ನನ್ನ ಮನೆಯ ಬಾಗಿಲು ಯಾರೋ ಬಡಿದರು. ಬಡಿತ ಜೋರಾಗಿತ್ತು. ಬಡಿತದ ಜೊತೆ ಬಳೆಗಳ

ಜಣಜಣನ ಸದ್ದೂ ಸೇರಿತ್ತು. ಮೊದಲೇ ಗುಡ್ಡಗಾಡು! ಏನೋ ಎಂತೋ ಅಂತ ವೆರಾಂಡಕ್ಕೆ ಬಂದಾಗ ಒಬ್ಬಳು ಬಿಳಿಸೀರೆಯುಟ್ಟ ಯುವತಿ ನಿಂತಿದ್ದಾಳೆ. ನನಗೆ ಗಾಬರಿಯಾಯಿತು.

'ಏನು'

'ನಿಮ್ಮ ಹತ್ತಿರ ಹೋಗು ಅಂತ ಕಳಿಸಿದ್ದಾರೆ..'

ನಾನು ಹೆದರಿದೆ; ಬೆದರಿದೆ.

'ನಾನು ಯಾರಿಗೂ ಹೇಳಿ ಕಳಿಸಿರಲಿಲ್ಲವಲ್ಲ'.

'................' ಮಾತಿಲ್ಲ.

'ನೋಡಮ್ಮ, ಬೆಳಿಗ್ಗೆ ಆಫೀಸಿಗೆ ಬಾ.. ಏನಂತ ವಿಚಾರಿಸುತ್ತೇನೆ..'

'ಓ .. ಆಫೀಸಲ್ಲೇ ಮಾಡ್ತೀರ..' ಅಂತ ಆ ಹೆಂಗಸು ಅಲ್ಲಿಂದ ನಿಧಾನವಾಗಿ ಗುಡ್ಡದ ಏರುತಗ್ಗುಗಳಲ್ಲಿ ಕರಗಿಹೋದಳು.

ಮರುದಿನ ಗೊತ್ತಾಯಿತು. ಯಾರೋ ಮತ್ತೊಬ್ಬ ಕುಡುಕ ಕೂಲಿಯಾಳು ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದ ಇವಳ ಕ್ವಾರ್ಟರ್ಸ್‌ನ ಮೋಟುಗೋಡೆ ಹಾರಿ ಬಂದಿದ್ದಾನಂತೆ. ಆಕೆ ಕೂಗಿಕೊಂಡಳು. ಅಕ್ಕ-ಪಕ್ಕದವರು ಸೇರಿದರು. ಅಲ್ಲಿದ್ದ ಒಬ್ಬನು 'ಈಗ್ಲೆ ಹೋಗಿ ವೆಲ್‌ಫೇರ್ ಆಫೀಸರ್‌ಗೆ ಹೇಳು, ಹೋಗು' ಅಂತ. ಅಗ ವಿಷಯದ ಹಿನ್ನೆಲೆ ಗೊತ್ತಾಯಿತು.

ಇದೇ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿಗಳ ಯೋಗಕ್ಷೇಮ ನೋಡಿಕೊಳ್ಳೋದು ನನ್ನ ಕರ್ತವ್ಯ. ಅದಕ್ಕೆ ನಮ್ಮ ನೌಕರಿಗೆ 'ಕಾರ್ಮಿಕ ಕ್ಷೇಮಾಭಿವೃದ್ಧಿ ಅಧಿಕಾರಿ' ಎಂದು ಕರೆಯುತ್ತಿದ್ದರು. ಸಂಬಳ-ಸಾರಿಗೆ, ಕೆಲಸದ ವೇಳೆ, ಕೆಲವು ಕನಿಷ್ಠ ಸೌಕರ್ಯಗಳು, ವಸತಿ, ಆರೋಗ್ಯ - ಇವೆಲ್ಲಾ ನನ್ನ ಕೆಲಸವಾಗಿತ್ತು. ಅಲ್ಲಿ ಬಹಳ ಸಂಖ್ಯೆಯಲ್ಲಿ ಹೆಣ್ಣು ಕಾರ್ಮಿಕರೂ ಇದ್ದರು. Maternity Benefit Act ಪ್ರಕಾರ ಅವರಿಗೆ ಹೆರಿಗೆಯ ಸೌಲಭ್ಯಗಳ ಜೊತೆ ಪಗಾರವನ್ನೂ ಕೊಡಬೇಕಾಗಿತ್ತು. ಹಾಗಿದ್ದಾಗ ನನ್ನ ಗಣಿ ಆಫೀಸಿಗೆ ತಿಂಗಳಿಗೆ ಕನಿಷ್ಠ 3-4 ಹೆಂಗಸರು ಹೆರಿಗೆಯ ಪಗಾರಕ್ಕಾಗಿ ಮತ್ತು ರಜೆಗಾಗಿ ಅರ್ಜಿ ಹಿಡಿದು ಬರುತ್ತಿದ್ದರು. ಅದನ್ನು ಪರೀಕ್ಷಿಸಿ ಪಗಾರದ ರಜೆ ಮಂಜೂರು ಮಾಡುತ್ತಿದ್ದೆ. ಅಲ್ಲಿ ಕೆಲವು ಹೆಣ್ಣು ಕಾರ್ಮಿಕರು ಗರ್ಭಿಣಿಯರೆಂಬ ಸುಳ್ಳು ಸರ್ಟಿಫಿಕೇಟುಗಳನ್ನೂ ತರುತ್ತಿದ್ದರು. ಅವರಿಗೆ ಶಾಮೀಲಾದ ಕೆಲವು ದಳ್ಳಾಳಿಗಳೂ, ವೈದ್ಯರೂ ಸೇರಿದ್ದರು. ಆದರೆ ನನ್ನ ಹಣೇ ಬರಹವೇನೆಂದರೆ ಯಾವ ಅರ್ಜಿದಾರಳನ್ನು ಗರ್ಭಿಣಿ ಹೌದೇ ಅಲ್ಲವೇ ಎಂಬುದನ್ನು ನಾನೇ ದೃಢೀಕರಿಸುವುದು ಸಾಧ್ಯವಿರಲಿಲ್ಲ. ಒಂದೇ ಒಂದು ತನಿಖೆ ನಾನು ನಡೆಸುತ್ತಿದ್ದುದು ಅರ್ಜಿದಾರಳು ಈಗಾಗಲೇ ಕಳೆದ ಒಂದು 8-10 ತಿಂಗಳಲ್ಲಿ ಹೆರಿಗೆ ಪಗಾರ ಪಡೆದಿದ್ದಾಳೆಯೇ ಇಲ್ಲವೇ ಎಂಬುದಷ್ಟೇ. ಗಣಿಯಲ್ಲಿ ಮ್ಯಾನೇಜರ್ ಆಗಿದ್ದ ತುಂಟ ಸ್ವಭಾವದ ಮಧ್ಯವಯಸ್ಸಿನ ವ್ಯಕ್ತಿ, ನನ್ನನ್ನು ಕೀಟಲೆ ಮಾಡುತ್ತಿದ್ದುದು ಹೀಗೆ - 'ಸಾರ್, ಏನ್ ಮಾಡ್ತೀರೋ ಬಿಡ್ತೀರೋ, ನಿಮ್ಮ ಆಫೀಸಿನಿಂದ ವಾರಕ್ಕೊಬ್ಬರಂತೆ ಗರ್ಭಿಣಿ ಹೆಂಗಸರು ಹೊರಬರುತ್ತಾರೆಂದು.

ಇದು ನನ್ನ ಎರಡನೆಯ ಸಂಸ್ಥೆಯ ಜೊತೆಗಿನ ಪ್ರೇಮಪ್ರಸಂಗ. ಇನ್ನು ಮೂರನೆಯ ಸಂಸ್ಥೆಯಾದ ಹತ್ತಿಗಿರಣಿಯಲ್ಲಿ ಮೂರು ವರ್ಷಗಳಿದ್ದು ಅಲ್ಲಿ ಮುಖ್ಯ ಕಾರ್ಮಿಕ ಕ್ಷೇಮಾಭಿವೃದ್ಧಿ ಅಧಿಕಾರಿಯಾಗಿದ್ದೆ. ಇದ್ದ ಊರು ಉತ್ತರ ಕರ್ನಾಟಕದ ಸಣ್ಣ ಹಳ್ಳಿಯಂಥದ್ದು. ಗಿರಣಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದರು. ಬಹುತೇಕ ಜನರು ಅದೇ ಹಳ್ಳಿಯವರು. ಅಲ್ಲಿ ಅನೇಕ ರೀತಿಯ ವಿಚಿತ್ರವಾದ, ತಮಾಷೆಯಾದ, ಕೆಲವು ಬಾರಿ ಮುಜುಗರವಾಗುವಂಥ ಪ್ರಸಂಗಗಳು ನಡೆದು ಹೋಯಿತು. ಒಂದನ್ನು ಹೇಳಬಯಸುತ್ತೇನೆ. ಹಿಂದಿನ ಸಂಸ್ಥೆಯಲ್ಲಿಯಂತೆ ಇಲ್ಲೂ ಹೆಣ್ಣು ಕಾರ್ಮಿಕರಿದ್ದರು. ಇಲ್ಲಿಯೂ ಅಲ್ಲಿಯ ತರಹೆ ಅನುಭವಗಳಾಗಿವೆ. ಒಬ್ಬಾಕೆ ಬಂದು 'ನನಗೆ ಹಡಿಯೋ ಪಗಾರ ಕೊಡ್ರೀ' ಅಂತ ಕೇಳಿದಾಗ ಭಾಷೆ ಗೊತ್ತಾಗದೆ ಗಲಿಬಿಲಿಯಾಗಿದ್ದೆ. ನನ್ನ ಕಾರಕೂನ ತಿಳಿಸಿ ಹೇಳಿದ. ಡಾಕ್ಟರ್ ಸರ್ಟಿಫಿಕೇಟ್ ನೋಡಿದೆ. ಅದರಲ್ಲಿ ಆ ಹೆಣ್ಣುಮಗಳ ತಂದೆ ಹೆಸರಿತ್ತು, ಗಂಡನ ಹೆಸರು ಇರಲಿಲ್ಲ! ನಾನು ಸ್ಪಷ್ಟನೆ ಕೇಳಿದೆ. ಆಕೆ ಏನೂ ಹೇಳಲಿಲ್ಲ. 'ಗಂಡನ ಹೆಸರು ಬೇಕು...'' ಅಂದೆ. ನನ್ನ ಕಾರಕೂನ ಆಕೆಯ ಅರ್ಜಿ ತೆಗೆದುಕೊಂಡು ಹೋಗಿ ಏನನ್ನೋ ತುಂಬಿಸಿಕೊಂಡು ಬಂದ. ಕಾರಕೂನ ಸಾಳುಂಕಿ ಮಹಾ ಚೇಷ್ಟೆಯ ವ್ಯಕ್ತಿ. ಅರ್ಜಿಯಲ್ಲಿ ಗಂಡನ ಹೆಸರನ್ನು 'ಸೋಮಪ್ಪ' ಅಂತ ಬರೆದಿದ್ದ... ಏನು ಮಾಡಬೇಕೋ ತಿಳಿಯಲಿಲ್ಲ, ನಾನು 'ಸೋಮಪ್ಪ' ಹೊಡೆದು ಹಾಕಿ ಆ ಜಾಗದಲ್ಲಿ 'ನಾನಲ್ಲಪ್ಪ' ಅಂತ ಬರೆದು ಅರ್ಜಿ ಫೈಸಲ್ ಮಾಡಿದೆ.

ಮತ್ತೊಂದು ಅರ್ಜಿಯಲ್ಲಿ ಒಬ್ಬಾಕೆ ಗಂಡನ ಹೆಸರು ಗೊತ್ತಿಲ್ಲ ಅಂತ ಬರೆದಿದ್ದಳು. 'ಬೇಡ, ಲಗ್ನವಾಗಿದೆಯಲ್ಲ, ಹಾಗೆ ಬರಿ' ಅಂದೆ. 'ನನ್ಗೆ ಲಗ್ನ ಆಗಿಲ್ಲ ಒಡೆಯಾ' ಅಂದಳು. ಹಾಗಾದರೆ ಆಕೆ "unwed mother" ನಮ್ಮ ರೂಲ್ಸ್‌ನಲ್ಲಿ ಅದಕ್ಕೆ ಪರಿಹಾರ ಹುಡುಕಿದೆ. ಸಿಗಲಿಲ್ಲ. ನಮ್ಮ ಮೇಲಿನ ಅಧಿಕಾರಿಗೆ ಒಂದು ಟಿಪ್ಪಣಿ ಕಳಿಸಿದೆ. ಆತ ಬರೆದ: ''ಆಕೆಗೆ ಲಗ್ನವಾಗಿಲ್ಲ... ಹಾಗಂತ ಗರ್ಭಿಣಿಯಾಗಬಾರದು ಅಂತ ಇದೆಯೇ... ಪುನಃ ವಿಮರ್ಶಿಸಿರಿ.'' ಹೌದು ಸಂಬಂಧಪಟ್ಟ Actನಲ್ಲಿ ಖಾಯಂ ಕೆಲಸದಲ್ಲಿರುವ ಕಾರ್ಮಿಕ ಹೆಣ್ಣುಮಕ್ಕಳು ಹೆರಿಗೆ ರಜ ಮತ್ತು ಸಂಬಳಕ್ಕೆ ಅರ್ಹರು ಎಂದಷ್ಟೇ ಇದೆ (ಕೆಲವು ನಿಬಂಧನೆಗಳೂ ಇದೆ). ಸರಿ, ಅರ್ಜಿ ಫೈಸಲ್ ಮಾಡಿದೆ. ಮುಂದಿನ ಎರಡು ತಿಂಗಳಲ್ಲಿ ಆಕೆ ಅವಳಿ - ಜವಳಿ ಮಕ್ಕಳನ್ನು ಹೆತ್ತು, ಅವೆರಡನ್ನೂ ಹೊತ್ತುಕೊಂಡು ನನ್ನ ಕ್ವಾರ್ಟರ್ಸ್‌ಗೆ ಬಂದು ಮಕ್ಕಳನ್ನು ನನ್ನ ಮುಂದೆ ಮಲಗಿಸಿ, ನನಗೆ ನಮಸ್ಕರಿಸುತ್ತ 'ನಿಮ್ಮ ದಯಾ ನನ್ನೊಡೆಯ... ನಿಮ್ಮಿಂದ ನನಗೆ ಎರಡು ಮಕ್ಕಳಾದವು...' ಅಂದಾಗ ನನ್ನ ಹಿಂದೆ ಇದ್ದ ನನ್ನ ತೋಟಗಾರ ಕಿಸಕ್ಕೆಂದು ನಕ್ಕಾಗ ನನಗೆ ತುಂಬಾ ಕಸಿವಿಸಿಯಾಯಿತು.

ಮುಂದೆ ನಾನು ಮೂವತ್ತು ವರ್ಷಗಳು ಕೆನರಾ ಬ್ಯಾಂಕಿನಲ್ಲಿ ವಿವಿಧ ಹುದ್ದೆಗಳಲ್ಲಿದ್ದು ದುಡಿದು ನಿವೃತ್ತಿಯಾಗಿದ್ದೇನೆ. ಪ್ರಾಯಶಃ ನಾನು ನನ್ನ ಸಣ್ಣ ಸಣ್ಣ ಪ್ರೇಮಪ್ರಸಂಗಗಳಾದ ಮೇಲೆ ಗಟ್ಟಿಯಾಗಿ ಕೈ ಹಿಡಿದು ಲಗ್ನವಾಗಿ ಸುಖಸಂಸಾರ ನಡಿಸಿದ್ದು ಕೆನರಾಬ್ಯಾಂಕಿನೊಡನೆ....

✧✧✧

ಶ್ವಾನ ಮನೋವಿಜ್ಞಾನಿ ಡಾ|| ಡಾಗೇಶ್‌ಕುಮಾರ್

✧ ವೈ.ಎನ್. ಗುಂಡೂರಾವ್

ವಿಜಯದಶಮಿಯ ದಿವಸ ''ಶಾಪ್ ಓಪನಿಂಗ್ ಸೆರಮನಿ'' ಎಂದು ಪ್ರಚುರಪಡಿಸಿದ್ದು ನೋಡಿದ ನಮ್ಮ ಬಡಾವಣೆಯವರಿಗೆಲ್ಲಾ ಆಶ್ಚರ್ಯ ತರಿಸಿತ್ತು. ಏಕೆಂದರೆ ಯಾವ ಡಾಕ್ಟರು ಹಾಗಿರಲಿ ಏನೇ ಅಂಗಡಿ ಇಟ್ಟರೂ ಎಂಟು ದಿವಸ ಕೂಡಾ ಅಲ್ಲಿ ವ್ಯಾಪಾರವಾಗದೆ ಅಂಗಡಿ ಎತ್ತಿಕೊಂಡು ಹೋಗಿಬಿಡುತ್ತಿದ್ದರು. ನಮ್ಮ ಬಡಾವಣೆಗೆ ಆ ಸರ್ಕಲ್ ಬಳಿ ಇದ್ದುದು ಅದೊಂದೇ ಖಾಲಿ ಅಂಗಡಿಯಾದ್ದರಿಂದ ಈಗ ಬಂದಿರುವ ಈ ಡಾಗೇಶ್‌ಕುಮಾರ್ ಕೂಡಾ ಅಲ್ಲೇ ಪ್ರಾರಂಭಿಸಲು ತೀರ್ಮಾನಿಸಿದ್ದರೆಂದು ತಿಳಿದು ಆಶ್ಚರ್ಯವೂ ಆಗಿತ್ತು. ಸಂಜೆ ಲೋಕೇಶಿ ಬಂದಾಗ ಈ ವಿಷಯವನ್ನು ಚರ್ಚಿಸಬೇಕೆಂದುಕೊಳ್ಳುತ್ತಿರುವಾಗಲೇ ಲೋಕೇಶಿ ಕಾಣಿಸಿಕೊಳ್ಳಬೇಕೇ!

''ಬಾರಯ್ಯಾ ಲೋಕೇಶಿ'', ನಾನೇ ನಿನ್ನ ಕಡೆ ಸಂಜೆ ಹೊತ್ಗೆ ಹುಡುಕ್ಕೊಂಡು ಬರಾಣಿದ್ದೆ ಎಂದೆ. ''ಅದ್ಯಾಕಪ್ಪ, ಅಂಥ ಅರ್ಜೆಂಟು. ವಾರಕ್ಮುಂಚೆ ಸಿಗಾಣಿಲ್ಲ ಅಂತ ನೀನೇ ಹ್ಯೋಳ್ದೋನು'' ಎಂದ.

ಹೌದು, ಹಾಗೆ ಹೇಳಿದ್ದು ನಿಜ, ಆದ್ರೆ ಈಗೊಂದು ತುರ್ತು ಸಮಾಚಾರ ಮಾತಾಡೋದಿತ್ತು ಎಂದು ಕರೆದು ಕಾಫಿ ಕೊಟ್ಟು ಲೋಕೇಶಿ ಕೈಗೆ ಪ್ಯಾಂಫ್ಲೆಟ್ ಹಾಕಿದೆ. ಕಾಫಿ ಹೀರುತ್ತ ಕಣ್ಣಾಡಿಸಿದ ಲೋಕೇಶಿ.

''ಇವ್ಯಾರ್ಲೆ ಇವ, ಸರ್ಕಲ್ನಾಗೆ ಅಂಗ್ಡಿಮಡಗ್ತಾನಂತೆ, ಏನಾತ ತಲಿ-ಗಿಲಿ ಇದ್ದಾತ ಅವಂಗೆ'' ಹೈ... ಇವ್ನ... ಎಂದ.

''ತಲಿ ಇದ್ದಿದ್ರೆ ಅವನ್ಯಾಕೆ ಶಾಪ್ ಹಾಕ್ತಿದ್ದ. ಅವಂಗೆ ತಲಿ ಇಲ್ಲಾಂತ್ಲೆ ಇಟ್ಕೊಳ್ಳೋಣ. ಅದೆಂತಾದ್ದೊ ಅವನ ಹೆಸರೇ ವಿಚಿತ್ರವಾಗಿದೆ ಅಲ್ವಾ'' ಎಂದೆ.

''ಮಿ. ಡಾಗೇಶ್‌ಕುಮಾರ್! ಶ್ವಾನ ಮನೋವಿಜ್ಞಾನಿಯಂತೆ...!''

''ಇವನ ಹೆಸರು ನೋಡಿದರೆ ಡಾಗೇಶ್‌ಕುಮಾರ್. ಇವನ್ಹತ್ರ ಹೋದವಂಗೆ ನಾಯಿ ಕಡಿತವೇ ಗಟ್ಟಿಬಿಡ್ಲೆ. ಇನ್ ಇವ್ನ ಶಾಪಿಗೋದ್ರೆ ಕಚ್ಚಿಸ್ಕಂಡು, ಬೊಗಳಿಸ್ಕಂಡು, ಹೆಚ್ಗೆ ತೊಂದ್ರೆ ಆದ್ರೆ, ಇಂಜಕ್ಷನ್ ಚುಚ್ಚಿಸ್ಕಂಡು.... ಮಾತಾಡಿಸ್ಬೇಕಷ್ಟೆ ಇವನ್ನ'' ಎಂದ ಲೋಕೇಶಿ.

''ಅಲ್ಲಾ ಲೋಕೇಶಿ, ಅವನ ಹೆಸರು ಡಾಗೇಶ್ ಅಂತಿಟ್ಕೊಂಡಾಕ್ಷಣಕ್ಕೆ ಅವನೇನು ಬಂದವರ ಕೂಡಾ ಎಲ್ಲಾ ಬೊಗಳ್ಬೇಕು, ಕಚ್ಬೇಕು ಅಂತೇನಿಲ್ವಲ್ಲಾ! ಹಂಗಾದ್ರೆ ಮಂಗೇಶ್‌ಕುಮಾರ್ ಅಂತಿಟ್ಕೊಂಡವ್ರೆಲ್ಲಾ ಪರಚ್ತಾರೆ ಅಂತ್ಲಾ ಅರ್ಥ'' ಎಂದೆ.

''ಅದ್ಸರಿ ಅನ್ನು ನೀ ಹೇಳೋದ್ರೊಳ್ಗ್ ಅರ್ಥ ಐತಿ ಅಂತಿಟ್ಕೊ ಅದಿರ್ಲ್ಲಿ ಇವೆನಂಥ ಡಾಕ್ಟರಲೇ ಇವ. ಅದೇನೋ ನಾಯಿ ಸಾಕೋವ್ರಗೆ ಅದೇನೋ ಕ್ಲಾಸ್ ತಗಂತೀನಿ ಅಂತಾ ಬರ್ಕೊಂಡವನ್ಲೆ... ಇವನ್ನೇನು ನಾಯಿಗೆ ಪಾಠ ಮಾಡ್ತಾನಾ, ನಾಯಿ ಓನರ್ಗೆ ಪಾಠ ಮಾಡ್ತಾನಾ? ದೇವ್ರಿಗೆ ಗೊತ್ತು'' ಎಂದ ಲೋಕೇಶಿ.

ಅದೇನು ಮಾಡ್ತಾನೋ ನೋಡೋಣ ಎಂದು ಸಂಜೆ ಇಬ್ಬರೂ ಹೋದೆವು.

ಆಗಲೇ ನಮ್ಮ ಬಡಾವಣೆಯ ಬಹಳಷ್ಟು ಜನ ಅಂಗಡಿ ಪ್ರಾರಂಭೋತ್ಸವಕ್ಕೆ ಸೇರಿಬಿಟ್ಟಿದ್ದರು. ಶಾಸ್ತ್ರಿಗಳು ದೊಡ್ಡ ಗಂಟಲಿನಲ್ಲಿ ಮಂತ್ರ ಹೇಳುತ್ತ ಪೂಜೆ ಆರಂಭಿಸಿದ್ದರು. ಫೋಟೊ ತುಂಬ ಹೂವು ಅಲಂಕರಿಸಿದ್ದರಿಂದ ಅದು ಯಾವ ದೇವರು ಎಂಬುದು ಕಾಣದಿದ್ದರೂ ನುಸುಳಿಕೊಂಡು ಹೋದ ಲೋಕೇಶಿಯ ಕಣ್ಣಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ''ಏನ್ಲೇ.... ಇವನೆಂತಾ ಡಾಕ್ಟರ್ಲೇ.... ನಾಯಿ ಫೋಟೋ ಮಡಿಕ್ಕಂಡು ಪೂಜೆ ಮಾಡಿಸ್ತವ್ನೆ... ನೋಡು ಕೈತುದೀಲಿ ಗೊಂಚಲ್ತರ ಬಾಲ ಕಾಣಿಸ್ತಿಲ್ವಾ''.... ಎಂದ.

ನಾನು ನೆಟ್ಟ ದೃಷ್ಟಿಯಿಂದ ನೋಡಿದರೆ ಅದೊಂದು ನಾಯಿಬಾಲ. 'ಹಯವದನಾಂಕಿತ ವಾದಿರಾಜರ ತರ ಇವನಿಗೆಲ್ಲಿ ಇಲ್ಲಿ ನಾಯಿಯೇ ದೇವರಾಗಿ ಕಂಡ್ರೊ' ಎಂದು ಫೋಟೋವನ್ನೇ ದಿಟ್ಟಿಸಿದರೆ ಮುಖದ ತುಂಬ ತುಂಬಿದ ಕೂದಲಿನೊಳಗೆ ಎರಡು ಕಣ್ಣುಗಳು ಪಿಳಿ ಪಿಳಿ ಎನ್ನುತ್ತಿತ್ತು. ಆದರೆ ಫೋಟೋ ತುಂಬಾ ಹೂವನ್ನು ತುಂಬಿದ್ದರು. ಪುರೋಹಿತರು ಸಾಂಗೋಪಾಂಗವಾಗಿ ಪೂಜೆ ನೆರವೇರಿಸಿದರು. ಫೋಟೋದಲ್ಲಿ ಯಾವ ದೇವರಿದೆ ಎನ್ನುವ ರಹಸ್ಯ ನನಗೆ ಲೋಕೇಶಿಗಲ್ಲದೆ ಮತ್ಯಾರಿಗೂ ತಿಳಿಯದಿದ್ದುದರಿಂದ ಪುರೋಹಿತರು ನೀಡಿದ ಹೂವ ಮಂತ್ರಾಕ್ಷತೆಯನ್ನು ಬಂದಿದ್ದವರೆಲ್ಲರೂ ಫೋಟೋಗೇರಿಸಿ ನಿಂತಲ್ಲೆ ಮೂರು ಪ್ರದಕ್ಷಿಣೆ ಸುತ್ತಿ ನಮಸ್ಕರಿಸಿದರು.

ಇದನ್ನು ನೋಡಿದ ಲೋಕೇಶಿಗೆ ನಗು ತಡೆಯಲಾಗಲಿಲ್ಲ. ಅಲಲೇ... ಇವನ್ಯಾರ್ಲೇ ಇವ ಧರ್ಮರಾಯ! ಸ್ವರ್ಗಕ್ಕೆ ಹೊಂಟ್ರಾಗ್ಲೂ, ಇಂದ್ರ ಬ್ಯಾಡ ಬ್ಯಾಡಾಂದ್ರೂ, ನಾಯಿ ಬರ್ಲಿಂತ ಹಟ ಹಿಡ್ದಂಗೆ, ನಾಯಿ ದೇವರ ಫೋಟೋ ಇಟ್ಟು ನಾರಾಯಣನನ್ನ ಕಾಣೋನು? ಎಂದು ಪಿಸಗುಟ್ಟಿದರೂ, ಲೋಕೇಶಿಯ ಕಂಚಿನ ಕಂಠದಿಂದ ಆಗಲೇ ಹಲವರ ಕಿವಿಗೆ ಬಿದ್ದಿತ್ತು. ಏಕೆಂದರೆ ಲೋಕೇಶಿ ಪಿಸುಗುಡುವುದು ಜೋರಾಗಿ ಮಾತನಾಡುವುದು ಎರಡೂ ಒಂದೇ...!

ಧರ್ಮರಾಯನಿಗೆ, ''ನೋಡು, ತಮ್ಮಂದಿರು ಹೆಂಡತಿಯನ್ನು ತೊರೆದು ಸ್ವರ್ಗಕ್ಕೆ ಹೊರಟಿದ್ದೀಯಾ, ಈ ನಾಯಿ ಉಸ್ತುವಾರಿ ಯಾಕೆ ಬೇಕು? ನಾಯಿಯ ಸ್ವಾಮಿ ಭಕ್ತಿಗೆ ಮಾರು ಹೋಗಿದ್ದೀಯಾ, ಈ ವ್ಯಾಮೋಹ ಬಿಡು, ರಥದಲ್ಲಿ ಕೂಡು'' ಎಂದು ಅಶ್ವಿನಿ

ದೇವತೆಗಳು, ಮಹರ್ಷಿಗಳು ಹೇಳಿದ ನಂತರವೇ ಧರ್ಮರಾಯ ರಥ ಹತ್ತಿದ್ದು. ಹಾಗೇ ಈ ಡಾಗೇಶ್‌ಕುಮಾರ್‌ಗೂ ನಾಯಿಯೇ ದೇವರಾಗಿ ಕಂಡಿರ್‍ಬೇಕು ಎಂದೆ.

''ಕಂಡಿರ್‍ಬೇಕು ಏನ್ಲಾ, ಕಾಣ್ತಾಯಿಲ್ವಾ... ಫೋಟೊ ಇಟ್ಕಂಡು ಪೂಜೆ ಮಾಡ್ಬೇಕಾದ್ರೆ...!''

ಅಷ್ಟೊತ್ತಿಗೆ ಡಾಗೇಶ್‌ಕುಮಾರ್ ಎಲ್ಲರಿಗೂ ಸ್ವೀಟ್ ಪ್ಯಾಕೆಟ್ ಹಂಚಿ, ''ನೋಡಿ ನಾನೊಬ್ಬ ಶ್ವಾನ ಮನೋ ವಿಜ್ಞಾನಿ, ನೀವು ನಾಯಿ ಸಾಕಬೇಕಾದರೆ ಕೆಲವೊಂದು ಅಂಶವನ್ನು ಗಮನದಲ್ಲಿಟ್ಟುಕೊಂಡಿರಬೇಕು. ನಾಯಿಯನ್ನು ಆರಿಸುವಾಗ ಕೆಲವೊಂದು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸಬೇಕು'' ಎಂದು 'ಹಿತನುಡಿ' ಶುರು ಮಾಡಿದ.

ಲೋಕೇಶಿ ನನ್ನ ಮುಖ ನೋಡಿದ. ಇನ್ನೇನು ಸ್ವೀಟ್ಸ್ ಪ್ಯಾಕೆಟ್ ಕೈಗೆ ಬಂತಲ್ಲ ಎಂಬ ಅರ್ಥದಲ್ಲಿ. ನಾನು, ತಾಳು ಅದೇನು ಹೇಳ್ತಾನೋ ಈ ಡಾಗೇಶ್‌ಕುಮಾರ್ ಎಂದು ಸುಮ್ಮನಿರಲು ಕಣ್ಣಲ್ಲೇ ಸಂಜ್ಞೆ ಮಾಡಿದೆ.

ಡಾಗೇಶ್‌ಕುಮಾರ್ ತಮ್ಮ ಮಾತು ಪ್ರಾರಂಭಿಸಿದರು. ನಾನೊಬ್ಬ ಶ್ವಾನ ಮನೋವಿಜ್ಞಾನಿ. ನಾನು ನಾಯಿಯ ಚಟುವಟಿಕೆಗಳ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದೇನೆ. ನಾಯಿ ಮನುಷ್ಯರನ್ನೇ ಏಕೆ ಕಚ್ಚುತ್ತದೆ, ಹನ್ನೆರಡು ವರ್ಷ ಮತ್ಸರ ಸಾಧಿಸುವ ಹಾವಿಗಿಂತಲೂ ಮನುಷ್ಯನ ನಡವಳಿಕೆ ಕೀಳಾಗಿ ನಾಯಿ ಕಚ್ಚಿದಾಗ ದ್ವೇಷ ತೀರಿಸಿಕೊಳ್ಳಲಾದರೂ ಹಿಂದಿರುಗಿ ಏಕೆ ಕಚ್ಚುವುದಿಲ್ಲ? ಎಂದಾಗ ಹಿಂದಿನಿಂದ ಅದ್ಯಾರೋ 'ಕಚ್ಚಿದ ಉದಾಹರಣೆ ಇದೆ' ಎಂದಾಗ, ಎಲ್ಲಾ ಕ್ಷೇತ್ರದಲ್ಲಿರುವಂತೆ ಇದೂ ಲಕ್ಷಕ್ಕೊ, ಹತ್ತುಲಕ್ಷಕ್ಕೊ ಒಂದಿರಬೇಕು, ನಾನೇನು ಹೇಳ್ತಾಯಿದ್ದೆ... ಹ್ಞಾಂ! ನಾಯಿಯ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದೇನೆ. ಕಚ್ಚುವ ಮುಂಚೆ ಅದರ ಮನಸ್ಥಿತಿ ಹೇಗಿರುತ್ತದೆ? ಕಚ್ಚಿದ ನಂತರ ಹೇಗಿರುತ್ತದೆ? ಇದನ್ನು ಅಭ್ಯಸಿಸಿದರೆ ಖಂಡಿತ ಕಚ್ಚುವುದರಿಂದ ತಪ್ಪಿಸಿಕೊಳ್ಳುವುದು ಹೇಗೆ? ಎಂಬುದರ ಬಗ್ಗೆ ಸುಮಾರು ಮೂವತ್ತು ವರ್ಷ ಆಳವಾದ ಅಧ್ಯಯನ ನಡೆಸಿ ಮುನಿಸಿಪ್ಪಿ ನದಿ ತೀರದ ವಿಶ್ವ ವಿದ್ಯಾಲಯದಲ್ಲಿ ಪಿ.ಎಚ್‌ಡಿ. ಪಡೆದು ಬಂದಿದ್ದೇನೆ ಎಂದು ಹೇಳಿದ ಡಾಗೇಶ್‌ಕುಮಾರ್ ಮಾತು ನಿಲ್ಲಿಸಿ ಪ್ರತಿಕ್ರಿಯೆಗಾಗಿ ಕಾದರು.

ತ್ಚು.... ತ್ಚು.... ತ್ಚೂ... ಎಂಬ 'ತ್ಚೂ' ಕಾರಗಳು ಸಭೆಯಲ್ಲಿ ತುಂಬಿ ಹೋಯಿತು. ''ಇದೇನು ಶ್ವಾನದ ಬಗ್ಗೆ ನಡೆಸಿದ ಸಂಶೋಧನೆಯ ಪುರಸ್ಕಾರವೊ ಇಲ್ಲ ನಾಯಿಯ ಬಗ್ಗೆ ಡಾಕ್ಟರಂತೆ... ಬುದ್ಧಿ ಇದೆಯಾ ಈವಯ್ಯಂಗೆ....'' ಎಂಬ ತಿರಸ್ಕಾರವೊ ತಿಳಿಯದಾಗಿತ್ತು.

ಪುನಃ ಡಾಗೇಶ್‌ಕುಮಾರ್ ತಮ್ಮ ಭಾಷಣ ಮುಂದುವರೆಸಿದರು. ನೋಡಿ ನಿಮ್ಮ ಏರಿಯಾದಲ್ಲಿರುವ ಜನಸಂಖ್ಯೆಗೆ ಹೋಲಿಸಿದರೆ ನಾಯಿಯ ಸಂಖ್ಯೆ ಬಹಳ ಕಡಿಮೆ ಇದೆ. ಇದೊಂದು ಇಕಲಾಜಿಕಲ್ ಇಮ್‌ಬ್ಯಾಲೆನ್ಸ್ ಕೂಡಾ, ಅಮೆರಿಕ, ರಷ್ಯಾ, ಜಪಾನ್‌ಗಳಲ್ಲಿ ಒಂದು ಚದರ ಮೈಲಿಯ ಜನಸಂಖ್ಯೆಗೆ ಸುಮಾರು 200 ನಾಯಿಯಾದರೂ ಇದೆ. ಹೀಗೆ ಇರಲೇಬೇಕೆಂದು ವಿಶ್ವ ಶ್ವಾನ ಸಂಸ್ಥೆಯ ನಿಯಮವೂ ಹೌದು. ಆದರೆ ಒಂದು ಚದರ ಮೈಲಿ ಇರುವ ನಿಮ್ಮ ಏರಿಯಾದಲ್ಲಿ 2 ನಾಯಿಮರಿ ಕೂಡಾ ಕಾಣಸದಾಗಿದೆ. ಅದೂ

ಅಲ್ಲದೆ ನಾಯಿಗಳಲ್ಲಿ ಎಷ್ಟು ಪ್ರಭೇದಗಳಿವೆ ಎಂಬುದನ್ನಾದರೂ ಬಲ್ಲಿರಾ? ನಾನೇ ಹೇಳುತ್ತೇನೆ ಕೇಳಿ. ಪಾಯಿಂಟರ್, ಚುವಾವಾ, ಗ್ರೇಹೌಂಡ್, ಚೌಚೌ, ಡಾಕ್‌ಶುಂಡ್, ಡಾಬರ್‌ಮನ್, ಪಿನ್‌ಶರ್, ಬುಲ್‌ಡಾಗ್, ಬಸೆಂಜಿ, ಬ್ಲಡ್‌ಹೌಂಡ್, ಸೇಂಟ್ ಬರ್ನಾರ್ಡ್, ಲ್ಯಾಬಡಾರ್ ರಿಟ್ರೀವರ್ಸ್, ಕಾಕರ್‌ಸ್ಪೇನಿಯಲ್, ಪೊಮೆರಿಯನ್, ಗೋಲ್ಡನ್ ರಿಟ್ರೀವರ್, ಸಲೂಕಿ, ಪೂಡಲ್, ಟೆರಿಯರ್, ಶ್ನಾಟ್ಜರ್, ಐರಿಷ್ ಸೆಟರ್, ಗ್ರೇಟ್‌ಡೇನ್, ಸ್ಕಾಟಿಷ್ ಟೆರಿಯರ್, ಬಾಕ್ಸ್ರ್, ಸೈಬೀರಿಯನ್ ಹಸ್ಕಿ, ಸ್ಪೇನಿಯರ್, ಫಾಕ್ಸ್‌ಹೌಂಡ್, ಆಫ್ಘನ್‌ಹೌಂಡ್, ಜರ್ಮನ್ ಷಪರ್ಡ್, ಕ್ಲಂಬರ್ ಸ್ಪೇನಿಯಲ್, ಡಾಲ್ಮೆಷನ್ ಬುಲ್ ಟೆರಿಯರ್.... ಕೇಳುತ್ತ ನಿಂತ ಜನ ನಿಬ್ಬೆರಗಾದರು. ಇಷ್ಟು ಜಾತಿ ನಾಯಿಯಿದೆ ಗೊತ್ತಾ? ಹೋಗಲಿ ನಾವೇಳಿದ ಹತ್ತು ರೀತಿಯ ನಾಯಿಯ ಹೆಸರನ್ನಾದರೂ ಹೇಳಿ ನೋಡೋಣ ಎಂದ ಡಾಗೇಶ್‌ಕುಮಾರ್. ಎಷ್ಟು ಹೆಸರು ಹೇಳಿದ ಎಂಬ ಲೆಕ್ಕವೇ ಸಿಕ್ಕದಿರುವಾಗ ಹೆಸರಾದರೂ ಹೇಗೆ ಉಚ್ಚರಿಸಿಯಾರು?

ಇನ್ನೊಂದು ವಿಷಯ ನಾನು ಶ್ವಾನ ಮನೋ ವಿಜ್ಞಾನಿ ಎಂಬುದನ್ನಾದರೂ ಮರೆಯಬೇಡಿ. ಸಾಮಾನ್ಯವಾಗಿ ನಾಯಿಯನ್ನು ಆರಿಸುವಾಗ ನಾಯಿ ಮರಿಯ ಎರಡು ಕಿವಿಯನ್ನು ಹಿಡಿದೆತ್ತಿ ಸಾಂಪ್ರದಾಯಿಕವಾಗಿ ಪರೀಕ್ಷಿಸುತ್ತಾರೆ. ಖಂಡಿತ ಇದೊಂದು ಕ್ರೂಡ್‌ಮೆಥೆಡ್. ಯಾವ ನಾಯಿ ಮರಿಗೂ ಕಿವಿ ಹಿಡಿದೆತ್ತಿದಾಗ ಕೂಗಬೇಕೆಂಬ ಪ್ರಜ್ಞೆ ಕೂಡಾ ಬೆಳೆದಿರುವುದಿಲ್ಲ. ಇದರ ಬದಲು ಅದರ ಬಲಗಾಲನ್ನು ಎತ್ತಿ ಶೇಕ್ ಹ್ಯಾಂಡ್ ರೀತಿ ಮಾಡಿದಾಗ ಅದು ಉಗುರಿನಿಂದ ಪರಚದಿದ್ದರೆ ಗುಣಮಟ್ಟದ ಶ್ವಾನವೆಂದೂ, ಪರಚಿದರೆ ಮಾತುಮಾತಿಗೂ ಜಗಳಕ್ಕೆ ಬರುವ ಕಂತ್ರಿಜನರ ಗುಣ ಸ್ವಭಾವದ ನಾಯಿಯೆಂದೂ ತಿಳಿಯಬೇಕು. ಮತ್ತೊಂದು ವಿಚಾರ. ನಿಮ್ಮ ಬಲಗೈಲಿ ದುಂಡನೆಯ ಒಂದಡಿ ಉದ್ದದ ಕೋಲನ್ನು ಹಿಡಿದು ವೃತ್ತಾಕಾರವಾಗಿ ಅದರ ತಲೆಯ ಮೇಲೆ ಆಡಿಸಿದಾಗ ಪ್ರತಿಕ್ರಿಯಿಸದಿದ್ದರೆ ಸೌಮ್ಯಗುಣವೆಂದೂ, ಎಗರಿ ಕೋಲನ್ನು ಹಿಡಿದರೆ ಆಕ್ರಮಣಕಾರಿ ಎಂದೂ ತಿಳಿಯಬಹುದು. ಶ್ವಾನದ ಲಿಂಗ ನಿರ್ಧಾರದ ಬಗ್ಗೆ ನಿಮಗೆ ತಿಳಿದೇ ಇದೆ. ಆದರೆ ತುಪ್ಪಳ ತುಂಬಿರುವ ನಾಯಿಮರಿ ಯಾವುದೆಂದು ಹೊರ ನೋಟದಿಂದ ಹೇಳಲಾಗುವುದಿಲ್ಲ. ಅದಕ್ಕೊಂದು ಸಿಂಪಲ್ ಟೆಸ್ಟ್ ಇದೆ. ನಾಯಿಮರಿ ಎರಡೂ ಕಣ್ಣ ಮುಂದೆ ನೀವು ಅಂಗೈಯಿಂದ ಮುಟ್ಟಿದಾಗ ನಾಯಿಮರಿ ಹಿಂದಕ್ಕೆ ನಡೆದರೆ ಹೆಣ್ಣೆಂದೂ, ಮುಂದಕ್ಕೆ ನಡೆದರೆ ಗಂಡೆಂದೂ ಸುಲಭವಾಗಿ ಗುರ್ತಿಸಬಹುದು ಎಂದು ಹೇಳಿದಾಗ ಜನ ಹೋ... ಎಂದು ನಕ್ಕರು.

ಆಗ ಡಾಗೇಶ್‌ಕುಮಾರ್, ನೀವು ಯಾಕೆ ನಗುತ್ತಿದ್ದೀರೆಂದು ನನಗೆ ಗೊತ್ತು. ಆದರೆ ಇದನ್ನು ತಿಳಿಯಲು ನಾನು ಸುಮಾರು ಹತ್ತು ವರುಷ ಇದಕ್ಕಾಗಿ ಶ್ರಮಿಸಿ ಸಂಶೋಧಿಸಿರುವ ವಿಚಾರವೆಂದರೆ ಬಹುಶಃ ನಿಮಗೆಲ್ಲಾ ಆಶ್ಚರ್ಯವಾಗಬಹುದು.

ಈಗ ನನ್ನ ಬಳಿ ಹೈಬ್ರೀಡ್ ನಾಯಿಮರಿ ಬೇಕೆಂದು ಹೇಳಿದವರಿಗೆ ನಾನು ಒಂದು ವಾರದಲ್ಲಿ ನಾಯಿಮರಿ ತರಿಸಿಕೊಡುತ್ತೇನೆ.... ಎಂದು ಡಾ|| ಎಲ್ಲರ ಮುಖ

ನೋಡಿದರು. ಎಲ್ಲರ ಮುಖದಲ್ಲೂ ಸಂಶಯ ಸುಳಿದು, ಹಣಕೊಟ್ಟು ಎತ್ತಿಕೊಂಡು ಹೋದರೆ... ಎಂಬ ಭಾವನೆ ಎಲ್ಲರ ಮುಖದಲ್ಲೂ ಮೂಡಿದ್ದು ಕಂಡ ಡಾಗೇಶ್ ಕುಮಾರ್‌ರವರೇ, ನೋಡಿ ನೀವೇನೂ ಇದಕ್ಕೆ ಅಡ್ವಾನ್ಸ್ ಹಣ ಒಂದು ರೂಪಾಯಿ ಕೂಡಾ ಕೊಡಬೇಕಾಗಿಲ್ಲ. ನಾಯಿಮರಿ ತಂದುಕೊಟ್ಟಾಗ ಹಣ ಕೊಟ್ಟು, ತೃಪ್ತಿ ಎನಿಸಿದರೆ ಕೊಳ್ಳಬಹುದು. ಈಗ ಯಾರ್ಯಾರಿಗೆ ನಾಯಿಮರಿ ಬೇಕೆಂಬುದನ್ನು ಈ ಪುಸ್ತಕದಲ್ಲಿ ಬರೆಯಿರಿ ಎಂದಾಗ, ಮುಗಿಬಿದ್ದ ಜನ ಬರೆಯುವ ಆತುರದಲ್ಲಿ ಪುಸ್ತಕವನ್ನು ಚಿಂದಿ ಚಿಂದಿ ಮಾಡಿದರು.

ಬೇಸರದಿಂದ ಡಾಗೇಶ್‌ಕುಮಾರ್ ಶಾಪಿನೊಳಗೆ ಹೋಗಿ ಬಾಗಿಲು ಮುಚ್ಚಿ ಕುಳಿತುಬಿಟ್ಟರು. ಡಾಗೇಶ್ ಹೊರಕ್ಕೆ ಬಂದಾಗ ಕೇಳೋಣವೆಂದು ಕಾದ ಜನ ಸಿಹಿ ತಿಂದು ಒಬ್ಬೊಬ್ಬರೇ ಜಾಗ ಖಾಲಿ ಮಾಡತೊಡಗಿದರು. ಸಂಜೆ ರಶ್ ಇಲ್ಲದಿದ್ದಾಗ ಬಂದರಾಯಿತೆಂದುಕೊಂಡರು ಕೆಲವರು.

ಮುಂದಿನ ಮೂರ್‍ನಾಲ್ಕು ದಿವಸ ಹಾಗೂ ಹೀಗೂ ಜನ ಬಂದು ಬಂದು ಹೆಸರು ಕೊಟ್ಟು ಹೋದರು. ಮುಂದಿನ ವಾರ ನಾಲ್ಕು ಮರಿಗಳು ಬರುತ್ವೆ ಎಂದು ಡಾಗೇಶ್ ಆಶ್ವಾಸನೆಯಿತ್ತರು.

ವಾರ ಕಳೆಯುವುದರೊಳಗೆ ಅಂಗಡಿ ಯಥಾ ಪ್ರಕಾರ ಮುಚ್ಚಿಕೊಂಡು ಹೋದ ಡಾಗೇಶ್‌ಕುಮಾರ್ ಹಿಂದಿರುಗಲೇ ಇಲ್ಲ. ಎರಡು ವಾರವೂ ಕಳೆದು ಹೋಯಿತು.

ಒಂದು ದಿನ ಸಂಜೆ ಯುವಕನೊಬ್ಬ ಬಂದ. ಬಂದವನು ಇಲ್ಲೊಂದು ಶ್ವಾನ ಮನೋವಿಜ್ಞಾನಿ ಎಂದುಕೊಂಡು ಯಾರಾದರೂ ನಾಯಿಮರಿ ಕೊಡುತ್ತೇವೆಂದು ಅಂಗಡಿ ತೆರೆದಿದ್ದರಾ? ಎಂದ.

''ಹ್ಞಾಂ! ಹೌದು. ಈಗೆರಡು ವಾರದ ಕೆಳಗೆ ಬುಲ್ಗಾನಿನ್ ಗಡ್ಡದ ವ್ಯಕ್ತಿಯೊಬ್ಬ ಶ್ವಾನ ಮನೋವಿಜ್ಞಾನಿ ಅಂತ ಹೇಳ್ಕೊಂಡು ನಾಯಿಮರಿ ಕೊಡಿಸ್ತೀನಿ ಅಂತಾ ಶಾಪ್ ಓಪನ್ ಮಾಡಿದ್ರು. ಅವರೆಲ್ಲಿ ಹೋದರೋ ಗೊತ್ತಿಲ್ಲ'' ಎಂದರು. ಆ ಯುವಕನನ್ನು ಮುತ್ತಿದ ಜನ.

''ದುಡ್ಡೇನಾದ್ರೂ ಕಲೆಕ್ಟ್ ಮಾಡಿದ್ರಾ?''

''ಇಲ್ಲ ದುಡ್ಡು ಯಾರೂ ಕೊಡ್ಲಿಲ್ಲ, ಯಾರಿಂದ್ಲೂ ತಗೊಳ್ಳಲೂ ಇಲ್ಲ.''

ಸಧ್ಯ! ನೋಡಿ ಅವನಿಗೆ ಈಗ್ಗೆ ಕೆಲವು ತಿಂಗಳ ಹಿಂದೆ ಹುಚ್ಚುನಾಯಿ ಕಡಿದು ಈಗ ಹುಚ್ಚು ಕೆರಳಿ ಅವನು ಈ ರೀತಿ ಮಾಡೋಕೆ ಶುರು ಮಾಡಿದ್ದಾನೆ. ಸಧ್ಯ! ದೇವರ ದಯೆ ಯಾರಿಗೂ ತೊಂದರೆ ಮಾಡೋಲ್ಲ, ಬಹುಶಃ ಮುಂದಿನ ಬಡಾವಣೆಗೆ ಹೋಗಿರಬಹುದು ಹುಡುಕುತ್ತೇನೆ, ಎಂದು ಮೋಟರ್ ಬೈಕ್ ಸ್ಟಾರ್ಟ್ ಮಾಡಿದಾಗ ಜನ ನಿಬ್ಬೆರಗಾಗಿ ನೋಡುತ್ತಾ ನಿಂತರು.

✧✧✧

ಬೇಟೆ

✧ ಕೃಷ್ಣ ಸುಬ್ಬರಾವ್

ಮನೆ ಅಂದ್ಮೇಲೆ ವಿಧ ವಿಧ ಪ್ರಾಣಿಗಳು (ಗಂಡ-ಹೆಂಡ್ತಿ ಹೊರತಾಗಿ) ವಾಸಿಸುತ್ತವೆ. ಪ್ರಸಿದ್ಧ ಹಾಸ್ಯಲೇಖಕ ನಾ. ಕಸ್ತೂರಿಯವರ ಅನರ್ಥಕೋಶದಲ್ಲಿ ಮನೆ ಅನ್ನೋಕ್ಕೆ ಏನ್ ಡೆಫಿನಿಷನ್ ಕೊಡ್ತಾರೆ ಗೊತ್ತಾ?

''ಇಲಿ, ಜಿರಲೆ, ಹೆಗ್ಗಣ, ಇರುವೆ, ನೊಣ, ಹಲ್ಲಿ ಇವುಗಳ ನಡುವೆ ನರಮನುಷ್ಯ ವಾಸ ಮಾಡುವ ಜಾಗ'' ಅಂತ. ಎಷ್ಟು ನಿಜ ನೋಡಿ ಈ ಮಾತು. ಬೇಕಾದರೆ ಗಂಡ ಅನ್ನೊ ಪ್ರಾಣಿ ಅಥವಾ ಹೆಂಡ್ತಿ ಅನ್ನೊ ಪ್ರಾಣಿ ಪರಸ್ಪರ ಬೇಡ ಅನ್ನಿಸಿದರೆ ಡೈವೊರ್ಸ್ ಮೂಲಕ ಒಬ್ಬರನ್ನೊಬ್ಬರು ಮನೆಯಿಂದ ದೂರವಿಡಬಹುದು. ಆದರೆ ಇಲಿ ಜಿರಲೆ ಇರುವೆ ನೊಣ ಹಲ್ಲಿಗಳನ್ನು ಮನೆಯಿಂದ ಹೊರಗೆ ಇಡಲು ಸಾಧ್ಯವೆ? ಆಗಾಗ್ಗೆ ಸಂಹಾರ ಮಾಡುತ್ತಿದ್ದರೂ ಅವುಗಳು ತಮ್ಮ ಸಂಸಾರ ಸಮೇತ ಹಾಜರಾಗುತ್ತವೆ. ಆದ್ದರಿಂದ ನಾವು ಅವುಗಳ ಜತೆನೆ ಬಾಳ್ವೆ ನಡೆಸಬೇಕು.

ಬಡವರು ಶ್ರೀಮಂತರೆಂಬ ಬೇಧವಿಲ್ಲದೆ ಎಲ್ಲರ ಮನೆ ಹೊಕ್ಕುಬಿಡುವ ಈ ಸಮಾಜವಾದಿ, ಜಾತ್ಯಾತೀತ ಪ್ರಾಣಗಳಿವು. ಕಂಡಾಗಲೆಲ್ಲಾ ಕೊಲೆ ಮಾಡಬೇಕೆಂಬ ನಮ್ಮ ಸತತ ಪ್ರಯತ್ನಕ್ಕೆ ಅವುಗಳ ಸಂತತಿ ದೊಡ್ಡ ಸವಾಲು. ಅವೆಲ್ಲಾ ನಿಜವಾದ ಅರ್ಥದಲ್ಲಿ ಸಾಕು ಪ್ರಾಣಿಗಳು ನಮ್ಮನ್ನು ಸಾಕುಸಾಕು ಮಾಡುವ ಸತಾಯಿಸುವ ಪ್ರಾಣಿಗಳು.

ಅಮಾವ್ರ ಗಂಡಂದಿರೂ ಕೂಡ ತಮ್ಮ ಹೆಂಡತಿಯರ ಮುಂದೆ ಒಮ್ಮೊಮ್ಮೆ ಹೀರೊಗಳಂತೆ ಮಾಡಲು ಒಂದು ಇಲಿ ಅಥವಾ ಒಂದು ಜಿರಲೆ ನೆರವು ಮಾಡುತ್ತದೆ. ಹೆಂಡ್ತಿ ತಮ್ಮ ತಾಳಕ್ಕೆ ಗಂಡನನ್ನು ಕುಣಿಸಬಹುದು ಆದರೆ ಒಂದು ಜಿರಲೆ ಅಥವಾ ಒಂದು ಇಲಿಮರಿ ಕಾಲಿನ ಹತ್ತಿರ ಹರಿದಾಡಲಿ, ಅವಳೆ ಕುಣಿದು ಕುಪ್ಪಳಿಸುತ್ತಾಳೆ ಗಂಡನನ್ನು ಅಪ್ಪಿಸಿಕೊಂಡು ಬಂದು ಆಸರೆಗಾಗಿ ಅಪ್ಪುತ್ತಾಳೆ. ಸಿನಿಮಾದಲ್ಲಿ ನಾಯಕಿಯನ್ನು ವಿಲನ್‌ಗಳಿಂದ ಕಾಪಾಡುವಂತೆ ಜಿರಲೆಯನ್ನು ಹೊಡೆದರೆ, ಇಲಿಯನ್ನು ಓಡಿಸಿದರೆ ಸಾಕು ಗಂಡ ಅಂದಿನ ನಿಜವಾದ ಹೀರೊ.

ನಮ್ಮನೆ ವಾಷಿಂಗ್‌ಮಿಷನ್‌ನ ವೇಸ್ಟ್ ನೀರು ಹೋಗಲಿಕ್ಕೆ ಇರುವ ಬಚ್ಚಲಿನಿಂದ ಮುಚ್ಚಳವನ್ನು ಎಗರಿಸಿಕೊಂಡು ಬಂದ ಒಂದು ದೊಡ್ಡಿಲಿ ರಭಸಕ್ಕೆ ಮೊನ್ನೆ ನನ್ನವಳು ಎಗರಿ

ಜೋರಾಗಿ ಕೆಳಗೆ ಬಿದ್ದುಬಿಟ್ಟಳು. ಬೆಂಗಳೂರಿನಲ್ಲಿ ಸಮುದ್ರವಿಲ್ಲದಿದ್ದರೂ ಸುನಾಮಿ ಅನುಭವವಾದಂತಾಯಿತು. ಪೇಪರ್ ಓದುತ್ತಾ ಇದ್ದ ನನಗೆ ಗಾಬರಿಯಾಗಿ ಪುಟ್ಟ ಅಂಗಳಕ್ಕೆ ಬಂದೆ. ಬಾಗಿಲಿಗೆ ಅಡ್ಡಲಾಗಿ ಕುಕ್ಕರಿಸಿದ್ದಳು ಮನೆ ಯಜಮಾನಿ. ಅವಳನ್ನು ಎತ್ತಕ್ಕೆ ನಾನು, ನಮ್ಮನೆ ಕೆಲ್ಸದವಳು ಹರಸಾಹಸ ಮಾಡಬೇಕಾಯಿತು. ಮೊದಲೇ ಮಂಡಿನೋವು ಗಿರಾಕಿ ಅವಳು. ಅವಳಿಗಾದ ನೋವಿಗಿಂತ ಭಯ ಜಾಸ್ತಿಯಾಗಿತ್ತು. ಎಲ್ಲಿ ಇಲಿ ಮನೆಯೊಳಕ್ಕೆ ಅದರಲ್ಲೂ ಹತ್ತಿರದ ಅವಳ ಅರಮನೆ (ಅಡಿಗೆಮನೆಗೆ) ಪ್ರವೇಶ ಮಾಡುತ್ತೋ ಎಂಬ ಭಯ. ಅಷ್ಟರೊಳಗೆ ಕೆಲಸದವಳು ಪ್ಯಾಸೇಜ್ ಬಾಗಿಲು ಹಾಕಿಕೊಂಡು ಅಲ್ಲಿ ಒಣಗಲು ಹಾಕಿದ್ದ ಟವಲ್‌ನ ಕೈಗೆತ್ತುಕೊಂಡು ಇಲಿ ಮೇಲೆ ಪ್ರಹಾರ ಮಾಡಿ ಕೊಂದು ಅದರ ಬಾಲವನ್ನು ಹಿಡಿದು ಹೊರಗೆ ಬಂದಾಗ ನನ್ನವಳು ಕಿರುಚಕ್ಕೂ ಆಗದೆ, ಮಾತನಾಡೂದಕ್ಕೂ ಆಗದೆ ಹಾಗೆ ಕೂತಳು!

ಭಾರವಾದ ದೇಹ ಕರಗಿಸೋದಕ್ಕೆ ಆಗದೇ ಇರುವುದಕ್ಕೆ ಇಲಿನೇ ಕಾರಣ. ನಮ್ಮನೇಲಿ ಇಲಿ ಹಿಡಿಯೊದಕ್ಕೆ ಬೋನ್ ತಂದು ಅದಕ್ಕೆ ಬೋಂಡ ಇಡಲು ಶುರು ಮಾಡಿದೆವು. ಹಾಗೆ ನಾವು ತಿಂದು ತಿಂದು ಕೊಬ್ಬು ಜಾಸ್ತಿ ಮಾಡಿಕೊಂಡೆವು. ಜಾಣ ಇಲಿಗಳು ಬೋಂಡವನ್ನು ಹೊರಗಿನಿಂದಲೇ ಎಳೆದುಕೊಂಡು ತಿಂದು ಹೆಗ್ಗಣಗಳಾದವು. ಎಲ್ಲೋ ಒಂದೊ ಎರಡೊ ದಡ್ಡ ಇಲಿಗಳು ನಮ್ಮ ಬೋನಿಗೆ ಬೀಳುತ್ತಿದ್ದವು.

ಮನೆಕಡೆ ಹೀಗಾದ್ರೆ, ನಮ್ಮ ಆಫೀಸಿನಲ್ಲೂ ಇಲಿಗಳದೆ ಕಾಟ. ಕಂಪ್ಯೂಟರುಗಳು ಇರದ ಕಾಲದಲ್ಲಿ ನಾವು ಈ ಮೌಸ್‌ಗಳನ್ನು ಇಟ್ಟುಕೊಂಡೆ ಕೆಲಸ ಮಾಡ್ತಾ ಇದ್ವಿ ಅನ್ನಿ. ಇಲಿಗಳಿಗೆ ಆಫೀಸಿನ ಲೆಡ್ಜರ್, ವೋಚರ್‌ಗಳೆಂದರೆ ಪಂಚಪ್ರಾಣ. ಸಧ್ಯ ಸ್ಟ್ರಾಂಗ್‌ರೂಂನಲ್ಲಿರುವ ಬ್ಯಾಂಕಿನ ನೋಟ್‌ಗಳು ಸೇಫ್ ಆಗಿದ್ದವು. ನಮ್ಮ ಶಾಖೆಯಲ್ಲೂ ಇಲಿ ಬೋನು ತಂದಿದ್ದೆವು. ಬೋಂಡದ ಬಾಬ್ತು ಅಂತಾ ತಿಂಗಳಿಗೆ ಅಷ್ಟಿಷ್ಟು ಖರ್ಚಾಗ್ತಾ ಇತ್ತು. ಆಡಿಟರ್ ಅದಕ್ಕೆ ಒಮ್ಮೆ object ಮಾಡಿದ್ರು. ಆಗ ನಮ್ಮ ಜವಾನ ''ನೋಡಿ ಸಾರ್ ನಮ್ಮ ಇಲಿಗಳಿಗೆ ಆಡಿಟ್ ರಿಪೋರ್ಟ್ ಅಂದ್ರೆ ಎಷ್ಟು ಇಷ್ಟ'' ಅಂತ ಹಿಂದಿನ ರಿಪೋರ್ಟ್ ತೋರಿಸಿದ. ನಾನು ಬೈದಮೇಲೆ ಅವನು ಹೊರಗೆ ಹೋಗಿದ್ದು.

ನಮ್ಮ ಜವಾನನಿಗೆ ಇಲಿ ಬೋನ್‌ನಲ್ಲಿ ಬಿದ್ದಾಗ ತುಂಬ ಸಂಭ್ರಮ. ಅದನ್ನು ದೂರದಲ್ಲಿ ಬಿಟ್ಟು ಬರ್ತೀನಿ ಸಾರ್, ಹತ್ತಿರ ಬಿಟ್ರೆ ಮತ್ತೆ ಬ್ಯಾಂಕಿನೊಳಗೆ ಬಂದುಬಿಡ್ತವೆ ಅಂತ ಹೊರಗೆ ಹೊರಡುತ್ತಿದ್ದ. ಅವನು ಮತ್ತೆ ಬ್ಯಾಂಕಿಗೆ ಬರುವುದು ಒಂದೆರಡು ತಾಸಿನ ನಂತರವೆ. ಅಷ್ಟರೊಳಗೆ ಅವನು ಬಿಟ್ಟ ಇಲಿಗಳು ಮತ್ತೆ ಬಂದು ಸ್ವಸ್ಥಾನ ಸೇರುತ್ತಿತ್ತು. ನನಗೆ ಸಮಾಧಾನವೆಂದರೆ ಇಲಿ ಬಿಟ್ಟುಬರಲು ಆಟೋಚಾರ್ಜ್ ಕೇಳದಿದ್ದುದು. ನಮ್ಮ ಬ್ಯಾಂಕ್ ಕಸ್ಟಮರ್ ಫ್ರೆಂಡ್ಲಿ ಅಂತಾ ಹೆಸರು ಮಾಡಿತ್ತು. ಅದಕ್ಕೆ ನಾನು 'ಅನಿಮಲ್ ಫ್ರೆಂಡ್ಲಿ' ಅಂತಲೂ ಸೇರಿಸಿದ್ದೆ.

ಈ ಕಾಟಗಳನ್ನು ತಪ್ಪಿಸಲೆಂದೇ ಬಹುಶಃ ಕಂಪ್ಯೂಟರೈಸೇಷನ್ ಮಾಡಿದ್ದು ಅಂತ ಕಾಣುತ್ತೆ. ಕಾಗದಗಳು ಇದ್ದರೆ ತಾನೆ ಇಲಿಗಳು ಇರ್ತವೆ. ಯಂತ್ರಗಳೇ ಇದ್ದರೆ ಅಂತ

ಯೋಚನೆ ಮಾಡಿದರು. ಆದರೆ ಇಲಿಗಳು ಕಂಪ್ಯೂಟರ್ ವೈರ್‌ಗಳನ್ನು ಕಡಿದು ಹಾಕಿ ತನ್ನಂತೆ ಇರುವ ಮೌಸ್ ಕೆಲಸ ಮಾಡದ ಹಾಗೆ ಮಾಡಲು ಶುರು ಮಾಡಿದವು ಜೀವಂತ ಇಲಿಗಳು. ಅದಕ್ಕೆ ದೈವಭಕ್ತರು ಹೇಳೋದು, ದೈವಸೃಷ್ಟಿ ಮುಂದೆ ಮಾನವ ಸೃಷ್ಟಿ ಏನು ಮಾಡಲು ಸಾಧ್ಯ? ಅಂತ.

ಹೌದು ಕಾರ್‌ಪೆಟ್‌ನಿಂದ ಹಿಡಿದು ಕಂಪ್ಯೂಟರ್ ತನಕ ಕಟಕಟ ಅಂತ ಕಡಿಯುವ ಇಲಿಗೆ ಇಂತದ್ದೇ ಬೇಕಂತಿಲ್ಲ. ನಾನು ಬರೆದ ಅನೇಕ ಲೇಖನಗಳ ರುಚಿಯನ್ನು ಯಾರು ಇಷ್ಟಪಡಲಿ ಬಿಡಲಿ ಇಲಿ ಮಾತ್ರ ಇಷ್ಟಪಟ್ಟಿದೆ. ಎಷ್ಟಾದರೂ ಅದು ವಿದ್ಯಾಗಣಪತಿಯ ವಾಹನವಲ್ಲವೆ? ನನ್ನ ಪುಸ್ತಕದ ಕಪಾಟು ಅದಕ್ಕೆ ಸಾಫ್ಟ್‌ಕಾರ್ನರ್!

✧✧✧



ಹೀಗಾಗಬಾರದಿತ್ತು

✧ ಎಸ್. ರಾಮಮೂರ್ತಿ

(ಜನಗಳ ಸಂಖ್ಯೆಗಿಂತ ವಾಹನಗಳ ಸಂಖ್ಯೇನೇ ಜಾಸ್ತಿ ಇರೋ ಈ ಬೆಂಗಳೂರೆಂಬ ಮಹಾನಗರದಲ್ಲಿ, ಬ್ಯಾಡರ ಹಳ್ಳಿಯಿಂದ ಬನ್ನೇರುಘಟ್ಟದವರೆಗೂ, ಅಂಜನಾ ನಗರದಿಂದ ಇಂದಿರಾ ನಗರದವರೆಗೂ, ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ, ಯಾರಿಗೆ ಬೇಕಾದರೂ ಈ ಆಕ್ಸಿಡೆಂಟ್ ಅನ್ನೋ ಅಪಘಾತ ಆಗಬಹುದು. ಹಾಗೇ ಇಲ್ಲಿ ಕೂಡ ಒಂದು ಆಕ್ಸಿಡೆಂಟ್ ಆಗಿಹೋಗುತ್ತೆ. ಗಂಡನಿಗೆ ಒಂದು ಸಣ್ಣ ಗಾಯವೂ ಆಗದೆ, ಹಿಂದೆ ಕೂತಿದ್ದ ಹೆಂಡತಿಗೆ ಮಾತ್ರ ತಲೆ, ಮುಖ, ಕೈ, ಕಾಲುಗಳಿಗೆ ಪೆಟ್ಟು ಬೀಳುತ್ತೆ. ಗಂಡ ಅಂಬೋ ಪ್ರಾಣಿಗೆ ಹೆಂಡತಿ ಅಂಬೋ ಪ್ರಾಣಕಾಂತೆಯಿಂದ ಜೀವಾವಧಿ ಶಿಕ್ಷೆ ಸಿಗೋದಂತೂ ಗ್ಯಾರಂಟಿ. ಅಂದರೆ ಅರ್ಥ ಆಯ್ತಲ್ಲ, ಜೀವ ಇರೋವರೆಗೂ ಪ್ರತಿನಿತ್ಯ ಸಹಸ್ರ ನಾಮಾರ್ಚನೆ. ಅದು ಬೇರೆ ವಿಷಯ ಬಿಡಿ. ಆಮೇಲೆ? ಎಲ್ಲ ಮಾಮೂಲೀನೇ. ಆಟೋದಲ್ಲಿ ಆಸ್ಪತ್ರೆಗೆ ಕರಕೊಂಡು ಹೋಗಿದ್ದು, ಎಕ್ಸ್‌ರೇ ತೆಗೆಸಿದ್ದು, ಅದಾಗ ತಾನೇ ಕೈ ಸೇರಿದ್ದ ಆನ್ಯುಯಲ್ ಅಡ್‌ವಾನ್ಸ್ ಕೈ ಬಿಟ್ಟಿದ್ದು, ಮೈ ತುಂಬ ಲಕ್ಷಣವಾಗಿ ಬ್ಯಾಂಡೇಜ್ ಸುತ್ತಿದ್ದು ಇತ್ಯಾದಿ ಇತ್ಯಾದಿ. ಇಷ್ಟೇ ಆಗಿದಿದ್ದರೇ... ಇಟ್ ಈಸ್ ಓಕೇ. ಮಾಮೂಲಿ ಕಥೆ ಅಂದುಕೋಬೋದು. ಆದರೆ, ಇದೇ ಬೇರೆ ಸ್ಟೋರಿ. ಏನು ಅಂತೀರಾ? ಅದು ಗೊತ್ತಾಗಬೇಕಾದರೆ, ಈ ನಾಟಕಾನ ಮೊದಲಿನಿಂದ ಕೊನೇವರೆಗೂ ನೋಡಬೇಕು. ನೋಡಿ.)

(ಬ್ಯಾಂಡೇಜ್‌ಧಾರಿಣಿ, ಮೃಣಾಲಿನಿ, ಮಂಚದ ಮೇಲೆ ಗೋಡೆಗೊರಗಿ ಸುಸ್ತಾಗಿ ಕೂತಿರ್ತಾಳೆ. ಪಕ್ಕದಲ್ಲಿ ಸ್ಟೂಲಿನ ಮೇಲೆ ಔಷಧದ ಬಾಟಲುಗಳು, ಒಂದಷ್ಟು ಹಣ್ಣುಗಳು ಇತ್ಯಾದಿ)

(ಕಮಲಮ್ಮ, ಪಂಕಜಮ್ಮ ಪ್ರವೇಶ)

ಕ: (ಗಾಬರಿಯಿಂದ) ಅಯ್ಯೋ, ಇದೇನಾಯ್ತು ಲೀನೂ, ಈ ಪಾಟಿ ಏಟು ಬೀಳಿಸಿಕೊಂಡಿದ್ದೀಯಾ? ಕ್ಲಿಯರೆನ್ಸ್ ಸೇಲ್‌ನಲ್ಲಿ ಹನ್ನೊಂದು ಸೀರೆ ತೊಗೊಂಡು, ಆ ಮೀನಾಕ್ಷಿ ಹೊಟ್ಟೆ ಉರಿಸಬೇಕೂಂತಿದ್ದೆಯಲ್ಲೇ. ಈ ಥರ ಆಗಿ ಹೋಯ್ತಲ್ಲೇ.

ಪಂ: ಸಾರಿ ಕಣೇ ಲೀನೂ. ನನ್ನನ್ನೂ ಕರದಿದ್ದೆ. ನಿನ್ ಜೊತೆ ನಾನೂ ಬಂದಿದ್ದಿದ್ದರೆ ನಿನಗೆ ಹೀಗಾಗ್ತಿರಲಿಲ್ಲವೋ ಏನೋ ಪಾಪ.

ಕ: ಏ...ನಾ...ಯ್ತು, ಹೇ...ಗಾ...ಯ್ತು, ಎ...ಲ್ಲಾ...ಯ್ತು ಎಲ್ಲ ಹೇಳೇ.

ಮೃ: ಅವತ್ತು ಪೇಪರ್‌ನಲ್ಲಿ ದೊಡ್ಡದಾಗಿ ರಿಡಕ್ಷನ್ ಸೇಲ್ ಅಂತ ಅಡ್ವರ್ಟೈಸ್‌ಮೆಂಟ್ ಬಂದಿತ್ತಲ್ಲ, ಅದೆ ನಾನು ನೀನು ನೋಡಿದೆವಲ್ಲ, ಅವತ್ತು ಸಾಯಂಕಾಲಾನೇ ಆ ಮೀನಾಕ್ಷೀ ಹತ್ತು! ಒಂದಲ್ಲ ಎರಡಲ್ಲ ಕಮಲೂ, ಹತ್ತು ಸೀರೆ ತಂದು ನನ್ನ ಮುಂದೆ ಸುರಿದೂ... ಓ, ಅವಳ ಜಂಭ ನೋಡಬೇಕಾಗಿತ್ತು. ನನಗೆ ಹೇಗಾಗಿರಬೇಡ ನೀನೇ ಲೆಕ್ಕ ಹಾಕ್ಕೊ ಕಮಲೂ. ನನ್ನ ಹೊಟ್ಟೆ ಉರಿದ್ಹೋಯ್ತು. ಅವಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕೋ ಬೇಡವೋ?

ಪಂ: ಹೌದಾ! ಹತ್ತು ಸೀರೇನ ನಿನ್ನ ಮುಂದೆ ಸುರಿದಳಾ? ನೋಡಿದ್ಯಾ ಅವಳ ದುರಹಂಕಾರಾನ.

ಮೃ: ಆ ಕ್ಷಣ ಡಿಸೈಡ್ ಮಾಡಿಬಿಟ್ಟೆ ಕಮಲೂ, ಅದರಪ್ಪನಂಥ ಸೀರೆಗಳನ್ನ ತಂದು ಅವಳ ಹೊಟ್ಟೇನೂ ಉರಿಸಲೇಬೇಕೂಂತ.

ಪಂ: ಒಳ್ಳೆ ಡಿಸಿಷನ್ನೇ ತೊಗೊಂಡೆ ಬಿಡು.

ಕ: ಅದು ಸರೀ, ಅದೇನು ಹನ್ನೊಂದು ಸೀರೆ? ಅದೇನು ಲೆಕ್ಕ ಅಂತ?

ಮೃ: ಯೇ, ಅದೇನೇ ಇಂಥ ಪ್ರಶ್ನೆ ಕೇಳ್ತೀಯ? ನೀನೇ ಅಲ್ಲವಾ ಹೇಳಿಕೊಟ್ಟಿದ್ದು, ಇನ್ನೊಬ್ಬರ ಹೊಟ್ಟೆ ಉರಿಸಬೇಕಾದರೆ, ಒಂದು ಕೈ ಮೇಲಿರಬೇಕು ಅಂತ. ಅವಳು ಹತ್ತು ಸೀರೆ ತೊಗೊಂಡ ಮೇಲೆ ನಾನು ಅದಕ್ಕಿಂತಲೂ ಒಂದಾದರೂ ಜಾಸ್ತಿ ಸೀರೆ ತಗೊಳ್ಳೇಬೇಕಲ್ಲವಾ?

ಕ: ಓ, ಸರಿ ಸರಿ, ಅರ್ಥ ಆಯ್ತು ಬಿಡು. ಹು, ಮುಂದಕ್ಕೆ ಹೇಳು.

ಮೃ: ನನ್ನ ಅದೃಷ್ಟಕ್ಕೆ ಅವತ್ತೇ ನಮ್ಮೋರಿಗೆ ಆನ್ಯುಯಲ್ ಅಡ್ವಾನ್ಸ್ ಅಲ್ವಾ? ಅವರು ಬರೋಷ್ಟು ಹೊತ್ತಿಗೆ ಅವರಿಗಿಷ್ಟವಾದ ಹೀರೇಕಾಯಿ ಬಜ್ಜಿ ಮಾಡಿಕೊಟ್ಟು, 'ಒಂದೆರಡು ಸೀರೆ ತೊಗೊಳ್ಳೋಣಾರೀ', ಅಂತ ಪೂಸಿ ಮಾಡಿ ಒಪ್ಪಿಸಿಬಿಟ್ಟೆ.

ಕ: ಅದರಲ್ಲೆಲ್ಲ ನೀನು ಜಾಣೆ ಬಿಡಮ್ಮ. ಆಮೇಲೇನಾಯ್ತೂ?

ಮೃ: ಅವತ್ತು ಸ್ಕೂಟರ್ ಹತ್ತಿ ಹೊರಟೆವಾ? ಸುಂಕದಕಟ್ಟೆ ದಾರಿ, ಆ ಡೌನ್‌ನಲ್ಲಿ, ಅದ್ಯಾವುದೋ ನರ್ಸಿಂಗ್ ಕಾಲೇಜ್ ಇದೆಯಲ್ಲ, ಅಲ್ಲಿಗೆ ಬರೋಷ್ಟರಲ್ಲಿ,

ಕ: ನಾಯಿ ಅಡ್ಡ ಬಂದು ಬಿಡ್ತಾ?

ಪಂ: ಅದನ್ನ ಅವಾಯ್ಡ್ ಮಾಡೋಕೆ ಹೋಗಿ, ನೀವು ಬಿದ್ದು ಹೋದರಾ?

ಮೃ: ಅಯ್ಯೋ, ನಾಯೀನೂ ಇಲ್ಲ, ಗೀಯೀನೂ ಇಲ್ಲ. ಹಿಂದುಗಡೆಯಿಂದ ಒಂದು ಆಟೊ, ಬುರ್... ಅಂತ ನುಗ್ಗಿಬಿಟ್ಟನಮ್ಮ. ನಮ್ಮ ಗಾಡಿಗೆ ಸುಮ್ಮನೆ ಹಾಗೆ ಟಚ್ ಮಾಡಿದ ನೋಡೂ, ಇವರಿಗೆ ಬ್ಯಾಲೆನ್ಸ್ ತಪ್ಹೋಯ್ತು. ಇವರೊಂದು ಕಡೆ, ಸ್ಕೂಟರ್ ಒಂದು ಕಡೆ, ನಾನೊಂದು ಕಡೆ ಬಿದ್ದೆವು. ಕಣ್ಣುಮುಚ್ಚಿ ತೆಗೆಯೋಷ್ಟರಲ್ಲಿ

ನಮ್ಮ ಸುತ್ತ ಜನ ಸೇರಿಬಿಡ್ತು. ಅಷ್ಟೇ ನನಗೆ ನೆನಪಿರೋದು. ಎಚ್ಚರ ಆದಾಗ ಆಸ್ಪತ್ರೇಲಿದ್ದೆ. ಇಡೀ ಮೈಗೆ, ನೋಡು, ಈ ಅಲಂಕಾರ ಮಾಡಿ ಮನೇಗೆ ಕಳಿಸಿದರು.

ಕ: ಎಲ್ಲೆಲ್ಲಿ ಏಟು ಬಿದ್ದಿದೆಯೇ?

ಮೃ: ತಲೆ, ಕಯ್ಯಿ, ಕಾಲು, ಕೆನ್ನೆ, ಮೂಗು...

ಪಂ: ಫ್ರಾಕ್ಚರ್ ಗೀಕ್ಚರ್ ಏನಾಗಿಲ್ಲ ತಾನೆ?

ಮೃ: ಸಧ್ಯ ಹಾಗೇನೂ ಆಗಿಲ್ಲ ಮಾರಾಯ್ತಿ.

ಕ: ಹೋಗಲಿ ಬಿಡು, ದೇವರು ದೊಡ್ಡೋನು, ಇಷ್ಟಕ್ಕೇ ಮುಗೀತಲ್ಲ, ಸರಿ. ನೀನೇನು ಡೋಂಟ್ ವರಿ ಮಾಡಿಕೋಬೇಡ. ವಾಸಿ ಆಗಲಿ ಓಕೇ? ಬರೋಣವಾ ನಾವಿನ್ನು? (ಇಬ್ಬರೂ ಹೊರಡುವರು. ಸೀತಮ್ಮ, ಸರೋಜಮ್ಮ ಪ್ರವೇಶ)

ಸೀ: ಇದೇಮ್ಮ ಗ್ರಾಚಾರಮೂ, ಇಟ್ಲೈಪೋಯಾ? ಏನಾಯ್ತು ಮೃಣಾಲಿನಿಗಾರೂ? ಇದೇಮ್ಮ, ಮೈಯ್ಯಂತ ಬ್ಯಾಂಡೇಜೂ. ಸಾಕ್ಷಾತ್ ಲಕ್ಷ್ಮಿ ಉನ್ನಟ್ಟ ಉಂಡ್ರಿ. ಈ ಮಾದ್ರಿ ಆಗಿಬಿಟ್ರಲ್ಲಾ. ಏಮಾಯ್ತು, ಎಟ್ಲಾಯ್ತು, ಎಕ್ಕಡೆಕ್ಕಡ ಏಟ್ಲು ಬಿತ್ತು?

ಮೃ: ಸ್ಕೂಟರ್‌ನಲ್ಲಿ ಹೋಗ್ತಾ ಇದ್ದಿ. ಸುಂಕದ ಕಟ್ಟೆ ಡೌನ್‌ನಲ್ಲಿ ಬಿದ್ದು ಹೋದ್ವಿ.

ಸೀ: ಎಲ್ಲಿಗೆ ಹೋಗ್ತಾ ಇದ್ರಿ?

ಮೃ: ವಿಜಯನಗರದಲ್ಲಿ ರಿಡಕ್ಷನ್ ಸೇಲ್ ಹಾಕಿದ್ದ ಸೀತಮ್ಮ. ಅದಕ್ಕೆ ಹೋಗ್ತಾ ಇದ್ವಿ.

ಸೀ: ರಿಡಕ್ಷನ್ನಾ? ಎಲ್ಲಿ? ರಿಡಕ್ಷನ್ ಎಷ್ಟು? ಇರವೈ ಪರ್ಸೆಂಟಾ ಮುಪ್ಪೈ ಪರ್ಸೆಂಟಾ? ಬರೀ ಚೀರೆಗಳಾ ಲೇಕಪೋತೆ ಇನ್ನೂ ಬೇರ ಬಟ್ಟೆಗಳೂ ಉಂದಾ? ಇನ್ನು ಎಷ್ಟು ದಿವಸ ಉಂಟುಂದಿ ರಿಡಕ್ಷನ್ನೂ?

ಸ: ಅಯ್ಯೋ, ಇದೇಮಂಡೀ ಸೀತಮ್ಮ, ಮೀರೇಮಿ ಚೀರ ತೀಸ್ಕೊನೇದಾನಿಕಿ ವಚ್ಚಿಂಡಾರೋ, ಲೀನಮ್ಮಗಾರ್ನಿ ಚೂಸೇದಾನಿಕಿ ವಚ್ಚಿಂಡಾರೋ?

ಸೀ: ಓ, ಹೌದು ಕದಾ? ವೀಳ್ನ ನೋಡೋಕೆ ವಚ್ಚಿ ಏನೇನೋ ಅಡಗ್ತಾ ಇದ್ದಿನಿ. ಸಾರಿ ಲೀನಮ್ಮ. ಸ್ಕೂಟರ್‌ನಲ್ಲಿ ಯಾಕೆ ಮೀರು ಹೋಗಿದ್ದೂ? ಆರಾಮವಾಗಿ ಬಸ್‌ಲೋ ಪೋರಾದಾಗಿತ್ತಾ? (ಹಣೆಯ ಮೇಲೆ ಬರೆದುಕೊಳ್ಳುವಂತೆ) ಅಂತ ಇಕ್ಕಡ ರಾಸಿನಟ್ಟೇ ಅಯ್ಯೇದಿ. (ಏನನ್ನೋ ನೆನಪಿಸಿಕೊಂಡಂತೆ) ಅದು ಸರಿಗ್ಗಾನೇ. ನಂದು ಒಕೇ ಒಕ ಪ್ರಶ್ನೆ ಲೀನಮ್ಮಗಾರು. ಈ ರಿಡಕ್ಷನ್ ಸೇಲು ಎನ್ನಾಳ್ಳು ಉಂಟುಂದಂಡೀ?

ಮೃ: ಇವತ್ತೇ ಕೊನೇ ದಿನಾರೀ.

ಸೀ: (ಅದನ್ನ ಕೇಳುತ್ತಿದ್ದಂತೆ ಸೀತಮ್ಮ ಛಟ್ ಅಂತ ಮೇಲೆದ್ದು) ಔನಾ? ರಂಡಿ ರಂಡಿ ಸರೋಜಮ್ಮ. ಈಪೊದ್ದೇ ಲಾಸ್ಟಂಟ. (ಸೀತಮ್ಮ ಸರೋಜಮ್ಮನ ಕೈ ಹಿಡಿದುಕೊಂಡು ಹೊರಟೇಬಿಡುವಳು)

ಮೃ: (ಉಸ್ ಅಂತ ನಿಟ್ಟುಸಿರು ಬಿಡುವಳು). (ಸ್ವಗತ: ಇನ್ನೂ ಎಷ್ಟು ಜನ ಬರ್ತಾರಪ್ಪಾ. ಬಂದೋರುಗೆಲ್ಲ ವರದಿ ಒಪ್ಪಿಸ್ತಾನೇ ಇರಬೇಕಲ್ಲಪ್ಪಾ). (ಬಾಗಿಲತ್ತ ನೋಡುವಳು. ಇನ್ಯಾರೋ ಬರುತ್ತಿರುವ ಸದ್ದು). (ಸ್ವಗತ: ಇನ್ನು ಯಾರೋ ಬಂದರಲ್ಲಪ್ಪ) ಷಂಷಾದ್ ಬೇಗಂ, ನಜರುನ್ನೀಸಾ ಪ್ರವೇಶ). ಬನ್ನಿ ಬನ್ನಿ.

ಷಂ: ಇದೇನ್ ಮಾಡಕೊಂಡ್ ಬಿಟ್ರಿ ಮುನ್ನಾ ಬೆಹೆನ್? ಮೂಹ್ ಮೇಲೆಲ್ಲ ಬ್ಯಾಂಡೇಜೂ. ನೋಡೋದಕ್ಕೇ ಮುಷ್ಕಿಲ್ ಆಗ್ತಿ.

ನ: ಹೆಂಗಾಯ್ತು ಮುನ್ನಾ ಬೇಗಂ?

ಮೃ: ಸ್ಕೂಟರ್ ಆಕ್ಸಿಡೆಂಟು ಅಷ್ಟೇ.

ಷಂ: ನಿಮ್ಗೂಕಿ ಒಬ್ರೇ ಇಸ್ಕೂಟರ್ ಓಡಿಸ್ತಾ ಇದ್ರೀ? ಹೆಲ್ಮೆಟ್ಗೆ ಹಾಕ್ಕೊಂಡಿರ್ಲಿಲ್ಲಾ?

ಮೃ: ನಾನು ಓಡಿಸ್ತಾ ಇರಲಿಲ್ಲ. ನಮ್ಮ ಯಜಮಾನ್ರು ಓಡಿಸ್ತಾ ಇದ್ರು.

ಷಂ: ನಿಮ್ಗೂಕಿ ಯಜಮಾನ್ರುದ್ದು ಕೈದು ಕಾಲ್ದು ಏನೂ ಮುರ್ದಿಲ್ಲಾ?

ಮೃ: ಇಲ್ಲ ಇಲ್ಲರಿ, ಅವರಿಗೇನೂ ಆಗಿಲ್ಲ, ಸದ್ಯ.

ನ: ಅಲ್ಲಾ ತೊ ಹೈ ಮುನ್ನಾಜೀ. ಹೈ. ನಿಮ್ಗೂಕಿ ಏನೂ ವರೀ ಮಾಡಬ್ಯಾಡ. ಖುದಾಗೆ ಎಲ್ಲರ್ದು ಒಳ್ಳೇದು ಮಾಡ್ತಾನೆ. ನಿಮ್ಗೂಕೆ ಆಗಿರೋ ಗಾಯ ಎಲ್ಲ ಬಹುತ್ ಜಲ್ದಿ ಗಾಯಬ್ ಆಗ್ಲಿ.

ಷಂ: ಹೌದು ಮುನ್ನಾಜೀ, ನಿಮ್ಗೂ ಬೇಗ ಹುಷಾರು ಆಗ್ಲಿ.

ನ: ಅಚ್ಚಾ, ಹಮ್ ಚಲ್ಕೇ ಆವೂ?

ಮೃ: ಹೋಗ್ಬಿಟ್ಟು ಬನ್ನಿ (ಅಂತ ದೊಡ್ಡದಾಗಿ ಕೈ ಮುಗೀತಾಳೆ) (ಅತ್ತಕಡೆಯಿಂದ ಪಟ್ಟಮ್ಮಾಳ್ - ಪ್ರವೇಶ)

ಪ: ಮೃಣಾಲಿನೀ, ಆಕ್ಸಿಡೆಂಟ್ ಆಯ್ತಂತೇ. ಹೌದೇ?

ಮೃ: (ಸ್ವಗತ: ನೋಡಿದರೆ ಗೊತ್ತಾಗೊಲ್ವೇ?) ಹೌದು ಮಾಮಿ. ನಿನ್ನೆ ನಮ್ಮೆಜಮಾನರ ಜೊತೆ ಸ್ಕೂಟರಲ್ಲಿ ಹೋಗ್ತಿದ್ದಾಗ ಹೀಗಾಯ್ತು.

ಪ: ಎನ್ನ ಆಯ್ತು ಮೃಣಾಲಿನೀ? ಅಲ್ಲ ಕಣ್ಣಾ(?) ಸ್ಕೂಟರ್‌ನಲ್ಲಿ ಹೋಗುವಾಗ ಹುಷಾರಾಗಿರಬೇಕು ಅನ್ನೋದು ಕೊತ್ತಿಲ್ಲವಾ? ನೀವೆಲ್ಲ ನಲ್ಲ ಪಡಚಿಕೊಂಟವರು. ನೀಂಗಳೇ ಇಪ್ಪಡಿ ಟ್ರಾಫಿಕ್ ರೂಲ್ಸ್ ಫಾಲೋ ಮಾಟದಿದ್ದರೆ ಎಪ್ಪಡಿ? ನೀಂಗೊ ಅದನ್ನ ಫಾಲೋ ಮಾಟಿಲ್ಲ, ಅದಕ್ಕೆ ಆಕ್ಸಿಡೆಂಟ್ಸೇ ನಿಮ್ಮನ್ನ ಫಾಲೋ ಮಾಟಿಬಿಟ್ಟಿತು. ಎಂಗೆ ಎಂಗೆ ಫ್ರಾಕ್ಚರ್ ಆಯಿಟ್ಟಿರ್ಕಿದಿ?

ಮೃ: ಎಲ್ಲೂ ಫ್ರಾಕ್ಚರ್ ಆಗಿಲ್ಲ ಮಾಮಿ.

ಪ: ಆಂಡವನೇ! ಇವ್ವಳ ಅಡಿ ಬಿದ್ದೂ ಒಣ್ಣೂ ಫ್ರಾಕ್ಚರ್ ಆಕಿಲ್ಲವಾ? ಆಚ್ಚರ್ಯಂ, ಆಚ್ಚರ್ಯಂ! ಅವರೆಲ್ಲಿದ್ದಾರೆ. ಅವರಿಗೆ ಎಂಗೆಂಗೆ ಕೈ ಕಾಲು ಮುರಿದಿದೆ? ಎತ್ತಿನಿ ನಾಳು ಆಸ್ಪತ್ರೇಲಿರಬೇಕಂತೆ?

ಮೃ: ಅಯ್ಯೋ, ಅವರಿಗೆ ಒಂಚೂರೂ ಏಟು ಬಿದ್ದಿಲ್ಲ ಮಾಮಿ.

ಪ: ಔದಾ!? ಮೃಣಾಲಿನೀ, ಯು ಆರ್ ರಿಯಲೀ ಲಕೀ. ಓಕಲಿ ಪಿಡು. (ಪೆರುಮಾಳ್ ಪೆರಿಯವರ್?) ಅಪ್ಪಡಿ ಅನ್ನ ನಾ ಪೋಯಿಟ್ಟು ವರೇ?

ಮೃ: ಹೋಗ್ಬನ್ನಿ ಮಾಮಿ. (ಮಾಮಿ ಹೋಗುವರು. ಶ್ರೀಮತಿ ಸಣ್ಣಮ್ಮ ಉಳ್ಳಾಗಡ್ಡಿ, ಶ್ರೀಮತಿ ಮಲ್ಲಮ್ಮ ಮೆಣಸಿನಕಾಯಿ ಪ್ರವೇಶ) (ಸ್ವಗತ: ಅಯ್ಯೋ ರಾಮಾ, ನೀನೇ ಕಾಪಾಡಪ್ಪಾ)

ಸ: (ಇಬ್ಬರೂ ಒಟ್ಟಿಗೆ) ಹ್ಯಾಂಗ್ರೀ ಅದೀರ ಮಣ್ಣೂ. ಆಕ್ಸಿಡೆಂಟ್ ಆಯ್ತಂತಲ್ರಿ ನಿಮಗಾ. ಖರೆ ಏನ್ರೀ?

ಮೃ: ಹೌದು ರೀ. ನಿನ್ನೆ ಒಂದು ಸಣ್ಣ ಆಕ್ಸಿಡೆಂಟ್ ಆಯ್ತುರೀ.

ಮ: ಸಾಣ್ಣದೊ, ದ್ವಾಡ್ಡದೋ, ಆಕ್ಸಿಡೆಂಟ್ ಆಕ್ಸಿಡೆಂಟ್ ಅಲ್ಲೇನ್ರೀ. ನಿನ್ನಿ ಹೌದಲ್ವೋ ಆಕ್ಸಿಡೆಂಟ್ ಆದ್ದು. ಹೆಂಗಾಯ್ತ್ರೀ ಅದೂ?

ಮೃ: ಏನಿಲ್ಲ ಉಳ್ಳಾಗಡ್ಡಿಯೋರೇ, ಸುಂಕದ ಕಟ್ಟೆ ಹತ್ರ ಬಿದ್ವಿ ಅಷ್ಟೆ.

ಸ: ನೀವು ಎತ್ಲಾ ಕಡಿಯಿಂದ ಹೊಂಟಿದ್ರಿ?

ಮೃ: (ಸ್ವಗತಃ ಕರ್ಮ ಕರ್ಮ. ಇನ್ನು ಪುರಾಣಾನೆಲ್ಲ ಒದರಬೇಕು) ನಾವು ವಿಜಯನಗರದ ಕಡೆಗೆ ಹೊರಟಿದ್ವಿ.

ಮ: ಲಾರಿ? ಅದು ಎತ್ಲಾ ಕಡೀಂದ ಬರ್ತಿತ್ತು?

ಮೃ: (ಸಣ್ಣಗೆ ರೇಗಿ) ಲಾರೀನು ಇಲ್ಲ ಗೀರೀನು ಇಲ್ರೀ.

ಸ: ಮತ್ತ? ಇದು ಹ್ಯಾಂಗಾಯ್ತ್ರೀ? ನೀವು ಯಾವ ಬದಿ ಹ್ವಾಗ್ತಿದ್ರಿ? ನಿಮಗ ಹೊಡದದ್ದಾದ್ರೂ ಏನ್ರಿ?

ಮೃ: ಹಿಂದ್ಲಾಗಡೆಯಿಂದ ಆಟೋ ಹೊಡೆದಾರೀ

ಸ: ಹಿಂದ್ಲಾಗಡಿಯಿಂದ್ಲಾ!? ಹಾಂಗಂದ್ರೇನ್ರೀ? ನೀವು ಮತ್ಯಾಕ ಆ ಹಾಳು ರೂಟ್‌ದಾಗೇ ಹ್ವಾದರೀ?

ಮೃ: ಇನ್ನೊಂದು ಸಲ ನಾವು ಹೋಗಲಿಲ್ಲರೀ. ಒಂದೇ ಸಲ ಹೋಗಿದ್ದು.

ಸ: ಮತ್ತ ಹಿಂದ್ಲಾಗಡಿಯಿಂದ ಅಂದ್ರಲ್ರೀ

ಮೃ: ಹಿಂದ್ಲಾಗಡಿಯಿಂದ ಅಂದರೆ, ನಮ್ಮ ಹಿಂದುಗಡೆಯಿಂದ, ಬೆನ್ನಿನ ಕಡೆಯಿಂದ ಅಂತ.

ಮ: ಓ, ಗೊತ್ತಾತು ಗೊತ್ತಾತು ಬಿಡ್ರಿ. ಹಿಂದ್ಲಾಗಡಿಯಿಂದ ಅಂದ್ರ, ನಮ್ ಭಾಷೆಯಾಗ (?) ಆಮೇಲ ಅಂತ್ರೀ ಅರ್ಥ. ಆದರೆ ನಿಮ್ ಭಾಷೆಯಾಗ? ಬ್ಯಾಕ್ ಸೈಡ್‌ನಿಂದ ಅಂತ. ಖರೇ ಅಲ್ಲೇನ್ರೀ?

ಮೃ: ಹೌದು ಹೌದು.

ಸ: ಮತ್ತ ಆಟೊದೋನ್ನ ನೀವು ಏನ್ ಮಾಡಿದ್ರ? ಪೋಲಿಸ್ ಸ್ಟೇಷನ್‌ದಾಗೆ ದೂರು

ಕೊಟ್ಟೀರೇನ್ರೀ? ಆ ಆಟೋದೋರ್ನ ಸುಮ್ ಜಡಬ್ಯಾಡ್ರೀ. ಅಂದ್ಹಾಂಗ ಗಾಡೀಗ ಏನಾಗೇದ್ರೀ? ನಿಮ್ಮ ಗಂಡಗ(?) ಏನೂ ಆಗಿಲ್ಲೇನ್ರೀ? ಅವ್ರೀಗ ಎಲ್ಲದಾರ್ರೀ? ಹ್ಯಾಂಗದಾರ್ರೀ?

ಮೃ: ಅವರಿಗೇನೂ ಆಗಿಲ್ಲ ಉಳ್ಳಾಗಡ್ಡಿಯೋರೇ.

ಮ: ಏನೋ ಇಷ್ಟಕ್ಕಾ ಮುಗೀತಲ್ಲಾ. ದೇವರು ದೊಡ್ಡವ ಬಿಡ್ರೀ. ಲಗೂನೆ ಚಲೋ ಆಗ್ರಿ. ಹಾಂಗಾದ್ರ ನಾವಿನ್ನ ಬರ್ತೀವ್ರಿ(?).

(ಉಳ್ಳಾಗಡ್ಡಿ, ಮೆಣಸಿನಕಾಯಿ ಇಬ್ಬರೂ ಹೊರಡುವರು)

ಮೃ: (ಸ್ವಗತ: ಭಗವಂತಾ, ನಾನು ಯಾವ ಅಪರಾಧ ಮಾಡಿದೀನಿ ಅಂತ ಈ ಶಿಕ್ಷೆ ಕೊಡ್ತಿದೀಯಪ್ಪ? ಉತ್ತರ ಕೊಟ್ಟೂ ಕೊಟ್ಟೂ ಮೈಕೈ ಜೊತೆಗೆ ಬಾಯೂ ನೋಯೋಕೆ ಹತ್ತಿದೆ. ಹ್ಯಾಗಪ್ಪಾ ಇದರಿಂದ ತಪ್ಪಿಸಿಕೊಳ್ಳೋದೂ? ಹಾಂ!

ಎಲ್ಲ ವಿವರವಾಗಿ ಹೇಳಿ ಒಂದು ಕ್ಯಾಸೆಟ್‌ನಲ್ಲಿ ರೆಕಾರ್ಡ್ ಮಾಡಿ, ಬಂದೋರ ಮುಂದೆ ಸುಮ್ನನೆ ಪ್ಲೇ ಮಾಡಿದರೆ? ವಂಡರ್‌ಫುಲ್ ಐಡಿಯಾ... ಐಡಿಯಾ ಏನೋ ವಂಡರ್‌ಫುಲ್ಲೇ, ಆದರ, ಅದನ್ನೆಲ್ಲ ಕೇಳಿ ತೆಪ್ಪಗಿದ್ದರೆ ಪರವಾಗಿಲ್ಲ. ಆಮೇಲೂ ಇಪ್ಪತ್ತೆಂಟು ಪ್ರಶ್ನೆ ಕೇಳಿದರೆ? ಕೇಳಿದರೆ ಏನೂ, ಕೇಳೇ ಕೇಳ್ತಾರೆ. ಹಾಗಾದರೆ ಇನ್ನೇನು ಮಾಡೋದು? ಸುಮ್ಮನೆ ಮಲಗಿಬಿಡೋಣ ಅಂದರೇ... ಅದೂ ಕಷ್ಟ. ಎಬ್ಬಿಸ್ತಾರೆ. ಎದ್ದ ಮೇಲೆ ಮೂಗಿ ಥರ ಕೂತಿರೋಕಾಗುತ್ತಾ? ಮಾತಾಡಲೇಬೇಕಾಗತ್ತೆ. ರಾಘವೇಂದ್ರ, ನೀನೇ ದಾರಿ ತೋರಿಸಪ್ಪ. ನನ್ನ ಕೈಲಂತು ಖಂಡಿತ ಆಗ್ತಾ ಇಲ್ಲ ಇವರುಗಳಿಗೆ ಹೇಳಿದ್ದನ್ನೇ ಹೇಳಿಕೊಂಡಿರೋಕೆ. ಆಗಲೇ ತಲೇನೂ ಸಿಡಿಯೋಕೆ ಶುರುವಾಗಿದೆ. ಭಗವಂತಾ, ನೀನೇ ಕಾಪಾಡಪ್ಪಾ. (paus) ಹೀಗೆ ಮಾಡಿದರೆ? ಯಾರೇ ಬಂದರೂ ಸರಿ, ಅವರ ಜೊತೆ ಮಾತಾಡೋದು ಬೇಡ. ಬರೀ ನಗೋದು ನಗೋದು. ಅಷ್ಟೆ. ಏನು ಕೇಳಿದರೂ ಹ್ಹಿಹ್ಹಿಹ್ಹಿ ಅನ್ನೋದು. ತುಂಬ ಸುಲಭ. ಅದೇ ಸರಿ ಅನ್ನಿಸ್ತಾ ಇದೆ. ಹೌದು ಹೌದು. ಅದೇ ಕರೆಕ್ಟು. ಹಾಗೇ ಮಾಡ್ತೀನಿ.)

(ಸೌಭಾಗ್ಯಮ್ಮ ಸುಬ್ಬುಲಕ್ಷಮ್ಮರ ಪ್ರವೇಶ)

ಸೌ: ಏನ್ರೀ, ಏನೋ ಆಕ್ಸಿಡೆಂಟ್ ಆಯ್ತಂತೇ? ಹೇಗಿದೀರಿ.

ಮೃ: ಹ್ಹಿಹ್ಹಿಹ್ಹಿಹ್ಹಿ

ಸೌ: ಸ್ಕೂಟರ್ ಆಕ್ಸಿಡೆಂಟಾ, ಆಟೋ ಆಕ್ಸಿಡೆಂಟಾ ಇಲ್ಲಾ ಲಾರಿ ಆಕ್ಸಿಡೆಂಟಾ?

ಮೃ: ಹ್ಹಿಹ್ಹಿಹ್ಹಿಹ್ಹಿ

ಸೌ: ತುಂಬ ಪೆಟ್ಟು ಬಿದ್ದಿದೆಯಾ?

ಮೃ: ಹ್ಹಿಹ್ಹಿಹ್ಹಿಹ್ಹಿ

ಸೌ: ಇಷ್ಟೇನಾ, ಇಲ್ಲ ಇನ್ನೂ ಎಲ್ಲಾದರೂ ಗಾಯ ಆಗಿದೆಯಾ?

ಮೃ: ಹ್ಹಿಹ್ಹಿಹ್ಹಿಹ್ಹಿ

ಸೌ: ಫ್ರಾಕ್ಚರ್ ಏನಾದರೂ ಆಗಿದೆಯಾ?

ಮೃ: ಹ್ಹಿಹ್ಹಿಹ್ಹಿಹ್ಹಿ

(ಸೌಭಾಗ್ಯಮ್ಮ ಸುಬ್ಬುಲಕ್ಷ್ಮಮ್ಮ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುವರು)

ಸೌ: ಹಾಗಾದರೆ, ನಾವು ಬರೋಣವಾ?

ಮೃ: ಹ್ಹಿಹ್ಹಿಹ್ಹಿಹ್ಹಿ

(ಇಬ್ಬರೂ ಮೇಲೇಳುವರು. ಸಪ್ಪೆ ಮುಖ ಹಾಕಿಕೊಂಡು ಬಾಗಿಲಿನತ್ತ ಹೆಜ್ಜೆ ಹಾಕುವರು. ಮನೆ ದಾಟುವ ಮುಂಚೆ)

ಸೌ: ಏನು ಸುಬ್ಬಮ್ಮ ಇದು ಅನ್ಯಾಯ? ದೇವರು ಇಷ್ಟೊಂದು ಕಟುಕ ಆಗಬಾರದಿತ್ತು ರೀ.

ಸು: ಹೌದೂರೀ. ಪಾಪ, ಮೃಣಾಲಿನಿ ಯಾವ ಪಾಪ ಮಾಡಿದಾರೆ ಅಂತ ಈ ರೀತಿ ಶಿಕ್ಷೆ ಕೊಟ್ಟ?

ಸೌ: ಇಷ್ಟು ಚಿಕ್ಕ ವಯಸ್ಸಿಗೇ ಹೀಗೆ ಹುಚ್ಚು ಹಿಡೀಬಾರದಿತ್ತೂರೀ. ಪಾಪ ಪಾಪ.

(ಮೃಣಾಲಿನಿ 'ಹಾಂ' ಅನ್ನುತ್ತಾ ಮೂರ್ಛೆ ಹೋಗುವಳು/ತಲೆ ಚಚ್ಚಿಕೊಳ್ಳಲು ಹೋಗಿ ಕೈ ನೋವಿನಿಂದ ಮತ್ತೆ 'ಹಾಂ' ಎನ್ನುವಳು)

✧✧✧

ಉಕ್ತಿ ಚಾಟೂಕ್ತಿ

✧ ಎನ್. ರಾಮನಾಥ್

ಶಾಲಾ-ಕಾಲೇಜು ಬಳಿ ಜಂಕ್ ಫುಡ್ ನಿಷೇಧ - ಸುದ್ದಿ

ಈ ನಿರ್ಧಾರದಿ ತೊಂದರೆ ಇಲ್ಲವು ಎಂಬರು ಜಂಕ್ ಫುಡ್ ಮಾರುವರು
ಶಾಲೆಗೆ ದೂರದ ಜಾಗದೆ ಸ್ಟೂಡೆಂಟ್ ಕಾಲ ಕಳೆವನೆಂದರಿತಿಹರು

★★★

ಕೇರಳದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಉಗುಳಿದರೆ ಶಿಕ್ಷೆ - ಸುದ್ದಿ

ನಮಗೂ ಅಂತೆಯೆ ಸ್ವಚ್ಛದಿ ಬಾಳುವ ಆಸೆಯು ಬಹಳವೆ ಆಗಿಹುದು
ಆದರೆ ನಮ್ಮಯ ರಸ್ತೆಯ ಕಂಡರೆ ಉಗಿಯುವ ಬಯಕೆಯು ಮೂಡುವುದು

★★★

ಖಾಸಗಿ ನಿವೇಶನದಲ್ಲೂ ಹಿಂದುಳಿದವರಿಗೆ ಮೀಸಲು - ಡಿ.ಟಿ. ಜಯಕುಮಾರ್

ಹಿಂದೂಸ್ಥಾನದಿ ಹಿಂದುಳಿದವರಿಗೆ ಎಲ್ಲೆಡೆ ಮೀಸಲು ತುಂಬಿರಲಿ
ಮುಂದಕೆ ಸಾಗಿಹ ಜನರಿಗೆ ಮಸಣದಿ ವಿಶೇಷ ಮನ್ನಣೆ ಕಲ್ಪಿಸಲಿ

★★★

ಪಾಲಿಕೆಯಿಂದ ಮನೆ ಕಟ್ಟಲು ಮೂರೇ ದಿನದಲ್ಲಿ ಪರವಾನಗಿ - ಸುದ್ದಿ

ಎಂತಹ ಸುದ್ದಿಯು ಪತ್ರಿಕೆಯಲ್ಲಿ! ಪಕಪಕ ಮನಸೋ ಇಚ್ಛೆ ನಗಿ
ನಿಗದಿಯ ಮಾಡಲು ಲಂಚದ ಮೊತ್ತವ ಮೂರ್ದಿನ ಸಾಲದು ದಿಟದಲ್ಲಿ

★★★

ಢಿಕ್ಕಿ ; ಪಾದಚಾರಿ ಸಾವು - ಸುದ್ದಿ

ದಿನವೂ ಇಂತಹ ಅಪಘಾತಗಳಲಿ ಪಾದಚಾರಿಗಳು ಸಾಯುವರು
ಹೆಲ್ಮೆಟ್ ಧರಿಸಲಿ ದೇಹ ಹೋದರೂ ತಲೆಯಾದರು ಸರಿ ಉಳಿಯುವುದು

★★★

ಹಲವಾರು ಹೋಟೆಲ್ನ ತಿನಿಸುಗಳು ಅನಾರೋಗ್ಯಕರ - ಸುದ್ದಿ

ಮಡದಿ ಮಾಡುವ ತಿಂಡಿ ತಿನಿಸಲಿ ಪ್ರೀತಿ ಮೂಡಲಿ ಎನ್ನುತ
ನಾವೆ ಬೇಕೆಂದಿಂಥ ತಿನಿಸನು ನೀಡ್ವೆವೆಂದನು ಹೋಟ್ಲಿಗ

★★★

ಉತ್ತರಪ್ರದೇಶದ ಹಳ್ಳಿಯಲ್ಲಿ ಹುಡುಗಿಯನ್ನು ವರಿಸಲು ಅಣ್ಣ-ತಮ್ಮರಿಂದ ಚುನಾವಣಾ ರೀತಿಯ ಸ್ಪರ್ಧೆ - ಸುದ್ದಿ


ಗೆಲುವಿನ ಕುರುಹಾಗಿರುವಾ ಹುಡುಗಿಯು ಪಕ್ಷಾಂತರವನು ಮಾಡಿದರೆ
ಅಣ್ಣ ತಮ್ಮರು ಸಮ್ಮಿಶ್ರವಾಗಿ ಅವಳಂ ದ್ರೌಪದಿ ಮಾಡುವರೆ?

★★★

ಅಕ್ರಮ ಗಣಿಗಾರಿಕೆ ತಡೆಯಬೇಕಾದ ಕಾರ್ಯಪಡೆಯೇ ನಾಪತ್ತೆ - ಸುದ್ದಿ

ಯಾವ ಆಳದಲಿ ಎಲ್ಲಿ ಅಡಕವೊ ಕಾರ್ಯ ಪಡೆಯಾ ಮಂದಿಯು
ಕಾರ್ಯವೆನೆ ತಿಥಿ ಎಂಬ ಅರ್ಥದಿ ಶ್ರಾದ್ಧದೂಟದಿ ನಿರತರೋ?

★★★



ಸುಷುಪ್ತಿಗೆ ಸಲಹೆ

– ಎಸ್.ಎನ್. ಶಿವಸ್ವಾಮಿ

ನನ್ನ ಜತೆಗೆ ಆಗಾಗ್ಗೆ ವಾಕಿಂಗ್‌ಗೆಂದು ಬರುವ ಸದಾನಂದಗೌಡರು ಮಾತನಾಡುತ್ತಲೇ ನಡೆಯುವುದು ವಾಡಿಕೆ. ಗೌಡರು ವಿಶೇಷವಾಗಿ ತಮ್ಮ ಸ್ವಾಸ್ಥ್ಯ ಅಸ್ವಾಸ್ಥ್ಯ, ಔಷಧೋಪಚಾರ, ನಿದ್ರೆ ನಿದ್ರಾಹೀನತೆಗಳನ್ನು ವಿವರಿಸುವುದರಲ್ಲಿ ನಿಸ್ಸೀಮರು.

ಹೀಗೇ ಒಂದು ದಿನ ನಾವು ಅದೂ ಇದೂ ಮಾತಾಡುತ್ತ ತಿರುಗಾಡುತ್ತಿರಬೇಕಾದರೆ ಗೌಡರು ''ನಾನು ಅವತ್ತೇ ನಿಮಗೆ ಹೇಳಬೇಕೂಂತಿದ್ದೆ. ನನಗೆ ಈಚೀಚೆಗೆ ರಾತ್ರಿ ನಿದ್ದೇನೇ ಬರೋದಿಲ್ಲ. ಗಂಟೆಗಟ್ಟಲೆ ನಿದ್ದೆ ಹತ್ತೋದಿಲ್ಲ'' ಅಂತ ಪ್ರಲಾಪಿಸಿದರು.

ನಾನು ''ಬನ್ನಿ, ಇಲ್ಲೇ ಕೂತುಕೊಂಡು ಮಾತಾಡೋಣ. ಡಾಕ್ಟರನ್ನ ನೋಡಿದಿರಾ?'' ಅಂತ ಸ್ವಾಭಾವಿಕ ಪ್ರಶ್ನೆ ಹಾಕಿದೆ.

''ನೋಡಿದೆ''

''ಏನು ಹೇಳಿದರು?''

''ಹೇಳೋದೇನು? ನಿದ್ದೆ ಗುಳಿಗೆ ಕೊಟ್ರು.''

''ತಗೊಂಡು ನೋಡಿದಿರಾ?''

''ತಗೊಳ್ಳಲಿಲ್ಲ. ಅದೊಂದು ಗೀಳಾಗಿಬಿಟ್ಟೀತು ಅಂತ ನನಗೆ ಅನುಮಾನ.''

''ನಿದ್ದೆ ಬರೋದಕ್ಕೆ ಜನ ನೂರೆಂಟು ಥರ ಪ್ರಯತ್ನ ಮಾಡ್ತಾರೆ. ನನಗೂ ಹೇಳ್ತಿರ್ತಾರೆ. ಅಂದ್ಹಾಗೆ, ಗೌಡರೆ, ನೀವು ಆ ಹಳೇ ಉಪಾಯ ಟ್ರೈ ಮಾಡಿದಿರಾ? ಮಂದೆ ಮಂದೆಯಾಗಿ ಹೋಗ್ತಿರೋ ಕುರಿಗಳನ್ನ ಎಣಿಸೋದು...''

''ಈ ಕುರಿ ಎಣಿಸೋದೆಲ್ಲ ಇಂಗ್ಲಿಷಿನವರ ಕಂದಾಚಾರ ಪದ್ಧತಿ. ನನಗಂತೂ ಅದರಿಂದ ಪ್ರಯೋಜನ ಇದೆ ಅಂತ ತೋರೊಲ್ಲ. ಅದಕ್ಕೆ ಬದಲಾಗಿ, ಯಾವದಾದರೂ ಕಸಾಯಿಖಾನೆ ಹತ್ರ ನಿಂತು, ಅಲ್ಲಿ ಹಾರಾಡ್ತಿರೋ ಹದ್ದುಗಳನ್ನ ಎಣಿಸೋ ಕಲ್ಪನೆ ವಾಸಿ''

''ನೀವು ಅದನ್ನೇ ಮಾಡಿ ನೋಡಿ. ನಿದ್ದೆ ಬರಬಹುದು.''

''ಎಣಿಸಿ ನೋಡಿದೆ. ಆದರೆ ಆ ಹದ್ದುಗಳು ಲೆಕ್ಕಕ್ಕೆ ಸಿಕ್ಕಿದರೆ ತಾನೆ! ಹಾರ್ತಿರೋ ಹದ್ದುಗಳೇ ತಿರುಗಿತಿರುಗಿ ಬರ್ತಿರ್ತವೆ.''

''ಹಾಡು ಕೇಳ್ತಾ ಮಲಗಿದ್ರೆ ನಿದ್ದೆ ಬರಬಹುದೇನೋ...''

''ಅದೂ ಮಾಡಿದೆ ಅದರಿಂದ ಇದ್ದ ನಿದ್ದೇನೂ ಕೆಡ್ತು.''

''ಯಾಕೆ ಗೌಡ್ರೆ, ಹೀಗಂದುಬಿಟ್ರಿ!''

''ಹಾಡುಗಳು ಯಾವ ಯಾವ ರಾಗಗಳಲ್ಲಿವೆ ಅಂತ ಊಹಿಸಿಕೊಳ್ಳೋದ್ರಲ್ಲಿ ಕಾಲ ಕಳೀತು ನಿದ್ದೆ ಬರಲಿಲ್ಲ.''

''ಸ್ವರಗಳ್ನ ಜೋಡಿಸ್ತಾ ಹೋದರೆ ಒಂದೊಂದು ಸಲ ಹುಟ್ಟೋ ಪದಗಳು ತಮಾಷೆಯಾಗಿರ್ತವೆ, ಅಂಥ ಸ್ವರಗಳನ್ನ ಜೋಡಿಸ್ತಾ ಹೋಗಿ.''

''ಹಾಗಂದ್ರೆ?''

''ನೀವೇ ನೋಡಿ. ಗಗ್ಗ, ಗಧಾ, ಗರಿಗರಿ, ಪಾಪಮರಿ, ಮಮ್ಮ, ಪಪ್ಪ, ಪರಿಪರಿ, ಸರಿಸರಿ, ಸಮ, ನೀಸರಿ, ನಿಮ್ಮಮ್ಮ ಸರಿ, ನಿಮ್ಮ ಸರಿ, ದನಿ, ನಿದಾನಿ, ಘಮಘಮ, ಗಸಗಸ, ಸರೀಪ್ಪ, ಸರೀಮ್ಮ, ಪಗರಿ, ನೀ ಮಾರಿ, ಮಾನಿನಿ, ಸರಿದಾರಿ, ದರಿ, ಪಾದರಿ, ದಗಾ, ದಾನ, ಮಾದರಿ, ಸದರಿ, ಸಾರಿ... ಇನ್ನೂ ನೋಡಿ ತಮಾಷೆ... ದಪ್ಪ, ನೀದಪ್ಪ, ನಿಮ್ಮಪ್ಪ ದಪ್ಪ, ನಿಮ್ಮಮ್ಮ ದಪ್ಪ....''

''ಈ ಪ್ರಯೋಗ ನೀವು ಮಾಡಿದಿರಾ?''

''ನನಗೆ ಚೆನ್ನಾಗಿ ನಿದ್ದೆ ಬರುತ್ತೆ. ಇವೆಲ್ಲ ನನಗೆ ಅವಶ್ಯವೇ ಇಲ್ಲ. ನೀವು ಬೇಕಾದ್ರೆ ಹೀಗೆ ಸ್ವರಗಳನ್ನ ಜೋಡಿಸ್ತಾ ಹಾಡಿಕೋತ ನೋಡಿ...''

''ನನಗೆ ಸ್ವರಗಳ ಪರಿಚಯ ಸಾಲದು. ಈ ಉಪಾಯ ನನಗೆ ಸರಿಬರೊಲ್ಲ ಬಿಡಿ... ಮೊನ್ನೆ ಒಂದಿನ ನಾನು ಇನ್ನೊಂದು ಕಸರತ್ತು ಷುರು ಮಾಡಿದ್ದೀನಿ. ನಾನು ಕತೆ, ಕವನ ಬರೀತೀನಿ, ಬಹಳ ಓದ್ತೀನಿ ಅಂತ ಗೊತ್ತಲ್ಲ ನಿಮಗೆ. ನನ್ನ ಹೊಸ ಉಪಾಯ ಏನೂಂದ್ರೆ, ನಮ್ಮ ಅಕ್ಷರ ಮಾಲೆಯಿಂದ ಒಂದೊಂದಾಗಿ ಅಕ್ಷರ ಆರಿಸ್ಕೊಂಡು ಅವುಗಳನ್ನ ಪದಗಳಲ್ಲಿ ಚಲಾವಣೆ ಮಾಡಿ, ಯಾವ ಯಾವ ಪದಗಳು ಯಾವ ಯಾವ ರಸೋತ್ಪತ್ತಿ ಮಾಡೋದ್ರಲ್ಲಿ ಹೆಚ್ಚು ಬಳಕೆಗೆ ಬರುತ್ತವೆ ಅಂತ ಲೆಕ್ಕಾಚಾರ ಮಾಡ್ತಾ ಹೋಗೋದು. ಸಾಕಷ್ಟು ಸಮಯ ಹಿಡಿಯೋದರಲ್ಲಿ ಸಂದೇಹ ಇಲ್ಲ ಈ ಅಭ್ಯಾಸಕ್ಕೆ ಅಲ್ವೆ?''

''ಸ್ವಲ್ಪ ಬಿಡಿಸಿ ಹೇಳಿ ಗೌಡರೆ. ಯಾವ ತರ ಬೇಕಾದ್ರೂ ಉಪಯೋಗಿಸಿ ವಾಕ್ಯ ಬರೀಬಹುದು. ಸಾಹಿತ್ಯದಲ್ಲಿ ಈ ವಾಕ್ಯಗಳಿಂದ ಸಂದರ್ಭಕ್ಕೆ ತಕ್ಕ ರಸೋತ್ಪತ್ತಿ ಮಾಡಬಹುದು, ಇಂಥಿಂಥ ಪದಗಳಿಗೆ ಇಂಥಿಂಥ ರಸಸೃಷ್ಟಿಯೇ ಸಾಧ್ಯ ಅಂತ ಕಟ್ಟಳೆ ಎಲ್ಲಿ ಬಂತು?''

''ಕಟ್ಟಳೆಯೇನಿಲ್ಲ ಎಲ್ಲ ಪದಗಳಿಗೂ ಬರಹಗಳಲ್ಲಿ ಸ್ವಾಗತ ಇದ್ದೇ ಇದೆ. ಆದರೆ ಕೆಲವು ಪದಗಳು ಸ್ವಾಭಾವಿಕವಾಗಿ ಕೆಲವು ಸಂದರ್ಭಗಳಲ್ಲಿ ಬಂದೇ ಬರುತ್ತವೆ. ಅಂಥಾ ಪದಗಳನ್ನೇ ನಾನು ಹುಡುಕೋದು. ಕನ್ನಡ ಅಕ್ಷರ ಪ್ರಪಂಚ ವಿಸ್ತಾರವಾದದ್ದು ಒಳ್ಳೇದೇ ಆಯ್ತು. ನನಗೂ ನಿದ್ದೆ ಬರಬೇಕಂದ್ರೆ ಸ್ವಲ್ಪ ಕಾಲ ಹಿಡಿದೇ ಹಿಡಿಯುತ್ತೆ.

''ನಾನು 'ಕ-ವರ್ಗ'ದಿಂದ ಷುರು ಮಾಡಿದೆ. ಅಂದರೆ 'ಕ' ಕಾರದಿಂದ ಪ್ರಾರಂಭ. 'ಕಕವ' ಅನ್ನೋ ಪದ ತಗೊಂಡೆ. ಅದು ಹಾಸ್ಯರಸ ಉತ್ಪತ್ತಿ ಮಾಡಬಲ್ಲ ಪದ ಅಷ್ಟೆ. 'ಪೆದ್ದ' ಅಂತ ಅರ್ಥ.

ಆಮೇಲೆ 'ಕಕ್ಕುಲಾತಿ', ಅಂದರೆ ಪ್ರೀತಿ, ಕರುಣರಸ ವರ್ಣನೆಗೆ ಹೆಚ್ಚು ಯೋಗ್ಯ. 'ಕಕ್ಕು' ಅನ್ನೋದು ಭೀಭತ್ಸ ರಸಕ್ಕೆ ಹೊಂದುತ್ತೆ. ಆದರೆ 'ಕಕ್ಕಿಸು'ವುದು ಹಾಸ್ಯ ಲೇಖನಗಳಲ್ಲಿ ಬೇಕಾದ ಹಾಗೆ ಕಂಡುಬರುತ್ತೆ. 'ಕಡುಬು' ಕೂಡ ಹಾಗೆಯೆ.

'ಕಕ್ಕಾವಿಕ್ಕಿ' ನೋಡಿ. ಅಂದ್ರೆ ದಿಗ್ಭ್ರಮೆ, ಹಾಸ್ಯಾಸ್ಪದ ವ್ಯಕ್ತಿಗಳ ಲಕ್ಷಣವಾದ್ದರಿಂದ ನಗೆಬರಹಗಳಲ್ಲಿ ಆಗಾಗ್ಗೆ ಬರುತ್ತೆ. 'ಕಕ್ಷಿ'ಯೂ ಹಾಸ್ಯಾಸ್ಪದ ವ್ಯಕ್ತಿ ಅಂತ ತೀರ್ಮಾನಿಸಿ ಅದನ್ನ ಹಾಸ್ಯಜನಕ ಪದಗಳ ಗುಂಪಿಗೆ ಸೇರಿಸಿಕೊಂಡೆ. 'ಕಗ್ಗ' ಹಾಸ್ಯರಸಕ್ಕೆ ಮೀಸಲು. ಆದರೆ 'ಕವನ' ಶೃಂಗಾರ ರಸದಲ್ಲಿ ಹೆಚ್ಚು ಬಳಕೆ. 'ಕಗ್ಗತ್ತಲು' ಭಯಾನಕ ದೃಶ್ಯಗಳಿರೋ ಕತೆ ಕಾದಂಬರಿಗಳು ತೊಡಗುವುದೇ ಈ ಪದದಿಂದ ಅಲ್ವೆ? 'ಕಗ್ಗೊಲೆ'ಯೂ ಹಾಗೇ, ಬಾರಿ ಬಾರಿಗೂ ಭಯಾನಕ ಕತೆಗಳಲ್ಲಿ ಎದುರು ನೋಡುತ್ತೇವೆ.

'ಕಚಗುಳಿ' ಹಾಸ್ಯಭರಿತ ಪದ ಗೋಷ್ಠಿಯಲ್ಲಿ ತಾನಾಗಿ ಸೇರಿತು. 'ಕಚಡ' ಭೀಭತ್ಸ ರಸದ ಗುಂಪಿಗೆ ಸೇರಿತು. 'ಕಜ್ಜಿ'ಯೂ ಭೀಭತ್ಸ ಜನಕ ಪದವೇ. 'ಕಜ್ಜಾಯ' ಮನೆಯವರೆಲ್ಲ ಸೇರಿ ತಿಂದು ಆನಂದಿಸುವ ಪದಾರ್ಥ. ಶಾಂತಿರಸ ಪ್ರಧಾನವಾದದ್ದು.

'ಕಚ್ಚೆ' ವೀರರಸ ವರ್ಣನೆಗಳಲ್ಲಿ ಅಡಿಗಡಿಗೆ ಬರುತ್ತೆ. 'ಕಟಕಟೆ', 'ಕರ್ಮ', 'ಕರ್ತ', 'ಕಬ್ಬಿಣ', 'ಕಡಲೆ', ಇವಕ್ಕೆಲ್ಲ ರಸೋತ್ಪತ್ತಿ ಮಾಡಬಲ್ಲ ರೂಪವಿಲ್ಲ. ಇವು ನೀರಸ ಪದಗಳು! 'ಕಟಾಕ್ಷ' ಶೃಂಗಾರದ ಬರವಣಿಗೆಗಳಲ್ಲಿ ಬಾರಿಬಾರಿಗೂ ಕಾಣಿಸಿಕೊಳ್ಳಬಲ್ಲದು. 'ಕಠಾರಿ' ರೌದ್ರರಸವರ್ಣನೆಗೆ ಆದೀತು. 'ಕಠಿನ', 'ಕಠೋರ', 'ಕಡಾಯಿ', ಇವಕ್ಕೆಲ್ಲ ರಸಗಳ ಎಲ್ಲೆಯಿಲ್ಲ ಅಂತ ಅನ್ನಿಸಿತು. 'ಕಡಿ', 'ಕಡಿತ' ಹಾಸ್ಯ ಸಾಹಿತಿಗಳು ಹೇರಳವಾಗಿ ಉಪಯೋಗಿಸುವ ಪದಗಳು.

'ಕಣ್ಣು' ಶೃಂಗಾರ, ಹಾಸ್ಯ ರಸದ ವರ್ಣನೆಗಳಲ್ಲಿ ಇದ್ದೇ ಇರುತ್ತೆ. 'ಕಣೆ' ಹಾಸ್ಯ ರಸ ಬರಹಕ್ಕೆ ಸೇರುತ್ತೆ. 'ಕತ್ತೆ' ಹಾಸ್ಯ ರಸ ಚೆಲ್ಲುವ ಪ್ರಾಣಿಯೇ ಸರಿ. 'ಕತ್ತಲು' ಭಯಾನಕ ರಸ ವರ್ಣನೆಗೆ ಅತ್ಯವಶ್ಯಕವಾದ ಹಿನ್ನೆಲೆ. 'ಕತ್ತಿ' ವೀರರಸಕ್ಕೆ ಮೀಸಲು. 'ಕದನ' ಕೂಡ ವೀರರಸಕ್ಕೆ ಸಂಬಂಧಿಸಿದ ಪದ. 'ಕದಿ', 'ಕಳ್ಳ' ಹಾಸ್ಯ ರಸಕ್ಕೆ ಸೇರಿದ ಪದಗಳು ಅನ್ನಿಸಿ ಆ ಗುಂಪಿನಲ್ಲೇ ದಾಖಲೆ ಮಾಡಿದೆ.

'ಕನಸು' ಯಾವ ವಾಕ್ಯದಲ್ಲಾದರೂ ಸೇರಬಹುದು. ಆದನ್ನು ಯಾವ ರಸಕ್ಕೂ ನಾನು ಸೇರಿಸಿಲ್ಲ. 'ಕನಕ' ಶೃಂಗಾರ ರಸ ವರ್ಣನೆಯಲ್ಲಿ ಇದ್ದೇ ಇದ್ದೀತು. 'ಕನವರಿಕೆ' ಭಯಾನಕ ದೃಶ್ಯ ವರ್ಣನೆಗೆ ಉಪಯೋಗವಾಗುವುದುಂಟು. 'ಕನಿಕರ' ಕರುಣಾರಸ ತುಂಬಿದ ಪದ. 'ಕನ್ಯೆ' ಶೃಂಗಾರ ರಸಕ್ಕೆ ಹೊಂದುಕೊಳ್ಳುವ ಪದ. 'ಕನ್ನಡಕ' ಆಗಿಂದಾಗ್ಗೆ ಹಾಸ್ಯ ಲೇಖನಗಳಲ್ಲಿ ತೋರಿಬರುತ್ತದೆ. 'ಕಪಟ' ಹಾಸ್ಯ ನಾಟಕಗಳಲ್ಲಿ ಸಾಮಾನ್ಯ. 'ಕಪಾಲಮೋಕ್ಷ'ವೂ ಹಾಗೇ. 'ಕಪಾಲ' ಭಯಾನಕ ದೃಶ್ಯಗಳಲ್ಲಿ ಬರುವುದುಂಟು.

With Best Compliments

from



N.S. Girimaji & Sons (Bangalore)

Offce : 46, Tumkur Road,
Bangalore - 560 022.

Works : Plot No. 5, 5th Main,
3rd Phase, Peenya Industrial Area,
Bangalore - 560 058
Ph : Off : 23372972
Fact : 28394469
Resi : 23320028
Fax : 23373191

'ಕಪಿ', 'ಕಪ್ಪೆ' ಹಾಸ್ಯ ಸಾಹಿತ್ಯಕ್ಕೆ ಹೇಳಿ ಮಾಡಿಸಿದ ಪದಗಳು. 'ಕಪ್ಪು' ಎಲ್ಲಾ ಕಡೆಯೂ ಸೇರಬಲ್ಲದು. 'ಕಫ' ಭೀಭತ್ಸ ರಸ ಪ್ರತಿಬಿಂಬಿಸುವ ಪದ. 'ಕಬ್ಬು' ಎಲ್ಲಿ ಬೇಕಾದರೂ ಸೇರಲು ತಯಾರಿರುವ ಪದ. 'ಕಮಂಗಿ' ಹಾಸ್ಯ ರಸಕ್ಕೆ ಅವಶ್ಯಕವಾದ ಪದ. 'ಕಮಲ' ಶೃಂಗಾರ ರಸಕ್ಕೆ ಹೊಂದಿಕೊಳ್ಳಬಲ್ಲ ಪದ. 'ಕರ' ಹಾಸ್ಯ ಲೇಖನಗಳಲ್ಲಿ ಅಡಗಿರುವ ಪದ. 'ಕರಡಿ' ಭಯಾನಕ, ಹಾಸ್ಯ, ಎರಡೂ ಕಡೆಗೆ ವಾಲಬಲ್ಲದು. 'ಕರಾರು' ಹಾಸ್ಯ ಲೇಖನದಲ್ಲಿ ಎದುರು ನೋಡಬಹುದು. 'ಕಲ್ಲು' ಹಾಸ್ಯ ಲೇಖನದಲ್ಲೂ ಬರುವುದುಂಟು. 'ಕಲೆ', 'ಕಲಶ', 'ಕಲ್ಪನೆ'ಗಳನ್ನು ಯಾವ ಗುಂಪಿಗೂ ಸೇರಿಸಲಾರದೆ ವಿಫಲನಾದೆ. 'ಕವಕವ' ಹಾಸ್ಯ ರಸ ವರ್ಣನೆಗಳಲ್ಲಿ ಹೆಚ್ಚು ಉಪಯೋಗವಾಗುತ್ತೆ. 'ಕವಿತೆ' ಶೃಂಗಾರ ರಸಕ್ಕೆ ಹೆಚ್ಚು ಉಪಯೋಗ.

''ಮರೆತಿದ್ದೆ. ಒಂದೊಂದು ಸಲ ನೆನಪಿಗೆ ಬರುತ್ತಿದ್ದ ವಿಶೇಷ ಜಂಟಿ ಪದಗಳಿವೆ. ಉದಾಹರಣೆಗೆ 'ಕಬ್ಬಿಣ', 'ಕಡಲೆ' ಯಾವ ರಸೋತ್ಪಾದನೆಯೂ ಪ್ರಯೋಜನವಾಗಲಾರವು ಆದರೆ ಅವೆರಡನ್ನೂ ಜಂಟಿಯಾಗಿ ಗಮನಿಸಿ ನೋಡಿ. 'ಕಬ್ಬಿಣದ ಕಡಲೆ' ಹಾಸ್ಯ ಸಾಹಿತ್ಯದಲ್ಲಿ ಪದೇ ಪದೇ ಬರುತ್ತಿರುವುದುಂಟು.''

''ಕಷಾಯ ಬಹುಶಃ ಕರುಣ ಸೂಚಕ ಅನ್ನಿಸಿ, ಹಾಗೇ ವಿಂಗಡಿಸಿದೆ. 'ಕಷ್ಟ' ಭಯಾನಕ ರಸ ಸಾಹಿತ್ಯಕ್ಕೆ ಬೇಕಾದ್ದು. 'ಕಸರಸ್ಸು', 'ಕವಾಯಿತು', 'ಕಹಳೆ' ವೀರರಸ ಪದಗಳೇ ಸರಿ. 'ಕಸ' ಸರ್ವವ್ಯಾಪಿ ಪದವಾದರೂ ಕೆಲವು ಹಾಸ್ಯ ಲೇಖಕರಿಗೆ ರಸಕ್ಕಿಂತ ಕಸ ನಿರ್ಮಿಸುವುದು ವಾಡಿಕೆ. 'ಕಳಪೆ' ಕೂಡ 'ಹಾಸ್ಯ ಲೇಖಕರ ಕೈಗೆ ಸಿಕ್ಕು ಪ್ರಕಟವಾಗುತ್ತಿರುತ್ತೆ. 'ಕಳವಳ' ಭಯಾನಕ ರಸ ಸೃಷ್ಟಿಗೆ ಸಹಾಯಕ.

'ಕ' ಕಾರದ ಪದಗಳ ಪಟ್ಟಿ ಮಾಡಿಕೊಂಡು ಎಣಿಸಿ ಮುಗಿಸುತ್ತಲೇ ನಾನು ಅಲ್ಲಿಂದ ಮುಂದೆ 'ಕಾ'ಗೆ ಬಂದೆ. 'ಕಾಕತಾಳ'ದಿಂದ ಷುರು ಮಾಡಿದೆ... ಆಯ್ತೆ?... ಅರೆ! ಇದೇನು ಸ್ವಾಮಿ, ತೂಕಡಿಸ್ತಿದ್ದೀರಿ! ನಾನು ನೋಡಲೇ ಇಲ್ಲ! ನೋಡಿದಿರಾ, ಈ ಸಾಧನೆ ಮಾಡಿದರೆ ನಿಮಗೂ ನಿದ್ದೆ ಬರೋದು ಖಂಡಿತ ಅಲ್ವೆ? ಒಳ್ಳೇದಾಯ್ತು, ನೀವೇ ಮುಂದುವರಿಸಿ. ನೀವಾದ್ರೂ, ಹಾಯಾಗಿ ನಿದ್ದೆಮಾಡಿ. ಹಾಗೇ ನಮ್ಮ ಭಾಷಾ ಸಂಪತ್ತಿನ ರುಚಿ ನೋಡಿ. ಬನ್ನಿ, ಇಲ್ಲೇ ಬೆಂಚಿನ ಮೇಲೆ ಕಾಲು ಚಾಚಿಕೊಳ್ಳಿ.

◇◇◇

ನನ್ನ ವಾಕ್ ವಿಲಾಸ ವೈಭವಗಳು

✧ ಭುವನೇಶ್ವರಿ ಹೆಗಡೆ

ಬೆಳಿಗ್ಗೆ ವಾಕ್ ಹೋಗುವಾಗ ತಲೆ ಎತ್ತಿ ಆಚೀಚೆ ನೋಡದೆ, ಇನ್ನೇನು ಸಮುದ್ರಕ್ಕೆ ಹೋಗಿ ಹಾರುತ್ತಾರೇನೋ ಎಂಬಷ್ಟು ಸ್ಪೀಡಿನಲ್ಲಿ ಭರಭರ ನಡೆಯುವುದೊಂದನ್ನೇ ಮಾಡಬೇಕು. ವಿರಾಮದಲ್ಲಿ ಆಚೀಚೆ ನೋಡುತ್ತ 'ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ' ನಡೆದಾಡಿದರೆ ಅದು 'ವಾಯು ವಿಹಾರ'ವಾಗುತ್ತದೆ. ಡಾಕ್ಟುಗಳು ಬರೆದು ಕೊಡುವ 'ವಾಕಿಂಗ್' ಆಗುವುದಿಲ್ಲ ಎಂದು ನನ್ನ ವಾಕ್‌ತಜ್ಞರು ಆಗಾಗ ಎಚ್ಚರಿಸುತ್ತಲೇ ಇರುತ್ತಾರೆ.

ಆದರೂ ಪ್ರತಿ ಬೆಳಿಗ್ಗೆ ವಾಕ್ ಹೋಗುವಾಗಲೂ ಈ ಎಚ್ಚರಿಕೆಯನ್ನು ಒಂದಲ್ಲ, ಹತ್ತು ಸಲ ಮೀರಿ ಕತ್ತು ಆಚೀಚೆ ಹೊರಳಿಬಿಡುತ್ತದೆ. ತೀರಾ ಭೂಮಿಯನ್ನೇ ದೃಷ್ಟಿಸಿ ನೋಡುತ್ತ ಭರ ಭರ ನಡೆದರೆ ಭೂಗತಳಾಗಿ ಬಿಡುತ್ತೇನೇನೋ ಎಂದು ಭಯವಾಗಿ ಆಕಾಶ, ಮರ-ಗಿಡ, ನಾಯಿ-ಬೆಕ್ಕು, ಮನೆ, ಗೇಟು, ಬೋರ್ಡು ಬರಹ... ಎಲ್ಲವನ್ನೂ ಗಮನಿಸುತ್ತಲೇ 'ವಾಕ್' ಶಾಸ್ತ್ರ ಪೂರೈಸುತ್ತೇನೆ.

ಈ ನನ್ನ ಖಾಸಗಿ ವಾಯವಿಹಾರದ ಸೊಬಗನ್ನು ಕೆಡಿಸಬಲ್ಲ ಯಾವುದೇ ಜೀವಿಯನ್ನು ನಾನು ನನ್ನ ಜತೆ ಕರೆದೊಯ್ಯುವುದಿಲ್ಲ ''ಮೊನ್ನೆ ಏನಾಯ್ತು ಗೊತ್ತಾ?'' ಎಂದು ಹೆಜ್ಜೆ ಹೆಜ್ಜೆಗೆ ಅಡರಿಕೊಳ್ಳುವ ಕಂಪೆನಿ ಇದ್ದರೆ ಅದೇ ಕಿರಿಕಿರಿಯಲ್ಲಿ ನಾವೂ ಮುಳುಗಬೇಕಾಗುತ್ತದೆ. ಹೋಗುವುದೋ ಬೇಡವೋ ಎಂಬಂತೆ ಹೆಜ್ಜೆ ಸವೆಸುವ ಏಕಾಂಗಿ ವಾಕ್ ವಿಲಾಸಿಗಳೂ ನನಗೆ ಎದುರಾಗುವುದುಂಟು. ಅಪ್ಪ-ಮಗ, ಅಮ್ಮ ಮಗಳು, ಗಂಡ-ಹೆಂಡತಿಗಳಂಥ ವಾಗ್ಜೋಡಿಗಳು ಸಿಗುವುದೂ ಉಂಟು, ಯಾರೇ ಎದುರು ಬಂದರೂ 'ನಿಮ್ಮ ದಾರಿ ನಿಮಗೆ' ಎನ್ನುತ್ತ ವಿನೀತಳಾಗಿ ಬದಿಗೆ ಸರಿದು ಅವರಿಗೆ ಜಾಗ ಬಿಟ್ಟುಬಿಡುತ್ತೇನೆ.

ನನ್ನ ನಸುಕಿನ ಈ 'ವಾಕ್ ವೈಭವಕ್ಕೆ' ಸ್ವಾರಸ್ಯ ತುಂಬುವ ದೃಶ್ಯಾವಳಿಗಳಲ್ಲಿ ವೈವಿಧ್ಯ ಇರಲೆಂದು ದಿನಕ್ಕೊಂದು ಓಣಿ ಹಿಡಿದು ಹೊರಟುಬಿಡುತ್ತೇನೆ. ಯಾರೂ ಎದ್ದಿರದ ಏರಿಯಾ ಇಡೀ ನನ್ನದೇ ಎಂಬ ಗತ್ತಿನಲ್ಲಿ ನಿರಾಳವಾಗಿ ನಡೆಯುತ್ತೇನೆ.

ಬೆವರು ಸುರಿಸಿ ಜೋಡಿಸಿದ ಹಂಚಿನ ಮನೆಗಳು, ಯಾರ್‍ಯಾರದ್ದೋ ಹಣವನ್ನೇ

ಇಟ್ಟಿಗೆಯಾಗಿಸಿ ಕಟ್ಟಿದ ಮಹಾನ್ ಬಂಗ್ಲೆಗಳು, ನೆಹರೂ ಬಂದಾಗ ಉಳಿಯುತ್ತಿದ್ದ ಖ್ಯಾತಿ ಹೊಂದಿದ ಐತಿಹ್ಯಗಳು, ವೈವಿಧ್ಯಮಯ ವಿನ್ಯಾಸದ ಗಾರ್ಡನ್ ಗೇಟುಗಳು, ನಿದ್ರಿತ ಗೂರ್ಖಾಗಳು... ಎಲ್ಲವೂ ನನ್ನ ಅಕ್ಷಿಪಟಲದಲ್ಲಿ ಮುದ್ರಿತವಾಗುತ್ತವೆ. ಸಾಮಾನ್ಯವಾಗಿ ಕಂಡುಬರುವ 'ನಾಯಿ ಇದೆ ಎಚ್ಚರಿಕೆ' ಬೋರ್ಡುಗಳು ನೋಡಿ ನೋಡಿ ಹೊಂದಿಕೆಯಾಗಿರೋದ್ರಿಂದ ಹೊಸ ಸಂವೇದನೆಯನ್ನು ಉಂಟು ಮಾಡುವುದಿಲ್ಲ.

ಒಂದು ಏರಿಯಾದ ಭವ್ಯ ಬಂಗಲೆಗಳಲ್ಲಿ ಒಂದರ ಮುಂದೆ "Dog on duty" ಎಂಬ ಬರಹ ಒಮ್ಮೆ ಕಾಣಿಸಿತು. ಗೇಟಿನೊಳಗೆ ಕಣ್ಣು ಹಾಯಿಸಿದೆ, ಯಾವ 'ಕರ್ತವ್ಯನಿರತ ನಾಯಿ'ಯೂ ಕಾಣಲಿಲ್ಲ. ಬದಲು ವಾಚ್‌ಮ್ಯಾನ್‌ನ ಡ್ರೆಸ್ಸಿನಾತ ಗಿಡಗಳಿಗೆ ನೀರು ಹಾಕುತ್ತ ಆನ್ ಡ್ಯೂಟಿ ಆಗಿದ್ದ. ಆ ಬೋರ್ಡಿನಲ್ಲಿ ಉಲ್ಲೇಖಿಸಲ್ಪಟ್ಟ ನಾಯಿ ಆತನೇ ಆಗಿರಬಹುದೇ? 'ನಾಯಿ ಪಾಡು ಪಾಪ' ಎಂದುಕೊಂಡು ಪಾದ ಬೆಳೆಸಿದೆ.

ಮರುದಿನ ಬೇರೊಂದು ಬಡಾವಣೆ. ಒಂದು ಬಂಗಲೆಯ ಮುಂದೆ ಒಂದು ಶೀರಾ ಅಸಾಂಪ್ರದಾಯಿಕ ಬೋರ್ಡು ಕಾಣಬೇಕೆ? "Be careful the watchman has four legs!" ಎಂದು ಬರೆದಿದೆ. ಆ ವಾಚ್‌ಮ್ಯಾನ್‌ನ ಚಿತ್ರ ಬೋರ್ಡಲ್ಲಿದೆಯೇ? ಎಂದು ಗಮನಿಸಿದರೆ ಅದೂ ಇಲ್ಲ. ಚಿತ್ರ ಪ್ರೇಮಿಗಳಲ್ಲ, ಬರೀ ಘೋಷಣಾ ಪ್ರಿಯರಿರಬೇಕೆಂದುಕೊಂಡೆ. ಛೆ ಎಂಥಾ ವಾಚ್‌ಮ್ಯಾನ್ ಸಿಕ್ಕಿದ್ದಾನೆ ಇವರಿಗೆ ಎನ್ನಿಸಿ ಅಸೂಯೆಯಾಯ್ತು.

ಏಕೆಂದರೆ ನಮ್ಮ ಅಪಾರ್ಟ್‌ಮೆಂಟಿನಲ್ಲಿ ಲಾಗಾಯ್ತಿನಿಂದ ಇರುವ ಎರಡೇ ಕಾಲಿನ ವಾಚ್‌ಮ್ಯಾನ್‌ನಿಗೆ ವರ್ಷ ಎಂಬತ್ತು - ತೊಂಬತ್ತು ಆಗಿರಬಹುದು. ಒಂದೂ ಕಿವಿಯಿಲ್ಲ, ನಾಲ್ಕು ಕಣ್ಣುಗಳಿವೆ. ಫ್ಲಾಟಿನೊಳಗಿರುವವರೇ ಬಂದಾಗಲೂ 'ಯಾರು ಬೇಕಿತ್ತು?' ಎಂದು ಪ್ರಶ್ನಿಸುವುದುಂಟು. ಅದು ಅವನ ನಾಲ್ಕು ಕಣ್ಣುಗಳ ಪ್ರಭಾವ ಎಂದು ಗೊತ್ತಿರುವ ನಾವೆಲ್ಲ ಅದಕ್ಕೆ ಬೇಸರಿಸುವುದಿಲ್ಲ. ತನ್ನ ಪ್ರಾಮಾಣಿಕತೆಯ ಬಲದ ಮೇಲೆ ಆತ ಇಷ್ಟು ವರ್ಷ ಬದುಕಿದ್ದಾನೆ. ಇನ್ನಷ್ಟು ವರ್ಷ ಬದುಕಲಿ ಎಂದೇ ಆಶಿಸುತ್ತೇವೆ. ಇನ್ನು ಈ ಬಂಗಲೆಯ ನಾಲ್ಕು ಕಾಲಿನ ವಾಚ್‌ಮ್ಯಾನ್ ಹೇಗಿರಬಹುದೋ ಏನೇನು ಉಪದ್ವ್ಯಾಪ ನಡೆಸಿರಬಹುದೋ ಎಂದು ಕುತೂಹಲವಾಯ್ತಾದರೂ ಆ ಚುಮು ಚುಮು ಬೆಳಗಿನಲ್ಲಿ ಅಪರಿಚಿತರ ಗೇಟನ್ನು ದಿಟ್ಟಿಸಿ ನೋಡುವುದು ಸರ್ವಥಾ ಒಳ್ಳೆಯದಲ್ಲವೆನಿಸಿ ಮುಂದೆ ನಡೆಯಬೇಕಾಯ್ತು.

ನಮ್ಮ ಬಂಧುಗಳೊಬ್ಬರು ತಮ್ಮ ಕಾರಿನ ಮೇಲೆ "No use in robbing this car because its owner is married" ಎಂದು ಬರೆಸಿದ್ದಾರೆ. ಅಚೀಚೆ ಹೋಗುವವರು ಇದನ್ನೋದಿ ಮುಸಿ ಮುಸಿ ನಗುತ್ತಾರಾದರೂ ಒಬ್ಬನೇ ಒಬ್ಬ ಕಾರುಗಳ್ಳ ಇದನ್ನೋದಿದ ದಾಖಲಿಲ್ಲ. ಕಳ್ಳರೇ ಆದರೆ ಹಾಗೆಲ್ಲ ಓದುತ್ತ ನಿಲ್ಲಲು ವ್ಯವಧಾನವೆಲ್ಲಿರುತ್ತದೆ?

ಇನ್ನು ಎರಡು ಸಾಲುಗಳ ನಡುವಿರುವ ಅರ್ಥವನ್ನು ಓದುವ (Reading between lines) ಸೂಕ್ಷ್ಮ ಸಂವೇದಿಗಳು ಈ ಸಾಲುಗಳಲ್ಲಿ ಅದೇನು ಅರ್ಥ ಕಾಣುತ್ತಾರೋ ಹೇಳಲಾಗದು. ಆಗಲೇ ತೆಗೆಯಬಹುದಾದ್ದನ್ನೆಲ್ಲ (ಪ್ರಾಣ ಒಂದನ್ನು ಬಿಟ್ಟು ಉಳಿದೆಲ್ಲವನ್ನೂ!) ಇವನ ಹೆಂಡತಿ ಹೇಗೆ ತೆಗೆದಿರುತ್ತಾಳೆ ಎಂದು ಆರ್ಥೈಸಲೂ ಬಹುದು. ಯಾಕೆಂದರೆ ಗಂಡಂದಿರ ಜೇಬನ್ನು ಆಗಾಗ ತನಿಖೆಗೊಳಪಡಿಸಿ ಪತ್ತೇದಾರಿಕೆಯ ಜತೆಗೆ ಒಂದಿಷ್ಟು 'ಸ್ಟಾಂಡರ್ಡ್ ಡಿಡಕ್ಷನ್' ಮಾಡುವ ಹಕ್ಕು ಕೈ ಹಿಡಿದಾಕೆಗೆ ಇರುತ್ತದೆ ಎಂಬುದು ಒಂದು ರೀತಿ ಆಧುನಿಕ 'ಕವಿ ಸಮಯ' ಎನ್ನಬಹುದು. ಎಲ್ಲ ಹೆಂಡತಿಯರೂ ಇದನ್ನು ಪಾಲಿಸುತ್ತಾರೆಂದಾಗಲೀ ಎಲ್ಲ ಗಂಡಂದಿರ ಜೇಬುಗಳಲ್ಲಿ ಹಾಗೆ ತೆಗೆಯಲು ಹಣ ಇದ್ದೇ ಬಿಡುತ್ತದೆಯೆಂದಾಗಲೀ ಹೇಳುವಂತಿಲ್ಲ. ಕಾಲ್ಪನಿಕ ನಿಯಮಗಳಿಗೆ ಸಹ ಹೀಗೆ ಅಪವಾದಗಳಿರುವುದು ಸೋಜಿಗದ ಸಂಗತಿಯಲ್ಲವೆ?

ಹೀಗೆ ಕಾರಿನ / ಮನೆಯ/ ಆಫೀಸಿನ... ಒಡೆಯರ ನಿಜಸ್ಥಿತಿಯನ್ನು ಬೋರ್ಡಿನಲ್ಲಿ ಪ್ರಚುರಪಡಿಸಿ ಬಿಟ್ಟರೆ ವಿನಕಾರಣ ಅವರಿವರ ಸಮಯ ನಷ್ಟವಾಗುವುದು ತಪ್ಪೀತೆಂಬುದೇನೋ ಸರಿ (you are wasting my time & your time ಎಂದು ಬೈಯುವ ಬೈಬಾಸುಗಳನ್ನು ನೆನಪಿಸಿಕೊಳ್ಳಿ).

''ಚಂದಾ ವಸೂಲಿಯವರಾದರೆ ಒಳ ಬಂದು ಪ್ರಯೋಜನವಿಲ್ಲ'' ಎಂಬ ಭಂಡ ಬೋರ್ಡೊಂದು ಹೊರಗೆ ತೂಗು ಹಾಕಿದ್ದರೆ ಒಳಗಿನವನ ಪಿಟ್ಟಾಸಿತನವನ್ನು ಹೊರಗಿನಿಂದಲೇ ಊಹಿಸಿದ 'ದೇವಸ್ಥಾನ ಕಟ್ಟಿಸ್ತೇವೆ ಸಹಾಯ ಮಾಡಿ' ಜನ ಪುನಃ ದೇವಸ್ಥಾನದ ಕಡೆಗೆ ಹೆಜ್ಜೆ ಹಾಕಬೇಕಾಗುತ್ತದೆ.

ನಮ್ಮ ಪಕ್ಕದ ಕಂಪೌಂಡೊಂದರಲ್ಲಿ ಹೊಸದಾಗಿ ಬಾಡಿಗೆಗೆ ಬಂದ ವ್ಯಕ್ತಿಯೊಬ್ಬರು ಮನೆ ಬದಲಾಯಿಸಿದ ದಿನದಿಂದಲೇ ಇವರ ಹಿಂದಿನವರನ್ನು ಹುಡುಕಿ ಬರುವವರಿಂದ ರೋಸಿ ಹೋಗಿದ್ದರು. ಸಾಲ ವಸೂಲಿಯವರಿಂದ ಹಿಡಿದು ಹಳ್ಳಿಯಿಂದ ಹಲಸಿನ ಹಣ್ಣು ಸಮೇತ ಒಳಬಂದು 'ಕಮಲಕ್ಕ ಉಲ್ಲಾರಾ? ಲೆಪ್ಲೆ...' ಎನ್ನುತ್ತ ಕುಳಿತೇ ಬಿಡುವವರನ್ನು 'ಕಮಲಕ್ಕ ಹೋಗಿ ಆಗಿದೆ, ಈಗ ಬಂದಿರೋದು ವಿಮಲಕ್ಕ' ಎಂದು ಸಾಗಹಾಕಬೇಕಾದರೆ ಸುಸ್ತಾಗಿ ಹೋಗಿದ್ದರು. ಇರಲಿ ಎಂದು ನಾನೊಂದು ಪುಕ್ಕಟೆ ಸಲಹೆ ನೀಡಿದ ಪರಿಣಾಮ ಮರುದಿನವೇ ಅವರ ಗೇಟಿನಲ್ಲಿ ಒಂದು ಬೋರ್ಡು ತೂಗಾಡಿತು.


''ಈ ಮನೆಯ ಜನ ಬದಲಾಗಿದ್ದಾರೆ'' ಹಳ್ಳಿಯಿಂದ ಬರುವ ಜನರ ಮೇಲೆ ಈ ಬೋರ್ಡು ಚೂರೂ ಪರಿಣಾಮ ಬೀರಲಿಲ್ಲ. ಆದರೆ ಹಿಂದಿದ್ದ ಜನರಿಂದ ಒಂದು ಪೈಸೆ ವಸೂಲು ಮಾಡಲಾಗದಿದ್ದ 'ಚಂದಾ ಪೀಡಿತರು' ಮಾತ್ರ ಬದಲಾಗಿದ್ದಾರೆಂದ ಬಳಿಕ ಚಂದಾ ವಿಷಯದಲ್ಲೂ ಧಾರಾಳಿಗಳಾಗಿರಬಹುದೆಂದೆಣಿಸಿ ಬಾಗಿಲು ಬಡಿದೇ ಬಡಿದರು ಹಾಗೂ ಬಾಗಿಲು ತೆರೆದಾತ ಹಿಂದಿನ ಜನಕ್ಕಿಂತಲೂ ಬಿರುಸಾಗಿ ಬಾಗಿಲು ಹಾಕಿಕೊಂಡಾಗ ''ಮತ್ತೆಂತಾ ಬೋರ್ಡು ಮಾರಾಯ್ರೆ, ಬದಲಾಯಿಸಿದ್ದೇವೆ ಅಂತ ಬರ್ಕೊಳ್ಳೊದ್ಯಾಕೆ?'' ಎನ್ನುತ್ತ ಪುನಃ ದೇವಸ್ಥಾನದ ಕಡೆ ಹೆಜ್ಜೆ ಹಾಕಬೇಕಾಯ್ತು.

ನಾನು ಹೊಕ್ಕು ಹೊರಟು ಮಾಡುವ ಸಂಸ್ಥೆಯೊಂದರ ಎಂ.ಡಿ. ಸಾಹೇಬರು ತಮ್ಮ ಕುರ್ಚಿಯ ಮೇಲ್ಗಡೆ ದಪ್ಪಕ್ಷರದಲ್ಲಿ 'ಹರಟೆ ಹೊಡೆಯುವುದಕ್ಕಿಂತ ಹೊರಟು ಹೋಗುವುದು ಮೇಲು' ಎಂದು ಬರೆಸಿಕೊಂಡಿದ್ದರು. ಹರಟೆಯಿರಲಿ ಎರಡು ಮಾತಾಡುವುದೂ ಕಷ್ಟವೆಂಬಂತಿದ್ದ ಆ ಜೀವಿಯ ಬಳಿ ನಾನೊಮ್ಮೆ ತಕರಾರೆತ್ತಿದೆ. ಈಗಿನ ದಿನದಲ್ಲಿ ನಿಮ್ಮೆದುರು ಕುಳಿತು ಹರಟೆ ಹೊಡೆಯಲು ಯಾರಿಗೆ ಸಮಯವಿದೆ? ನಿಮಗೆಲ್ಲೋ ಭ್ರಾಂತಿ, ಆ ಬೋರ್ಡು ತೆಗೆಸಿಬಿಡಿ ಎಂದಿದ್ದೆ. ನನ್ನನ್ನು ಕೇವಲವಾಗಿ ನೋಡಿ ಆ ವ್ಯಕ್ತಿ ''ನಿಮಗ್ಗೊತ್ತಿಲ್ಲ, ಸುಮ್ಕಿರಿ'' ಎಂದಿದ್ದರು.

ಕೆಲವೇ ದಿನಗಳಲ್ಲಿ ಆ ವ್ಯಕ್ತಿಯ 'ಮೇಲಿನವರು' 'ಹೊರಟು ಹೋಗು' ಎಂದ ಪರಿಣಾಮ ಆತ ಅಕ್ಷರಶಃ ಬಾಯ್ಮುಚ್ಚಿ ಹೊರಟು ಹೋಗಬೇಕಾಯ್ತು ಮತ್ತು ಈಗವರಿಗೆ ಎಡ್ರೆಸ್ಸೇ ಇಲ್ಲ.

ಅಧಿಕಾರ, ಸ್ಥಾನಮಾನ, ಉತ್ಸಾಹ, ಖಯಾಲಿ... ಬಂದವರೆಲ್ಲರಿಗೂ ಹೀಗೆ ಬೋರ್ಡುಗಳ ಮೂಲಕವೇ ಅದನ್ನು ವ್ಯಕ್ತಪಡಿಸುವಂತಾದರೆ ಎಷ್ಟು ಚೆನ್ನ! (ಕೊನೆಯ ಪಕ್ಷ ಬೋರ್ಡು ಬರೆಯುವ ವೃತ್ತಿಯವರಿಗಾದರೂ)

✧✧✧



ಎಫ್.ಎಂ. 42.0

✧ ಆನಂದ

ನಮಸ್ಕಾರ.

ಇದು 42.0 ಎಫ್.ಎಂ. ರೇಡಿಯೋ ಬ್ಯಾಡಗಿ ಮಿರ್ಚಿ. ಸಖತ್ ಖಾರ ಮಗಳೇ!

ನಮ್ಮ ವಿಶೇಷ ಫೋನ್ ಇನ್ ಕಾರ್ಯಕ್ರಮಕ್ಕೆ ಸ್ವಾಗತ. ನಿಮಗೆ ವಿಷಯ ಗೊತ್ತಿರಬಹುದು: ನಿಮ್ಮ ಹೆಂಡತಿ ಕೋಪಗೊಂಡರೆ ಅವಳನ್ನ ಹೇಗೆ ಸಮಾಧಾನ ಮಾಡುತ್ತೀರಿ? ದಯವಿಟ್ಟು ಗಮನಿಸಿ ಗಂಡಂದಿರು ಮಾತ್ರ ಫೋನ್ ಮಾಡಬಹುದು. ಆ! ಇಲ್ಲೊಂದು ಕರೆ ಬರ್ತಿದೆ. ಹೇಳಿ ಸಾರ್. ನಿಮ್ಮ ಹೆಸರು?

ಯಂಕ್ಟೇಶ್.

ನಮಸ್ಕಾರ ಯಂಕ್ಟೇಶ್. ಎಲ್ಲಿಂದ ಮಾತನಾಡ್ತಿದ್ದೀರಿ?

ನಮಸ್ಕಾರಾಮ್ಮ... ನಾನು ಕಲ್ಯಾಣಿ ಬಾರ್‌ನಿಂದ ಫೋನ್ ಮಾಡ್ತಿದೀನಿ

ಏನು ಮಾಡ್ತಿದ್ದೀರ?

ನಾನು ಮೂರು ಕ್ವಾರ್ಟರ್ ಹಾಕಿದ್ದೇನೆ. ನಾಲ್ಕನೆಯದು ಬರಲಿದೆ. ಚಿಪ್ಸ್ ಮುಗಿದಿದೆ. ಅದಕ್ಕೆ ಕಾದಿದ್ದೇನೆ. ಅಷ್ಟರಲ್ಲಿ ಒಂದು ಫೋನ್ ಮಾಡುವಾ...

ಹೌದೆ? ಸರಿ. ನಿಮ್ಮ ಹೆಂಡತಿ ಕೋಪಗೊಂಡರೆ ಅವಳನ್ನು ಹೇಗೆ ಸಮಾಧಾನ ಮಾಡ್ತೀರಿ ಯಂಕ್ಟೇಶ್?

ಸಮಾಧಾನ? ನಾನು ಕ್ಯಾರೆ ಅನ್ನೊಲ್ಲ. ಎಲ್ಡು ದಿನ ಆದ ಮೇಲೆ ಅವಳೇ ಸರಿ ಹೋಗ್ತಾಳೆ...

ಸರಿ ಸರಿ. ಇನ್ನೊಂದು ಕರೆ ಬಂದಿದೆ? ಮಾತಾಡಿ ಸಾರ್... ಹಲೋ...

ಹಲೋ... ನಾನು ಗೋವಿಂದರಾಜ್.

ಹಲೋ ಗೋವಿಂದರಾಜ್. ಎಲ್ಲಿಂದ ಮಾತನಾಡ್ತಿದ್ದೀರಿ? ಏನು ಮಾಡ್ತಿದ್ದೀರಾ?

ನಾನು ಹಣ ಎಣಿಸ್ತಿದೀನಿ ಮೇಡಂ.

ನೀವು ಕ್ಯಾಷಿಯರ್ರಾ?

ಅಲ್ಲ ಮೇಡಂ. ಸೋಷಿಯಲ್ ವರ್ಕರ್. ನರ್ಸರಿ ಸೀಟ್ ಕೊಡಿಸ್ದೆ. ಸೂಟ್‌ಕೇಸ್ ಕೊಟ್ಟರು. ಹಣ ಎಣಿಸ್ತಿದೀನಿ ಮೇಡಂ.

ಸರಿ ಗೋವಿಂದರಾಜ್ ಕೋಪಗೊಂಡ ಹೆಂಡ್ತೀನ ಹೇಗೆ ಸಮಾಧಾನ ಮಾಡ್ತೀರಾ?

ಯಾರ ಹೆಂಡ್ತಿ ಮೇಡಂ?

ನಿಮ್ಮ ಹೆಂಡತಿ ಗೋವಿಂದರಾಜ್

ಓ! ಹೌದಾ? ಸಾರಿ ಮೇಡಂ. ನಾನು ಸೋಷಿಯಲ್ ವರ್ಕ್ ಮುಗಿಸಿ ಮನೇಗೆ ಹೋಗೋದು ಲೇಟ್. ಸೊ, ನನ್ನ ಹೆಂಡ್ತೀಗೆ ಕೋಪ ಬಂದಿರೋದು ನನಗೆ ಗೊತ್ತೇ ಆಗುವುದಿಲ್ಲ. ಬೇರೆ ಹೆಂಡ್ತೀರನ್ನ ಸಮಾಧಾನ ಮಾಡಿದ್ದೀನಿ ಮೇಡಂ.

ಅದು ಬೇಡ ಬಿಡಿ. ಇನ್ನೊಂದು ಕಾಲ್ ಬರ್ತಿದೆ. ಹೇಳಿ ಸಾರ್. ನಿಮ್ಮ ಹೆಸರೇನು ಸಾರ್?

ನಾನು ಷೇಖ್ ಅಲ್ ಬಿನ್ ಮಹಮದ್ ಕುರೇಶಿ.

ಅದು ನಿಮ್ಮೊಬ್ಬರದ್ದೇ ಹೆಸರೇ ಸಾರ್?

ಹೌದು ಮೇಡಂ. ಬೇಕಿದ್ದರೆ ಕುರೇಶಿ ಎಂದು ಕರೆಯಿರಿ.

ಸರಿ ಕುರೇಶಿ ಅವರೆ. ಕೋಪಗೊಂಡಾಗ ನಿಮ್ಮ ಹೆಂಡತಿಯನ್ನು ಹೇಗೆ ಸಮಾಧಾನ ಮಾಡುತ್ತೀರಿ ಸರ್?

ಯಾವ ಹೆಂಡತೀನ ಮೇಡಂ?

ಅಂದರೆ?

ನೋಡಿ ಮೇಡಂ. ನನಗೆ ಮೂವರು ಹೆಂಡತಿಯರು..

ಓ!? ಮೊದಲನೆಯ ಹೆಂಡತಿಗೆ ಕೋಪ ಬಂದರೆ ಏನು ಮಾಡ್ತೀರಿ?

ಎರಡನೆಯ ಹೆಂಡತಿ ಬಳಿ ಹೋಗ್ತೀನಿ. ಆಗ ಮೊದಲನೆಯ ಹೆಂಡತೀಗೆ ಬುದ್ಧಿ ಬರುತ್ತೆ. ಮೂರನೆಯ ಹೆಂಡತಿ ಪಾಠ ಕಲೀತಾಳೆ.

ವಂದನೆಗಳು ಕುರೇಶಿ ಅವರೆ. ಇನ್ನೊಂದು ಕರೆ ಬರ್ತಿದೆ. ಹಲೋ! ಯಾರು?

ನಾನು ಮೇಡಂ ಸುಬ್ಬನರಸಿಂಹ.

ಹೇಳಿ ಸಾರ್?

ಕೋಪ ಅಂದರೆ ಏನು ಮೇಡಂ? ಏಕೆಂದರೆ ನನ್ನ ಹೆಂಡತಿಗೆ ಕೋಪಾನೇ ಬರೋದಿಲ್ಲ ಮೇಡಂ.

ಹೌದಾ!

ಕೋಪಾ ಎಲ್ಲಾ ನನಗೇ ಬರೋದು. ಆದರೆ ಅವಳು ನನಗೆ ಸಮಾಧಾನಾನೇ ಮಾಡೊಲ್ಲ ಮೇಡಂ. ಏನು ಮಾಡಲಿ...

ಇನ್ನೊಂದು ಕಾಲ್ ಬರ್ತಿದೆ. ಯಾರು?

ನಾನು ಕಿರಣ್‌ಕುಮಾರ್...

ಹೋ ಕಿರಣ್‌ಕುಮಾರ್! ಫೇಮಸ್ ಆ್ಯಕ್ಟರ್? ಓ! ಗ್ರೇಟ್! ಕಿರಣ್ ಕುಮಾರ್ ಅವರೆ. ಥ್ಯಾಕ್ ಯು ಫಾರ್ ಕಾಲಿಂಗ್... ಹೇಳಿ ಸಾರ್ ನೀವು ಹೇಗೆ ಹೆಂಡ್ತೀನ ಸಮಾಧಾನ ಮಾಡ್ತೀರಾ?

ಡೈರೆಕ್ಟರ್ ಹೇಗೆ ಹೇಳಿದರೆ ಹಾಗೆ ಮೇಡಂ.

ಅಂದರೆ?

ಅದೇ ಮೇಡಂ. ನನಗೆ ಒಂದೊಂದು ಪಿಕ್ಚರ್‌ನಲ್ಲಿ ಒಂದೊಂದು ಹೆಂಡತಿ. ಸೊ, ಡೈರೆಕ್ಟರ್ ಹೇಗೆ ಮಾಡಿ ಅಂದರೆ ಹಾಗೆ...

ಸಾರ್. ಸಾರ್. ಅದು Reel life. Real lifeನಲ್ಲಿ ಸಾರ್...?

ಈ ಅನೇಕ ಅನುಭವಗಳಿಂದ ಪಾಠ ಕಲಿತ ನಾನು ಮದುವೆಯಾದ ಮೇಲೆ ನನ್ನ ಹೆಂಡತಿ ಕೋಪಗೊಂಡರೆ ಸನ್ನಿವೇಶಕ್ಕೆ ತಕ್ಕಂತೆ ಸಮಾಧಾನ ಮಾಡ್ತೀನಿ.

ಹೋಗಲಿ ಬಿಡಿ ಸಾರ್. Thanks call ಮಾಡಿದ್ದಕ್ಕೆ. ಇನ್ನೊಬ್ಬರು ಯಾರೋ ಫೋನ್ ಮಾಡ್ತಿದ್ದಾರೆ. ಯಾರು?

ನಾನು ಜೇಮ್ಸ್.

ಹೇಳಿ ಜೇಮ್ಸ್. ನೀವು ಹೇಗೆ ಸಮಾಧಾನ ಮಾಡ್ತೀರಾ?

ಅದೇ ಮೇಡಂ, ಮೊನ್ನೆ ಹೀಗೇ ಸಮಾಧಾನ ಮಾಡಲು ಹೋದೆ. ಅವಳು ರಪ್ಪೆಂದು ಕೆನ್ನೆಗೆ ಬಾರಿಸಿದಳು. ಇನ್ನೂ ಚುರು ಚುರು ಅಂತಾ ಇದೆ. ಇಂತಹ ಹೆಂಡ್ತೀನ ಹೇಗೆ ಸಮಾಧಾನ ಮಾಡೋದು ಮೇಡಂ?

ಓ ಸಾರಿ. ನೀವು ಆಕೇಗೆ ಕೋಪ ಬರೋ ಹಾಗೆ ಮಾಡಲೇಬಾರದು. ಇಲ್ಲದೇ ಹೋದರೆ ಇನ್ನೊಂದು ಕೆನ್ನೆ ಸಹ ಚುರುಚುರು ಅನ್ನುತ್ತೆ... ಹೇಳಿ ಸಾರ್. ಯಾರು ಸಾರ್ ಮಾತಾಡ್ತಿರೋದು?

ನಾನು ದೀಕ್ಷಿತ್.

ಏನು ಮಾಡ್ತೀರಿ ದೀಕ್ಷಿತ್ ನೀವು?

ನಾನು ಅರ್ಚಕ ತಾಯಿ.

ಹೌದೆ? ಹೇಳಿ ದೀಕ್ಷಿತ್ ಅವರೆ. ನೀವು ಹೇಗೆ ಸಮಾಧಾನ ಮಾಡ್ತೀರಾ?

ಸಮಾಧಾನ ಮಾಡೋದಿಕ್ಕೆ ಹೋದರೆ ನನ್ನ ಮುಖಕ್ಕೇ ಮಂಗಳಾರತಿ ಎತ್ತುತ್ತಾಳೆ. ಸಹಸ್ರನಾಮ ಹೇಳ್ತಾಳೆ. ಏನು ಪ್ರಸಾದ ಕೊಟ್ಟರೂ ತೊಗೊಳಲ್ಲ ಅವಳು. ಶಾಂತಿ ಹೋಮ ಮಾಡೋಣ ಅಂತ ಇದ್ದೀನಿ...

ಪವರ್ ಕಟ್ ಆಗಿ ರೇಡಿಯೋ 42.0 ಎಫ್.ಎಂ. ಬ್ಯಾಡಗಿ ಮಿರ್ಚಿ ಸಖತ್ ಖಾರ ಮಗಳೆ ಬಂದ್ ಆಯಿತು.

✧✧✧

ಜರೂರು ಕಾಗದ

✧ ನೀರಗುಂದ ಕೇಶವಮೂರ್ತಿರಾವ್

ಇದ್ದಕ್ಕಿದ್ದಂಗೆ ಸಾವ್ಕಾರು ಕುಬೇರಪ್ಪನವರಿಗೆ ಬಾಗೂರಿನಿಂದ ಬುರುಡೆ ಬಾಜೀರಾಯರ ಜರೂರು ಪತ್ರ ತಲುಪಿದಾಗ ಅಟ್ಟಕ್ಕಾರಿ ನೆಲಕ್ಕೆ ಬಿದ್ದಂಗಾತು.

''ಕಾಗದ ಬಂದಿದೆ ನಮ್ಮ ಕಮಲನಾಭನದು ಈ ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೊ'' ಎಂದು ದಾಸರು ಹೇಳಿದಂತಹ ಪತ್ರವಿದಲ್ಲ. ಬಾ.ಬು.ಬಾ. ರವರ ಪತ್ರಗಳೇನೂ ಸಾವ್ಕಾರರಿಗೆ ಹೊಸ್ದಲ್ಲ. ಆದರೆ ಈಗ ಬಂದಿರುವ 'ಜರೂರು' ಕಾಗದ ಅವರಿಗೆ 'ಮರ್‍ವಾದೆ' ವಿಷಯ ಆಗಿತ್ತು.

ಸಾವ್ಕಾರ ಕುಬೇರಪ್ಪನವರ ಕುಲಪುತ್ರನಿಗೆ ಬಾಜೀರಾಯರ ಸುಪುತ್ರಿಯೊಂದಿಗೆ ಮದುವೆಯಾಗಿ ಆರು ತಿಂಗಳು ಕಳೆದಿದ್ರೂ, ಮುಂದಿನ ಶಾಸ್ತ್ರ ಆಗಿರಲಿಲ್ಲ. ಸಾವ್ಕಾರ್‍ರು ಮಗನೊಂದಿಗೆ ಕನ್ಯಾ ವೀಕ್ಷಣೆಗೆ ಬಾಗೂರಿಗೆ ಬಂದಾಗ ಬುರುಡೆ ಬಾಜೀರಾಯರು ಸಂಜೆ ಕೆರೆ ಏರಿಯ ಮೇಲೆ ಸುತ್ತಾಡಲು ಕರೆದೊಯ್ದಿದ್ದರು. ಆ ವೇಳೆಯಲ್ಲಿ ಕೆರೆ ಹಿಂದಿನ ಗದ್ದೆ ಬಯಲನ್ನು ತೋರಿಸುತ್ತ ಕಣ್ಣಿಗೆ ಕಾಣುವಷ್ಟು ದೂರದ ಜಮೀನು ತಮ್ಮದೆಂದು ಬುರುಡೆ ಬಿಟ್ಟಿದ್ದರು. ಇದನ್ನು ಕಂಡ ಭಾವಿ ಬೀಗರು ತಮ್ಮ ಮನಸ್ಸಿನಲ್ಲಿಯೇ ವರದಕ್ಷಿಣೆಯ ಲೆಕ್ಕಾಚಾರ ಹಾಕಿಕೊಂಡಿದ್ದರು. ಮನೆಗೆ ಬಂದ ನಂತರ ಮದುವೆಯ ವ್ಯಾಪಾರ ಕುದುರಿ ಮುಂದೊಂದು ದಿನ ಮದುವೆಯೂ ನಡೆಯಿತು. ನಂತರ ಎಲ್ಲಾ ಸಿನಿಮಾ (ಜೀವನ)ದಲ್ಲೂ ನಡೆಯುವಂತೆ ವರದಕ್ಷಿಣೆ ಬಾಬ್ತು ಬಾಕಿ ಉಳಿಯಿತು.

'ಕೊಡೋಣ' ಎನ್ನುತ್ತಲೇ ಬಾಜೀರಾಯರು ಬುರುಡೆ ಹೊಡೆಯುತ್ತ ಕನ್ಯಾಸೆರೆಯಿಂದ ಮುಕ್ತರಾಗಿದ್ದರು. ಮದುವೆಯಾದ ಮಗಳನ್ನು ಮನೆಯಲ್ಲೇ ಇರಿಸಿಕೊಂಡ ಬುರುಡೆ ಬಾಜೀರಾಯರನ್ನು ಬಾಗೂರಿನ ಜನತೆ ಬಾಯಿಗೆ ಬಂದಂತೆ ಆಡತೊಡಗಿದರೂ ರಾಯರು ಮಾತ್ರ ಬುರುಡೆ ಸವರುತ್ತ, ಸಾವ್ಕಾರ ಕುಬೇರಪ್ಪನವರಿಗೆ ಕಾಗದ ಬರೆಯುತ್ತಲೇ ಇದ್ದರು. ಆದರೆ ಸಾವ್ಕಾರರಿಗೆ ಮದುವೆಯ ನಂತರ ನಿಜವಾದ ಸಂಗತಿ ತಿಳಿದು ಬೆಂಕಿ ನವಾಬನಂತೆ ಎಗರಾಡುತ್ತಿದ್ದರು. ಅಂದು ನಾವು ಬಾಗೂರಿನ ಕೆರೆಯ ಹಿಂದಿನ ತರಿ ಜಮೀನು ರಾಯರದ್ದಲ್ಲವೆಂದೂ, ಬಾಜೀರಾಯರ ಬಂಡವಾಳ 'ಬುರುಡೆ' ಮಾ(ತು)ತ್ರ ಎಂದು ಗೊತ್ತಾದಾಗ ಏನೂ ಮಾಡುವಂತಿರಲಿಲ್ಲ.

ಬಾ.ಬು.ಬಾ.ರ ಪತ್ರ ಬಂದಾಗಲೆಲ್ಲ ''ಮೊದಲು ರೊಕ್ಕ ಮಡಗು ಆಮ್ಯಾಗೆ ಮುಂದಿನ ಶಾಸ್ತ್ರ'' ಎಂದು ಸಾವಕಾರ್‍ರು ಪಟ್ಟು ಬಿಡದೆ ಪತ್ರ ಬರೆಯುತ್ತಿದ್ದರು.

ಹೀಗೇ ಕಾಲ ಉರುಳುತ್ತಿತ್ತು. ಬುರುಡೆ ಬಾಜೀರಾಯರ ವಿಷಯ ಬಾಗೂರಿನವರಿಗೆಲ್ಲಾ ತಿಳಿದದ್ದೆ. ಬಂದವರೆಲ್ಲ ''ಮಗಳು ಇನ್ನೂ ಗಂಡನ ಮನೆಗೆ ಹೋಗಿಲ್ಲವೇನ್ರೀ?'' ಎಂದು ಕೇಳುವ ಪ್ರಶ್ನೆಗೆ ಬುರುಡೆ ಸವರುವುದುದೊಂದೇ ಉತ್ತರವಾಗಿತ್ತು. ಒಂದು ದಿವಸ ಇದ್ದಕ್ಕಿದ್ದಂತೆ ತಾವೇ ಮುಹೂರ್ತ ನಿಶ್ಚಯಿಸಿ ಸಾವ್ಕಾರ್ ಕುಬೇರಪ್ಪನವರಿಗೆ 'ಜರೂರು ಪತ್ರ' ರವಾನಿಸಿದರು.

ಈ ಜರೂರು ಪತ್ರವೇ ಕುಬೇರಪ್ಪನವರಿಗೆ ಬಾಗೂರು ಬುರುಡೆ ಬಾಜಿರಾಯರ ಮುಂದೆ ತಮ್ಮ ಸಾವ್ಕಾರ್ಕೆ ಲೆಕ್ಕಕ್ಕಿಲ್ಲವೆಂದು ಗೊತ್ತಾಯ್ತು. ಅದರ ಗುಂಗಿನಲ್ಲೇ ಹಲ್ಲು ಕಡಿಯುತ್ತ ಮಗನೊಂದಿಗೆ ಮುಂದಿನ ಏರ್ಪಾಡಿಗೆ ಸಿದ್ಧವಾಗುತ್ತಿದ್ದರು.

''ಸಾವ್ಕಾರ್‍ರ ಕುಬೇರಪ್ಪನವರಿಗೆ ಬಾಗೂರು ಬುರುಡೆ ಬಾಜೀರಾಯನ ಪ್ರಣಾಮಗಳು... ಈ ಜರೂರು ಪತ್ರಕ್ಕೆ ಕಾರಣ ಈಗಾಗಲೇ ಹಲವು ಬಾರಿ ತಮಗೆ ಪತ್ರ ಬರೆದಾಗ್ಯೂ ಸಹ ತಮ್ಮ ಪುತ್ರ ನಮ್ಮ ಪುತ್ರಿಯರ ಮುಂದಿನ ಕಾರ್ಯದ ಬಗ್ಗೆ ತಾವು ಇಲ್ಲದ ತಕರಾರು ಮಾಡುತ್ತಲೇ ಬಂದಿರುವಿರಾದ ಕಾರಣ, ಇನ್ನು ನಾನು ಸುಮ್ಮನಿರಲಿಕ್ಕೆ ಸಾಧ್ಯವಿಲ್ಲ. ಇದೇ ದಿನಾಂಕ... ಶುಭ ಮುಹೂರ್ತದಲ್ಲಿ ಮುಂದಿನ ಶಾಸ್ತ್ರದ ಕಾರ್ಯಕ್ರಮ ನಡೆಯಲಿದೆ. ತಾವು ತಮ್ಮ ಪುತ್ರರೊಂದಿಗೆ ಆಗಮಿಸಿ ಶುಭ ಮುಹೂರ್ತ ನೆರವೇರಿಸಿಕೊಡುವುದು. ಅಕಸ್ಮಾತ್ ತಾವು ಬರದೇ ತಮ್ಮ ಹಟವನ್ನೇ ಮೆರೆಸಿದ್ದೇ ಆದಲ್ಲಿ ''ಯಾವ ಕಾರಣಕ್ಕೂ ನಿಮ್ಮ ಮತ್ತು ನಿಮ್ಮ ಪುತ್ರನ ಗೈರುಹಾಜರಿಯಲ್ಲೇ ಮುಂದಿನ ಶಾಸ್ತ್ರವನ್ನು ನಡೆಸಿಯೇ ತೀರುತ್ತೇನೆಂದು'' ತಮ್ಮಲ್ಲಿ ಅರಿಕೆ ಮಾಡಕೊಳ್ಳುತ್ತೇನೆ. (ತಾವು ತಪ್ಪದೇ ಮಗನೊಂದಿಗೆ ಬಂದೇ ಬರುತ್ತೀರೆಂದು ಆಶಿಸುತ್ತೇನೆ!) ಪತ್ರ ದೀರ್ಘವಾಯ್ತು.

ವಂದನೆಗಳೊಂದಿಗೆ,

ಬಾಗೂರು ಬುರುಡೆ ಬಾಜೀರಾಯ

✧✧✧

ಹಾವಳಿ

✧ ನುಗ್ಗೇಹಳ್ಳಿ ಪಂಕಜ

ಏನನ್ನೋ ಅಂಚೆಗೆ ಹಾಕಲು ಪೋಸ್ಟ್ ಆಫೀಸಿಗೆ ಹೋದ ನಾನು ಆ ಅಜ್ಜಿಯ ಆರ್ಭಟವನ್ನು ಕೇಳಿ ಅಲ್ಲೇ ಹಾಯಾಗಿ ನಿಂತುಬಿಟ್ಟೆ.

ವಿಷಯ ಇಷ್ಟೇ.

ಮಗಳಿಗೆ ಅರ್ಜೆಂಟಾಗಿ ಮನಿಯಾರ್ಡರ್ ಮಾಡೋಕ್ಕೆ ಬಂದಳಂತೆ. ಆದರೆ ಒಳಹೋಗಲು ಆಗದಂತೆ ಒಂದು ಮಜಭೂತಾದ ನಾಯಿ ಅಡ್ಡಲಾಗಿ ಮಲಗಿತ್ತಂತೆ, ಪ್ರವೇಶ ದ್ವಾರದಲ್ಲೇ! ಆಕೆಗೋ ಈ ನಾಯಿ-ಬೆಕ್ಕು ಅಂದ್ರೆ ಅಲರ್ಜಿ! ಆದ್ರೂ ಹೇಗೋ ದಾಟಿಕೊಂಡು ಬಂದುಬಿಟ್ಟಳು. ಕೆಲಸ ಮುಗಿದದ್ದೇ, ಭಯವಾಯ್ತು, ಮತ್ತದನ್ನ ದಾಟಿಕೊಂಡು ಹೋಗೋದಕ್ಕೆ...

''ಸಾರ್, ಸ್ವಲ್ಪ ಅಲ್ಲಿ ಮಲಗಿರೋ ನಾಯಿಯನ್ನ ಓಡಿಸ್ತೀರಾ?'' ಕೌಂಟರ್‌ನಲ್ಲಿ ಕುಳಿತಿದ್ದವನಿಗೆ ಹೇಳಿದಳು.

ಆತ ಅಲ್ಲಾಡಲಿಲ್ಲ!

ಮತ್ತೊಮ್ಮೆ ಹೇಳಿದಳು.

ಒಳ್ಳೇ ಕಿವುಡನಂತೆ ಕುಳಿತೇ ಇದ್ದ, ಏನೋ ಲೆಕ್ಕಾಚಾರ ಮಾಡ್ತಾ...

ಅಜ್ಜಿಗೆ ರೇಗ್ತು ಬೇಡವೇ?

ಇನ್ನೊಂದು ಕೌಂಟರಿಗೆ ಹೋಗಿ ಹೇಳಿದಳು ಜೋರಿನಿಂದ ''ಆ ನಾಯನ್ನ ಇಲ್ಲಿಂದ ಓಡಿಸಿ'' ಎಂದು.

ಅಲ್ಲಿಯೂ ಅದೇ ರೀತಿಯ ರೆಸ್ಪಾನ್ಸ್! ಏನಾಗಿದೆ ಇವರಿಗೆಲ್ಲಾ? ಲೌಡ್ ಸ್ಪೀಕರ್ ಗಂಟಲಲ್ಲಿ ಒದರಿದಳು, ಒಳಗಿರುವವರಿಗೆಲ್ರಿಗೂ ''ಮೊದಲು ಆ ದರಿದ್ರ ನಾಯನ್ನ ಓಡಿಸಿ'' ಎಂದು.

ಅರೆ! ಕೇಳಿಸಿಯೂ ಕೇಳಿಸ್ದಂತೆ ಓಡಾಡ್ತಿದಾರಲ್ಲಾ, ಏನ್ಸಮಾಚಾರ? ಯಾಕೀ ಧಿಮಾಕು. ಆಗಲಿ, ಬುದ್ಧಿ ಕಲಿಸ್ತೇನೆ ಎಂದುಕೊಂಡವಳೇ 'ನೋಡೀ, ಈಗಲೇ ಪತ್ರಿಕೆಯವರಿಗೆ ಬರೆದು ಹಾಕ್ತೀನಿ ಈ ಬಗ್ಗೆ. 'ನಾನು ಯಾರು ಅಂತ ತಿಳ್ಕೊಂಡಿದೀರಿ.

ನಾನೊಬ್ಬ ದೊಡ್ಡ ಸಾಹಿತಿ' ಊರಿಗೆಲ್ಲಾ ಕೇಳಿಸುವಂತೆ ಆರ್ಭಟಿಸಿದಳು. ಇಂದೆಲ್ಲಾ ಒಂದೆರಡು ಅಡಿಗೆ ಸಾಹಿತ್ಯವನ್ನು ಗೀಚಿದ್ದ ಮಹಾರಾಯಿತಿ. (ಅದನ್ನ ಓದಿ ತಯಾರಿಸಿದ್ದ ತಿನಿಸುಗಳನ್ನು ತಿಂದು, ಕಾಯಿಲೆಯಿಂದ ಮಲಗಿದ್ದರಂತೆ ಜನ!)

'ಸಾಹಿತಿ' ಎಂದ್ರೆ, ಬೇಡದ ಅತಿಥಿಯಂತೆ; ಹೆಚ್ಚುಕಮ್ಮಿ ಏನಾದ್ರೂ ಆಯಿತೋ, ಚೆನ್ನಾಗಿಯೇ ತಿಥಿ ಮಾಡಹೋಗೋ ಜಾತಿ! ಮುಖ ಮುಖ ನೋಡಿಕೊಂಡ್ರು, ಪೋಸ್ಟ್ ಆಫೀಸಿನ ಸಿಬ್ಬಂದಿಗಳು. ಮೊದಲೇ ತಿಳಿಯ ಲಿಲ್ವೆ...

ಆದ್ರೆ, ಆ ನಾಯಿ, ಎದುರಿಗೆ ಇದ್ದ ಮಾರ್ಕೆಟ್ಟಿನವರ ದತ್ತು ಪುತ್ರ. ಅದನ್ನ ಓಡಿಸಿದ್ರೆ ಆಯ್ತು ತಮ್ಮ ಪ್ರಾಣಕ್ಕೇ ಸಂಚಕಾರ!

''ಅಜ್ಜಿ, ದೇವರಾಣೆಗೂ ಆ ನಾಯಿ ನಮ್ಮದಲ್ಲ, ಆ ಮಾರ್ಕೆಟ್ಟಿನವರದು! ಅವರಿಗೆ ಹೇಳಿ, ಬಂದದ್ದನ್ನ ಕರ್ಕೊಂಡು ಹೋಗೋ ಹಾಗೆ! ಮುಂದೆಂದೂ ಇಲ್ಲಿ ಮಲಗಿಸದಂತೆ.'' ಒಬ್ಬಾತ ಉಸುರಿದ, ಟೇಬಲ್ ಕೆಳಗಿನಿಂದ ತಲೆಯೆತ್ತದೆ... ''ಆರೆ, ನಾನ್ಯಾಕ್ರೀ ಹೇಳ್ಬೇಕು? ಕೇಳ್ತಾರಷ್ಟೆ ನಮ್ಮ ನಾಯಿ ನಿನ್ನ ಮನೆ ಬಾಗಿಲಲ್ಲೇನೂ ಮಲಗಿಲ್ವಲ್ಲಾ. ನಮ್ಮ ಪೋಸ್ಟ್ ಆಫೀಸ್ ಬಾಗಿಲ ಹತ್ರ ತಾನೆ? ಅವರೇ ಸುಮ್ಮನಿರೋವಾಗ, ನೀನ್ಯಾಕೆ ಬಾಯಿ ಮಾಡ್ಬೇಕು? ಬೇಕಾದ್ರೆ ಅವರೇ ಬಂದು ಹೇಳಲಿ, ನಮಗೆ'' ಅಂತ. ಆಗ ನಂಗೆ ಅವಮಾನ ಆಗೊಲ್ವೆ? ''ಈಗೇನು ನೀವು ಓಡಿಸ್ತೀರೋ, ಇಲ್ಲ ನಾನು ಅನ್ನ, ನೀರು ಬಿಟ್ಟು ಕೂರಲೋ, ನಿಮ್ಮ ಪೋಸ್ಟಾಫೀಸಿನ ಮುಂದೆ'' ಬೆದರಿಸ್ತು ಅಜ್ಜಿ.

ಗಾಬರಿ ಆಯ್ತು! ಎಲ್ಲರಿಗೂ ದಿನಬೆಳಗಾದ್ರೆ ಸರಿ, ಹತ್ತಾರು ಜನ ಬಂದು ಹೋಗೋ ಜಾಗ... ಈ ಮುದುಕಿ ಇಲ್ಲೇ ಕೂತ್ರೆ, ಸತ್ರೆ, ತಮ್ಮ ಗತಿ?

ತಕ್ಷಣವೇ ಒಬ್ಬ ಆಳನ್ನ ಕಳಿಸಿದ್ರು, ಆ ನಾಯನ್ನ ಓಡಿಸೋದಿಕ್ಕೆ; ಬಂದು ನೋಡ್ತಾನೆ, ಅದು ಪರಾರಿ! ಅಜ್ಜಿಯ ಆರ್ಭಟಕ್ಕೆ ಹೆದರಿಯೋ ಏನೋ, ಅದು ಜಾಗ ಖಾಲಿ ಮಾಡಿತ್ತು! ಯಾವುದೋ ಮಾಯೆಯಲ್ಲಿ! ಇದರಿಂದ ಪೋಸ್ಟ್ ಆಫೀಸ್ ಸ್ಟಾಫ್ ಎಲ್ರೂ ನಿರಾಳವಾಗಿ ಉಸಿರಾಡಿದ್ರು, ನಿಜ, ಆದ್ರೆ ಅಜ್ಜಿಯ ಸಿಟ್ಟು ಮಾತ್ರ ಆರಲಿಲ್ಲ ಬದಲು ಗಗನಕ್ಕೇರಿತು!

ಮಲ್ಲೇಶ್ವರದ ಮೈದಾನದಲ್ಲಿ ಪೊಲೀಸ್ ಸ್ಟೇಷನ್ ಎದುರಿಗೆ ಸರಿಯಾಗಿ, ಹಾದೀಲಿ, ಬೀದೀಲಿ, ಸಿಕ್ಕಿದವ್ರನ್ನೆಲ್ಲಾ ಕರೆದು, ಮೆರವಣಿಗೆ ಮಾಡ್ಕೊಂಡು ಬಂದು ಕೂರಿಸ್ತು! ಲೆಕ್ಚರ್ ಕೊಟ್ರು, ಲೌಡ್ ಸ್ಪೀಕರ್, ಬಾವುಟ, ರಾಷ್ಟ್ರಗೀತೆ, ನಾಡಗೀತೆ ಸಮೇತ.

''ಇಂದು ನಮ್ಮ ಪೋಸ್ಟ್ ಆಫೀಸಿಗೆ ಬಂದ ನಾಯಿ ಮಹಾರಾಣಿ ನಾಳೇನೂ ಬರದೇ ಇರತ್ಯೆ? ದಿನಾ ನಾನು ಹೋಗಿ ಗಲಾಟೆ ಮಾಡೋಕ್ಕೆ ಆಗತ್ಯೆ? ಹಾಗೇಂತ, ಪೋಸ್ಟ್ ಆಫೀಸಿಗೆ ಹೋಗದೆ ಇರೋಕ್ಕೆ ಆಗತ್ಯೆ'' ಶಯನೋತ್ಸವದಲ್ಲಿ ಮೈ ಮರೆತಿರುವ ಆ ಮ್ಯಾಡಮ್‌ಅನ್ನು ದಾಟೋವಾಗ, ಜನ ಅದ್ರ ಕಾಲುಗೀಲು ತುಳಿದು, ಅದು ಕೆರಳಿ, ಕಚ್ಚಿಗಿಚ್ಚಿಬಿಟ್ರೆ! ಹೇಳಿಕೇಳಿ, ಮಾರ್ಕೆಟ್ ನಾಯಿ! ಸ್ನಾನ ಇಲ್ಲ, ಮೆಡಿಕಲ್ ಕೇರ್ ಮೊದಲೇ

ಇಲ್ಲ! ಕಜ್ಜಿಗಿಜ್ಜಿ ಬಂದಿದ್ರೇ? ನಿಮಗೂ ಬಂದ್ರೆ? ನಿಮ್ಮ ಮಕ್ಕಳಿಗೂ ಬಂದ್ರೆ? ಮೊಮ್ಮಕ್ಕಳಿಗೂ ಬಂದ್ರೆ? ಅದಿರ್ಲಿ ರೇಬೀಸ್ ಕಾಯಲೆ ಬಂದುಬಿಟ್ರೆ!'' ಎಂದೆಲ್ಲಾ...

'ರೇಬೀಸ್' ಎಂದ ತಕ್ಷಣ ಎಲ್ರಿಗೂ ಭಯ ಹತ್ತಿಕೊಂಡು ಬಿಡ್ತು. ಅವರೆಲ್ಲ ಬೀದಿಗಳ ಉದ್ದಕ್ಕೂ ಊರಲ್ಲಿರೋ ನಾಯಿಗಳೆಲ್ಲಾ ಬಂದು ಸೇರಿದ್ದವು, 'ರೆಫ್ಯೂಜಿ ಕ್ಯಾಂಪ್' ಮಾಡ್ಕೊಂಡು! ತಮ್ಮ ಆ ವಸತಿಯ ಹತ್ರ ಯಾರೊಬ್ರೂ ಬಾರದಂತೆ ಅಡ್ಡಗಟ್ಟುತ್ತಿದ್ದವು! ಹೊಟ್ಟೆಗಿಲ್ಲದ ಅವನ್ನು ಗುಡ್ ಟರ್ಮ್ಸ್‌ನಲ್ಲಿ ಇಟ್ಟುಕೊಳ್ಳಲು, 'ವಾರಾನ್ನ' ಏರ್ಪಾಡು ಮಾಡಿದ್ರು, ಆಯಾಯ ಬೀದಿಯವರು! ಇವತ್ತು ಇಲ್ಲಿ ಬ್ರೇಕ್‌ಫಾಸ್ಟ್, ಅಲ್ಲಿ ಲಂಚ್, ಬ್ರಂಚ್, ಡಿನ್ನರ್? ಎಂತೆಲ್ಲಾ! ಸಿಂಧಿಗಳು ಯಾರೋ ಅಭ್ಯಾಸ ಮಾಡಿ, 'ಚಪಾತಿಯೇ ಬೇಕು' ಅಂತ ಹಾರಾಡಿದವು ಕೆಲವು ನಾಯಿಗಳು! ಮಸಾಲೆ ದೋಸೆ, ಪೂರಿ ಪಲ್ಯ' ಇವನ್ನು ಅಭ್ಯಾಸ ಮಾಡ್ಕೊಂಡ್ವು ಹಲವಾರು ನಾಯಿಗಳು! ಇನ್ನು ಯಾವತ್ತು 'ಐಸ್‌ಕ್ರೀಮ್, ಕೇಕ್-ಡ್ರಿಂಕ್ಸ್.' ಇವನ್ನು ಡಿಮ್ಯಾಂಡ್ ಮಾಡತ್ತೋ ಈ ರಾಯಲೀಸ್ಟ್ಸ್! ಆಗ ಮಾಡಿ ಕೊಡದಿದ್ರೆ, ಕೋಪಾವಿಷ್ಟವಾಗಿ ತಮ್ಮ ಮಕ್ಕಳು ಮರಿಗಳನ್ನು ಕಡಿದುಬಿಟ್ರೆ? ಈ ಕಾಲದ ಕುಟುಂಬ ಯೋಜನೆಯ ಪ್ರಕಾರ ಇರುವ ಒಂದೋ ಎರಡೋ ಕುಲದೀಪಕರು ಈ ರೇಬೀಸ್ ಕಾಯಿಲೆಗೆ ತುತ್ತಾದ್ರೆ? ಕೂಡದು! ಈಗಲೇ ಈ ನಾಯಿ ಪ್ರಜೆಗಳನ್ನೆಲ್ಲಾ ರೌಂಡ್‌ಅಪ್ ಮಾಡಿ, ಒಂದು ಗತಿ ಕಾಣಿಸ್ಬೇಕು! ಹೇಗೆ? ಹೇಗೆ? ಹೇಗೆ?

ಎಲ್ರೂ ಸೇರಿ ಪತ್ರಗಳನ್ನು ಬರೆದು ಹಾಕಿದ್ರು, 'ಕಾರ್ಪೊರೇಟರ್‌ಗೆ, ಮೇಯರ್‌ಗೆ, ಕೊನೆಗೆ ಕಮೀಷನರ್‌ಗೆ, ಗವರ್ನರ್‌ಗೆ' ಸಹಾ!

ಉತ್ತರವೇ ಇಲ್ಲ! ಕೊನೆಗೆ ಮಂತ್ರಿಗಳಿಗೂ ಬರೆದು ಹಾಕಿದ್ರು! ಕರ್ನಾಟಕ ಮಂತ್ರಿಗಳಿಗೆ, ದಿಲ್ಲಿಯ ಮಂತ್ರಿಗಳಿಗೆ! ಅವರವರದೇ ಒಳ ಘರ್ಷಣೆಗಳು. ಬೊಗಳಾಟ, ಗೋಳಾಟ ಇರೋವಾಗ, ಇವನ್ನೆಲ್ಲಾ ಕೇಳೋಕ್ಕೆ ಸುಧಾರಿಸೋಕ್ಕೆ ಟೈಮ್, ಸಹನೆ ಎಲ್ಲಿದೆ, ಆ ಪ್ರಜಾ ಹಿತೈಷಿಗಳಿಗೆ?

''ಮನೇಕಾ ಗಾಂಧಿಯವರ ಮನೆಗೆ ಈ ನಮ್ಮ ನಾಯಿ ಪರಿವಾರವನ್ನ ಕಳಿಸಿಬಿಡೋಣ. ಆಕೆಯಿಂದ ತಾನೇ ಇವು ಇಷ್ಟೆಲ್ಲಾ ಕೊಬ್ಬಿರೋದು'' ಬಂತು ಸಲಹೆ.

''ಇರಾಕ್‌ಗೆ ಕಳಿಸೋಣ, ನಮ್ಮ ಸೈನ್ಯದ ಬದಲು'' ಇನ್ನೊಬ್ರು...

ಅದಕ್ಕಿಂತ ಬಂದ ಅಮೂಲ್ಯ ಸಲಹೆ ನಿರ್ಧಾರ -

''ಈಗಲೇ ಇವನ್ನೆಲ್ಲಾ ಪಾರ್ಲಿಮೆಂಟ್ ಅಧಿವೇಶನಕ್ಕೆ ದಾನ ಮಾಡೋಣ. ಸಾಲೂ ಮಾಧವ್‌ಗೂ ಸ್ಫೂರ್ತಿಯಾಗಿರತ್ತೆ! ಜನತೆಗೂ ಮಜವಾಗಿರತ್ತೆ, ಟೀವೀಲಿ ನೋಡೋಕ್ಕೆ, ಕೇಳೋಕ್ಕೆ.''

✧✧✧

ಪ್ರೌ.ಮ.ಸ್ವ ಸಂಘ

✧ ಆಂಡಾಳ್ ಶರ್ಮಾ

"ಆರ್ಡರ್, ಆರ್ಡರ್, ದಯವಿಟ್ಟು ಎಲ್ಲರೂ ಹರಟೆ ನಿಲ್ಲಿಸಿ ಈ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗೋಕ್ಕೆ ಅವಕಾಶ ಮಾಡಿಕೊಡಬೇಕು'' ಎಂದು ಅಧ್ಯಕ್ಷೆ ಶೂರ್ಪಣಖಮ್ಮನವರು ಗರ್ಜಿಸಿದರು. ಕೇಳಬೇಕೆ? ಎಲ್ಲಾ ಗಪ್‌ಚುಪ್! ''ಸಹೋದರಿಯರೇ, ಈ ದಿನ ನಾವೆಲ್ಲಾ ಇಲ್ಲಿ ಸಭೆ ಸೇರಿರುವ ಉದ್ದೇಶ ನಿಮಗೆಲ್ಲಾ ಗೊತ್ತಿದೆ. ಆದರೂ ಇನ್ನೊಮ್ಮೆ ಹೇಳುತ್ತೇವೆ. ಅನಾದಿ ಕಾಲದಿಂದಲೂ ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಬಹಳ ಅನ್ಯಾಯ ಆಗುತ್ತಿದೆ. ಹಿರಣ್ಯಾಕ್ಷ ಭೂದೇವೀನೇ ಎತ್ಕೊಂಡು ಹೋದ, ಹಿರಣ್ಯ ಕಶಿಪು ಕಯಾದುವಿನ ತಾಯಿ ಕರುಳನ್ನು ಉರಿಸಿದ, ಗಂಡ ಮಾಡಿದ ತಪ್ಪಿಗೆ ಬಲಿಯ ಹೆಂಡತಿ ತಾನೂ ಪಾತಾಳವಾಸಿ ಆಗಬೇಕಾಯ್ತು, ಪರಶುರಾಮನಂತೂ ಹಿಂದೆ ಮುಂದೆ ನೋಡದೆ ತನ್ನ ತಾಯಿಯ ತಲೇನೇ ಕತ್ತರಿಸಿಬಿಟ್ಟ. ಇನ್ನು ತ್ರೇತಾ, ದ್ವಾಪರ ಯುಗಗಳಲ್ಲಿ ಮಹಿಳೆಯರಿಗೆ ಆದ ಅವಮಾನ, ಅನ್ಯಾಯಗಳಂತೂ ರಾಮಾಯಣ, ಮಹಾಭಾರತಗಳಲ್ಲಿ ತುಂಬಿಕೊಂಡಿವೆ. ಫಾರ್ ಎಕ್ಸಾಂಪಲ್, ನಾನೇ ಇದೀನಲ್ಲ ಇದನ್ನು ಸಾಬೀತು ಮಾಡೋಕೆ. ಆದಕ್ಕೇ ನಮ್ಮ ಈ ದಿನದ ಸಭೆಯ ಅಜೆಂಡಾ ಹೀಗಿದೆ - ನಾವುಗಳೆಲ್ಲಾ ನಮ್ಮಗಳಿಗೆ ಆದ ಅನ್ಯಾಯಗಳನ್ನು ಚುಟುಕಾಗಿ ಮೆಲುಕು ಹಾಕಿ, ಆಮೇಲೆ ಪರಿಹಾರ ಏನು ಅಂತ ಡಿಸೈಡ್ ಮಾಡುವುದು. ಒಬ್ಬೊಬ್ಬರಿಗೆ ಐದೇ ನಿಮಿಷ ಸಮಯಾವಕಾಶ. ಅಹಲ್ಯಮ್ಮನವರೇ, ಹೇಗಿದ್ರೂ 'ಆಲ್‌ಫಬೆಟಿಕಲ್ ಆರ್ಡರ್' ಪ್ರಕಾರ ನೀವೇ ಮೊದಲು, ಶುರು ಮಾಡಿ'' ಎಂದು ಮೂಗಿಲ್ಲದ ವಿಚಿತ್ರ ಧ್ವನಿಯಲ್ಲಿ ಅಪ್ಪಣೆ ಕೊಡಿಸಿದರು. ಪುರುಷನಾದರೂ ಬಾಲ ಬ್ರಹ್ಮಚಾರಿ ಎಂದು 'ಕನ್‌ಸೆಷನ್' ಪಡೆದಿದ್ದ ಬಡಪಾಯಿ ಗಣೇಶನನ್ನೇ ಕಡುಬಿನ ಆಸೆ ತೋರಿಸಿ ಮೀಟಿಂಗ್‌ನ ಮಿನಿಟ್ಸ್ ಬರ್‍ಕೊಳೋಕ್ಕೆ ಕೂರಿಸಿಬಿಟ್ಟಿದ್ದರು. ಅವನು ಬರ್‍ಕೊಂಡಿದ್ದ ವರದಿ ಹೀಗಿತ್ತು.

ಅಹಲ್ಯ: ನನ್ನ ಗಂಡನ ವೇಷ ಹಾಕ್ಕೊಂಡು ಬಂದು ಇಂದ್ರ ನನಗೆ ಮೋಸ ಮಾಡಿದ್ರೆ, ಅದ್ರಲ್ಲಿ ನನ್ನ ತಪ್ಪೇನು? ಗಂಡನ ಆಜ್ಞೆ ಮೀರಕ್ಕಾಗತ್ತಾ? ಇದೊಂದು ತಪ್ಪಿಗೆ ವರ್ಷಾನುಗಟ್ಟಲೆ ನನ್ನ ಕಲ್ಲು ಮಾಡಿ ಕೂರಿಸಿಬಿಟ್ಟ ನನ್ನ ಪತಿರಾಯ. ಅನ್ಯಾಯವಲ್ಲವಾ?

ಸೀತೆ: ಅಯ್ಯೋ ಬಿಡಿ, ನಿಮಗೆ ಅಡುಗೆ ಮಾಡೋ ಕಷ್ಟಾನೇ ತಪ್ಪಿತು! ರಾಮಾಯಣ ನಿಜವಾಗಿ ನೋಡಿದ್ರೆ ನನ್ನ ಗೋಳಿನ ಕಥೇನೆ. ಮರ್ಯಾದಾ ಪುರುಷ ಅಂತ ದೊಡ್ಡಸ್ತಿಕೆ ಮೊತ್ಕೊಂಡಿದ್ದ ರಾಮನ್ನ ಕೈ ಹಿಡಿದಿದ್ದಕ್ಕೆ ನನಗೇನು ಸಿಕ್ತು? ಹೋಗಲಿ, ಗಂಡ ಜೊತೇಲಿಲ್ಲದೆ ಹೋದ್ರೆ ಅತ್ತೆ, ನಾದಿನಿಯರ ಕಾಟ ಜಾಸ್ತಿ ಆಗತ್ತೆ, ಹಾಯಾಗಿ ಯಾವುದಾದರೂ ಋಷಿ ಆಶ್ರಮದಲ್ಲಿ ಪಿಕ್‌ನಿಕ್ ಮಾಡಿಕೊಂಡು ತಿರುಗೋಣ ಅಂತ ರಾಮನ ಜೊತೆ ಕಾಡಿಗೆ ಹೊರಟುಬಿಟ್ಟೆ. ಆದ್ರೆ ಆಗಿದ್ದೇನು? ನನ್ನಂಥಾ ಸುಕುಮಾರಿಯಾದ ರಾಜಕುಮಾರಿಗೆ ಹಾಕ್ಕೋಳೋಕ್ಕೆ ಸರಿಯಾದ ಡ್ರೆಸ್ ಇಲ್ಲ. ಗೆಡ್ಡೆ, ಗೆಣಸಿನ ಊಟ, ಮಣ್ಣಿನ ನೆಲದ ಮೇಲೆ ಮಲಗಾಟ. ಸಾಲದ್ದಕ್ಕೆ ಆ ಮೈದುನ ಲಕ್ಷ್ಮಣನ ಸಹವಾಸದಿಂದ 'ಪ್ರೈವೆಸಿ' ಕೂಡ ಇಲ್ಲ. ಕೊನೇಲಂತೂ ಆ ರಾವಣನ ಕಾಟ (ಸಾರಿ, ಅಧ್ಯಕ್ಷಮ್ಮನೋರೇ). ಇಷ್ಟೆಲ್ಲಾ ಆದಮೇಲೂ ಅಗ್ನಿಪರೀಕ್ಷೆ, ಯಾವನೋ ಹೇಳಿದ ಅಂತ ತುಂಬು ಗರ್ಭಿಣಿಯಾದ ನನ್ನ ಊರಿನಿಂದಲೇ ಓಡಿಸಿದ್ದು. ಒಂದಾ, ಎರಡಾ, ಸಾಕಪ್ಪಾ ಸಾಕು, ನನ್ನ ಕಷ್ಟ ಶತ್ರುವಿಗೂ ಬೇಡ!

ಊರ್ಮಿಳಾ: ಅಕ್ಕ, ಕಷ್ಟವೋ, ನಷ್ಟವೋ, ನೀನು ನಿನ್ನ ಗಂಡನ ಜೊತೇಲೇ ಇದ್ದುಕೊಂಡು ಲೋಕದಲ್ಲಿ ಒಳ್ಳೇ ಹೆಸರು ತೊಗೊಂಡುಬಿಟ್ಟೆ. ನನ್ನ ಗತಿ ಏನು? ಆ ನನ್ನ ಗಂಡ ಲಕ್ಷ್ಮಣನಿಗೆ ನಾನೊಬ್ಬಳು ಇದೀನಿ ಅನ್ನೋದೇ ಮರೆತುಹೋಯ್ತು. ನನ್ನನ್ನ ಒಂದು ಮಾತೂ ಕೇಳದೆ ಅಣ್ಣನ ಹಿಂದೆ ಹೊರಟೇಬಿಟ್ಟ. ಎಲ್ಲರಿಗೂ ಮುಖ ತೋರಿಸೋಕೆ ಬೇಜಾರಾಗಿ ನಾನು ಹದಿನಾಲ್ಕು ವರ್ಷಾನೂ 'ಬಾತ್‌ರೂಂ'ನಲ್ಲೇ ಕಳೆದುಬಿಟ್ಟೆ!

ಮಾಂಡವಿ: ನಿಮ್ಮಿಬ್ಬರದೂ ಒಂದು ಥರಾ ಆದ್ರೆ, ನನ್ನದು ಇನ್ನೊಂದು ಥರ. ಲಕ್ಷ್ಮಣನಿಗಿಂತ ನಾನೇನು ಕಡಿಮೆ ಅಂತ ಭರತ ಅಣ್ಣನ ಚಪ್ಪಲಿಗೆ ಪೂಜೆ ಮಾಡ್ಕೊಂಡು ಇದ್ದುಬಿಟ್ಟು. ಗಂಡ ಇದ್ದೂ ಇಲ್ಲದ ಹಾಗಾಯ್ತು ನನ್ನ ಜೀವನ.

ಕುಂತಿ: ಸರಿ, ಸರಿ, ನಿಮ್ಮದೆಲ್ಲಾ ಆಯ್ತು. ದ್ವಾಪರಯುಗ ಬಂದಾಗಲಾದ್ರೂ ಗಂಡಸರು ಸುಧಾರಿಸಿದರಾ? ಅದೆಲ್ಲಾ ಅವುಗಳ ಹಣೇಲಿ ಬರೆದಿದೆಯಾ? ನನ್ನನ್ನ ರೋಗಿಗೆ ಕೊಟ್ಟು ಮದುವೆ ಮಾಡಿದರು. ಅವನ ಬಲವಂತಕ್ಕೆ ಬೇರೆಯವರಿಂದ ಮಕ್ಕಳ್ನ ಹುಟ್ಟಿಸಿಕೊಂಡೆ, ಅಸಹ್ಯ. ಹಿರೀಮಗನಂತೂ ಲೋಕದ ದೃಷ್ಟೀಲಿ ನನ್ನ ಮಗ ಆಗಲೇ ಇಲ್ಲ. ಮಕ್ಕಳು ಚಿತ್ರಹಿಂಸೆ ಪಡೋದನ್ನ ನೋಡಬೇಕಾಯಿತು. ಎಲ್ಲಾ ಸರಿಹೋಗೋ ಹೊತ್ತಿಗೆ ಮುದುಕಿ ಆಗಿಬಿಟ್ಟಿದ್ದೆ! ಹೊಟ್ಟೆಕಿಚ್ಚಿಗೆ ಆ ಗಾಂಧಾರಿ ಕೊನೇಗೆ ನನ್ನೂ ಕಾಡಿಗೆ ಎಳ್ಕೊಂಡೇ ಹೋಗಿಬಿಟ್ಟಳು. ಊರಿನಲ್ಲೇ ಇದ್ದರೆ ''ಈ ಮುದುಕಿಗೆ ಇನ್ನೂ ಜೀವದ ಆಸೆ'' ಅಂತ ಜನ ಆಡಿಕೊಳ್ತಾರೆ ಅಂತ ನಾನೂ ಕಾಡಿಗೆ ಹೋಗಿ ಬೆಂಕೀಲಿ ಉರಿದು ಬೂದಿಯಾಗಿಬಿಟ್ಟೆ. ಅಲ್ಲಿಗೆ ಮುಗೀತು ನನ್ನ ಕಥೆ.

ಮಾದ್ರಿ: ನಾನೇನು ಕಡಿಮೆ ಅಕ್ಕಾ? ನನ್ನ ಇಷ್ಟಕ್ಕೆ ವಿರೋಧವಾಗಿ ನನ್ನ ಬಲಾತ್ಕಾರ ಮಾಡಿದ ಪಾಂಡು ಋಷಿಶಾಪದಿಂದ ಸತ್ತೇಹೋದ. ''ಗಂಡನ್ನ ತಿಂದುಕೊಂಡವಳು'' ಅಂತ ಲೋಕದಲ್ಲಿ ಹೆಸರು ಬಂದುಬಿಡುತ್ತೆ ಅಂತ ಹೆದರಿ ನಾನು ಸಹಗಮನ ಮಾಡಿ ಭಯಂಕರವಾಗಿ ಸಾಯಬೇಕಾಯ್ತು.

ಅಂಬೆ: ನೀವಿಬ್ರೂ ನನ್ನ ಮರೆತೇ ಬಿಟ್ರಾ? ಗಂಡ, ಮಕ್ಕಳು, ಸಂಸಾರ ಅಂತ ಕನಸು ಕಾಣೋ ವಯಸ್ಸಿನಲ್ಲೇ ನಾನು ಸುಟ್ಟು ಬೂದಿಯಾಗಬೇಕಾಯ್ತು. ಆ ಸಾಳ್ವ, ಭೀಷ್ಮ, ಇಬ್ಬರೂ ಕೈಗೆ ಸಿಕ್ಕರೆ ಚೆಚ್ಚಿ ಹಾಕೋ ಅಷ್ಟು ಕೋಪ ನನಗಿನ್ನೂ ಇದೆ. ಎಲ್ಲಾ ಆ ಕಪಟಿ ಕೃಷ್ಣನ ಮಸಲತ್ತು.

ರಾಧೆ: ಅಯ್ಯೋ, ಅದನ್ನೇನು ಹೇಳ್ತೀಯ ಅಂಬಕ್ಕ. 'ರಾಧಾಕೃಷ್ಣ'ರ ಅಮರಪ್ರೇಮ ಅಂತ ಎಲ್ಲರೂ ಪೇಜುಗಟ್ಟಲೆ ಪದ್ಯ, ಹಾಡು, ಕಥೆ, ಕಾದಂಬರಿ ಬರೆದಿದ್ದೇ ಬರೆದಿದ್ದು. ಗೋಕುಲ ಬಿಟ್ಟು ಹದಿನಾರು ಸಾವಿರ ಹೆಂಡತೀರ್ನ ಕಟ್ಕೊಂಡ ಮೇಲೆ ಆ ಕೃಷ್ಣನಿಗೆ ಈ ಬಡಪಾಯಿ ರಾಧೆಯ ಜ್ಞಾಪಕಾನಾದ್ರೂ ಹ್ಯಾಗೆ ಬರಬೇಕು? ಪಾಪ, ರುಕ್ಮಿಣಿ, ಸತ್ಯಭಾಮ, ಜಾಂಬವತಿ ಇವರ್ಗ್ಳೂ ಕೂಡ ಅವನ ಜೊತೇಲಿ ಎಷ್ಟು ಟೈಂ ಸಿಗ್ತಾ ಇತ್ತೋ ಏನೋ?

ದ್ರೌಪದಿ: ಅಹಾ, ಏನು ಹೇಳ್ತೀಯಮ್ಮಾ ನೀನು? ಆ ಮಾಯಾವಿ ಕೃಷ್ಣನೇನೋ ಎಲ್ಲಾರ ಜೊತೆಲೂ ಮಜಾ ಮಾಡ್ತಾ ಹಾಯಾಗಿ ಇದ್ದ. ಆದ್ರೆ, ಐದು ಜನ ಗಂಡಂದಿರನ್ನ ಕಟ್ಕೊಂಡ ನನ್ನ ಪಾಡೇನು ಅಂತ ಯಾರಾದ್ರೂ ಯೋಚನೆ ಮಾಡಿದೀರಾ? ಅಬ್ಬಾ, ಒಬ್ಬೊಬ್ಬರು. ಒಂದೊಂದು ಥರಾ ಸ್ವಭಾವದವರು. ಒಬ್ಬನ ಇಷ್ಟ, ನಿಷ್ಟಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಹೊಂದಿಕೊಳ್ಳೋ ಹೊತ್ತಿಗೆ ಇನ್ನೊಬ್ಬನ ಸರತಿ ಬಂದುಬಿಡ್ತಾ ಇತ್ತು! ಹೇಗೆ ಏಗಿದೆನೋ ನನಗೇ ಗೊತ್ತು. ಸಾಲದೆ, ಎಲ್ಲಿ ಹೋದರೂ ಗಂಡಸರ ಕಾಟ. ಒಂದು ಕಡೆ ಕೀಚಕ, ಇನ್ನೊಂದು ಕಡೆ ದುರ್ಯೋಧನ, ದುಶ್ಯಾಸನ. ಇಷ್ಟೆಲ್ಲಾ ಕಷ್ಟ ಅನುಭವಿಸಿದರೂ ಮಹಾಭಾರತದ ಯುದ್ಧಕ್ಕೆ ನನ್ನ ಒಂದು ನಗೂನೇ ಕಾರಣ ಅಂತ ಪಟ್ಟ ಕಟ್ಟಿಯೇ ಬಿಟ್ಟರು!

ದ್ರೌಪದಿ ಮಾತು ಮುಗಿಸುತ್ತಿರುವಾಗಲೇ, ''ಮೇಡಂ, ಮೇಡಂ'' ಅಂತ ಮೂವರು ಮಹಿಳೆಯರು ಏದುಸಿರು ಬಿಡುತ್ತಾ ಓಡೋಡಿ ಬಂದರು. ''ಸಾರಿ ಮೇಡಂ, ಯಾವ ಯಾವ ದುಕೂಲಗಳನ್ನು ಸುತ್ಕೊಂಡು ಬರೋದು ಅಂತ ಡಿಸೈಡ್ ಮಾಡೋ ಅಷ್ಟರಲ್ಲಿ ಲೇಟಾಗಿ ಹೋಯ್ತು. ದಯವಿಟ್ಟು ನಮಗೂ ಮಾತಾಡೋಕೆ ಒಂದು ಛಾನ್ಸ್ ಕೊಡಿ. ನಾವೂ ಬೇಗಲೇ ಮುಗಿಸ್ತೀವಿ'' ಅಂತ ಗೋಗರೆದರು. ''ಆಯ್ತು, ಆಯ್ತು, ಆದ್ರೆ ಎಲ್ಲರಿಗೂ ಕೊಟ್ಟ ಹಾಗೆ ನಿಮ್ಮಗಳಿಗೂ ತಲಾ ಐದೇ ನಿಮಿಷ. ಈಗಾಗ್ಲೇ ಎಲ್ಲರ ಗೋಳಿನ ಕಥೆಗಳ್ನೂ ಕೇಳಿ ಕಣ್ಣೀರು ಒರೆಸ್ಕೊಳ್ಳೋಕೆ ಎಲ್ಲಾರಿಗೂ ಒಂದೊಂದು ಟವೆಲ್‌ನೇ ಕೊಡಬೇಕಾಗಿದೆ'' ಅಂತ ಗುಡುಗಿದರು ಅಧ್ಯಕ್ಷಿಣಿಯಮ್ಮ.

ಶಕುಂತಲ: ಹಾಗೆ ನೋಡಿದ್ರೆ ನನಗೇ ಮೊದಲು ಛಾನ್ಸ್ ಬರಬೇಕಾಗಿತ್ತು. ನನ್ನ ಮಗ ಭರತನಿಂದಲೇ ಅಲ್ಲವಾ ನಮ್ಮ ದೇಶಕ್ಕೆ ಭಾರತ ಅಂತ ಹೆಸರು ಬಂದಿದ್ದು. ಆದ್ರೆ ಆ ಮಗನಿಗೋಸ್ಕರ ನಾನು ಪಟ್ಟಿದ್ದ ಪಾಡು ಯಾರಿಗೂ ಬೇಡ. ಓಂದಿ ಸಿನಿಮಾ ಥರ ಕಾಡಿನಲ್ಲಿ ಮರ ಸುತ್ತಿ ಹಾಡು ಹೇಳಿ ನನ್ನ ಮರುಳು ಮಾಡಿದ ಆ ಹೇಡಿ ದುಷ್ಯಂತ ಮಾಡೊ ಕೆಲಸ ಮಾಡ್ಬಿಟ್ಟು ಆಮೇಲೆ ತುಂಬು ಗರ್ಭಿಣಿಯಾದ ನನ್ನ ''ಇವಳು ಯಾರೋ

ಗೊತ್ತೇ ಇಲ್ಲ' ಅಂದುಬಿಡೋದಾ? ಪಕ್ಕದಲ್ಲಿನ ಪಟ್ಟದ ರಾಣಿ ಎಲ್ಲಿ ಕಸಬರಿಕೆ ಸೇವೆ ಮಾಡ್ತಾಳೋ ಅಂತ ಹೆದರ್ಕೊಂಡುಬಿಟ್ಟಾ ಅನ್ನಿಸತ್ತೆ. ಅದಕ್ಕೇ ಆಮೇಲೆ ನನ್ನ ಮಗನ್ನ ಮಾತ್ರ ಅವನ ಜೊತೇಲಿ ಕಳಿಸಿಬಿಟ್ಟು ನಾನಿಲ್ಲೇ ಇದ್ದುಬಿಟ್ಟೆ. ಆ ದ್ರೋಹಿ ಜೊತೇಲಿ ಯಾರು ಬಾಳೋವರು?

ತಾರಾಮತಿ: ಹೋಗ್ಲಿ ಬಿಡೇ, ಗಂಡನ ಕಾಟ ಇಲ್ಲದೇ ನೀನೇನೋ ಹಾಯಾಗಿ ಇದ್ದುಬಿಟ್ಟೆ. ಆದ್ರೆ ನನ್ನ ಗಂಡ ಆ ಹರಿಶ್ಚಂದ್ರ ಇದ್ದಾನಲ್ಲಾ, ಆಹಾಹಾ, ''ಸತ್ಯ ಹರಿಶ್ಚಂದ್ರ'' ಅಂತ ಮೂರು ಲೋಕದಲ್ಲೂ ಹೆಸರು ತೊಗೊಂಡುಬಿಟ್ಟಲ್ಲಾ. ಹೋಗ್ಲಿ, ಅವನಿಗೆ ಶನಿಕಾಟ ಆದ್ರೆ, ಅವನೇ ನನ್ನ ಶನಿ ತರಹ ಕಾಡಿಬಿಟ್ಟ. ಅವನ ಜೊತೇಲೇ ನನ್ನನ್ನೂ, ನನ್ನ ಕಂದನನ್ನೂ ಜಗತ್ತೆಲ್ಲಾ ಎಳೆದಾಡಿ, ಕೊನೆಗೆ ನನ್ನ ಕೊಲ್ಲೋದಕ್ಕೂ ರೆಡಿ ಆಗಿಬಿಟ್ಟಿದ್ದ ಪಾಪಿ!

ತಾರಾ: ಮತಿ ಇದ್ಕೊಂಡೂ ಅಷ್ಟೊಂದು ಕಷ್ಟ ಅನುಭವಿಸಿದೆಯಲ್ಲೇ ತಾರಾಮತಿ ಅಕ್ಕ? ಇನ್ನು ಬರೀ 'ತಾರಾ' ಆಗಿರೋ ನನ್ನ ಗತಿ ಏನು? ಒಳ್ಳೇ ಪಿಂಗ್‌ಪಾಂಗ್ ಬಾಲ್ ತರಹ ವಾಲೀನೂ, ಸುಗ್ರೀವನೂ ನನ್ನ ಎಳೆದಾಡಿ ಕೊನೇಗೆ ನನ್ನ ನಿಜವಾದ ಗಂಡ ಯಾರು ಅಂತ ಕನ್‌ಫ್ಯೂಸ್ ಮಾಡಿಕೊಂಡೇ ನಾನು ನನ್ನ ಮತೀನ ಕಳ್ಕೊಂಡುಬಿಟ್ಟೆ.

ಊರ್ವಶಿ: ಓಯ್, ಓಯ್, ಈ ತೊಂದರೆಗಳೆಲ್ಲಾ ಭೂಲೋಕದಲ್ಲಿದ್ದ ನಿಮಗೆ ಮಾತ್ರ ಅಂದ್ಕೊಂಡಿದೀರಾ ನಾರೀಮಣಿಯರೆ? ಇಂದ್ರ ಹೇಳಿ ಅಂತ ಆ ಸುರಸುಂದರಾಂಗ ಪುರೂರವಸ್ ಜೊತೇಲಿ ಹಾಯಾಗಿ ಮಜಾ ಮಾಡ್ಕೊಂಡು ಇದ್ದುಬಿಡೋಣಾ ಅಂತ ಅನ್ಕೊಂಡಿದ್ರೆ, ಅದಕ್ಕೂ ಕೊಕ್ಕೆ ಹಾಕಿದ ಈ ದೇವೇಂದ್ರ. ಅವನಿಗೆ ಭಯ, ಅಪ್ಸರೆಯರೆಲ್ಲಾ ಒಬ್ಬೊಬ್ರಾಗಿ ಭೂಲೋಕಕ್ಕೆ ಹೋಗಿಬಿಟ್ಟರೆ ತಾನು ಮೂರು ಹೊತ್ತೂ ಶಚೀದೇವಿ ಮೂತೀನೇ ನೋಡ್ಕೊಂಡು ಅವಳು ಹೇಳಿದ್ದಕ್ಕೆಲ್ಲಾ 'ಜೀ ಹುಜೂರ್' ಅಂದ್ಕೊಂಡು ಕೂತಿರಬೇಕು ಅಂತ. ಅದಕ್ಕೇ ಏನೋ ಒಂದು ಕಂಡಿಷನ್ ಹಾಕಿ ನನ್ನ ವಾಪಸ್ ಕರೆಸಿಕೊಂಡು ಬಿಟ್ಟು ರಸಭಂಗ ಮಾಡಿದ.

ರಂಭೆ: ಸಾಕು ನಿಲ್ಲಿಸ್ರೇ ಭೂಲೋಕದ ಅಮ್ಮಣ್ಣಿಗಳೇ. ನಾವು ಅಂದ್ರೆ, ಮೇನಕೆ, ಊರ್ವಶಿ, ತಿಲೋತ್ತಮೆ ಮುಂತಾದ ಅಪ್ಸರೆಯರು ಈ ಸ್ವರ್ಗದಲ್ಲೇ ಇದ್ದುಕೊಂಡಿದ್ರೂ ಬರೀ ಸೋಮರಸ ಕುಡ್ಕೊಂಡು, ಇಂದ್ರನ ಮುಂದೆ ಥಕ, ಥೈ ಅಂತ ಕುಣ್ಕೊಂಡು, ಅವನು ಆಜ್ಞೆಮಾಡಿದಾಗ ಭೂಲೋಕಕ್ಕೆ ಹೋಗಿ ಯಾವುದಾದರೂ ಋಷಿಯ ತಪಸ್ಸು ಕೆಡಿಸ್ಕೊಂಡು ಬೇಜಾನ್ ಬೋರ್ ಆಗ್ಬಿಟ್ಟಿದೆ. ನಮಗೂ ಒಂದು ಛೇಂಜ್ ಬೇಕು. ಅದಕ್ಕೇ ನಾವೂ ನಿಮ್ಮ ಸಂಘ ಸೇರಿಕೊಳ್ತೀವಿ.

ಇಷ್ಟೆಲ್ಲಾ ಆಗೋ ಹೊತ್ತಿಗೆ ಸುಸ್ತಾಗಿದ್ದ ಗಣೇಶ, ''ನನಗೆ ಹಸಿವು'' ಅಂತ ಕಿರುಲಿದ. ಅಧ್ಯಕ್ಷೆ ಶೂರ್ಪಣಖಮ್ಮನವರು, ''ಇದು ಇನ್ನೂ ಹೀಗೆ ಮುಂದುವರೀತಾ ಇದ್ರೆ ಕಲಿಯುಗ ಮುಗಿದು ತಿರುಗಿ ಕೃತಯುಗ ಬಂದ್ಬಿಡತ್ತೆ. ಇಲ್ಲಿಗೆ ಇಷ್ಟು ಸಾಕು. ನಾವೆಲ್ಲಾ ತ್ರಿಲೋಕ ಸಂಚಾರಿಗಳಾದ ನಾರದರಿಂದ ಭೂಲೋಕದ ಈಗಿನ ವಿದ್ಯಮಾನಗಳ ಬಗ್ಗೆ ಸಾಕಷ್ಟು ತಿಳ್ಕೊಂಡಿದೀವಿ. ಆಕಾಶಚಾರಿಯಾಗಿರೋ ನಾನು ಕೂಡ ಅಲ್ಲಿಗೆ ಅದೃಶ್ಯ

ರೂಪದಲ್ಲಿ ಎಷ್ಟೋ ಸಲ ಹೋಗಿ ಬಂದಿದೀನಿ. ವರದಕ್ಷಿಣೆ ತರಲಿಲ್ಲ ಅಂತ ಬೆಂಕಿ ಹಚ್ಚಿ ಸಾಯಿಸೋದು, ಹೆಣ್ಣುಮಗು ಬೇಡ ಅಂತ ಭ್ರೂಣ ಹತ್ಯೆ ಮಾಡೋದು. ಅತ್ಯಾಚಾರ, ಅನಾಚಾರ ಮುಂತಾದ ಹೆಣ್ಣಿನ ಮೇಲಿನ ದೌರ್ಜನ್ಯಗಳು ಭೂಮಿ ಮೇಲೆ ಇನ್ನೂ ನಡೀತಾನೇ ಇವೆ. ಸಮಾಧಾನದ ಮಾತು ಅಂದ್ರೆ, ಕೆಲವರ್ಗದ ಶಿಕ್ಷಿತ ಮಹಿಳೆಯರಿಗೆ ನಮಗೆ ಇದ್ದಿದ್ದಕ್ಕಿಂತ ಹೆಚ್ಚು ಸವಲತ್ತುಗಳಿಂದ ಜೀವನ ಅಷ್ಟು ಕಷ್ಟಕರವಾಗಿಲ್ಲ. ನಿಮಗೆಲ್ಲಾ ಈಗ ಸ್ವರ್ಗ ಬೋರ್ ಆಗಿದೆ ಅಲ್ವಾ? ಭೂಲೋಕಕ್ಕೆ ಹೋಗೋಣ ಅನ್ನಿಸುತ್ತೆ ಅಲ್ಲವಾ?'' ಅಂತ ಕೇಳಿದರು. ''ಹೌದು'' ಅಂತ ಎಲ್ಲರೂ ಕಿರುಚಿದರು. ''ಸರಿ ಹಾಗಾದ್ರೆ, ಗಣೇಶಮತಿ, ಕೊನೆದಾಗಿ ನಮ್ಮ 'ರೆಸಲ್ಯೂಷನ್' ಬರ್ಕೊಂಡುಬಿಡು ಪುಟ್ಟಾ, ಐಟಿಯೂರೆಂಬ ಮಾಯಾನಗರಿಯಲ್ಲಿ ಶ್ರೀಮಂತ ಮನೆತನಗಳಲ್ಲಿ ಹುಟ್ಟಿ, ಚೂಡಿದಾರ್, ಜೀನ್ಸ್, ಟೀಶರ್ಟ್ ಎನ್ನುವಂಥಾ ವಸ್ತ್ರಗಳನ್ನು ಧರಿಸಿ, ಮನೆಯಲ್ಲಿ ಆಳು ಕಾಳು ಮತ್ತು ಫ್ರಿಡ್ಜ್, ವಾಷಿಂಗ್ ಮೆಷೀನ್, ಕುಕಿಂಗ್‌ರೇಂಜ್, ಮೈಕ್ರೋವೇವ್, ಮಿಕ್ಸರ್, ಗೀಸರ್, ಹಾಟ್‌ವಾಟರ್ ಷವರ್ ಎನ್ನುವಂತಹ ವಿವಿಧ ಯಂತ್ರೋಪಕರಣಗಳನ್ನು ಹೊಂದಿ, ಸ್ಯಾಂಟ್ರೋ, ಇಂಡಿಕಾ ಇತ್ಯಾದಿ ಚತುಷ್ಚಕ್ರ ವಾಹನಗಳಲ್ಲಿ ಸಂಚರಿಸುತ್ತಾ, ಮಾಲ್ ಎನ್ನುವ ಮಳಿಗೆಗಳಲ್ಲಿ ಪೀಜ್ಹಾ, ಬರ್ಗರ್, ನೂಡಲ್ಸ್, ಚೈನೀಸ್ ಎನ್ನುವಂಥಾ ತಿನ್ನಿಸುಗಳನ್ನು ಮೆದ್ದು, ಅಲ್ಲಿನ ಅಂಗಡಿಗಳಲ್ಲಿ ಶೃಂಗಾರ ಸಾಮಾಗ್ರಿಗಳನ್ನು ಖರೀದಿಸಿ, ಸೆಲ್‌ಫೋನ್ ಎಂಬುದ ಉಪಕರಣದ ಸಹಾಯದಿಂದ ಗೆಳತಿಯರ ಜೊತೆ ಗಂಟೆಗಟ್ಟಲೆ ಕಾಡುಹರಟೆ ಹೊಡೆದು, ಗೆಳತಿಯರ ಮನೆಗಳಲ್ಲಿ ಕಿಟ್ಟೀಪಾರ್ಟಿ, ಹೌಸಿ ಎಂದೆಲ್ಲಾ ಸೇರಿ ಮೋಜುಮಾಡಿ, ಟೀವಿ ಎನ್ನುವ ಮೂರ್ಖ ಪೆಟ್ಟಿಗೆಯಲ್ಲಿ ಅತ್ತೆ, ಸೊಸೆಯರ ಕಾಳಗ ನೋಡುತ್ತ ಜೀವನವನ್ನು ಜಾಲಿಯಾಗಿ ಕಳೆಯುವಂತೆ ವರವನ್ನು ದಯಪಾಲಿಸಿ, ನಮಗೆಲ್ಲಾ ಹಿಂದೆ ಆಗಿದ್ದ ಅನ್ಯಾಯಕ್ಕೆ ಈ ರೀತಿಯ ಪರಿಹಾರ ಒದಗಿಸಬೇಕು ಅಂತ ಬ್ರಹ್ಮದೇವನ ಮುಂದೆ ಧರಣಿ ಹೂಡೋಣ. ಏನಂತೀರಾ?'' ಎಂದು ಕೇಳಿದರು. ''ಎರಡು ಜುಟ್ಟು ಸೇರಿದರೂ ಎರಡು ಜಡೆ ಸೇರುವುದಿಲ್ಲ'' ಎಂದು ಲೋಕದಲ್ಲಿ ಜನಜನಿತವಾಗಿರುವ ಗಾದೆಯನ್ನು ಸುಳ್ಳು ಮಾಡುವಂತೆ ಸದಸ್ಯೆಯರೆಲ್ಲಾ ಒಕ್ಕೊರಳಿನಿಂದ ''ಹಾಗೇ ಮಾಡೋಣ'' ಎಂದು ಕೂಗಿದರು. ಕುತೂಹಲದಿಂದ ಇದನ್ನೆಲ್ಲಾ ವೀಕ್ಷಿಸುತ್ತಿದ್ದ ದೇವಿಯರಲ್ಲೊಬ್ಬಳಾದ ಸರಸ್ವತಿ ''ನಾನೂ ನಿಮಗೆ ಸಪೋರ್ಟ್ ಮಾಡ್ತೀನಿ. ಬ್ರಹ್ಮದೇವ ನಿಮಗೆ ವರ ಕೊಡದೇ ಇದ್ರೆ ನಾನು ಮ್ಯಾರಥಾನ್, ನಾನ್‌ಸ್ಟಾಪ್ ವೀಣೆ ನುಡಿಸುತ್ತೀನಿ ಅಂತ ಅವನಿಗೆ ಬೆದರಿಕೆ ಹಾಕ್ತೀನಿ'' ಎಂದಳು. ಹಸಿವು ತಾಳಲಾರದೇ ಗಣೇಶ ಕಡುಬಿನ ಡಬ್ಬಕ್ಕೆ ಕೈಹಾಕಿದ. ''ಪುರುಷ ಪ್ರಧಾನ ಸಮಾಜಕ್ಕೆ ಧಿಕ್ಕಾರ'', ''ಬ್ರಹ್ಮದೇವ ನಮಗೆ ನ್ಯಾಯ ಒದಗಿಸಬಲೇಬೇಕು,'' ''ಪೌ.ಮ.ಸ್ವ ಸಂಘ ಜಿಂದಾಬಾದ್'' ಎಂದು ಘೋಷಣೆಗಳನ್ನು ಕೂಗುತ್ತಾ ಪೌರಾಣಿಕ ಮಹಿಳೆಯರ ಸ್ವಸಹಾಯ ಸಂಘದ ಸದಸ್ಯೆಯರು ಬ್ರಹ್ಮಲೋಕದ ಕಡೆಗೆ ಜಾಥಾ ಹೊರಟರು ಎಂಬಲ್ಲಿಗೆ ಈ ಪ್ರಸಂಗ ಮುಕ್ತಾಯವು.

ಮಂಗಳಂ ಶುಭ ಮಂಗಳಂ!

◇◇◇

ತುಂತುರು

- ದಂನಂ

- ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂದವರು ಇಂಗ್ಲಿಷ್ ಕಲಿಯದಿರು ಎಂದೇನೂ ಹೇಳಿಲ್ಲ ಅಲ್ಲವೆ?
- ಷಹಜಹಾನ್ ತಾಜ್‌ಮಹಲ್ ಕಟ್ಟಲು ಅತ್ಯಂತ ಕಡಿಮೆ ಟೆಂಡರ್‌ಗೆ ಹೋಗಿದ್ದರೆ ಗುಣಮಟ್ಟವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.
- ತಂತ್ರಜ್ಞಾನ ಅರ್ಥವಾಗದಿದ್ದರೆ ಅದು ಮ್ಯಾಜಿಕ್‌ನಂತೆ ಕಾಣುತ್ತದೆ.
- Example given for a compound sentence in a grammar class: stick no bills.
- Give up chain smoking at least
- ಗಾಳಿ ಅದೇ, ಇರು ಅದೇ, ಹಣ್ಣು ಅದೇ, ಹೂ ಅದೇ. ಆದರೆ ಮನುಷ್ಯನೇಕೆ ಬದಲಾದ?
- ದೇವರು ಎಲ್ಲರ ಜತೆ, ಎಲ್ಲ ಸಮಯದಲ್ಲೂ contact ಇಟ್ಟುಕೊಂಡಿರುತ್ತಾನೆ ಎಂದರೆ ಅವನ bandwidth ಅದೆಷ್ಟು ದೊಡ್ಡದಿರಬೇಕು!
- ನಮ್ಮ ಕ್ರಿಕೆಟಿಗರು ರೋಲ್ ಮಾಡೆಲ್‌ಗಳಾಗಬೇಕು; ಆದರೆ ಮಾಡೆಲ್‌ಗಳಾಗಿದ್ದಾರೆ.
- ನಾನು ಸಸ್ಯಾಹಾರಿಯಾಗಿರುವುದು ಪ್ರಾಣಿಗಳ ಮೇಲಿನ ಪ್ರೀತಿಯಿಂದಲ್ಲ. ಸಸ್ಯಗಳನ್ನು ದ್ವೇಷಿಸುವದರಿಂದ.
- ಗೋಂದು ಏಕೆ ಬಾಟಲಿಗೆ ಅಂಟಿಕೊಳ್ಳುವುದಿಲ್ಲ?
- ಬೆಳಕಿನ ವೇಗ ಗೊತ್ತು. ಕತ್ತಲೆಯ ವೇಗ?
- ಮಂಗನಿಂದ ಮಾನವ ಎಂದಾದರೆ ಮಂಗಗಳೇಕೆ ಇನ್ನೂ ಇವೆ?
- E-nauguration!
- ಅಳು ಬಂದಾಗ ಅತ್ತು ಬಿಟ್ಟರೆ ನಂತರ ನೀವು ನಗಲು ಅರ್ಹರು
- ಇಡೀ ವಿಶ್ವವೇ ನನ್ನನ್ನು ದ್ವೇಷಿಸುತ್ತದೆ.
  ತಪ್ಪು. ಅನೇಕರಿಗೆ ನೀನು ಇನ್ನೂ ಗೊತ್ತೇ ಇಲ್ಲ.

ಗೋರಿ ಗೀತೆಗಳು

✧ ಎನ್. ರಾಮನಾಥ್

ಆಂಗ್ಲರು ಆರಂಭಿಸಿ ಆಚರಿಸುತ್ತಿರುವ ಈ ಚರಮ ಸಾಹಿತ್ಯದಲ್ಲಿ ಹಲವಾರು ಆಂಗ್ಲ ಲೇಖಕರು ಹಾಸ್ಯವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡದಲ್ಲಿ ಕೆಲವು ಲೇಖಕರು ಆಂಗ್ಲದ ಅನುವಾದಗಳನ್ನು ಮಾಡಿದ್ದರೇ ವಿನಹ ಇಲ್ಲಿನ ಜನರ ಗುಣಾವಗುಣಗಳನ್ನು ಬಿಂಬಿಸುವ ಈ ಗೋರಿಗೀತೆಗಳನ್ನು ಬರೆಯಲು ಏಕೋ ಮನಸ್ಸು ಮಾಡಿರಲಿಲ್ಲ. ಅವರು ಬಿಟ್ಟದ್ದು ನನಗೆ ದಾರಿ!

ಸಾವು ನಿರ್ಲಿಪ್ತತೆಯಿಂದ ನೋಡಲ್ಪಟ್ಟಾಗ ಹಾಸ್ಯಕ್ಕೆ ಬಹಳ ಒಳ್ಳೆಯ ವಸ್ತುವಾಗುತ್ತದೆ. ಅಯ್ಯೋ! ಅಪ್ಪನ್ನ ತೊಗೊಂಡ್ ಹೋಗ್ಬಿಡ್ತಿದ್ದಾರೆ. ನಿಲ್ಸಿ ಎಂದು ದುಃಖದಿಂದ ಅಳುವ ಜನರೇ ಅದೇ ಶವವನ್ನು ಇನ್ನೂ ನಾಲ್ಕು ದಿನ ಒಳಗೇ ಇಡಿ ಎಂದು ಒಳ ತರಹೋದರೆ ಅಯ್ಯೋ! ಹೆಣ ಒಳಗಡೆ ಬಂದ್ರೆ ದೆವ್ವದ ಕಾಟ ಶುರು ಆಗತ್ತೆ. ಶಾಂತಿ ಗೀಂತಿ ಎಲ್ಲಾ ಮಾಡಿಸ್ಬೇಕಾಗತ್ತೆ. ಅದಕ್ ಬೇರೆ ವೃಥಾ ಖರ್ಚು. ಹೆಣ ಒಳಗ್ ತಂದರೆ ಸಾಯಿಸ್ಬಿಡ್ತೀನಿ ಎಂದು ಒಳ ತರಲು ಹೇಳ್ದವರ ಮೇಲೆ hurry ಹಾಯ್ದು ಕಿರುಚುವುದು ಸತ್ಯ. The greatest humour in this world is the truth itself ಎಂಬಂತೆ ಕಡೆನುಡಿಗಳೂ ನಿಜದ ಬುನಾದಿಯ ಮೇಲೆ ನಿಂತ ಹಾಸ್ಯದ ಮಹಲ್‌ಗಳು. ಇದೋ ನಿಮಗಾಗಿ ಆ ಮಹಲ್‌ನ ಹಲವು ಮಜಲ್‌ಗಳು:

ಆಟೋದವನ ಗೋರಿಯ ಮೇಲೆ:

ನಸುಕಿನಲೆ ರಭಸದಲಿ ಆಟೊಸ್ಟ್ಯಾಂಡನು ತಲುಪೆ
ನಿಲ್ಲುತಿರ್ದ ಅಲುಗದೆಯೆ ಬೈಗವರೆಗು ಅಲ್ಲಿಯೆ
ದೇಹವೆಂಬ ಆಟೊಬಂದು ಸೇರಿತಿಂದು ಇಲ್ಲಿಗೆ
ಸಾಗದೆಂದು ಮುಂದಕಿನ್ನು ಆಟೊ ರೀತಿಯಲ್ಲಿಯೆ

ರೌಡಿಯ ಗೋರಿಯ ಮೇಲೆ:

ಖಾಲಿಯು ಮಾಡದ ಬಾಡಿಗೆ ದಾರರು ಎನಿತೋ ಇವನಿಂ ಮಟಾಷ್
ಹಣವನು ಕೊಡದಿಹ ವರ್ತಕರೆನಿತೋ ಆಗಿಹೋಗಿಹರು ಖಲಾಸ್

ಮಚ್ಚನೆ ಮಚ್ಚುತ ಭೀಕರ ಜೀವಿತ ನಡೆಸಿದುದಿಂದಿಗೆ ಖಲಾಸ್
ತಪ್ಪನು ಮಾಡಿದ ಜೀವನ ಪಥದಲಿ ಓಡಿದಾ ಮಾರ್ಗವೆ Cross
ಸಚಿವನು ಆದರೆ ಸಮಸ್ತ ರಾಜ್ಯಕೆ ಆಗುತ್ತಿದ್ದನೋ Boss
ಇವನಾ ಆಣತಿಗೆ ಮಣಿಯಲು ದೊರಕುತ್ತಿದ್ದಿತು ದೊಡ್ಡ Mass
ಸಚಿವನಾಗದೇ ರೌಡಿಯಾದುದು ತುಂಬಲಾರದಾ Loss

ಬಡವನ ಗೋರಿಯ ಮೇಲೆ :
ಪಕ್ಕದ ಗುಡಿಸಲ ಕದನವು ಕೇಳದು
ಪಕ್ಕೆಯ ತಿವಿಯುವ ಪತ್ನಿಯು ಇಲ್ಲವು
ಗಾಳಿಯ ಮಳೆಯಾ ಕಾಟವು ಇಲ್ಲವು
ತಿಗಣೆಯ ಸೊಳ್ಳೆಯ ಕಡಿತವು ಇಲ್ಲವು
ಕಡೆಗುಂ ದೊರಕಿತು ಜಾಗವು ಇವನಿಗೆ
ಮುದದಿಂ ಮಲಗಲು ನೀಡದೆ ಬಾಡಿಗೆ

ಕವಿಯ ಗೋರಿಯ ಮೇಲೆ :
ಬಿಳುಪಿನ ಹಾಳೆಯ ಹಾಳನು ಮಾಡುತ
ಅಕ್ಷರ ಕೊಲೆಯಂ ಸತತವು ಗೈಯುತ
ಕೇಳ್ವಗೆ ಬಿಸಿ ಸೀಸವನಿವ ತುಂಬುತ
ಭಯವಂ ಬೀರ್ದನು ಕಾವ್ಯವ ಹೊಸೆಯುತ
ಲೇಖನಿ ಹಾಳೆಯ ದೂರವೆ ಇರಿಸುತ
ಹೂತಿತು ಇವನಂ ಕವಿಗಳ ವೃಂದವು
ಇವನಾ ಮರಣದಿ ಕಬ್ಬದ ಲೋಕವು
ಉಳಿಯಿತು ಎನ್ನುತ ಹರುಷದಿ ತಣಿದವು

ಪ್ರಾಮಾಣಿಕ ವ್ಯಕ್ತಿಯ ಗೋರಿಯ ಮೇಲೆ :
ಅಯ್ಯೋ ಹೋಯಿತೆ ಬಲು ಅಪರೂಪದ ಮನುಜನ ದುರ್ಲಭ ಸ್ಯಾಂಪಲ್ಲು
ಜೀವನವೆಲ್ಲವು ಇವನಾ ನಡೆನುಡಿ ಇದ್ದಿತು ಬಹಳವೆ ಸಿಂಪಲ್ಲು
ಪ್ರಾಮಾಣಿಕತೆ ಬರಿ ಕತೆಯೆ ಆಯಿತು ಇನ್ನಿವನಂತಹ ಜನರಿಲ್ಲ
ಮ್ಯೂಸಿಯಮ್ಮಿನಲಿಯೆ ಇಡಬೇಕಿತ್ತು ಗೋರಿಯು ಇವನಿಗೆ ತರವಲ್ಲ

ನರ್ಸಿಂಗ್ ಹೋಂ ಮಾಲೀಕನ ಗೋರಿಯ ಮೇಲೆ :
ಯಮನ ಮನೆಗೆ ದಿನವು ಜನರ ಕಳಿಪ ಕೆಲಸ ಇವನದು
ಒಳಗೆ ಬರುವ ಜನರ ಸ್ವಾಸ್ಥ್ಯ ಒಡನೆ ಕೆಡತೊಡಗುವುದು
ಶವಕು ನೀಡಿ ಚುಚ್ಚುಮದ್ದು ಪಡೆಯುತಿದ್ದ ಹಣವನು

ಬಂದ ಜನರ ಆಳ ಅರಿತು ಸೆಳೆಯುತಿದ್ದ ಧನವನು
ಮೊನ್ನೆ ಹೊಟ್ಟೆ ಕೆಟ್ಟಿತೆಂದು ತನ್ನ ವೈದ್ಯ ರಿಂದಲೆ
ಮದ್ದು ಪಡೆವ ಮೊದ್ದು ತನದಿ ಬಿಟ್ಟನುಸಿರ ಚಣದಲೆ
ಎನಿತು ಬೆಡ್ಡು ಇದ್ದರೇನು ಕಡೆಗೆ ಮಣ್ಣೆ ಹಾಸಿಗೆ
ಘೋರ ವೈದ್ಯಗೀಗ ಗೋರಿಯೊಂದೆ ಕಡೆಯ ಆಸರೆ

ಘಟವಾಣಿಯ ಗೋರಿಯ ಮೇಲೆ :

ಸತ್ತಳೇಕೆ ಗೊತ್ತೆ ಇವಳು ಇನಿತು ತ್ವರಿತ ಗತಿಯಲಿ?
ಒಂದೆ ಸಮನೆ ಜಗಳವಾಡಿ ಉಸಿರು ನಿಂತ ನೆವದಲಿ
ಬದುಕ ದಾರಿಯಲ್ಲಿ ಎಂದು ಮುಚ್ಚದಂಥ ಬಾಯ್ ಇದು
ಪತಿಯ ಪಥಕೆ ಅಡ್ಡ ಬಂಡೆಯಾಗಿ ನಿಂತ ಹೆಣ್ಣಿದು
ಇವಳ ಬಾಯ ಗಮನಿಸಿರ್ಕೆ ಬಹಳ ಪದರ ದಿಂದಲಿ
ಮುಚ್ಚಿ ಭದ್ರ ಮಾಡಿರುವರು ತೆರೆಯದಂತೆ ಭರದಲಿ
ಇವಳ ಗೋರಿ ಇತರ ಗೋರಿಗಿಂತ ದೂರ ವಿಟ್ಟಿದೆ
ಪುಟ್ಟುಗುಣವು ಹೊತೊಡನೆಯೆ ಹೋಗದೆಂದು ಗೊತ್ತಿದೆ

Software engineerನ ಗೋರಿಯ ಮೇಲೆ:

ಕಂಪ್ಯೂಟರಿನಾ ಮುಖವನು ತೊರೆದರೆ ಏನೂ ಕಾಣದೆ ಜೀವನ ಪಥದಲಿ
ಯಾರೋ ಎಲ್ಲೋ ನೀಡಿದ ಅಣತಿಗೆ ಮಾಡಿದ ಕತ್ತೆಯ ಚಾಕರಿ ಮುದದಲಿ
ದುಡಿದಾ ಹಣವನು ಎಣಿಸಲು ಸಮಯವು ಇಲ್ಲದ ರೀತಿಯ ಬಾಳುವ ಕ್ರಮದಲಿ
ನಗುವುದ ಮರೆತನು ನಿದ್ರೆಯ ಮರೆತನು ತೊರೆದನು ಎಲ್ಲರ, ಎಲ್ಲವ ಜಗದಲಿ
ಕಾರ್ಗಳು ಬಂಗಲೆ ಹೆಂಡತಿ ಮಕ್ಕಳು ಎಲ್ಲವು ಇದ್ದರು ಏನೂ ಇಲ್ಲದೆ
ಮುದುಕನು ಆಗುತ ನಡುವಯದಲ್ಲಿಯೆ ಬೇಗನೆ ಬಂದನು ವಿಶ್ರಾಂತಿಗಿಲ್ಲಿಗೆ

ಸೀರಿಯಲ್ ನಿರ್ದೇಶಕನ ಗೋರಿಯ ಮೇಲೆ:

ಹಂತಹಂತದಲಿ ದಿನವೂ ಜನರನು ಮಳುಗಿಸುತಿದ್ದನು ಗೋಳಿನಲಿ
ಆರ್ಥ್‌ರೈಟಿಸ್ ನಿಂ ಬಳಲಿದ ಆಮೆಯ ಓಟವು ಇದ್ದಿತು ಕಥೆಯಲ್ಲಿ
ಹೇಳಿದುದನ್ನೇ ಪುನರುಚ್ಚರಿಸುತ ಸೀರಿಯಲ್ ಬೆಳೆಸಿದ ಕಂತಿನಲಿ
ಎಮ್ಮಯ ಪುಣ್ಯವು! ಇಡೀ ವ್ಯಕ್ತಿಯೇ ಒಮ್ಮೆಗೆ ಮರಣಿಸಿ ಇಹನಿಲ್ಲಿ

ಮಸಣಕೆ ಬರುವಾ ಜನರಲಿ ಎಮ್ಮಯ ವಿನಂತಿ ಯೊಂದೇ ಆಲಿಸಿರಿ
ಈ ಗೋರಿಯ ಮುಂ ನಿಲ್ಲುತ ಯಾವುದೆ ಕಥೆಯಂ ಖಂಡಿತ ಪೇಳದಿರಿ
ಪೇಳ್ದರೆ ಕೆಟ್ಟಿರಿ ಅದನುಂ ಕಂತಲಿ ತೊಡಗಿಸಿ ಸೀರಿಯಲ್ ಮಾಡೀತು
ದೆವ್ವವಾದರೂ ಹಿಂದಿನ ಜನುಮದ ವಾಸನೆ ಬಿಡದೆಯೆ ಕೊರೆದೀತು

ಜುಗ್ಗನ ಗೋರಿಯ ಮೇಲೆ :

ಅಳೆದು ಸುರಿದು ಕೂಡಿ ಕೂಡಿ ಒಂದೆ ಸಮನೆ ಗಂಟು ಮಾಡಿ
ತನ್ನ ಜನಕು ಮೋಸ ಮಾಡಿ ಸೆಳೆದ ಹೆರೆದ ಮೋಡಿ ಮಾಡಿ
ತಿನಲು ಉಣಲು ಗಾಳಿ ಸಾಕು ಕುಡಿಯಲಂತು ಬೆವರೆ ಸಾಕು
ಚಿಂದಿ ಉಡುಪು ಧರಿಪ ಕೊಳಕು ಲಜ್ಜೆ ಮೀರಿ ನಿಂತ ಬದುಕು
ದುರ್ಘಟನೆಗೆ ತುತ್ತು ಆಗೆ ವಿಮೆಯ ಹಣವು ದ್ವಿಗುಣವೆನುತ
ನಿಂತ ಬಸ್‌ಗೆ ಢಿಕ್ಕಿ ಹೊಡೆದು ಶಾಂತಿಯಿಂದ ಸತ್ತನೀತ

ಕುಡುಕನ ಗೋರಿಯ ಮೇಲೆ:

ಹೆಂಡದಾ ಅಂಗಡಿಗೆ ಇವನೆಂದರೇ ಪ್ರಾಣ
ಮೆಚ್ಚಿದ್ದರು ಬಹಳ ಇವನ ಕುಡಿತದಾ ತ್ರಾಣ
ಆಗಿಹುದವರಿಗಿವನ ಸಾವಿನಿಂ ಬಲು ನಷ್ಟ
ಆದರುಂ ತಪ್ಪಿಹುದು ಸತಿಸುತರ ಕಡುಕಷ್ಟ
ಹುಡುಕಬೇಕಿಲ್ಲವೋ ಮೋರಿಮೋರಿಗಳಲ್ಲಿ
ಆ ಃಚಿಡಿನ ಈಃಚಿಡಿನ ಸಂದಿಗೊಂದಿಗಳಲ್ಲಿ
ಸತ್ತರೂ ಬಿಡಲಿಲ್ಲ ಕುಡಿತದಾ ಚಟವಿವನು
ಹೆಂಡದಲಿ ಶವಮೀಯ್ಸಿ ಬರೆದಿಹನು ವಿಲ್ಲನ್ನು

ಹೋಟೆಲ್ ಮಾಲೀಕನ ಗೋರಿಯ ಮೇಲೆ:

ದಿನವು ಜನಕೆ ಹಳಸ ಕೊಡುತ ಅದನು ಅಂದೆ ಮಾಡ್ದುದೆನುತ
ಆಸುಪಾಸು ವೈದ್ಯಗೆಲ್ಲ ಅಚ್ಚುಮೆಚ್ಚು ಆದನೀತ
ಇವನೆಡೆಯಲಿ ತಿಂದ ಜನರು ಈಮಸಣದೆ ಬಹಳ ಇಹರು
ಭೂತಕಾಲದಲ್ಲಿ ಮಾಡ್ದ ತಪ್ಪಿಗಿವಗೆ ಭೂತವಾಗಿ ಕಾಡಲೆಂದು ಕಾಯುತಿಹರು

ಪಾದ್ರಿಯ ಗೋರಿಯ ಮೇಲೆ :

ನಿಮ್ಮೆಲ್ಲ ಪಾಪಗಳ ನನ್ನಲ್ಲಿ ಹೇಳುತಿರಿ
ಎನ್ನುತ್ತ ಪಾಪದಾ ಕೂಪವನೆ ಕೇಳುತಲಿ
ಪುಣ್ಯಕುಂ ಪಾಪದಾ ಶ್ರವಣವೇ ಹೆಚ್ಚಾಗಿ
ಪಾಪಿಗಳ ತಿದ್ದಲಿಕೆ ಹಗಲಿರುಳು ಬಲುಹೆಣಗಿ
ನಿಟ್ಟುಸಿರು ಬಿಟ್ಟಲ್ಲಿ ಸೇರಿಹನು ಶವವಾಗಿ

ಹಾಸ್ಯಗಾರನ ಗೋರಿಯ ಮೇಲೆ :

ಹಾಸ್ಯ ಸಾಗಲಿ ಮುಂದೆ ಹೋಗಲಿ ಬಹಳ ವರುಷಗಳುಳಿಯಲಿ
ಜನಕೆ ಸುಖವನು ಕೊಡುವ ಪರಿಯಲಿ ನವ್ಯ ತೆರೆಗಳು ಏಳಲಿ
ಹೇಳ್ದ ಮಾತನೆ ಹೇಳಿ ಜನತೆಗೆ ಬೋರು ಹೊಡೆಪುದು ತಪ್ಪಲಿ
ಶ್ಲೀಲ ಸುಮಧುರ ರೀತಿ ನೀತಿಯ ನುಡಿಗಳೆಂದೂ ಬೆಳೆಯಲಿ

Mailing Date:
5th of every month

RNI-KAR KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR